(ಆನಂದ ಕಂದ)

ಬೆಟಗೇರಿ ಕೃಷ್ಣ ಶರ್ಮ (1900-1982)/ ಕನ್ನಡದ
(~~[illegible]~~) ಕವಿ, ಕಥೆಗಾರ, ಕಾದಂಬರಿಕಾರ, ನಾಟಕ
ಕಾರ, ಪತ್ರಿಕೋದ್ಯಮಿ, ಗ್ರಂಥ ಸಂಪಾದಕ, ವಿಮ
ರ್ಶಕ. ಈ ಶತಮಾನದ ಕನ್ನಡ ಪುನರುಜ್ಜೀವನ
ಕಾಲದ ಪ್ರಮುಖ ಸಾಹಿತಿಗಳಲ್ಲಿ ಗಣ್ಯರಾದ ಶ್ರೀ ಬೆಟ
ಗೇರಿ ಕೃಷ್ಣ ಶರ್ಮರು ಧಾರವಾಡ ಜಿಲ್ಲೆಯ ಗದಗ
ತಾಲ್ಲೂಕಿನ ಬೆಟಗೇರಿಯಲ್ಲಿ 16 ಏಪ್ರಿಲ್ 1900 ರಂದು,
ತೀರ ಸಾಮಾನ್ಯ ಕುಲಕರಣಿಯ(?) ಮನೆತನದಲ್ಲಿ ಹುಟ್ಟಿ
ದರು. ತಂದೆ ತಾಯಿ
ಕಿರಿಯ ವಯಸ್ಸಿನಲ್ಲೇ (1912) ತಂದೆಯನ್ನು ಕಳೆದುಕೊಂಡ
ದ ಕಾರಣ ಇಂಗ್ಲಿಷ್ ಶಿಕ್ಷಣಕ್ಕೆ ಹೋಗಲು ಸಾಧ್ಯವಿಲ್ಲದೆ(?)
17ನೇ ವಯಸ್ಸಿನಲ್ಲಿ ಆಗಿನ ಕನ್ನಡ ಮುಲ್ಕಿ ಪರೀಕ್ಷೆಯ
ಲ್ಲಿ ತೇರ್ಗಡೆಯಾಗುವುದರೊಂದಿಗೆ ಅವರ ಔಪ
ಚಾರಿಕ ಶಿಕ್ಷಣ ಮುಗಿಯಿತು. ಮುಂದೆ ಹೊಸಗ(?)
ನ್ನಡದ ಆಗಿನ ಪ್ರಮುಖ ಕವಿ ಶಿವಾನಂದ
ಕತ್ತೂರು(?) ನರಸಿಂಹಾಚಾರ್ಯ(ರಲ್ಲಿ) ವ್ಯಾಕರಣ, ಸಂಸ್ಕೃತ
ಕಾವ್ಯಗಳನ್ನು ಅಭ್ಯಾಸಮಾಡಿದರು(?). ಕೃಷ್ಣಶರ್ಮರು ಕನ್ನಡ
ಸಂಸ್ಕೃತ (~~[illegible]~~) ವಿದ್ವತ್ತಿನಲ್ಲಿ ಪ್ರಭುತ್ವ ಸಾಧಿಸಿದ(?)
ರಾದರು. ಹಳ್ಳಿ-ಶಾಲೆಗಳಲ್ಲಿ ಪ್ರಾಥಮಿಕ ಶಾ[illegible]
ಲೆಗಳಲ್ಲಿ(?) ಕಲಿಸಿದರು(?) ... ಕನ್ನಡ [illegible]
ಕಲೆ, ಸಾಹಿತ್ಯ, ಸಂಸ್ಕೃತಿಗಳ ಸಾಧನೆಗಾಗಿ(?) [illegible]

②

ಅದರಿಂದ

~~ಅವರ ಹಿರಿಯರಿಗೆ~~ ಕನ್ನಡ ದೇಸಿಯ ಸಂಗೀತದ ಬಗೆ ಒಲವು

ಗಳಲ್ಲಿ ಮೂಡಿಬಂದಿದೆ.

ಬಡತನದಿಂದ ವಿವಿಧ ಹೋಟೆಲುಗಳ, ಶ್ರೀಮಂತರ ವಿದ್ಯಾರ್ಥಿಗಳ ಊಳಿಗ ಮಾಡಿದರು. * ಕುಂದಾಪುರ ಹಾಸ್ಟೆಲ್ ನಂತರ 16ನೇ ವಯಸ್ಸಿನಲ್ಲಿ ಓಡಿಹೋದರು, 18ರಲ್ಲಿ ತಾಯಿಯನ್ನು ಕಳೆದುಕೊಂಡು ಕಷ್ಟ ದಾರಿಗೆ ಬಿದ್ದ ಬದುಕಿನ 14ನೇ ವಯಸ್ಸಿನಲ್ಲಿ ~~[illegible]~~ ಅವರನ್ನು ಕೆಲ ಮಕ್ಕಳಿಗೆ ಮನೆಪಾಠ ಹೇಳುತ್ತಿದ್ದರು. ಈ ಕೆಲಸದಿಂದ ಅವರು ಕನ್ನಡ ಕೆಲಸವನ್ನು ಕಲಿಸಿದರು.

1923-24ರಲ್ಲಿ ಅವರು ಕೆಲಕಾಲ ಪ್ರಾಥಮಿಕ ಶಾಲಾ ಶಿಕ್ಷಕರಾಗಿ ವೈದ್ಯಕೀಯ ವಿದ್ಯಾಲಯದ ಕಾರ್ಯದಲ್ಲಿ ಇದ್ದರು. ಮಾಯಾಕೆ ಬರಹಗಾರರ ಕನ್ನಡ ಪತ್ರಿಕೆಯನ್ನು ಹಿಂದೂಸ್ತಾನ ಪತ್ರಿಕೆಯನ್ನು ಕೈಗೊಂಡ ಚಳವಳಿಗಾರರು 1921-25ರಲ್ಲಿ ಕೆಲ ಚಳವಳಿಯಲ್ಲಿ ಕೆಲ ಕಾಲ ಕಾರಾಗೃಹದಲ್ಲಿ ಇದ್ದು ವಿದ್ಯಾರ್ಥಿ ಶಿಕ್ಷಣ ಪಡೆದರು. 1926ರಲ್ಲಿ ಬೆಂಗಳೂರಿಗೆ ಬಂದು [illegible] [illegible] ಶಿಕ್ಷಣ ಪಡೆದರು. ಅದರ ನಂತರ ಸ್ವಾತಂತ್ರ್ಯ ಚಳವಳಿ [illegible] ಅವರ ಸೇವೆ ಮುಂದುವರಿಯಿತು. ([illegible] [illegible] [illegible] [illegible] [illegible] ಸಾಗಿದ್ದೂ!)

ತಾಯಿ ಸಾಯುತ್ತಿದ್ದ ಪ್ರೀತಿಯ ಪ್ರತಿಭೆ [illegible]

ಮತ್ತು ಇತರ ಗೆಳೆಯರ ಪ್ರಾರಂಭಿಕ ಪ್ರಯತ್ನದಲ್ಲಿ,
ಇವರು ಬಾಲ್ಯದಲ್ಲೇ ಕವಿತಾರಚನೆ ಪ್ರಾರಂಭಿಸಿದರು.
1918ರಲ್ಲಿ ಮಿತ್ರರೊಡನೆ ಧಾರವಾಡದ ಕವಿತಾ ಪತ್ರಿಕೆ
ಯಾದ 'ಪ್ರಭಾತ'ದಲ್ಲಿ ಇವರ ಕವಿತೆಗಳು ಪ್ರಕಟ
ವಾಗತೊಡಗಿದವು. ವಿದ್ಯಾನಂದರು ಇತ್ತರು. ಮತ್ತು
ಇವರಿಗೆ 'ಕವಿಕುಲತಿಲಕ' ಎಂಬ ಬಿರುದನ್ನು ಕೊಟ್ಟರು.
ಬೆಳಗಾವಿಯಲ್ಲಿ ಕನ್ನಡದ ಮೊದಲನೆಯ
ಕರ್ನಾಟಕ ಇವರು ರಚಿಸಿದ 'ನಾಡಗೀತೆ' ಜನ
ಪ್ರಿಯವಾಗಿತ್ತು. 1924ರಲ್ಲಿ ನಡೆದ ರಾಷ್ಟ್ರೀಯ
ಕಾಂಗ್ರೆಸ್ಸಿನ ಬೆಳಗಾವಿ ಅಧಿವೇಶನವನ್ನು ಸ್ವಾಗತಿಸುತ್ತ
ರಚಿಸಿದವರು ಇವರೇ. ಅದನ್ನು ನೋಡಲೆಂದು ಇವರ
ರಾಷ್ಟ್ರೀಯ ಅಭ್ಯಾಸಕ್ಕೆ, 'ರಾಷ್ಟ್ರೀಯ ವಿದ್ಯಾಲಯ' ಬೆಳ
ಗಾವಿಯಲ್ಲಿ ಪ್ರಾರಂಭವಾಯಿತು.

ಬೆಳಗಾವಿ ಕಾಂಗ್ರೆಸ್ಸಿನ ಸಂದರ್ಭದ ಸಾಹಿತ್ಯ
ಕ್ಕೆ ಪೂರಕವಾಗಿ ~~ಕನ್ನಡ~~ ಇವರ ಲೇಖನ ಕನ್ನಡನಾಡಿ
ನ ಏಕೀಕರಣದಲ್ಲಿ ಸಲ್ಲಿದ ಕನ್ನಡಿಗ
ರಲ್ಲಿ ಸ್ಫೂರ್ತಿಯನ್ನುಂಟುಮಾಡಿತು. ನಂತರ
1925ರಲ್ಲಿ ಬೆಳಗಾವಿ ಸಾಹಿತ್ಯ ಸಮ್ಮೇಳನ
ಸಂಸ್ಥೆಯಲ್ಲಿ ತೊಡಗಿದರು. ಅದರ ಬಳಿ
ಕನ್ನಡ ಪತ್ರಿಕೆಯ 'ನಾಡಿನ' 'ಜಯಕರ್ನಾಟಕ'
ದ ಸಂಪಾದಕರಾದರು. ಅದನ್ನು ಬಿಟ್ಟು
ಬಳಿಕ 1926 ರಲ್ಲಿ ನಂತರ ನಾಡಿನಲ್ಲಿ,

୧୯୧୯ରୁ [illegible] [illegible] [illegible] [illegible]
[illegible] [illegible] ୬୫୦ [illegible] [illegible] [illegible]
[illegible]

ಪತ್ರಿಕೆಗಳು [illegible] ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಟ
ವನ್ನು [illegible] ಬಳಸಿದರು. ಹೀಗಾಗಿ ಈ ಪತ್ರಿ
ಕೆಗಳು [illegible]

ಸಾಹಿತ್ಯ ಪತ್ರಿಕೆಗಳಲ್ಲಿ ಕನ್ನಡದ ಸಾಹಿತ್ಯ
ಪತ್ರಿಕೆ ಸಂಪಾದಕರಲ್ಲಿ [illegible] ಅವರ
ಹೆಸರು ಸ್ಮರಣೀಯವಾದುದು. ಪತ್ರಿಕೋದ್ಯಮಿಯಾಗಿ
ಅವರ ಪ್ರತಿಭೆ 1923 ರಲ್ಲಿ [illegible] 'ಸಾಹಿತ್ಯ
ಭೂಮಿ' ಸಂಪಾದಕತ್ವದಿಂದ ಆರಂಭ. 1925
ರಲ್ಲಿ ಧಾರವಾಡದಲ್ಲಿ [illegible] ಸಾಹಿತ್ಯ
ಪತ್ರಿಕೆಯಾದ '[illegible]' ಸಂಪಾದಕರಾಗಿದ್ದರು.
[illegible]
[illegible] ಸಂಪಾದಕ [illegible]. ಅದರ
1938 ರಿಂದ 1961 ರ ವರೆಗೆ ಧಾರವಾಡದಿಂದ
ಹೊರಡುತ್ತಿದ್ದ 'ಜಯಂತಿ' ಮಾಸಪತ್ರಿಕೆ ಅವರ
ಸಂಪಾದಕತ್ವದ ಸಾಮರ್ಥ್ಯಕ್ಕೆ ಹಿಡಿದ ಕನ್ನಡಿ.
ಅವರ [illegible] ಸಂಪಾದಕರ [illegible]
[illegible]
[illegible]
[illegible]
[illegible]
'ಜಯಂತಿ' [illegible]
[illegible]
[illegible]

[illegible]

ಕನ್ನಡ ಸಾಹಿತ್ಯ ಪತ್ರಿಕೋದ್ಯಮ ಇಂದಿಗೂ ಅವರ
ನೆನಪನ್ನು ನೆನೆಯುತ್ತಿದೆ.

ಪತ್ರಿಕೆಗಳಲ್ಲದೆ ಅವರು ಜಯಂತಿ ಪ್ರಕಾಶನದ ಗ್ರಂಥ
ಮಾಲೆ, ಮಾಸಿಕದ ಗ್ರಂಥಮಾಲೆಗಳ ~~ಪ್ರಕಾಶ~~ ಸಂಪಾದಕ
ರಾಗಿಯೂ ಇದ್ದು ಅನೇಕ ಗ್ರಂಥಗಳನ್ನು ಪ್ರಕಟಿಸಿ ಸಾಹಿ-
ತ್ಯವನ್ನು ಬೆಳೆಸಿದ್ದಾರೆ.

ಕವಿತಾಸಂಗ್ರಹಗಳು, ಕಥೆ, ಕಾದಂಬರಿಗಳು, ನಾಟಕ
ಗಳು, ನಾಟಕಗಳು, ಸ್ವತಂತ್ರ ಕೃತಿ, ವಿಮರ್ಶೆ ಎಂಬುದಾಗಿ
ಸುಮಾರು 35 ಕೃತಿಗಳು ಬೆಳಗಿಂದಾದರ ಹೆಸರಲ್ಲಿ
ಪ್ರಸಿದ್ಧವಾಗಿವೆ. ಇದಲ್ಲದೆ ಜನಪದ ಸಾಹಿತ್ಯದ
ಸಂಕಲನ, ಹಳೆಯ ಕೃತಿಗಳ ಸಂಪಾದನೆ, ಮಕ್ಕಳ ಸಾಹಿತ್ಯ
ದ ರಚನೆಗಳಲ್ಲಿಯೂ ಅವರು ದುಡಿದಿದ್ದಾರೆ.

ನಿಘಂಟು: ಕನ್ನಡ ಸಾಹಿತ್ಯದ ನವೋದಯ
ಕಾಲದ ಆರಂಭದ ಸಾಹಿತಿಗಳಲ್ಲಿ ಶ್ರೀ ಬೆಟಗೇರಿ ಕೃಷ್ಣ
ಶರ್ಮ ಕವಿಯಾಗಿಯೂ ಪ್ರಸಿದ್ಧರಾದವರಲ್ಲಿ ಪ್ರಸಿ
ದ್ಧರು. 'ಆನಂದ ಕಂದ' ಎಂಬ ~~[illegible]~~ ಅವರ ಕಾವ್ಯನಾಮ.
ಅವರ ನಿಘಂಟು ಕೃತಿಗಳು ~~[illegible]~~ [illegible]
[illegible] ಕವಿತೆಗಳು [illegible] (1926), [illegible] (1956)
[illegible] (1956), [illegible] (1953), [illegible] (1958)
(1952), [illegible], [illegible] (1958), [illegible]
[illegible] ಕನ್ನಡ [illegible] ನಿಘಂಟಿನಲ್ಲಿ [illegible]
[illegible] [illegible]
[illegible] [illegible]
[illegible]

ಅಂದಿನ ಶತಮಾನದಲ್ಲಿ ಈ ಶತಮಾನದ ಪ್ರತಿಭಾವಂತ [illegible]
ಪ್ರತಿನಿಧಿಸಿದ [illegible] ಪ್ರಮುಖ [illegible]
ಕವಿಯಾಗಿದ್ದರು. [illegible]
[illegible]
[illegible]. ಕನ್ನಡ [illegible] ಸುಂದರ
[illegible]
[illegible]
[illegible] ಕವನಸಂಗ್ರಹ. ಈ [illegible] ಸಂಗ್ರಹದಲ್ಲಿ
[illegible] ಆನಂದ [illegible]
[illegible]
ಇದೆ. [illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]

(1)

ಆನಂದ ಕಂದರ [illegible] ಪ್ರಧಾನ ಸಾಹಿತ್ಯದಲ್ಲಿ [illegible] [illegible], ಭಾರತದ ಸಂಸ್ಕೃತಿ [illegible] [illegible] [illegible] [illegible] [illegible] ಜನಪದವನ್ನು [illegible] [illegible]. ಕನ್ನಡ ತನ, [illegible] [illegible] [illegible] [illegible] [illegible] [illegible] [illegible] [illegible].

ಕಥಾಸಾಹಿತ್ಯ: ಆನಂದಕಂದರು ಕನ್ನಡ ಕಥಾ [illegible] [illegible] [illegible] [illegible] [illegible] [illegible] [illegible] [illegible]. ಅವರ [illegible] ಸಂಗ್ರಹ [illegible] [illegible] [illegible] [illegible] [illegible] [illegible] [illegible] [illegible] [illegible] (1932), ಸಂಸಾರ ಚಿತ್ರ (1934), 'ನಲ್ಲ ಬಾರಾ' (1939), 'ಮಾತನಾಡುವ ಕಲ್ಲು' (1949), [illegible] (1955) [illegible]

(8)

[illegible]

[illegible] 1933 [illegible]

[illegible] 12-05-1934 [illegible]

[illegible] (1933), [illegible]

(1967) [illegible] '[illegible]' (1974)
'[illegible]' (1937), '[illegible]' (1961)
[illegible]

1965 ನವೆಂಬರ್

ದಕ್ಕಿಂತ ಸುಲಭವಾಗಿ ಬಗೆಹರಿಯಬಹುದು. ಇದಕ್ಕೆ ಬೇರೆ ಸ್ವತಃಸಿದ್ಧ ಔಷಧಿ ಇಲ್ಲ.

ಪ್ರತಿಯೊಬ್ಬನಿಗೂ ಅಭಿಪ್ರಾಯ ಸ್ವಾತಂತ್ರ್ಯ ಇದೆ. ಅದು ವ್ಯಕ್ತಿಯ ಮೂಲಭೂತ ಹಕ್ಕಾಗಿರಬಹುದು. ಆದರೆ ಒಬ್ಬನ ಮೂಲಭೂತ ಹಕ್ಕು ಇನ್ನೊಬ್ಬನ ಮೂಲಭೂತ ಹಕ್ಕಿನೊಂದಿಗೆ ಘರ್ಷಿಸಬಾರದು "ಸಮಿತಿಯ ಮನೋಭಾವ" ("a committee mind") ಇದಕ್ಕೊಂದು ಮಾರ್ಗ ಮುಖ್ಯವಾಗಿ ಉನ್ನತ ಸ್ಥಾನಗಳಲ್ಲಿರುವವರಿಗೆ ಇದು ಅತ್ಯಂತ ಪ್ರಯೋಜನಕಾರಿ. ಐವರು ಜನ ಕುಳಿತು ಮಾತಾಡುವಾಗ ವಿಚಾರಗಳಲ್ಲಿ ಒಮ್ಮತಕ್ಕೆ ಬರುವ ಉತ್ಸುಕತೆ ಇರದಿದ್ದರೆ ಕಾರ್ಯ ನೆರವೇರದು. ಅಂತ್ಯದಲ್ಲಿ ಸಿದ್ಧವಾಗುವುದಾದರೂ ಸಮಿತಿಯ ಗೆಲವೇ ಹೊರತು ಒಬ್ಬ ವ್ಯಕ್ತಿಯ ಅಭಿಪ್ರಾಯವಲ್ಲ.

ಹಿರಿಯರೆಂದೆನಿಸಿಕೊಂಡವರಿಗೆ ನನ್ನ ಅನುಭವದ ಒಂದು ಮಾತು. ತಮ್ಮಿಂದ ಕಿರಿಯರಾದವರೊಂದಿಗೆ ವ್ಯವಹರಿಸುವಾಗ ಅವರು ಸದಾ ತಪ್ಪು ಕಂಡುಹಿಡಿಯುವ ಕೆಟ್ಟ ಸ್ವಭಾವ ತಮ್ಮಲ್ಲಿದ್ದರೆ ಅದನ್ನು ಬಿಟ್ಟು ಬಿಡಬೇಕು. ಇದರಿಂದ ಒಳಗಿನಿಂದ ಕೊರೆಯಲ್ಪಟ್ಟ ಬುದ್ಧಿಗೆ ಎಲ್ಲ ವಕ್ರವಾಗಿ ತೋರುತ್ತದೆ. ಸದಾ ಟೀಕಿಸುವ ಚಟದಿಂದ ಅರಿವಿಲ್ಲದೆನೆ ಜರಿಯುವ ಸ್ವಭಾವ ತಲೆ ಹಾಕುತ್ತದೆ. ವಿಶೇಷತಃ, ಯುವ ಜನಾಂಗದಲ್ಲಿ ಸ್ಫೂರ್ತಿ ತುಂಬಬೇಕಾದ ನಾಯಕರು ಈ ವಕ್ರ ಸ್ವಭಾವದತ್ತ ತಾವು ಜಾರದಂತೆ ಜಾಗರೂಕರಾಗಿರಬೇಕು. ಯುವ ಜನರಲ್ಲಿ ಶಕ್ತಿ, ಉತ್ಸಾಹ ಎಲ್ಲ ಇರುತ್ತದೆ. ಅದನ್ನು ಅನುಕೂಲವಾಗಿ ಉಪಯೋಗಿಸಿಕೊಳ್ಳಬೇಕಾದರೆ ಸಂಬಂಧಪಟ್ಟವರಿಗೆ ಅದು ಹೇಗೆಂದು ತಿಳಿದಿರಬೇಕು. ನಾನು ಈ ಜರಿಯುವ ಸ್ವಭಾವ ಬಾರದಂತೆ ಪ್ರಯತ್ನಿಸಿ ಯುವಜನರೊಂದಿಗೆ ಹೊಂದಿಕೊಂಡು ಅವರಿಂದ ಉತ್ತಮ ಕೆಲಸವನ್ನು ಪಡೆದಿದ್ದೇನೆ.

ನನ್ನ ಬಾಳಿನ ಇನ್ನೊಂದು ಪ್ರಾಮುಖ್ಯ ಸಂಗತಿಯೆಂದರೆ ಹೆಚ್ಚು ಹೆಚ್ಚು ಗೆಳೆಯರನ್ನು ಮಾಡಿಕೊಳ್ಳುವುದು ಮತ್ತು ಒಬ್ಬನನ್ನಾದರೂ ಕಳೆದುಕೊಳ್ಳದಿರಲು ಸಾಧ್ಯವಿದ್ದ ಮಟ್ಟಿಗೆ ಯತ್ನಿಸುವುದು. ಯಾವನಾದರೂ ಇಂದು ಹೆಚ್ಚು ಗೆಳೆಯರು ಯಾರಿಗೆ? ಎಂಬ ಸ್ಪರ್ಧೆಯನ್ನೇರ್ಪಡಿಸಿದರೆ ನಾನದರಲ್ಲಿ ಖಂಡಿತವಾಗಿಯೂ ಭಾಗವಹಿಸಲು ಸಿದ್ಧ, ಮಾತ್ರವಲ್ಲ, ಅದರಲ್ಲಿ ಪ್ರಥಮ ಬಹುಮಾನವೂ ನನಗೆ ಸಿಗಬಹುದು. ಇದು ಆತ್ಮಸ್ತುತಿಯಲ್ಲ ಗೆಳೆತನದಲ್ಲಿ ನನಗೆ ವಿಶ್ವಾಸವಿದೆ. ಅದು ಜೀವನದ ಸತ್ವದಾಯಿ. ಅದು ಜೀವನವನ್ನು ಜೀವನ ಯೋಗ್ಯವಾಗಿಸುತ್ತದೆ. *


"Shree S. K. Patil 65th Birthday Felicitation Souvenir"ದಿಂದ ಸಾಭಾರ

ನರನ ಹಾರಾಟ

ಕೈಗೆ ಸಿಕ್ಕಿದರೆ ರವಿ ಚಂದ್ರ ನಕ್ಷತ್ರ
ಉದ್ಧಾರವಾಗುವುದು ನರನ ಕುಲಗೋತ್ರ
ಇದಕಾಗಿಯೇ ನಭದ ಮೇಲೆ ಹಾರಾಟ
ಯಾರಿಗೂ ತಪ್ಪಿಲ್ಲ ಮಾನವನ ಕಾಟ

ವಿಜ್ಞಾನ

ವಿಜ್ಞಾನವೆನ್ನುವುದು ಜನರ ಅಜ್ಞಾನ
ಮೇಧಾವಿಗಳು ಮಾಡಬೇಕಾದ ಸ್ನಾನ
ಸ್ನಾನ ಮುಗಿಸಿದ ಬಳಿಕ ಎಲ್ಲರೂ ಕುಳಿತು
ಒಂದೆಡೆಗೆ ಊಟಮಾಡುವ ರೂಢಿ ಬಳಿತು — ದಿನಕರ ದೇಸಾಯಿ



ಅವನನ್ನು ಮರೆಯೋಣ ಬೇಡ!

ರಾಧಾಕೃಷ್ಣರಾವ್

ಜಾತ್ಯತೀತ ತತ್ವಕ್ಕಾಗಿ ಹುತಾತ್ಮನಾದ

ಅವನ ಹೆಸರು ಮೀರ್ ಮಕಬುಲ್ ಶೆರ್ವಾನಿಯೆಂದು. ಅವನು ಕಾಶ್ಮೀರದ ಬಾರಾಮುಲಾ ನಗರದಲ್ಲಿ ಚಿಕ್ಕ ವ್ಯಾಪಾರಿಯಾಗಿದ್ದ ಮಾತ್ರ. ವಯಸ್ಸಿನಲ್ಲಿ ಆತ ತೀರ ತರುಣ. ಆದರೆ ಕಾಶ್ಮೀರದಲ್ಲಿ ಜಾತಿನಿರಪೇಕ್ಷತೆಯನ್ನು ಎತ್ತಿ ಹಿಡಿದು ಅದಕ್ಕಾಗಿ ಹುತಾತ್ಮನಾಗಿ ಶೆರ್ವಾನಿ ಭಾರತ-ಕಾಶ್ಮೀರ ಸಂಬಂಧದ ಬೆಸುಗೆ ಹಾಕಿದ. ಬಹುಶಃ ಕೆಲ ಮಟ್ಟಿಗೆ ಆತನ ಸಾಹಸದಿಂದ ಶ್ರೀನಗರ ೧೯೪೭ ರಲ್ಲಿ ರಾಕ್ಷಸೀ ಪಠಾಣ ದಾಳಿಗಾರರಿಂದ ಉಳಿಯಿತು ಮತ್ತು ಭಾರತದ ಸೈನ್ಯ ಕಾಶ್ಮೀರಕೊಳ್ಳವನ್ನು ರಕ್ಷಿಸಲು ಸಮರ್ಥವಾಯಿತು.

೧೯೪೭ ಅಕ್ಟೋಬರ್ ೨೨ ರಂದು ಪಾಕಿಸ್ತಾನ ಸರಕಾರ ಒದಗಿಸಿದ ಲಾರಿಗಳಲ್ಲಿ ೩,೦೦೦ ಪಠಾಣ ದಾಳಿಗಾರರು ಅಬಟಾಬಾದ್ ಮೂಲಕ ಕಾಶ್ಮೀರದಲ್ಲಿ ನುಗ್ಗಿದರು. ದೊಮೆಲ್ ಮತ್ತು ಮುಜಫರಾಬಾದ್ ತಾ. ೨೪ ರೊಳಗೆ ಅವರ ವಶವಾದವು. ಅವೆರಡನ್ನೂ ಅವರು ಸುಟ್ಟು ಸೂರೆ ಮಾಡಿದರು. ಎದುರಿಗೆ ಸಿಕ್ಕಿದ ಸೀಖರನ್ನೂ ರಾಷ್ಟ್ರೀಯವಾದಿ ಹಿಂದುಗಳನ್ನೂ ಮುಸ್ಲಿಮರನ್ನೂ ಕೊಚ್ಚಿ ಹಾಕಿದರು.

ತಾ. ೨೫ ಕ್ಕೆ ಅವರು ಬಾರಾಮುಲಾ ಮುಟ್ಟಿ

ಆಗಿತ್ತು. ಝೀಲಂ ಕಣಿವೆಯ ಬಾಗಿಲಲ್ಲಿದ್ದ ಈ ನಗರ ಶ್ರೀನಗರದ ಹದ್ದಾರಿಯಲ್ಲಿದೆ. ಶೇರ್ವಾನಿ ಆ ಪಟ್ಟಣದಲ್ಲಿ ರಾಷ್ಟ್ರೀಯ ಪರಿಷತ್ತಿನ ಪ್ರಮುಖರಲ್ಲಿ ಒಬ್ಬ. ಅವನು ಉತ್ಕೃಷ್ಟ ಸಂಘಟಕನಾಗಿದ್ದ. ಅವನಿಗೆ ಕಾಶ್ಮೀರ ಕೊಳ್ಳದ ಕಾಲು ಹಾದಿಗಳೆಲ್ಲ ಗೊತ್ತು. ಬಾರಾಮುಲಾ ಜನರು ಸಂಕಟಕಾಲದಲ್ಲಿ ಶೇರ್ವಾನಿಯ ಮೇಲೆ ತುಂಬ ಭರವಸೆಯಿಟ್ಟಿದ್ದರು.

ಶೇರ್ವಾನಿ ಪರಿಸ್ಥಿತಿಯ ತಿಳಿವಳಿಕೆಗಾಗಿ ರಾಜಧಾನಿ ಶ್ರೀನಗರಕ್ಕೆ ಧಾಗಿಸಿದ. ಕಾಶ್ಮೀರವನ್ನು ಆತತಾಯಿಗಳಿಂದ ಕಾಪಾಡಲು ಭಾರತದೊಡನೆ ಮಾತುಕತೆ ನಡೆದಿದೆಯೆಂದು ಅವನಿಗೆ ಸುದ್ದಿ ಹತ್ತಿತು. ನಿಜವಾಗಿ ಭಾರತದ ಗೃಹ ಖಾತೆಯ ಕಾರ್ಯದರ್ಶಿ ವಿ. ಪಿ. ಮೆನನ್ ಅಂದು ಕಾಶ್ಮೀರ ಮಹಾರಾಜರೊಡನೆ ಸೇರ್ಪಡೆಯ ಬಗ್ಗೆ ಮಾತುಕತೆ ನಡೆಸಿದ್ದರು. ಭಾರತದ ಸೈನ್ಯ ಬರುವ ಸಂಭಾವ್ಯತೆಯನ್ನು ಕೇಳಿ ಶೇರ್ವಾನಿಗೆ ಧೈರ್ಯ ಬಂತು.

ತಾ. ೨೬ ದಿನ ಆತ ಶ್ರೀನಗರದಿಂದ ಮೋಟಾರ್ ಸೈಕಲ್ಲಿನಲ್ಲಿ ಬಾರಾಮುಲಾಕ್ಕೆ ಹೊರಟ. ಬಾರಾಮುಲಾ ಶ್ರೀನಗರ ರಸ್ತೆಯಲ್ಲಿ ಆಗಲೆ ದಾಳಿಗಾರರ ತಂಡಗಳು ದೌರ್ಜನ್ಯದಲ್ಲಿ ತೊಡಗಿದ್ದವು. ಶೇರ್ವಾನಿಯ ಗೆಳೆಯರು ಬೇಡ ಬೇಡವೆಂದರು. ಭಾರತೀಯ ಸೈನ್ಯ ಬಂದ ಮೇಲೆ ಹೋಗು ಎಂದರು. ಆದರೆ ಶೇರ್ವಾನಿ ಕೇಳಲಿಲ್ಲ.

ಬಾರಾಮುಲಾಕ್ಕೆ ಬಂದವನೇ ಅವನು ತನ್ನ ಸಹಕಾರಿಗಳನ್ನು ಕಳಿಹಾಕಿ ಭಾರತೀಯ ಸೈನ್ಯ ಬರಲಿದೆಯೆಂದು ಸಮಾಚಾರ ಕೊಟ್ಟು ಅವರನ್ನು ಹುರಿದುಂಬಿಸಿದ. ಅವರು ಜನರನ್ನು ಸಂಘಟಿಸಿದರು. ಹಿಂದು-ಮುಸ್ಲಿಮರೆನ್ನದೆ ಜನ ಅವನ ಮಾತಿನ ಮೇಲೆ ದಾಳಿಗಾರರನ್ನು ತಡೆಯುವ ಉಪಾಯಗಳಲ್ಲಿ ನಿರತರಾದರು.

ದಾಳಿಗಾರರು ಶ್ರೀನಗರವನ್ನು ತಲುಪಲು ಅದಷ್ಟು ತಡಮಾಡಬೇಕು ಎಂದರೆ ಮಾತ್ರವೇ ಕಾಶ್ಮೀರ ಉಳಿದೀತು ಎಂಬ ತಿಳಿವಳಿಕೆ ಶೇರ್ವಾನಿಗಿತ್ತು. ಅವನ ತಿಳಿವಳಿಕೆ ಸರಿಯಾಗಿಯೆ ಇತ್ತು. ಶ್ರೀನಗರ ವಿಮಾನ ನಿಲ್ದಾಣದಲ್ಲಿ ಒಂದು ಕಂಪನಿಯಷ್ಟು ಸಶಸ್ತ್ರ ಶತ್ರುಗಳಿದ್ದಿದ್ದರೆ ತಾ. ೨೭ ರಂದು ಭಾರತೀಯ ಸೈನ್ಯಕ್ಕೆ ವಿಮಾನ ಮೂಲಕ ಅಲ್ಲಿಳಿಯಲು ಅಸಾಧ್ಯವಾಗುತ್ತಿತ್ತೆಂದು ತಜ್ಞರು ಅಭಿಪ್ರಾಯ ಪಟ್ಟಿದ್ದಾರೆ.

ಶೇರ್ವಾನಿ ತನ್ನ ಕಾಶ್ಮೀರ ವೇಷವನ್ನು ತ್ಯಜಿಸಿ ಪಠಾಣರಂತೆ ವೇಷ ಹಾಕಿಕೊಂಡನು. ಮೋಟಾರ್ ಸೈಕಲ್ಲನ್ನು ಹತ್ತಿ ಹಳ್ಳಿಹಳ್ಳಿ ಗಲ್ಲಿ ಗಲ್ಲಿ ಸುತ್ತ ತೊಡಗಿದನು. ದಾಳಿಗಾರರ ತಂಡಗಳು ಎದುರಾಗಬೇಕು, ಅವನ ವೇಷ ನೋಡಿ ದಾರಿಯ ವಿವರಗಳನ್ನು ಕೇಳಬೇಕು, ಅವನು ತಪ್ಪು ತಪ್ಪೇ ಹೇಳಬೇಕು. ತನ್ನ ಸಹಕಾರಿಗಳ ಮೂಲಕ ಅವನು ಸುಳ್ಳು ಸುದ್ದಿಗಳನ್ನು ಕೂಡ ಹಬ್ಬಿಸುತ್ತಿದ್ದ.

ಶೇರ್ವಾನಿಯ ಉಪಾಯಗಳಿಂದ ದಾಳಿಗಾರರು ದಾರಿ ತಪ್ಪಿ ಅಲೆಯುವಂತಾಯಿತು. ಅವನು ಕೊಡುತ್ತಿದ್ದ ಸೂಚನೆಗಳು ಅವರು ಒಂದೇ ಕಡೆ ಸಾಕಷ್ಟು ಸಂಖ್ಯೆಯಲ್ಲಿ ಒಂದುಗೂಡದಂತೆ ಮಾಡುತ್ತಿದ್ದವು. ಆದ್ದರಿಂದ ಸ್ಥಾನಿಕ ಜನರಿಗೆ ಅವರಿಂದ ಉಪಟಳ ಕಡಿಮೆಯಾಗುತ್ತಿತ್ತು. ಶ್ರೀನಗರದತ್ತ ಅವರ ದೌಡು ಕುಂಠಿತವಾಯಿತು.

ಲೆಫ್ಟಿನಂಟ್ ಕರ್ನಲ್ ರೈಯವರ ನೇತೃತ್ವದಲ್ಲಿ ಭಾರತೀಯ ಸೈನ್ಯ ಬಾರಾಮುಲಾದ ಸಮೀಪ ಬರುತ್ತಿದ್ದಾಗ ಶೇರ್ವಾನಿಯ ಉತ್ಸಾಹ ಇನ್ನೂ ಹೆಚ್ಚಿತು. ಅವನೀಗ ಸುಲಿಗೆಗಾರ ಪಠಾಣರಿಗೆ ಕೊಡುತ್ತಿದ್ದ ಸಲಹೆಗಳಿಂದ ಅವರು ಭಾರತೀಯ ಸೈನಿಕರ ಗುಂಡುಗಳಿಗೆ ಸುಲಭವಾಗಿ ತುತ್ತಾಗುವಂತಾಯಿತು. ಶೇರ್ವಾನಿ ತನ್ನದೇ ಗುಪ್ತಚಾರ ವ್ಯವಸ್ಥೆಯ ಮೂಲಕ ಶ್ರೀನಗರಕ್ಕೆ ಸುದ್ದಿಗಳನ್ನು ಕಳಿಸಿ ಅಲ್ಲಿಂದ ಸಮಾಚಾರಗಳನ್ನು ತರಿಸಿಕೊಳ್ಳುತ್ತಿದ್ದ.

ಶ್ರೀನಗರಕ್ಕೆ ತಮ್ಮ ಮುನ್ನಡೆ ತಡೆಯಲ್ಪಟ್ಟದ್ದನ್ನೂ ತಮ್ಮವರು ಭಾರತೀಯ ಗುಂಡುಗಳಿಗೆ

ಆಹುತಿಯಾಗುತ್ತಿದ್ದುದನ್ನೂ ಮೇಲಿಂದ ಮೇಲೆ ಗಮನಿಸಿದ ದಾಳಿಗಾರರಿಗೆ ಎರಡು ಮೂರು ದಿನಗಳ ಮೇಲೆ ಶೇರ್ವಾನಿಯ ಮೇಲೆ ಸಂಶಯ ಬಂತು. ಅವರು ಅವನ ಹಿಂದೆ ಬೇಹುಗಾರರನ್ನು ಬಿಟ್ಟರು. ಶೇರ್ವಾನಿ ಸಿಕ್ಕಿಬಿದ್ದ.

ಅವನನ್ನು ಬಾರಾಮುಲಾಕ್ಕೆ ಎಳೆದು ತಂದರು. ಅದು ಸ್ಮಶಾನಸದೃಶವಾಗಿತ್ತು. ಹಿಂದು – ಮುಸ್ಲಿಂ – ಸಿಖರೆನ್ನದೆ ಸಿಕ್ಕವರನ್ನು ಕೊಂದು, ಹೆಂಗಸರ ಸತೀತ್ವ ಹರಣ ಮಾಡಿ ದಾಳಿಗಾರರು ವಿಚಿತ್ರವಾದ "ಧರ್ಮಯುದ್ಧ" ಮಾಡಿದ್ದನ್ನು ಶೇರ್ವಾನಿ ಕಂಡ. ಅವನ ನಿರ್ಧಾರ ಇನ್ನೂ ಬಲವಾಯಿತು.

ದಾಳಿಗಾರರು ಬಂದೂಕುಗಳ ತುದಿಯಿಂದ ಅವನನ್ನು ತಿವಿಯುತ್ತ ತಳ್ಳುತ್ತ ಪಟ್ಟಣದ ಮುಖ್ಯ ಚೌಕಿಗೆ ತಂದರು. ಅಲ್ಲಿ ಒಂದು ಅಂಗಡಿಯ ಜಗಲಿಗೆ ಅವನನ್ನು ಒಯ್ದು ನಿಲ್ಲಿಸಿದರು. ಊರಲ್ಲೆಲ್ಲ ಅವರು ಡಂಗುರ ಹೊಯ್ದು "ಇಂದು ಒಬ್ಬ ದ್ರೋಹಿಯನ್ನು ಶೂಲಕ್ಕೇರಿಸುತ್ತೇವೆ" ಎಂದು ಸಾರಿದ್ದರು. ಅವನ ಗತಿಯನ್ನು ಕಣ್ಣಾರೆ ಕಂಡು ಧನ್ಯರಾಗಲು ಜನರಿಗೆ ಆಮಂತ್ರಣ ನೀಯಲಾಗಿತ್ತು.

"ಹೇಳು, ರಾಷ್ಟ್ರೀಯ ಪರಿಷತ್ತು ಮತ್ತು ಭಾರತದ ಸೈನ್ಯದ ಚಲನವಲನದ ಬಗ್ಗೆ ನಿನಗೇನು ಗೊತ್ತಿದೆ?" ಎಂದು ದಾಳಿಗಾರರು ಶೇರ್ವಾನಿಯನ್ನು ದಬಾಯಿಸಿದರು. ಆತ ತುಟಿ ಎರಡುಮಾಡಲಿಲ್ಲ. ಆತ ಊರಲ್ಲಿ ತುಂಬ ಜನಪ್ರಿಯನಾಗಿದ್ದನೆಂದು ಅವರಿಗೆ ಗೊತ್ತಿತ್ತು. ಆದ್ದರಿಂದ. "ಪಾಕಿಸ್ತಾನದಲ್ಲಿ ಸೇರುವುದರಲ್ಲೇ ಕಾಶ್ಮೀರ ಮುಸ್ಲಿಮರ ಹಿತವಿದೆ!" ಎಂದು ಘೋಷಿಸಲು ಹೇಳಿದರು. ಶೇರ್ವಾನಿ ಅದನ್ನು ಧಿಕ್ಕರಿಸಿದ.

ದಾಳಿಗಾರರು ಅದೇ ಸ್ವಲ್ಪ ಕಾಲ ಹಿಂದೆ ಬಾರಾಮುಲಾದ ಸೆಂಟ್ ಜಾಸೆಫ್ಸ್ ಕ್ರೈಸ್ತ ಸಂನ್ಯಾಸಿನೀ ಮಠವನ್ನು ಧ್ವಂಸಮಾಡಿ ಬಂದಿದ್ದರು. ಅಲ್ಲಿದ್ದ ನಿರಪರಾಧಿ ಸಂನ್ಯಾಸಿನಿಯರನ್ನೂ ಮಕ್ಕಳನ್ನೂ ಕಗ್ಗೊಲೆ ಮಾಡಿದ್ದರು. ಗುಡ್ಡದ ಮೇಲಿದ್ದ ಆ ಮಠದಲ್ಲಿ ಕ್ರೈಸ್ತ ಸಂತರನ್ನು ಸಿಲುಬೆಗೇರಿಸಿದ್ದಂತೆ ತೋರಿಸುವ ಚಿತ್ರಗಳನ್ನು ಅವರು ಕಂಡಿದ್ದರು.

ಒಮ್ಮೆಲೇ ಅವರಿಗೆ ಆ ಚಿತ್ರಗಳ ನೆನಪಾಗಿರಬೇಕು. ಅವರು ಶೇರ್ವಾನಿಯನ್ನು ಚೌಕದಲ್ಲಿದ್ದ ಕಂಬಕ್ಕೆ ಬಿಗಿದರು. ಅವನ ಕೈಗಳನ್ನು ಅಗಲಿಸಿ ಕಟ್ಟಿದರು. ಕ್ರಿಸ್ತನಿಗೆ ಬಡಿದಂತೆ ಅವನ ಅಂಗೈಗಳಿಗೆ ಮೊಳೆಗಳನ್ನು ಬಡಿದರು.

"ಹೇಳು ಪಾಕಿಸ್ತಾನ್ ಜಿಂದಾಬಾದ್!" ಎಂದು ಅರಚಿದರು.

ಶೇರ್ವಾನಿ "ಹಿಂದುಸ್ತಾನ್ ಜಿಂದಾಬಾದ್!" ಎಂದು ಘೋಷಿಸಿದ. "ಹಿಂದೂ–ಮುಸ್ಲಿಂ ಇತ್ತೆಹಾದ್ ಜಿಂದಾಬಾದ್!"


ಆತತಾಯಿಗಳ ಕ್ರೋಧ ಮೇರೆ ಮೀರಿತು. ಅವರು ಒಂದು ಡಬ್ಬಿಯ ತಗಡು ಕತ್ತರಿಸಿ ಪಟ್ಟಿಮಾಡಿದರು. ಅದರ ಮೇಲೆ "ದ್ರೋಹಿಗೆ ಮರಣದಂಡನೆಯೇ ತಕ್ಕ ಶಾಸ್ತಿ" ಎಂದು ಬರೆದು, ಕ್ರಿಸ್ತನ ಹಣೆಗೆ "ಯಹೂದ್ಯರ ರಾಜ" ಎಂದು ಬರೆದು ಹಚ್ಚಿದ ಹಾಗೆ ತಗಡನ್ನು ಶೇರ್ವಾನಿಯ ಹಣೆಗೆ ಹಚ್ಚಿದರು.

ಶೇರ್ವಾನಿ ಮತ್ತೆ ಘೋಷಿಸಿದ: "ಹಿಂದೂ-ಮುಸ್ಲಿಂ ಐಕ್ಯಕ್ಕೆ ಜಯವಾಗಲಿ!"

ಹದಿನಾಲ್ಕು ಪಠಾಣ ದಾಳಿಗಾರರು ಬಂದೂಕುಗಳನ್ನು ಅವನಿಗೆ ಗುರಿ ಹಿಡಿದರು. "ಹಿಂದು–ಮುಸ್ಲಿಂ ಜಿಂದಾಬಾದ್!" ಎಂದು ಶೇರ್ವಾನಿ ಘೋಷಿಸುತ್ತಿದ್ದಂತೆ ಅವನ ಮೇಲೆ ಗುಂಡುಗಳು ಹಾರಿದವು.

೧೯೪೭ ಅಕ್ಟೋಬರ್ ೩೧, ಶುಕ್ರವಾರ ದಿನ ಸಹಧರ್ಮಿಯೊಬ್ಬನನ್ನು ಪಾಕಿಸ್ತಾನದಿಂದ ಬಂದ ಆತತಾಯಿಗಳು ಹೀಗೆ ಕೊಲೆ ಮಾಡಿದರು. ಆದರೆ ಅವನ ಹುತಾತ್ಮ ಪದವಿ ಭಾರತ ಕಾಶ್ಮೀರ ಸಂಬಂಧಕ್ಕೆ ಇನ್ನೊಂದು ಗಂಟು ಹಾಕಿತು. *

ಜ್ಞಾನಿ ನಿಷ್ಕ್ರಮಣ; ವೆಂಕಟರಾಮನ್ ಪ್ರವೇಶ



● ಪಾ. ವೆಂ. ಆಚಾರ್ಯ

ಕೊನೆಗೂ ರಾಷ್ಟ್ರಪತಿ ಚುನಾವಣೆ ಮುಗಿಯಿತು. ಹೊಸ ರಾಷ್ಟ್ರಪತಿಗಳು ಇಷ್ಟರಲ್ಲೇ ಅಧಿಕಾರ ಸ್ವೀಕರಿಸುವರು. ಜೈಲ್‌ಸಿಂಗರು ನಿವೃತ್ತರಾಗಿ ದಿಲ್ಲಿಯಲ್ಲೇ ನೆಲಸುವರು, ಎಂದು ಕೇಳಿ ಬರುತ್ತಿದೆ.

ಸಿಂಗರ ಅವಧಿಯೀಗ ಮುಗಿದಿರುವುದರಿಂದ ಅವರ ಅಧಿಕಾರ ಕಾಲದ ಸ್ಥೂಲ ಸಿಂಹಾವಲೋಕನಕ್ಕೆ ಎಡೆಯಿದೆ. ಆ ಕೆಲಸಕ್ಕೆಳೆದಾಗ ಮೊದಲು ನೆನಪಿಗೆ ಬರುವುದೆಂದರೆ ಅವರು ಅಧಿಕಾರ ಸ್ವೀಕರಿಸುವ ಸಮಾರಂಭದಲ್ಲೇ ರಾಷ್ಟ್ರಪತಿಯ ಹುದ್ದೆಯ ಗೌರವವನ್ನು ತಗ್ಗಿಸುವ ಮಾತಾಡಿದ್ದು. "ಇಂದಿರಾ ಗಾಂಧಿಯವರು ಆಜ್ಞಾಪಿಸಿದರೆ ನಾನು ಬೀದಿ ಗುಡಿಸಲು ಕೂಡ ಸಿದ್ಧ!" ಎಂಬರ್ಥದ ಮಾತುಗಳನ್ನು ಅವರು ಆಗ ಹೇಳಿದರು. [illegible] ಧಾರ್ಮಿಕ ಅಲ್ಪಸಂಖ್ಯಾತ ಗುಂಪಿಗೆ ಸೇರಿದ್ದ ಅವರು ತಮಗೆ [illegible] ಈ ಉಚ್ಚ ಸ್ಥಾನಕ್ಕಾಗಿ ಪ್ರಧಾನಮಂತ್ರಿಗಳಿಗೆ ಋಣಿಯಾಗಿದ್ದರು. ಆದರೂ ಸಂವಿಧಾನದ ಮೇರೆಗೆ ಯಾವ ಹುದ್ದೆಯನ್ನಲಂಕರಿಸಿದವರ ಅಂಕಿತವಿಲ್ಲದೆ ಯಾವ ಕಾನೂನೂ ಜಾರಿಗೆ ಬರಲಾರದೋ, ಯಾರ ಮುಂದೆ ಪ್ರಧಾನಮಂತ್ರಿಯೂ ಅಧಿಕಾರ ಪ್ರತಿಜ್ಞೆ ಕೈಕೊಳ್ಳಬೇಕೋ ಅಂಥ ಹುದ್ದೆಯನ್ನೇರುವವನು ಇಷ್ಟು ಸಣ್ಣವನಂತೆ ದೀನನಾಗಿ ವರ್ತಿಸಿದ್ದು ಆ ಹುದ್ದೆಗೆ ಅವಮಾನಕರವಾಗಿತ್ತು. ರಾಷ್ಟ್ರಪತಿ ಸ್ಥಾನ, ಹಿಂದಿನ ಕಾಲದ ಅರಸರು ಆಶ್ರಿತರಿಗೆ ಬಿಡುತ್ತಿದ್ದ ಉತ್ತಾರ, ನವಾಬರು ಹಾಕಿಕೊಡುತ್ತಿದ್ದ ಜಾಗೀರು ಎಂಬಂತಾಯಿತು. ಮಂತ್ರಿ ಸಂಪುಟ ರಾಷ್ಟ್ರಪತಿಯ ಇಷ್ಟ (pleasure) ಇದ್ದಷ್ಟು ಕಾಲ ಅಧಿಕಾರದಲ್ಲಿರುತ್ತದೆ – ಎಂಬ ಸಂವಿಧಾನ ವಾಕ್ಯಕ್ಕೇ ಜೈಲ್ ಸಿಂಗರು ಅವಮಾನ ಮಾಡಿದ್ದರು.

ಇಂದಿರಾ ಗಾಂಧಿಯವರ ಹತ್ಯೆಯಾದ ಮೇಲೆ ಅವರು ಇನ್ನೊಂದು ಅನುಚಿತ ಕೆಲಸ ಮಾಡಿದರು. ಅದೆಂದರೆ, ಸಾಮಾನ್ಯ ಲೋಕಸಭಾ ಸದಸ್ಯರಾಗಿದ್ದ ರಾಜೀವ ಗಾಂಧಿಯವರನ್ನು ಯಾವ ತಾಂತ್ರಿಕ ಪ್ರಕ್ರಿಯೆಯಿಲ್ಲದೆ ನೇರವಾಗಿ ಪ್ರಧಾನಮಂತ್ರಿಯಾಗಿ ಪ್ರತಿಜ್ಞಾತರಾಗಿ ಮಾಡಿಕೊಂಡದ್ದು. ಹಿಂದೆ ಇಬ್ಬರು ಪ್ರಧಾನಮಂತ್ರಿಗಳು ನಿಧನ ಹೊಂದಿದಾಗ ಮಂತ್ರಿಮಂಡಲದ ಅತಿ ಜ್ಯೇಷ್ಠ ಮಂತ್ರಿಯನ್ನು ತಾತ್ಕಾಲಿಕ ಪ್ರಧಾನಮಂತ್ರಿಯಾಗಿ ನೇಮಿಸಿಕೊಂಡು, ಲೋಕಸಭೆಯ ಬಹುಮತ ಪಕ್ಷ ಹೊಸ ನಾಯಕನನ್ನು ಆರಿಸಿಕೊಂಡ ಮೇಲೆ ಅವನನ್ನು ನೇಮಿಸಿಕೊಳ್ಳುವ ಸಂಪ್ರದಾಯವಿತ್ತು. ಆ ಸತ್ಸಂಪ್ರದಾಯವನ್ನು ಬದಿಗಿರಿಸಿ ತಮ್ಮ ಆಶ್ರಯದಾತ್ರಿಯ ಮಗನೆಂಬ ಒಂದೇ ಕಾರಣಕ್ಕೆ, ರಾಜೀವರು ಬಹುಮತ ಪಕ್ಷದ ನಾಯಕನಾಗಿ ಆರಿಸಿ ಬರುವ ಮೊದಲೇ ಅವರ ಪ್ರತಿಜ್ಞಾವಿಧಿ ಮಾಡಿ, ಬಹುಮತ ಪಕ್ಷಕ್ಕೂ ಲೋಕಸಭೆಗೂ ಪೂರ್ವಸಿದ್ಧ ನಿರ್ಣಯವನ್ನು ಎದುರುಹಾಕಿದರು. ಈ ಕೃತಿಯ ಪರಿಣಾಮ ಭವಿಷ್ಯತ್ತಿನಲ್ಲಿ ಯಾವ ಬಗೆಯ ರೀತಿ ಪ್ರಕಟಗೊಳ್ಳಲಿದೆ ಹೇಳುವುದು ಕಷ್ಟ. ಭವಿಷ್ಯತ್ತಿನಲ್ಲಿ ಯಾವನೋ ರಾಷ್ಟ್ರಪತಿಗೆ ಲೋಕಸಭೆಯ ಬಹುಮತ ಪಕ್ಷವು ಲಭಿಸದೆ ಸಂಧಿಕಾಲದ ಗೊಂದಲ [illegible] ತನ್ನ "ಇಷ್ಟ" ಬಂದ ರಾಜಕಾರಣಿಯನ್ನು ಎತ್ತಿಹಿಡಿಯಲು ಜೈಲ್‌ಸಿಂಗ್ ಹಾಕಿದ ಪರಂಪರೆ ಅವಕಾಶ [illegible].

[illegible] ಕಾಲದ ಭವಿಷ್ಯವನ್ನು ಗಟ್ಟಿಮಾಡಲು ನಮ್ಮ ನಿವರ್ತಮಾನ ರಾಷ್ಟ್ರಪತಿಗಳು ಉಪಯೋಗಿಸಿದ ಬಗೆಯೂ ಈ ಸಹಾಯಕ್ಕೆ ತಕ್ಕ ಶಾಸ್ತಿ ಆಗದೇ ಇರಲಿಲ್ಲ. ಸಿಂಗರ ಅಧಿಕಾರದ ಕೊನೆಯ ವರ್ಷಗಳಲ್ಲಿ ಅವರ ನೆರವಾಗಿ ಅಧಿಕಾರಕ್ಕೆ ಬಂದಿದ್ದ ಪ್ರಧಾನಮಂತ್ರಿಗಳು ಅವರನ್ನು ಹೆಚ್ಚು ಹೆಚ್ಚು ಅಲಕ್ಷಿಸುತ್ತಿದ್ದರು. ಅಸಹನೀಯ ಮಟ್ಟಕ್ಕೇರಿದಾಗ ನೊಂದ ರಾಷ್ಟ್ರಪತಿಗಳು ಮೆಲ್ಲಗೆ ರಾಷ್ಟ್ರಪತಿ–ಪ್ರಧಾನಿ ಮತಭೇದವನ್ನು ಪತ್ರಿಕಾ ಅಂಕಣದ ವಿಷಯವಾಗಿ ಮಾಡಿದರು. ರಾಜೀವ ಗಾಂಧಿ ಸಂಗತಿಗಳನ್ನು ಇಷ್ಟೇಕೆ ಉಲ್ಬಣಕ್ಕೆ ತಂದರೆಂಬುದು ರಹಸ್ಯವಾಗಿ ಉಳಿದಿದೆ. ತಾವು ಎತ್ತಿ ಆಡಿಸಿದ ಹುಡುಗ ತಮ್ಮ ಮಾತು ಕೇಳದಿರಲೆಂದು ಇಂದಿರಾ ಗಾಂಧಿಯವರನ್ನು ಅಧಿಕಾರ ಪಟ್ಟಕ್ಕೆ ಎತ್ತಿದ ನಿಜಲಿಂಗಪ್ಪ, ಕಾಮರಾಜ, ಸಂಜೀವ ರೆಡ್ಡಿ ಸಿಂಡಿಕೇಟನ್ನು ಯಾವ ಕಾರಣಕ್ಕಾಗಿ ನಮ್ಮ ದಿವಂಗತ ಪ್ರಧಾನಿ ಧಿಕ್ಕರಿಸಿ ಚೆಕ್ ಮಾಡಿದರೋ ಅದೇ ಕಾರಣಕ್ಕಾಗಿ ಇಂದಿರಾ ಪುತ್ರನೂ ತನ್ನನ್ನು ಎತ್ತಿ ಹಿಡಿದ ಜೈಲರಿಗೆ ಕೈ ತೋರಿಸಿರಬಹುದು. ಮನುಷ್ಯರು ಎಂದೂ ಇತರರ ಅನುಭವದಿಂದ ಬುದ್ಧಿ ಕಲಿಯುವುದಿಲ್ಲ: ಜ್ಞಾನಿ ಎಂಬ ಹೆಸರು ಹೊತ್ತಿದ್ದರೂ ಜೈಲ್‌ಸಿಂಗರು ಇದಕ್ಕೆ ಅಪವಾದವಾಗಿರಲಿಕ್ಕಿಲ್ಲ. ಯಾವುದೋ ಸಂಗತಿಯಲ್ಲಿ ಬುದ್ಧಿ ಹೇಳಬಂದ ನಿಜಲಿಂಗಪ್ಪನವರಿಗೆ ಇಂದಿರಾ ಗಾಂಧಿಯವರು, "ನಾನು ಪ್ರಧಾನಮಂತ್ರಿ, ನಿಜಲಿಂಗಪ್ಪನವರೇ!" ಎಂದುತ್ತರ ಕೊಟ್ಟರಂತೆ. ತಾವು "ಎತ್ತಿ ಆಡಿಸಿದ ಹುಡುಗನಿಗೆ" ಅಗತ್ಯಕ್ಕಿಂತ ಹೆಚ್ಚು ಬುದ್ಧಿ ಹೇಳಲು ಜೈಲರು ಯತ್ನಿಸಿರಬಹುದು. ಅದಕ್ಕೆ ರಾಜೀವರು ಅಲಕ್ಷ್ಯದಿಂದ ಉತ್ತರ ಕೊಟ್ಟಿರಬಹುದು. ಅಥವಾ ತಮ್ಮನ್ನು ಅಧಿಕಾರದಲ್ಲಿ ಪ್ರತಿಷ್ಠಾತರಾಗಿ ಮಾಡಲು ಒಳದಾರಿ ಕಂಡವರು ಯಾವುದಾದರೂ ಒಳದಾರಿಯಿಂದ ಅಧಿಕಾರ ಚ್ಯುತನಾಗಿ ಮಾಡಲೂಬಹುದು ಎಂದು ಯೋಚಿಸಿರಬಹುದು, ರಾಜೀವ ಗಾಂಧಿಯವರು. ಪರಿಣಾಮವಾಗಿ ಅಧಿಕಾರದ ಕೊನೇ ದಿನಗಳಲ್ಲಿ ಜೈಲ್‌ಸಿಂಗರು "ನಾನು ಹೂ ಕೊಟ್ಟೆ, ಅವರು ಪ್ರತಿಯಾಗಿ ನನಗೆ ಕಲ್ಲು ಕೊಟ್ಟರು". ಎಂದು ಹಳಹಳಿಸುವಂತಾಯಿತು. ವಿಷಾದದ ಸಂಗತಿ; ಆದರೆ ಕಣ್ಣೀರು ಸುರಿಸುವಷ್ಟು ದುರಂತದ ಸಂಗತಿಯಲ್ಲ. [illegible]ಧಿಕಾರವೆಂಬುದು ಚಕ್ರದಂತೆ. ಚಕ್ರಗಳು ನೀವಿಕ್ಕಿದ ಹಾದಿಗಾಗಿ ಎಂದೂ ಕೃತಜ್ಞತೆ ತೋರಿಸುವುದಿಲ್ಲ.

* * *

ರಾಷ್ಟ್ರಪತಿಯಾಗಿ ಆಯ್ಕೆಯಾದಾಗ ಅಭಿನಂದಿಸಲು ಬಂದ ರಾಜೀವ ಗಾಂಧಿಯವರಿಗೆ ಹಾಗೂ ಸೋನಿಯಾ ಗಾಂಧಿಯವರಿಗೆ ವೆಂಕಟರಾಮನ್ನರೂ ಅವರ ಶ್ರೀಮತಿಯವರೂ ಶಾಲು ಉಡುಗೊರೆ ಕೊಟ್ಟದ್ದನ್ನು ದೂರದರ್ಶನದಲ್ಲಿ ತೋರಿಸಿದರು. ಇದು ಉಚಿತ ಆಚರಣೆಯಾಗಿ ಕಾಣಲಿಲ್ಲ. ಕೃತಜ್ಞತೆಯ ದ್ಯೋತಕವಾಗಿರುವಂತೆ ತೋರಿದ ಈ ಉಡುಗೊರೆ ರಾಷ್ಟ್ರಪತಿ ಸ್ಥಾನದ ಘನತೆ ಹೆಚ್ಚಿಸಲಿಲ್ಲ. ●

ತತ್ವಜ್ಞಾನಿಯಾದ ಚಕ್ರವರ್ತಿ

ಮಾರ್ಕಸ್ ಆರೇಲಿಯಸ್

● ಪಾ. ವೆಂ. ಆಚಾರ್ಯ

ತತ್ವಜ್ಞಾನಿಗಳೂ ರಾಜ್ಯಾದಿ ಲೌಕಿಕ ಕರ್ತವ್ಯಗಳನ್ನು ನೆರವೇರಿಸಬೇಕು- ಎಂದು ನಮ್ಮ ಪೂರ್ವಿಕರು ಹೇಳಿದ್ದರು. ಗ್ರೀಕ್ ತತ್ವಜ್ಞಾನಿ ಪ್ಲೇಟೋವಂತೂ ತತ್ವಜ್ಞಾನಿಗಳು ರಾಜರಾಗಿ ರಾಜರು ತತ್ವಜ್ಞಾನಿಗಳಾಗುವ ವರೆಗೂ ಮನುಷ್ಯಕುಲ ಶಾಂತಿಯಿಂದ ಬಾಳಲಾರದು ಎಂದು ಹೇಳಿದ. ಆದರೆ ಇದು ಜಗತ್ತಿನ ಇತಿಹಾಸದಲ್ಲಿ ನನಸಾದ ಸಂದರ್ಭಗಳು ಅತಿ ವಿರಳ. ಭಾರತದಲ್ಲಿ ಮಿಥಿಲೆಯ ಜನಕರಾಜನ ಒಂದು ಉದಾಹರಣೆ ಎದ್ದುಕಾಣುತ್ತದೆ. ಅವನು ಬ್ರಾಹ್ಮಣರನ್ನೊಳಗೊಂಡು ಅನೇಕ ತತ್ವಜ್ಞಾನಿಗಳ ಗೌರವವನ್ನು ಪಡೆದಿದ್ದ. ಆದರೆ ಆತನ ರಾಜ್ಯ ಚಿಕ್ಕದು. ರಾಜಕಾರಣದ ಸಕಲೋಪಾಯಗಳನ್ನೂ ಪರೀಕ್ಷೆಗೊಡ್ಡತಕ್ಕ ಸಮಸ್ಯೆಗಳು ಆತನನ್ನು ಕಾಡಿದಂತೆ ಇಲ್ಲ. ಕರ್ನಾಟಕದ ಅಮೋಘವರ್ಷ ನೃಪತುಂಗನನ್ನು ಇನ್ನೊಂದು ದೃಷ್ಟಾಂತವಾಗಿ ಹೇಳಬಹುದು. ಅವನ ಒಲವು ಕಲಿ ತತ್ವಜ್ಞಾನಗಳ ಕಡೆಗಿದ್ದರೂ ಮಹಾ ಸಾಮ್ರಾಜ್ಯವೊಂದನ್ನು ಶತ್ರುಗಳಿಂದ ಬಿಡಿಸಿಕೊಂಡು ಆಳುವ ಮತ್ತು ಕಾಪಾಡುವ ಹೊಣೆಯನ್ನು ಅವನು ಚೆನ್ನಾಗಿ ನಿರ್ವಹಿಸಿದ.

ಆದರೆ ಪ್ಲೇಟೋವಿನ ಆಶಯವನ್ನು ವಾಸ್ತವತೆಗೆ ಇಳಿಸುವುದರಲ್ಲಿ ಅತಿ ಯಶಸ್ವಿಯಾದವನು ರೋಮನ್ ಚಕ್ರವರ್ತಿ ಮಾರ್ಕಸ್ ಆರೇಲಿಯಸ್ ಅನ್ನಬೇಕು. ಪಡುವಲಲ್ಲಿ ಬ್ರಿಟನ್ನಿನಿಂದ ಮೂಡಲಾಗಿ ಪರ್ಶಿಯದ ಗಡಿಗಳ ವರೆಗಿನ ವಿಸ್ತಾರ ಸಾಮ್ರಾಜ್ಯವನ್ನು ಆಳುವ ಗುರುತರವಾದ ಕಾರ್ಯವನ್ನು ಆತ ಮಾಡಬೇಕಾಯಿತು. ಇದನ್ನಾತ ತತ್ವಜ್ಞಾನಿಯ ನಿರ್ವಿಕಾರ ಕರ್ತವ್ಯಪ್ರಜ್ಞೆಯಿಂದ ನೆರವೇರಿಸಿದ. ಆಳ್ವಿಕೆಯ ಬಹುಭಾಗವನ್ನು ರಣರಂಗದಲ್ಲೇ ಕಳೆಯಬೇಕಾಗಿಬಂದರೂ ಅವನು ಶಾಂತಿಯನ್ನೇ, ಕ್ಷಾಂತಿಯನ್ನೇ ಹೃದಯದಲ್ಲಿ ತುಂಬಿಕೊಂಡಿದ್ದ ಮತ್ತು ತನ್ನ ತತ್ವದ ಜೀವನದ ನಡುವೆ ವಿರಾಮದ ಕ್ಷಣಗಳನ್ನು ಒದವಿಸಿಕೊಂಡು ತನ್ನ ವಿಚಾರಗಳನ್ನು ಬರೆದಿಟ್ಟ. ಅವನ ಈ "ಚಿಂತನೆ"ಗಳು 18 ಶತಮಾನಗಳಾಚೆಯಿಂದ ಇಂದಿನ ರಾಜ್ಯಕರ್ತರಿಗೂ ದಾರಿಗಂಬವಾಗುವಂತಿದೆ.

ಮಾರ್ಕಸ್ ಆರೇಲಿಯಸ್ ರೋಮನ್ ಸಾಮ್ರಾಜ್ಯದ ಒಂದು ವಿಚಿತ್ರ ಯುಗದಲ್ಲಿ ಬಾಳಿದವನು. ವಿಶ್ವವಿಜೇತ ಜೂಲಿಯಸ್ ಸೀಜರ್ ತನ್ನ ಮಹತ್ವಾಕಾಂಕ್ಷೆಯಲ್ಲಿ ರೋಮನ್ ಗಣರಾಜ್ಯವನ್ನು ನಿರ್ನಾಮ ಮಾಡಿದ ನಂತರ ಸಾಮ್ರಾಜ್ಯವನ್ನು ಆಳಲು ಒಂದು ತರಹದ ಅರೆಬರೆ ರಾಜಸತ್ತೆ ಅಸ್ತಿತ್ವಕ್ಕೆ ಬಂದಿತ್ತು. ಹಿಂದಿನ ಚಕ್ರವರ್ತಿ—ತನ್ನ ಮಕ್ಕಳಲ್ಲಿ ಒಬ್ಬನನ್ನಲ್ಲ— ಬೇರೊಬ್ಬ ಯೋಗ್ಯತಾಸಂಪನ್ನ ತರುಣನನ್ನು ಆರಿಸಿ ತನ್ನ ಜೀವಮಾನದಲ್ಲೇ ಅವನನ್ನು ರಾಜ್ಯಭಾರದಲ್ಲಿ ತರಬೇತು ಮಾಡಿ ಅವನನ್ನು ನಾಮಕರಣವಿಧಿಯಿಂದ ಉತ್ತರಾಧಿಕಾರಿಯಾಗಿ ಮಾಡುತ್ತಿದ್ದ. ಈ ಪದ್ಧತಿಯಲ್ಲಿ ಆಳ್ವಿಕೆ ನಡೆಸಿದ ನಾಲ್ವರು "ಅಂತೋನೈನ್" ಚಕ್ರವರ್ತಿಗಳ ಭವ್ಯ ಪರಂಪರೆಯಲ್ಲಿ ಮಾರ್ಕಸ್ ಕೊನೆಯವನೂ ಅನೇಕ ರೀತಿಗಳಲ್ಲಿ ಶ್ರೇಷ್ಠತಮನೂ ಆಗಿದ್ದ.

ಮಾರ್ಕಸ್ ಆರೇಲಿಯಸ್ ಹುಟ್ಟಿದ್ದು ಕ್ರಿ. ಶ. 121ರಲ್ಲಿ— ಸ್ಪೇನಿನಿಂದ ಬಂದು ರೋಮಿನಲ್ಲಿ ನೆಲಸಿದ್ದ ಆಢ್ಯ ಕುಲವೊಂದರಲ್ಲಿ. ಚಿಕ್ಕಂದಿನಲ್ಲೇ ತಂದೆಯನ್ನು ಕಳೆದುಕೊಂಡ ಈ ಹುಡುಗನ ಗುಣಗಳನ್ನು ಬಹು ಬೇಗ ಗುರುತಿಸಿದ ಚಕ್ರವರ್ತಿ ಹಾಡ್ರಿ

ಯಸ್ ಅವನನ್ನು 9ನೇ ವಯಸ್ಸಿಗೇ ಪ್ರಧಾನಪುರೋಹಿತನ ಪದವಿಗೇರಿಸಿ ಅವನ ಶಿಕ್ಷಣಕ್ಕೂ ಏರ್ಪಾಡು ಮಾಡಿದ. ಹುಡುಗನ ಸತ್ಯಸಂಧತೆ ಅವನ ಮನಸ್ಸನ್ನು ಎಷ್ಟು ಹಿಡಿದುಕೊಂಡು ಬಿಟ್ಟಿತೆಂದರೆ ಅವನನ್ನು ಹಾಡ್ರಿಯನ್ ಮಾರ್ಕಸ್ ವೆರಿಸಿಮಸ್ (ಸತ್ಯತಮ) ಎಂದೇ ಕರೆದ. ಅವನ ಶಿಕ್ಷಣಕ್ಕೆ ಆಗಿನ ಅತಿ ಶ್ರೇಷ್ಠ ಸಾಹಿತ್ಯ. ತತ್ವಜ್ಞಾನ ಶಿಕ್ಷಕರು ನೇಮಿಸಲ್ಪಟ್ಟರು. ಸಾಹಿತ್ಯಶಾಸ್ತ್ರ ಪರಿಣತನಾದ ಮಾರ್ಕಸ್ ಕರ್ನೇಲಿಯಸ್ ಫ್ರೋಂಟೋ ಅವನಿಗೆ ಕಾವ್ಯಪಾಠ ಹೇಳಿದ. ಈ ಪ್ರಥಮ ಗುರುವಿನ ಮೇಲೆ ಶಿಷ್ಯನಿಗಿದ್ದ ಅಪಾರ ಗೌರವ ಅವನು ಚಕ್ರವರ್ತಿಯಾದ ನಂತರ ಗುರುವಿಗೆ ಬರೆದ ಪತ್ರಗಳಲ್ಲಿ ತುಂಬಿ ತುಳುಕುತ್ತಿದೆ.

ಬೇಗನೆ ಸಾಹಿತ್ಯದಿಂದ ತತ್ವಜ್ಞಾನದ ಕಡೆಗೆ ಮಾರ್ಕಸ್ ಆರೇಲಿಯಸ್ಸನ ಆಸಕ್ತಿ ಹರಿಯಿತು. ಸ್ಟಾಯಿಕ್ ತತ್ವಜ್ಞಾನ ಪರಂಪರೆಯ ರಸ್ಟಿಕಸ್ಸನನ್ನು ಅವನು ಆಶ್ರಯಿಸಿದ. ಕ್ರಿ. ಪೂ. 290ರಲ್ಲಿ ಅಥೆನ್ಸಿನ ಜೆನೊ ಎಂಬ ತತ್ವಜ್ಞಾನಿ ಪ್ರವರ್ತಿಸಿದ ಸ್ಟಾಯಿಕ್ ಪರಂಪರೆ ಆರೇಲಿಯಸ್ಸನ ಮನಸ್ಸಿನ ಮೇಲೆ ಮಾತ್ರವಲ್ಲ ಇಡೀ ಜೀವನ ವಿಧಾನದ ಮೇಲೆಯೆ ತನ್ನ ಮುದ್ರೆಯೊತ್ತಿತು. ಅದು ಶಿಸ್ತಿನ ತತ್ವಜ್ಞಾನ. ಮನುಷ್ಯ ನೈಸರ್ಗಿಕವಾಗಿ ಬಾಳಬೇಕು. ವಿವೇಕವೇ ಕರ್ಮಕ್ಕೆ ಮಾರ್ಗದರ್ಶಕವಾಗಬೇಕು, ಅದೇ ನೈಸರ್ಗಿಕ ಜೀವನ. ನಿಸರ್ಗ ಏನನ್ನು ನೀಡುತ್ತದೋ ಅದರಿಂದ ಅವನು ತೃಪ್ತನಾಗಬೇಕು. ಅಂಥವನೇ ಜಾಣ. ಬದುಕಿನಲ್ಲಿ ಬಹಳ ವಿಷಯಗಳ ಮೇಲೆ ಮನುಷ್ಯನಿಗೆ ಅಂಕೆಯಿಲ್ಲ. ಅವನಿಗೆ ಅಸಂಖ್ಯ ವಿಪತ್ತುಗಳು ಬರುತ್ತವೆ. ಅವನ್ನೆಲ್ಲ ಅವಿಚಲಿತನಾಗಿ ಎದುರಿಸಿ ತನ್ನ ಕರ್ತವ್ಯಗಳನ್ನು ಧೀರನಾಗಿ ನಿರ್ವಹಿಸಬೇಕು. ಇದಕ್ಕಾಗಿ ಅವನ ಸುಖ ದುಃಖಗಳನ್ನು ಸಮವಾಗಿ ಕಾಣುವ ಸ್ಥಿತಪ್ರಜ್ಞೆಯನ್ನು ಬೆಳೆಸಿಕೊಳ್ಳಬೇಕು. ಇದಕ್ಕೆ ಆತ್ಮನಿಗ್ರಹವನ್ನು ಅವನು ಸಾಧಿಸಬೇಕು. ಭೋಗವನ್ನು ಬಿಟ್ಟು ನೈಷ್ಠಿಕ ಜೀವನವನ್ನು ಬಾಳಲು ಬೋಧಿಸುವ ಈ ತತ್ವಜ್ಞಾನ ಆರೇಲಿಯಸ್ಸನನ್ನು ತಾರುಣ್ಯದಲ್ಲೇ ಗಂಭೀರ ವೃತ್ತಿಯುವನನ್ನಾಗಿ ಮಾಡಿತು.

ಮುಂದೊಂದು ದಿನ ಚಕ್ರವರ್ತಿಯಾಗುವುದಕ್ಕೆಂದೇ ಅವನ ತರಬೇತಿ ಆಯಿತು. 20ನೇ ವಯಸ್ಸಿಗಾಗಲೇ ಮಾರ್ಕಸ್ಸ್ ಸಿನೇಟರನಾದ. 25ನೇ ವಯಸ್ಸಿಗೇ ಅಧಿಕಾರ ಸಂಪನ್ನವಾದ ಕಾನ್ಸಲ್ ಹುದ್ದೆ ಅವನಿಗೆ ಸಿಕ್ಕಿತು. ಹಾಡ್ರಿಯನ್ ಚಕ್ರವರ್ತಿಯ ಅಪೇಕ್ಷೆಯಂತೆ ಅವನ "ದತ್ತಪುತ್ರ" ಲೂಶಿಯಸ್ಸನ ಮಗಳು ಫಾಸ್ಟಿನಾಳನ್ನು ಆರೇಲಿಯಸ್ಸನಿಗೆ ವಧುವಾಗಿ ನಿಶ್ಚಯಿಸಿದರು. ಹಾಡ್ರಿಯನ್ನನ ಉತ್ತರಾಧಿಕಾರಿಯಾಗಿ ಪಟ್ಟವೇರಿದ ಅಂತೋನಿನಸ್ ಪಾಯಸ್ ಮಾರ್ಕಸ್ಸನನ್ನು ತನ್ನ "ದತ್ತಪುತ್ರ"ನಾಗಿ ಸ್ವೀಕರಿಸಿ ರಾಜ್ಯಭಾರದಲ್ಲಿ ಅವನನ್ನು ಪಾಲುಗಾರನಾಗಿ ಮಾಡಿದ. ಅವನ ಮರಣಾನಂತರ ಮಾರ್ಕಸ್ ಆರೇಲಿಯಸ್ 40ನೇ ವಯಸ್ಸಿನಲ್ಲಿ ಚಕ್ರವರ್ತಿಯಾದ. (ಕ್ರಿ. ಶ. 161).

ವಿವೇಕಚಿಂತಾಮಣಿಯೆನಿಸಿದ ತತ್ವಜ್ಞಾನಿಗೆ ಪ್ರಾರಂಭದಿಂದಲೇ ಚಕ್ರವರ್ತಿತ್ವದ ಕಠೋರ ವಾಸ್ತವಿಕತೆಯನ್ನು ಎದುರಿಸಬೇಕಾಗಿ ಬಂತು. ಆಗಿನ ಜಗತ್ತಿನಲ್ಲೇ ಅತಿ ವಿಸ್ತಾರವೂ ಪ್ರಬಲವೂ ಎನಿಸಿದ ಸಾಮ್ರಾಜ್ಯದ ಪೂರ್ವ ತುದಿಯಲ್ಲಿ ಪಾರ್ಥಿಯನ್ನರು ರೋಮನ್ ಪ್ರಾಂತವಾಗಿದ್ದ ಅರ್ಮೇನಿಯದಲ್ಲಿ ನುಗ್ಗಿದ್ದರು. ಆರೇಲಿಯಸ್ಸನು ಯುದ್ಧಕೌಶಲದಲ್ಲಿ ತಾನು ಹಿಂದಿಲ್ಲವೆಂದು ತೋರಿಸಿದನು. ಪಾರ್ಥಿಯನ್ನರನ್ನು ಓಡಿಸಿ. ಅವರ ಪ್ರದೇಶಕ್ಕೆ ಮುತ್ತಿಗೆ ಹಾಕಿ ಮೆಸಪೊಟೇಮಿಯ ಪ್ರಾಂತವನ್ನು ಅವರಿಂದ ಕಿತ್ತುಕೊಂಡು ಅದನ್ನು ಆಶ್ರಿತ ರಾಜ್ಯವಾಗಿ ಮಾಡಿದನು.

ಈ ಯುದ್ಧ, ವಿಜಯದೊಡನೆ ಘೋರ ವಿಪತ್ತನ್ನು ತಂದಿತು. ಹಿಂತಿರುಗುವ ಸೈನಿಕರು ಏಶಿಯದಿಂದ ಅತ್ಯಂತ ವಿಕಟವಾದ ಕಾಲರಾ ರೋಗವನ್ನು ತಂದರು. ರೋಂನಲ್ಲಿ ವಿಜಯೋತ್ಸವ ನಡೆಯುತ್ತಿದ್ದಂತೆ ಸಾಮ್ರಾಜ್ಯದ ದಿಕ್ಕುದಿಕ್ಕುಗಳಿಂದ ಈ ಪಿಡುಗಿನ ಹಾವಳಿಯ ಸುದ್ದಿ ಬರತೊಡಗಿತು. ಕೆಲ ಪ್ರಾಂತಗಳಲ್ಲಿ ಅರ್ಧಕ್ಕರ್ಧ ಜನರು ಹಣ್ಣೆಲೆಗಳಂತೆ ಉದುರಿ ಹೋದರು. ರೋಂ ನಗರವನ್ನೇ ಅದು ವ್ಯಾಪಿಸಿ ನಿರ್ವಿಣ್ಣಗೊಳಿಸುತ್ತಿದ್ದಂತೆ ಸಾಮ್ರಾಜ್ಯದ ಉತ್ತರ ಗಡಿಯಾಚೆಗಿನ ಅನಾಗರಿಕ ಜರ್ಮನ್ ಜನಾಂಗಗಳು ಡ್ಯಾನ್ಯೂಬ್ ನದಿದಾಟಿ ಗಾಲ್ (ಈಗಿನ ಫ್ರಾನ್ಸ್) ಪ್ರಾಂತವನ್ನು ಆಕ್ರಮಿಸಿ ಆಲ್ಪ್ಸ್ ಪರ್ವತಗಳನ್ನು ದಾಟಿ ರೋಂ ನಗರವನ್ನೇ ಸಮೀಪಿಸಿದವು.


ಮಾರ್ಕಸ್ ಕಂಗೆಡಲಿಲ್ಲ. ಅವನು ತಲೆಮಾರುಗಳಿಂದ ಅರಮನೆಯಲ್ಲಿ ಸಂಚಿತವಾದ ಅಮೂಲ್ಯ ಸಂಪತ್ತನ್ನೆಲ್ಲ ಪೇಟೆಗೆ ತಂದು ಹರಾಜು ಹಾಕಿ ಧನಸಂಗ್ರಹ ಮಾಡಿದನು. ಗಡಿ ಪ್ರದೇಶದ ನಂಬಿಕೆಯ ಜನಾಂಗಗಳಿಂದ ಬಲಾಢ್ಯ ತರುಣರನ್ನು ಸೈನ್ಯಕ್ಕೆ

ಸೇರಿಸಿಕೊಂಡನು. ರೋಮನ್ ಸಾಮ್ರಾಜ್ಯದಲ್ಲಿ ಧಾರಾಳವಾಗಿದ್ದ ಗುಲಾಮರನ್ನು ಬಿಡುಗಡೆಮಾಡಿ ಯುದ್ಧ ತರಬೇತಿ ಕೊಟ್ಟನು. ತನ್ನ ಕೆಡುತ್ತಿರುವ ಆರೋಗ್ಯವನ್ನೂ ಲೆಕ್ಕಿಸದೆ ಜರ್ಮನ್ನರ ಮೇಲೇರಿ ಹೋದನು. ಎರಡು ವರ್ಷಗಳ ಸಿಕರದ ಕಾದಾಟದ ನಂತರ ಅವರನ್ನು ಡ್ಯಾನ್ಯೂಬ್ ನದಿಯಾಚೆಗೆ ಓಡಿಸಿ ಅವರ ಪ್ರದೇಶಗಳಲ್ಲೇ ಅವರನ್ನು ಮೆಟ್ಟಿ ಹಾಕಿದನು.

ಅನಂತರ ಸಿರಿಯ, ಇಜಿಪ್ತ್‌ಗಳಲ್ಲಿ ಸ್ವಜನರ ಬಂಡಾಯವನ್ನೇ ಅವನು ಎದುರಿಸಬೇಕಾಯಿತು. ಆಮೇಲೆ ಪುನಃ ಜರ್ಮನ್ನರು ಗಡಿಗಳಲ್ಲಿ ಕೀಟಲೆ ಆರಂಭಿಸಿದರು. ಕ್ರಿ. ಶ. 166ರಿಂದ 180ರ ವರೆಗೆ ಹದಿನೈದು ವರ್ಷ ಅವನ ಸಮಯು ಬಹುತರವಾಗಿ ರಣರಂಗದಲ್ಲಿ, ಕಷ್ಟಮಯವಾದ ಶಿಬಿರ ಜೀವನ ದಲ್ಲಿ ವ್ಯಯವಾಯಿತು.

ಇಡೀ ಆಳಿಕೆಯನ್ನೇ ರಣಾಂಗಣದಲ್ಲೆಂಬಂತೆ ಕಳೆದ ಮಾರ್ಕಸ್ ಆರೇಲಿಯಸ್ಸನ ಸ್ಟಾಯಿಕ್ ತತ್ವಜ್ಞಾನ ಅಲುಗದೆ ಉಳಿದದ್ದು ಒಂದು ಮಹಾದಾಶ್ಚರ್ಯ. ಯುದ್ಧದಲ್ಲಿ ಸೋತ ಜನಾಂಗಗಳನ್ನು ಅವನು ಔದಾರ್ಯದಿಂದಲೇ ನಡೆಸಿಕೊಂಡನು. ಸ್ವದೇಶದಲ್ಲಿ ದಂಗೆಯೆದ್ದ ದ್ರೋಹಿಗಳೊಡನೆ ಅವನು ತೋರಿಸಿದ ಕ್ಷಾಂತಿ ರೋಮನ್ ಇತಿಹಾಸದಲ್ಲೇ ಯಾವ ಸಮ್ರಾಟನೂ ತೋರಿಸದೆ ಇದ್ದದ್ದು. ರೋಮನ್ ಸೈನ್ಯಗಳ ಸೇನಾಪತಿಯಾಗಿದ್ದ ಅವೀದಿಯಸ್ ಕ್ಯಾಶಿಯಸ್ ಬಂಡಾಯ ಹೂಡಿ ತಾನೇ ಚಕ್ರವರ್ತಿಯೆಂದು ಘೋಷಿಸಿದಾಗ ಅವನನ್ನು ಅವನ ವಿರೋಧಿಗಳು ಕೊಂದು ರುಂಡವನ್ನು ತಂದದ್ದು ನೋಡಿ ಆರೇಲಿಯಸ್ ನೊಂದುಕೊಂಡನಂತೆ. ಬಂಡಾಯದಲ್ಲಿ ಭಾಗವಹಿಸಿದವರನ್ನು ಕ್ಷಮಿಸುವಂತೆ ಸಿನೇಟಿಗೆ ಮನವಿಮಾಡಿ ಕೊಂಡನು, ಕೂಡ. ನ್ಯಾಯದಲ್ಲಿ ನಿಷ್ಠುರ; ಆದರೆ ಸೇಡಿಗೆ ಮನಸ್ಸಿನಲ್ಲಿ ಎಡೆಕೊಡಲಿಲ್ಲ ಆತ. ದಂಡನೆ ಬೇರೆ ಪ್ರತಿಹಿಂಸೆ ಬೇರೆ. ರಾಜನೆಂದರೆ ದಂಡಾಧಿಕಾರಿ ಹೊರತು ಪ್ರತೀಕಾರಿಯಲ್ಲ. ಈ ತತ್ವವನ್ನು ಯಾವಾಗಲೂ ಅವನು ಮರೆಯಲಿಲ್ಲ.

ಅನಿವಾರ್ಯವಾಗಿ ಯುದ್ಧಮಗ್ನನಾಗಿದ್ದ ಈ ರಾಜ ಅದರ ಮಧ್ಯದಲ್ಲೇ ಕೈಗೊಂಡ ಪ್ರಜಾಹಿತ ಕಾರ್ಯಗಳೂ ಸೋಜಿಗವುಂಟುಮಾಡುವಂತಿದೆ. ಬಡ ಮಕ್ಕಳಿಗಾಗಿ ಅವನು ಶಾಲೆಗಳನ್ನು ಸ್ಥಾಪಿಸಿದನು. ಅನಾಥಾಶ್ರಮ, ಆಸ್ಪತ್ರೆಗಳಿಗೆ ದತ್ತಿಗಳನ್ನು ಮಂಜೂರು ಮಾಡಿದನು. ತೆರಿಗೆ ಪದ್ಧತಿಯನ್ನು ಸುಧಾರಿಸಿದನು. ಮಕ್ಕಳ ಮೇಲೆ ತಂದೆಗೂ ಗುಲಾಮರ ಮೇಲೆ



ಏನ್ಲಾ? ಹೋಗ್ಲಿ ಪಾಪ, ಅಂತ ಕೆಲಸ ಕೊಟ್ರೆ ಈಗ ಸಂಬಳ ಬೇರೆ ಕೇಳ್ತೀಯಾ?

ಒಡೆಯರಿಗೂ ಇದ್ದ ಸಾವು ಬದುಕಿನ ಅಧಿಕಾರವನ್ನು ಬಹಳ ಇಳಿಸಿದನು. ತಾಯಂದಿರಿಗೆ ಆಸ್ತಿ ಹಕ್ಕು ಕೊಟ್ಟನು. ಅಥೆನ್ಸಿನಲ್ಲಿ ತತ್ವಜ್ಞಾನ ಮತ್ತು ತರ್ಕ ಶಾಸ್ತ್ರವನ್ನು ಬೋಧಿಸುವ ಒಂದು ವಿದ್ಯಾಲಯ ವನ್ನು ಸ್ಥಾಪಿಸಿ ಸಾಮ್ರಾಜ್ಯದ ತರುಣರಿಗೆಲ್ಲ ಗ್ರೀಕ್ ತತ್ವಜ್ಞಾನದ ಸೌಸವವನ್ನು ದೊರಕಿಸಿ ಕೊಡಲು ವ್ಯವಸ್ಥೆ ಮಾಡಿದನು. ರೋಮನ್ ಸಾಮ್ರಾಜ್ಯದ ಇತಿಹಾಸ ಬರೆದ ಎಡ್ವರ್ಡ್ ಗಿಬ್ಬನ್, ಮಾರ್ಕಸ್ ಆರೇಲಿಯಸ್ಸನ ಆಳಿಕೆ "ರೋಮನ್ ಇತಿಹಾಸದಲ್ಲೇ ವಿಶ್ವಜನೀನ ಹಿತವನ್ನು ಏಕಮಾತ್ರ ಗುರಿಯಾಗಿಟ್ಟುಕೊಂಡ ಏಕಮಾತ್ರ ಆಳಿಕೆ", ಎಂದು ಬಣ್ಣಿಸಿದ್ದಾನೆ.

ಕ್ರಿ. ಶ. 180ರಲ್ಲಿ ಮಾರ್ಕಸ್ ಮರಣ ಹೊಂದಿದ ಮೇಲೆ ರೋಮನ್ ಸಿನೇಟು ಅವನನ್ನು ದೇವತೆಯೆಂದು ಘೋಷಿಸಿತು. ಅಸಂಖ್ಯ ಪ್ರಜೆಗಳು ಅವನ ಚಿಕ್ಕ ಮೂರ್ತಿಗಳನ್ನು ಮಾಡಿಸಿಕೊಂಡು ಮನೆಯಲ್ಲಿ ಪೂಜಿಸಿದರು. ಅವನ ಆಳಿಕೆಯಲ್ಲಿ ನಡೆದ ಏಕಮಾತ್ರ ಅನಿಷ್ಟ ಕಾರ್ಯವೆಂದರೆ ಸಾಮ್ರಾಜ್ಯದಲ್ಲಿ ಹೊಸದಾಗಿ ತಲೆಯೆತ್ತಿದ್ದ ಕ್ರೈಸ್ತಧರ್ಮವನ್ನು ನಿರ್ದಯವಾಗಿ ಹತ್ತಿಕ್ಕಿದ್ದು. ಅದಕ್ಕೆ ಕಾರಣ ಕ್ರೈಸ್ತರು ಪ್ರತಿಪಾದಿಸುತ್ತಿದ್ದ ಧರ್ಮ ರೋಮನ್ ಪರಂಪರಾಗತ ಧರ್ಮ ಮತ್ತು ಸಹಿಷ್ಣುತೆಗೆ ವ್ಯತಿರಿಕ್ತವಾಗಿದ್ದದ್ದು.

ಸಾಮ್ರಾಜ್ಯಕ್ಕೆ ಅವರು ಅಪಾಯಕಾರಿಗಳೆಂದು ಚಕ್ರವರ್ತಿ ಭಾವಿಸಿದ್ದ.

ಮಾರ್ಕಸ್ ಆರೇಲಿಯಸ್ ಹೊಂದಿದ ರಣ ವಿಜಯಗಳೂ ಅವನು ಸ್ಥಾಪಿಸಿದ ವಿಜಯಸ್ತಂಭವೂ ಅವನು ಕಾಪಾಡಿದ ರೋಮನ್ ಸಾಮ್ರಾಜ್ಯವೂ ಇಂದು ನಷ್ಟವಾಗಿಹೋಗಿವೆ. ಅವನು ಬರೆದಿಟ್ಟ ಆತ್ಮಚರಿತ್ರೆಯೂ ಕಳೆದುಹೋಗಿದೆ. ಆದರೆ ತನ್ನ ಜೀವನ ತತ್ವಜ್ಞಾನವನ್ನೆಲ್ಲ ಎರಕ ಹೊಯ್ದು ಅವನು ಬರೆದಿಟ್ಟ "ಚಿಂತನೆಗಳು" ಅವನ ಧೀರೋದಾತ್ತ ಜೀವನಕ್ಕೆ ಸಾಕ್ಷಿಯಾಗಿ ನಿಂತಿವೆ. ಎಷ್ಟೋ ಸಲ ರಣರಂಗದಲ್ಲಿ ಅವನು ಈ ವಚನಗಳನ್ನು ಬರೆದಿದ್ದನೆಂದು ನೆನೆದರೆ ಅವರ ಶೈಲಿಯ ಪೆಡಸುತನವನ್ನು ಕುಂದಿಟ್ಟು ಹೇಳಲಾಗದು.

ಸಿನೇಕ ಎಪಿಕ್ಟೆಕಸ್ ಮೊದಲಾದ ಇತರರೂ ಆರೇಲಿಯಸ್ಸನಂತೆ ತತ್ವೋಪದೇಶಗಳನ್ನು ಬರೆದಿಟ್ಟಿದ್ದಾರೆ. ಆದರೆ ಸ್ಟಾಯಿಕ್ ತತ್ವಜ್ಞಾನವನ್ನು ಆರೇಲಿಯಸ್ಸನಂತೆ ದೈನಂದಿನ ಧರ್ಮವಾಗಿ ಮಾಡಿಕೊಂಡವರು ತೀರ ವಿರಳ. ಅವನ ವಚನಗಳು ತನ್ನ ಮನಸಿಗೇ ಉಪದೇಶವಾಗಿದ್ದಂತಿವೆ.

"ಚಿಂತನೆ"ಗಳಲ್ಲಿ ಪರಮಾತ್ಮ ಸ್ವರೂಪದ ಚರ್ಚೆ ಇಲ್ಲ. ಆತ್ಮದ ಪರಮಗತಿಯದೂ ಇಲ್ಲ. ಅದು ನೈತಿಕ ದಾಖಲೆಯಾಗಿದೆ. ಹನ್ನೆರಡು ಭಾಗಗಳಾಗಿ ವಿಂಗಡಿಸಲ್ಪಟ್ಟ ಈ ಗ್ರಂಥದಲ್ಲಿ ಬದುಕಿನ ಧ್ಯೇಯ ಸುಖ ಪಡುವುದಲ್ಲವೆಂದು ಮುಖ್ಯವಾಗಿ ಪ್ರತಿಪಾದಿಸಿದೆ. ಸಮಚಿತ್ತ, ಚಿತ್ತಶಾಂತಿ ಇವು ಮನುಷ್ಯನ ಗುರಿಯಾಗಬೇಕು. ನೈಸರ್ಗಿಕವಾಗಿ ಬಾಳುವುದರಿಂದ ಇದನ್ನು ಸಾಧಿಸಬಹುದು. ಇದಕ್ಕೆ ನಾಲ್ಕು ಸದ್ಗುಣಗಳನ್ನು ಪತಿಕರಿಸಬೇಕು. ಒಂದು ವಿವೇಕ – ಒಳಿತು ಕೆಡುಕುಗಳ ತಿಳಿವು; ಎರಡು, ನ್ಯಾಯ ಬುದ್ಧಿ – ಪ್ರತಿಯೊಬ್ಬನ ಯೋಗ್ಯತೆಯನ್ನು ಕಾಣುವುದು; ಮೂರು, ಧೈರ್ಯ – ಶ್ರಮವನ್ನೂ ನೋವನ್ನೂ ಸೈರಿಸುವುದು; ನಾಲ್ಕು ಮಿತಜ್ಞಾನ – ಯಾವುದನ್ನೂ ಅತಿಯಾಗಿ ಮಾಡದಿರುವುದು.

ಮನುಷ್ಯ ಸಾಮಾಜಿಕನಾಗಿ ಬಾಳಬೇಕು. ವಿಷಯಸುಖಕ್ಕೆ ಅವನು ಮರುಳಾಗಕೂಡದು. ಮನುಷ್ಯನಲ್ಲಿ ದೇವತ್ವವಿದೆ. ದೇವತ್ವವೆಂದರೆ ಅವನ ಹೃದಯದಲ್ಲಿ ನಿಹಿತವಾದ ನೀತಿ ನಿಯಾಮಕ ಶಕ್ತಿ. ಇದನ್ನು ಒಂದು ದೃಷ್ಟಿಯಿಂದ ಆತ್ಮಸಾಕ್ಷಿಎಂದೂ ಇನ್ನೊಂದು ದೃಷ್ಟಿಯಿಂದ ಆಲೋಚನಾಶಕ್ತಿಯೆಂದೂ ಹೇಳಬಹುದು. ಈ ಶಕ್ತಿಗೆ ಮನುಷ್ಯ ಎಂಥ ಪ್ರಸಂಗದಲ್ಲಿಯೂ ವಿಧೇಯನಾಗಿ ವರ್ತಿಸಬೇಕು.

ಹೇಳಿದ್ದೊಂದು... ಮಾಡಿದ್ದೊಂದು...



ಗುಂಡು ತಲೆಗೆ ತಾಗಿ ಬಿದ್ದವನು ಎಂಬುದಕ್ಕೆ ಸರಿಹೋಗುವಂತೆ ಚಿತ್ರಿಸಲು ಹೇಳಿದರೆ...!

ಜಗತ್ತಿನಲ್ಲಿ ಬಹು ವಿಷಯಗಳು ಅದೃಷ್ಟದ ಅಧೀನ. ಮನುಷ್ಯನ ಕೈಲಿರುವುದೆಂದರೆ ತನ್ನ ಬಾಳನ್ನು ತಾನರಿತಂತೆ ರೂಪಿಸುವ ಶಕ್ತಿ. ಅದನ್ನು ಬೆಳೆಸಿಕೊಳ್ಳಿ. ದೇವತೆಗಳಲ್ಲಿ ನಾವು ಪ್ರಾರ್ಥಿಸಬೇಕಾದ್ದು ನಾವು ಹಂಬಲಿಸುವ ಹೆಣ್ಣನ್ನು ನಮಗೆ ಕೊಡಿ ಎಂದಲ್ಲ; ಅಂಥ ಆಸೆಬುರುಕತನದಿಂದ ನಮ್ಮನ್ನು ಮುಕ್ತವಾಗಿಡಿಎಂದು; ನಮ್ಮನ್ನು ದುಃಖ ದುಮ್ಮಾನಗಳಿಂದ ಪಾರುಮಾಡಿ ಎಂದಲ್ಲ: ಅಧೀರತೆಯನ್ನು ಕೊಡಬೇಡಿ ಎಂದು; ದುರ್ದೈವದಿಂದ ಕಾಪಾಡಿ ಎಂದಲ್ಲ: ಭಯವೆಂಬುದನ್ನೇ ನಮಗೆ ಕೊಡಬೇಡಿ ಎಂದು. ಮೃತ್ಯು ಅನಿವಾರ್ಯವೇ ಸೈ; ಆದರೆ ಅದಕ್ಕಾಗಿ ವಿಧಿಯ ಮೇಲೆ ರೇಗಬೇಡಿ. "ಸರಳವಾಗಿ, ಶಾಂತವಾಗಿ, ಸ್ವತಂತ್ರವಾಗಿ ಪರಲೋಕಕ್ಕೆ ನಡೆಯಿರಿ. ಹೀಗೆ ನಿಮ್ಮ ಬದುಕಿನ ಕೊನೇ ಕ್ರಿಯೆ ನಿಮ್ಮ ಏಕಮಾತ್ರ ಅಮೂಲ್ಯ ಸಂಪತ್ತಾಗಲಿ."

ಮಾರ್ಕಸ್ ಆರೇಲಿಯಸ್ ಗಂಭೀರ ತತ್ವಜ್ಞಾನಿಯಾಗಿದ್ದಷ್ಟೇ ಸರಳ ಮನಸ್ಕನಾಗಿದ್ದ. ಯಾರನ್ನೂ ಶಂಕಿಸುವುದು ಅವನ ಜಾಯಮಾನದಲ್ಲೇ ಇರ

ಲಿಲ್ಲ. ಅವನ ಹೆಂಡತಿ ಫಾಸ್ಟಿನಾ ಅವನಿಗೆ ಏಕನಿಷ್ಠಳಾಗಿರಲಿಲ್ಲ. ಉತ್ಸಾಹ ಶಕ್ತಿಯಿಂದ ತುಂಬಿ ತುಳುಕುತ್ತಿದ್ದ ಆ ತರುಣಿ ಈ ಹಿಮಶಾಂತ ತತ್ವಜ್ಞಾನಿಯಿಂದ ಹನ್ನೊಂದು ಮಕ್ಕಳನ್ನು ಪಡೆದಿದ್ದರೂ ಅವಳಿಗೆ ಅನೇಕ ಪ್ರೇಮಿಗಳಿದ್ದರು. ಸಾಮ್ರಾಜ್ಯದಲ್ಲೆಲ್ಲ ಅದು ಜನಜನಿತವಾಗಿತ್ತು. ಆದರೆ ಮಾರ್ಕಸ್ಸನಿಗೆ ಎಂದೂ ಆ ಬಗ್ಗೆ ಸಂಶಯ ಬರಲಿಲ್ಲ. ಅವಳನ್ನು ತನ್ನ ಚಿಂತನೆಯಲ್ಲಿ, "ಎಷ್ಟು ವಿಧೇಯ, ಎಷ್ಟು ಪ್ರೇಮಲ, ಎಷ್ಟು ಸರಳ ಜೀವಿ" ಎಂದು ಬಣ್ಣಿಸುತ್ತಾನೆ. ಒಮ್ಮೆಯಂತೂ ಅವನು ಅವಳ ಒಬ್ಬ ಪ್ರಿಯಕರನನ್ನು ತುಂಬಾ ಸಂಶಯಾಸ್ಪದ ಪ್ರಸಂಗದಲ್ಲಿ ಹಿಡಿದಿದ್ದ. ಆಗಲೂ ಅವನಿಗೆ ಸಂಶಯ ಬರಲಿಲ್ಲ. ಅವಳ ಮಾತು ಕೇಳಿ ಅವಳ ಕೆಲ ಪ್ರೇಮಿಕರಿಗೆ ದೊಡ್ಡ ಹುದ್ದೆಗಳನ್ನೂ ಕೊಡಿಸಿದ್ದ.

ಈ ಮಹಾಪುರುಷನ ಜೀವನದ ಅತಿ ದೊಡ್ಡ ದುರಂತವೆಂದರೆ ಅವನೊಡನೆ ಆಂತೊನೈನ್ ಚಕ್ರವರ್ತಿಗಳ ಸುರಾಜ್ಯ ಯುಗ ಕೊನೆಗೊಂಡದ್ದು. ಈ ದೊರೆಗಳಲ್ಲಿ ಬೇರೆ ಯಾವನೂ ತನ್ನ ಮಕ್ಕಳಲ್ಲೊ

ಆರೇಲಿಯಸ್‌ನ

— ದಿನವೂ ಬೆಳಗ್ಗೆ ಹೀಗೆ ಹೇಳಿಕೊಂಡು ಕಾರ್ಯಾರಂಭ ಮಾಡು: ಅಧಿಕ ಪ್ರಸಂಗಿಗಳು, ಕೃತಘ್ನರು, ದುರಹಂಕಾರಿಗಳು, ವಂಚಕರು, ಮತ್ಸರಗ್ರಸ್ತರು, ಜಗಳಗಂಟರು – ಇವರ ಸಂಗಡ ನನಗೆ ಸಂಪರ್ಕ ಬರಲಿದೆ. ಅವರಿಗೆ ಒಳಿತು ಕೆಡುಕುಗಳ ಅರಿವಿಲ್ಲದ್ದರಿಂದ ಹೀಗಾಗಿದ್ದಾರೆ. ನಾನು ಒಳಿತಿನ ಸುಂದರವಾದ ಮತ್ತು ಕೆಡುಕಿನ ಅಸಹ್ಯವಾದ ಸ್ವರೂಪವನ್ನು ಬಲ್ಲವನಾದ್ದರಿಂದ...... ನನಗೆ ಅವರಾರೂ ಏನೂ ಕೆಡುಕು ಮಾಡಲಾರರು... ನಾವು ಮನುಷ್ಯರು ಒಡನಾಟಕ್ಕಾಗಿ ಸೃಷ್ಟಿಸಲ್ಪಟ್ಟಿದ್ದೇವೆ... ಒಬ್ಬರ ವಿರುದ್ಧ ಇನ್ನೊಬ್ಬರು ನಡೆದುಕೊಳ್ಳುವುದು ನಿಸರ್ಗ ವಿರುದ್ಧವಾದದ್ದು. ಕೆರಳಿ ಪರಾಙ್ಮುಖರಾಗುವುದೆಂದರೆ ನಿಸರ್ಗಕ್ಕೆ ವಿರೋಧ ಆಚರಿಸಿದಂತೆಯೆ.

— ಪ್ರತಿ ಕ್ಷಣವೂ ರೋಮನ್ನನಂತೆ ಧೀರನಾಗಿ ಚಿಂತಿಸು. ಕೈಲಿರುವ ಕೆಲಸವನ್ನು ಪೂರ್ಣ ಮತ್ತು ಸರಳ ಗೌರವದಿಂದ, ಸ್ನೇಹಭಾವದಿಂದ, ಸ್ವಾತಂತ್ರ್ಯದಿಂದ, ನ್ಯಾಯದಿಂದ ನಿರ್ವಹಿಸಿ ನಿಶ್ಚಿಂತನಾಗು. ನಿಶ್ಚಿಂತನಾಗಿರಬೇಕಾದರೆ, ಪ್ರತಿಯೊಂದು ಕಾರ್ಯವನ್ನೂ ಅದೇ ನಿನ್ನ ಜೀವಮಾನದ ಕೊನೆಯ ಕೃತಿಯೆಂಬಂತೆ ಅಜಾಗ್ರತೆಯಿಲ್ಲದೆ, ಜುಗುಪ್ಸೆಯಿಲ್ಲದೆ, ವಿಚಾರಪೂರ್ಣವಾಗಿ, ಡಂಬವಿಲ್ಲದೆ, ಅಭಿಮಾನ ಅತೃಪ್ತಿಗಳಿಲ್ಲದೆ ನೆರವೇರಿಸಬೇಕು... ಯಾರು ಈ ನಿಯಮಗಳನ್ನು ಅನುಸರಿಸುವನೋ ಅವನಿಂದ ದೇವತೆಗಳು ಇನ್ನೇನನ್ನೂ ಬಯಸುವುದಿಲ್ಲ.

— ಪ್ರತಿಯೊಬ್ಬನಿಗೂ ಅವನ ಪಾಲಿನ ಬದುಕು ಸಾಕು.

— ಸುತ್ತೀ ಕೆದಕೀ ತನ್ನ ನೆರೆಯವರು ತನ್ನ ಬಗ್ಗೆ ಏನೆಣಿಸುತ್ತಿದ್ದಾರೆಂದು ಊಹಾಪೋಹ ಮಾಡುವವರಿಗಿಂತ ಕೀಳರು ಮತ್ತಾರೂ ಇಲ್ಲ. ತಂತಮ್ಮೊಳಗಿನ ದಾನವನ ಸಮಾಚಾರ ತಾವು ತಾವು ತೆಗೆದುಕೊಂಡರೆ ಸಾಕೆಂದು ಅವರು ತಿಳಿಯರು.

— ನಮ್ಮ ಆಯುಷ್ಯ ದಿನದಿನಕ್ಕೂ ಸವೆದು ಉಳಿದ ಅಂಶ ಕುಗ್ಗುತ್ತ ಹೋಗುತ್ತದೆಂದು ಮಾತ್ರವಲ್ಲ, ಮನುಷ್ಯ ಹೆಚ್ಚು ಕಾಲ ಬದುಕಿದರೂ ಅವನ ತಿಳಿವಳಿಕೆಯ ಶಕ್ತಿಯಾಗಲಿ ಜ್ಞಾನಾರ್ಜನ ಶಕ್ತಿಯಾಗಲಿ ಮೊದಲಿನಂತೆ ಉಳಿದೀತೆಂಬ ನಿಶ್ಚಯವಿಲ್ಲ ಎಂದು ಕೂಡ ನಾವು ಅರಿತುಕೊಳ್ಳಬೇಕು... ಆದ್ದರಿಂದ (ಕರ್ತವ್ಯದಲ್ಲಿ) ತ್ವರೆಮಾಡಬೇಕು.

— ಸಕಲ ಹಿತಕಾರಿಯಾದದ್ದನ್ನೇನಾದರೂ ಮಾಡುವ ಬದಲು ಹೆರವರ ಬಗ್ಗೆ ಯೋಚಿಸುತ್ತ ಕಾಲ ಕಳೆಯಬೇಡ. ಇಂಥಾ ಯೋಚನೆಗಳಲ್ಲಿ ತೊಡಗಿದಾಗ ಬೇರೇನಾದರೂ ಕೆಲಸ ಮಾಡುವ ಅವಕಾಶ ತಪ್ಪಿಹೋಗುತ್ತದೆ.

— ಬದಲಾವಣೆಗೆ ಯಾರಂಜುತ್ತಾರೆ? ಅಲ್ಲಾ, ಬದಲಾವಣೆ ಇಲ್ಲದೆ ಏನಾದರೂ ಆಗಬಲ್ಲದೆ?

— ಪ್ರತಿಯೊಂದು ಕೆಲಸಕ್ಕೆ ಮುಂಚೆ ನಿನ್ನನ್ನೇ ಕೇಳಿಕೋ– ಈ ಕಾರ್ಯದಿಂದ ನನಗೆ ಪಶ್ಚಾತ್ತಾಪ ಪಡಬೇಕಾದೀತೆ?

ಪ್ಪನನ್ನು ಉತ್ತರಾಧಿಕಾರಿಯಾಗಿ ನೇಮಿಸಿರಲಿಲ್ಲ. ಈತನೂ ಲೂಶಿಯಸ್ ವೇರಸ್ ಎಂಬವನನ್ನು ತನ್ನ ತಮ್ಮನಾಗಿ ದತ್ತು ಹಿಡಿದಿದ್ದ. ದೈವಯೋಗದಿಂದ ಮಾರ್ಕಸ್ಸನಿಗಿಂತ ಮುಂಚೆಯೇ ವೇರಸ್ ಸತ್ತ. ಅನಂತರ ಇನ್ನೂ ಎಳೇ ಪ್ರಾಯದ ತನ್ನ ಮಗ ಕಮೋಡಸನನ್ನೇ ಮಾರ್ಕಸ್ ಸಹಚಕ್ರವರ್ತಿಯೆಂದು ನೇಮಕ ಮಾಡಿದ. ದೇವತಾ ಮನುಷ್ಯನ ಈ ಪುತ್ರ ದಾನವನಾಗಿದ್ದಾನೆಂದು ಕೊನೆ ಕೊನೆಗೆ ಮಾರ್ಕಸ್ಸನಿಗೆ ತಿಳಿಯತೊಡಗಿತ್ತು. ಆದರೆ ಆಗ ತಡವಾಗಿ ಹೋಗಿತ್ತು. ಮಾರ್ಕಸ್ ಸತ್ತ ಸಮಯದಲ್ಲಿ ಮಗನೇ ಅಪ್ಪನನ್ನು ವಿಷಹಾಕಿಸಿ ಕೊಂದನೆಂದೊಂದು ಸುದ್ದಿ ಇತ್ತು. ಅದೆಷ್ಟೇ ಸುಳ್ಳಿರಲಿ. ಕಮೋಡಸ್ ರೋಮನ್ ಇತಿಹಾಸದ ಅತಿ ಲಂಪಟ, ಅತಿ ಕ್ರೂರ, ಅತಿ ಹೇಡಿ ಮತ್ತು ಅತಿ ಅವಿವೇಕಿ ಚಕ್ರವರ್ತಿಗಳಲ್ಲಿ ಒಬ್ಬನೆನಿಸಿ. ನಾಲ್ಕು ತಲೆಮಾರುಗಳಿಂದ ಹಿರಿಯರು ಕಟ್ಟಿದ್ದನ್ನು ಕೆಲ ವರ್ಷಗಳಲ್ಲಿ ಕೆಡಹಿಬಿಟ್ಟ. ಇದು ಎಲ್ಲ ಮಹಾ ಸತ್ತಾಧಾರಿಗಳಿಗೂ ಒಂದು ಎಚ್ಚರಿಕೆಯಂತೆ ಇದೆ. ●

ವಚನಗಳು

— ಅನಿಚ್ಛೆಯಿಂದ, ಸರ್ವಹಿತ ದೃಷ್ಟಿಯಿಲ್ಲದೆ, ವಿಚಾರವಿಲ್ಲದೆ, ಚಂಚಲ ಬುದ್ಧಿಯಿಂದ ಕೆಲಸ ಮಾಡಬೇಡ. ಮಾತಿನ ಮೋಡಿಗಳಿಂದ ವಿಚಲಿತನಾಗಬೇಡ. ಮಾತುಗಾರನಾಗಲೂ ಬೇಡ. ಹಲವು ವ್ಯಾಪ್ತಿಗಳಲ್ಲಿ ತೊಡಗಬೇಡ. ನಿನ್ನ ಅಂತರಂಗದಲ್ಲಿರುವ ದೇವರು ನಿನ್ನ ರಕ್ಷಕನಾಗಿರಲಿ... ಮನುಷ್ಯ (ತಾನೇ) ನೆಟ್ಟಗೆ ನಿಲ್ಲಬೇಕು; ಅವನನ್ನು ಇತರರು ನೆಟ್ಟಗೆ ನಿಲ್ಲಿಸಬೇಕಾಗಬಾರದು.

— ಕೊಟ್ಟಮಾತು ಮುರಿಯಬೇಕಾದ್ದನ್ನು, ಆತ್ಮಗೌರವ ಕಳೆಯುವಂಥಾದ್ದನ್ನು, ಪರರನ್ನು ದ್ವೇಷಿಸುವ ಅಗತ್ಯ ತರುವಂಥಾದ್ದನ್ನು, ಪರರನ್ನು ಶಂಕಿಸುವಂತೆ ಮಾಡುವಂಥಾದ್ದನ್ನು, ಡಂಬಾಚಾರ ಅಗತ್ಯವಾಗಿರುವಂಥಾದ್ದನ್ನು ಎಂದೂ ಬೆಲೆಯುಳ್ಳದ್ದೆಂದೆಣಿಸಬೇಡ. ರಕ್ಷಣೆಗೆ ಗೋಡೆ – ಪರದೆ ಬೇಕಾದ್ದನ್ನು ಆಶಿಸಬೇಡ.

— ವಿಶ್ರಾಂತಿಗೆ ಹಳ್ಳಿಯಲ್ಲೋ ಸಮುದ್ರ ತೀರದಲ್ಲೋ ಗುಡ್ಡದಲ್ಲೋ ಮನೆ ಬೇಕೆಂಬ ಜನರುಂಟು. ನಿನಗೂ ಅಂಥ ಹಂಬಲ ಬಂದೀತು... ಆದರೆ ಮನುಷ್ಯನಿಗೆ ನಿಶ್ಶಬ್ದವಾದ ಅಥವಾ ನಿರುಪದ್ರವವಾದ ಸ್ಥಳ ಸೇರಿದಾಕ್ಷಣ ವಿಶ್ರಾಂತಿ ಸಿಗಲಾರದೆಂದು ಅರಿ. ಅವನಿಗೆ ವಿಶ್ರಾಂತಿ ಸಿಗಬೇಕಾದ್ದು ಅವನ ಆತ್ಮದಲ್ಲೇ...

— ಹುಟ್ಟು ಹೇಗೋ ಹಾಗೆಯೆ ಸಾವೂ. ಅವೇ ಭೂತಗಳಿಂದ ನಿರ್ಮಾಣ, ಅವೇ ಭೂತಗಳಲ್ಲಿ ಲಯ. ಇದಕ್ಕಾಗಿ ಯಾರೂ ನಾಚಬೇಕಾಗಿದ್ದಿಲ್ಲ.

— ವಿಶ್ವವೇ, ನಿನಗೆ ಸಲ್ಲುವುದು ನನಗೂ ಸಲ್ಲುವುದು. ನಿನಗೆ ಸಕಾಲಿಕವೆನಿಸಿದ್ದು ನನಗೆ ಅಕಾಲಿಕವಾಗದು.

— ಅಸಾಧ್ಯವಾದದ್ದನ್ನು ಅಪೇಕ್ಷಿಸುವುದು ಹುಚ್ಚುತನ. ಅಂಥದನ್ನು ಮಾಡಹೋಗುವುದರಲ್ಲಿ ಏನಾದರೂ ದುಷ್ಟತನ ಅಡಕವಾಗಿರುವುದೂ ನಿಶ್ಚಯ.

— ರಾಷ್ಟ್ರಕ್ಕೆ ಅಹಿತ ಮಾಡದ್ದು ನಾಗರಿಕನಿಗೂ ಅಹಿತ ಮಾಡದು.

— ಅನ್ಯಾಯಕ್ಕೆ ಪ್ರತೀಕಾರ ಮಾಡುವ ಒಳ್ಳೇ ವಿಧಾನವೆಂದರೆ ನೀನು ಅನ್ಯಾಯಿಯಂತೆ ಆಗದಿರುವುದು.

— ನಿನಗೆ ಮಲತಾಯಿಯೂ ತಾಯಿಯೂ ಇದ್ದರೆ ಮಲತಾಯಿಗೆ ನೀನು ಮಾಡತಕ್ಕ ಕರ್ತವ್ಯ ಮಾಡಿ, ಮತ್ತೆ ತಾಯಿಯ ಕಡೆಗೇ ಬರುತ್ತೀ. ರಾಜಸಭೆ ನಿನ್ನ ಮಲತಾಯಿಯಾಗಲಿ; ತತ್ವಜ್ಞಾನ ನಿನ್ನ ತಾಯಿಯಾಗಿರಲಿ; ಅವಳ ಕಡೆ ಮತ್ತೆ ಮತ್ತೆ ಹಿಂದಿರುಗು. ಅವಳ ಮೂಲಕ ಸಭೆಯಲ್ಲಿ ನಿನಗಾದದ್ದು ಸಹ್ಯವೆನಿಸೀತು, ನೀನು ಸಭೆಗೆ ಸಹ್ಯವಾಗುವಿ.

— ಅನ್ಯಾಯಗಾರ ತನಗೇ ಅನ್ಯಾಯಮಾಡಿಕೊಳ್ಳುತ್ತಾನೆ. ಏಕೆಂದರೆ ಅವನು ತನ್ನನ್ನು ಕೆಟ್ಟವನನ್ನಾಗಿ ಮಾಡಿಕೊಳ್ಳುತ್ತಾನೆ.

ಪರೀಕ್ಷೆ ಮುಗಿದಿತ್ತು. ಇಂದಿರಾ ಮಾರನೆ ದಿನವೇ ಊರಿಗೆ ಹೊರಡುವ ಸಿದ್ಧತೆಯಲ್ಲಿದ್ದಳು. ಆದರೆ ಅಶ್ವಿನಿಯ ಒತ್ತಾಯಕ್ಕೆ ಮಣಿದು, ಇನ್ನೊಂದು ದಿನ ಉಳಿಯಬೇಕಾಗಿ ಬಂತು. ಅರ್ಧ ಘಂಟೆಯ ನಂತರ ಇಂದಿರಾ ಬಸ್ಸಿಗೆ ಹೊರಡಬೇಕಾಗಿತ್ತು. ಟ್ರಂಕು, ಹಾಸಿಗೆಯನ್ನು ಮಂಚದ ಮೇಲಿಟ್ಟು ಮೆಟ್ಟಿಲೇರಿದಳು.

ಅಶ್ವಿನಿಯದು ಮುಗಿಯದ ಕೆಲಸ. ರೂಮಿನ ತುಂಬಾ ಅವಳದೇ ಸಾಮಾನು, ಸೂಟ್‌ಕೇಸು... ಟ್ರಂಕು... ಎರಡು ಬಾಸ್ಕೆಟ್... ಹೋಲ್ಡಾಲ್... ಟ್ರಾನ್ಸಿಸ್ಟರ್, ಇತ್ಯಾದಿ.

ಇಬ್ಬರೂ ಸೇರಿ ಹೋಲ್ಡಾಲನ್ನು ಬಿಗಿದು ಕಟ್ಟಿದರು. ಮಾತಿನ ಕಾರಂಜಿಯಂತಿದ್ದ ಅಶ್ವಿನಿ ತುಟಿ ಬಿಗಿದುಕೊಂಡಿದ್ದಳು. ಇಂದಿರೆಗೂ ಅಷ್ಟೆ. ದುಃಖ ಒತ್ತಿ ಬರುತ್ತಿತ್ತು. ನಾಲಿಗೆ ಅಲುಗಿದಾಗ ಕಣ್ಣು ಹನಿಗೂಡಿತೆಂದು ಬೆದರಿ ಮೌನವಾಗಿದ್ದಳು.

ಅಶ್ವಿನಿ ಬಾಸ್ಕೆಟ್‌ನಲ್ಲಿದ್ದ ಟವಲಿನಿಂದ ಕೈಯೆತ್ತಿ ಫ್ಲಾಸ್ಕಿನ ಕಾಫಿಯನ್ನು ಎರಡು ಲೋಟಕ್ಕೆ ಬಗ್ಗಿಸಿದಳು.


"ತಗೋ ಇಂದು... ತುಂಬಾ ತೊಂದರೆ ಕೊಟ್ಟೆ."

"ಹಾಗೆ ಹೇಳಿ, ಹೊರಡೋ ಟೈಂನಲ್ಲಿ ಹೊಟ್ಟೆ ಉರಿಸಬೇಡ ಅಶು. ಈ ವರ್ಷ ನನ್ನವಳಾಗಿ ನೀನಿದ್ದೆ... ಆದರೆ..."

ಗಂಟಲೊತ್ತಿ ಬಂತು... ತಾರಸಿಯನ್ನು ನೋಡಿದಳು.

"ನಾನು ಬರೋದಿಲ್ಲಾ ಅಂದ್ಕೊಂಡ್ಯಾ... ನೋಡ್ತಿರು. ನಿಂಗಿಂತಾ ಮುಂಚೆನೇ ಬಂದಿರ್ತೀನಿ."





"ನಂಬೋಕೆ ಆಗೋಲ್ಲ... ಮೊನ್ನೆ ಅವರು ಎಷ್ಟು ಕೋಪಮಾಡಿಕೊಂಡಿದ್ರು. ನಂಗಂತೂ ತುಂಬಾ ಭಯ ಆಗಿತ್ತು. ಗಂಡಸರಿಗೆ ಅಷ್ಟೊಂದು ಕೋಪ ಬರುತ್ತಾ ಅಶ್ವಿನಿ...?"

"ಗಂಡಸರ ಗುಣಾನ ಒಂದೇ ಏಟಿಗೆ ಅಳೆದು ಬಿಟ್ಲು. ನೋಡುವಾ ಹೇಳು ಎಷ್ಟು ಜನ ಗಂಡಸರ ಜೊತೆ ಮಾತಾಡಿದೀಯ...? ನಿನ್ನ ನೋಡಿದ್ರೆ ಅಯ್ಯೋ ಅನ್ನಿಸುತ್ತೆ, ನನ್ನ ಹತ್ತಿರವೇನೋ ಹೋಗ್ಲಿ ಬೇರೆಯವರ ಎದುರಿಗೆ ಹೀಗೆಲ್ಲಾ ಹೇಳಿ ಪೆಚ್ಚುತನ ತೋರಿಸ್ಕೋಬೇಡ."

"ಮಹಾ ಬಿಡೆ... ನಿಂಗಿರೋ ಜ್ಞಾನ ನಂಗೂ ತಿಳಿದಿದೆ... ಆ ದಿನ ನಾನು ಇಲ್ಲದಿದ್ರೆ, ಬೀಳ್ತಿತ್ತು ಹತ್ತಾರು ಬಾಕ್ಸಿಂಗ್."

"ಅವತ್ತು ಅವನು ಆಡಿದ್ದೆಲ್ಲಾ ನಾಟಕ ಕಣೆ."


"ಅಂದ್ರೆ..."

"ಮುಂದೆ ನನ್ನ ಕೈ ಹಿಡಿಯುವವಳೂ ಪೆಚ್ಚಿಗೆ ಓದಿದ್ದಾಳೆ. ಅಕಸ್ಮಾತ್ ಹೆಚ್ಚು ಕಡಿಮೆಯಾದ್ರೆ ಇದೇ ರೀತಿ ಏಟುಬೀಳುತ್ತೇಂತ... ಅದು ಸ್ಯಾಂಪಲ್ ಅಷ್ಟೆ."

"ಒಗಟಿನ ಮಾತು ಬೇಡ."

"ಹೆಚ್ಚು ಗಲಾಟೆ ಮಾಡಿದ್ರೆ ನಿನಗೂ ಇದೆ ರೀತಿ ಪೂಜೇಂತ......"

ಜ್ಯೂಲಿಯಸ್ ಸೀಜ಼ರ್



★ಪಾ. ವೆಂ. ಆಚಾರ್ಯ

ಧೈರ್ಯ, ಔದಾರ್ಯ, ಕ್ಷಮೆ, ದಕ್ಷತೆ, ಸಾಹಸ, ಅಧಿಕಾರದಾಹ, ಮಹತ್ವಾಕಾಂಕ್ಷೆ, ಸ್ತುತಿಪ್ರಿಯತೆ, ನಿರ್ದಾಕ್ಷಿಣ್ಯ, ಕ್ರೌರ್ಯ – ಮತ್ತೂ ಎಷ್ಟೋ ಕಲ್ಯಾಣ ಮತ್ತು ದುಷ್ಟಗುಣಗಳ ರಾಶಿಯಾದ ಜೂಲಿಯಸ್ ಸೀಜರ್ ಪ್ರಾಚೀನ ರೋಂ ಚಕ್ರಾಧಿಪತ್ಯದ ಅತ್ಯಂತ ಪ್ರಸಿದ್ಧ ಪುರುಷನಾಗಿದ್ದಾನೆ. ಸೇನಾಧಿಪತ್ಯದ ಕೌಶಲದಲ್ಲಿ ಅವನು ಸಾರ್ವಕಾಲಿಕ ಮಹಾಪುರುಷರಲ್ಲಿ ಗಣಿಸಲ್ಪಡುತ್ತಾನೆ. ಬಹುಶಃ ಅವನ ಹಿಂದೆ ಗ್ರೀಕ್ ನೇತಾರನಾದ ಅಲೆಗ್ಸಾಂಡರ್ ಮತ್ತು ಅವನ ಅನಂತರ ಫ್ರೆಂಚ್ ಸೇನಾನಿಯಾದ ನೆಪೋಲಿಯನ್ ಮಾತ್ರವೇ ಜಗತ್ತಿನ ಇತಿಹಾಸದ ಮೇಲೆ ಅಷ್ಟು ಪ್ರಭಾವ ಮುದ್ರೆಯೊತ್ತಿ ಹೋದರೆಂದು ಕಾಣುತ್ತದೆ. ರಾಜಸತ್ತೆ ಬರುವುದನ್ನು ತಪ್ಪಿಸುವುದಕ್ಕೆಂದು ಅವನ ಕೊಲೆ ಆಯಿತು ಮತ್ತು ಅವನ ಕೊಲೆಯ ಫಲವಾಗಿಯೇ ಎನ್ನಬಹುದು, ರೋಮನ್ ಗಣರಾಜ್ಯದ ಪತನವಾಗಿ ರಾಜಸತ್ತೆ ಸ್ಥಾಪಿತವಾಯಿತು.

ಯುರೋಪಿನ ಇತಿಹಾಸಕ್ಕೆ ಒಂದು ಹೊಸ ಗತಿಯನ್ನು ಕೊಟ್ಟ ಜೂಲಿಯಸ್ ಸೀಜರ್‌ನ ಬದುಕು ಇತಿಹಾಸಕಾರರಿಗೆ ವಿಪುಲ ಸಾಮಗ್ರಿಯನ್ನೊದಗಿಸಿದೆ.

ಕಾಯಸ್ ಜೂಲಿಯಸ್ ಸೀಜರ್ ಹುಟ್ಟಿದಾಗ (ಕ್ರಿಸ್ತಪೂರ್ವ 100) ರೋಮನ್ ಸಾಮ್ರಾಜ್ಯ ಪಶ್ಚಿಮ ಏಶಿಯದಿಂದ ಸ್ಪೇನ್ ವರೆಗೆ ಭೂಮಧ್ಯ ಸಮುದ್ರದ ಉತ್ತರ ಮತ್ತು ದಕ್ಷಿಣ ತೀರದ ಗುಂಟ ವ್ಯಾಪಿಸಿತ್ತು. ಗಣರಾಜ್ಯ, ಪ್ರಜಾಪ್ರಭುತ್ವಗಳ ದೀರ್ಘ ಪರಂಪರೆಯನ್ನು ಪಡೆದಿದ್ದರೂ ಚುನಾವಣೆಗಳ ಮೂಲಕ ನಡೆಯುವ ಪ್ರಜಾಪ್ರಭುತ್ವಗಳಲ್ಲಿ ಯಾವಾಗಲೂ ಆಗುವ ಹಾಗೆ ರೋಂನಲ್ಲಿ ಕೂಡಾ ರಾಜಕೀಯ ಭ್ರಷ್ಟಾಚಾರ ತಾನೇ ತಾನಾಗಿತ್ತು. ಎರಡು ಪ್ರಧಾನ ಪಕ್ಷಗಳು ಅಧಿಕಾರಕ್ಕೆ ಸ್ಪರ್ಧಿಸುತ್ತಿದ್ದವು. ಒಂದು ಆಢ್ಯರ ಪಕ್ಷ, ಇನ್ನೊಂದು ಜನಸಾಮಾನ್ಯರದ್ದು. ಎರಡರಲ್ಲೂ ಪ್ರಮುಖರಾಗಿದ್ದವರು ಪ್ರಾಚೀನ ಆಢ್ಯ ರೋಮನ್ ಕುಲದವರೇ! ಚುನಾವಣೆಗಳಲ್ಲಿ ಧಾರಾಳವಾಗಿ ಲಂಚದ ಪ್ರಭಾವ ಇತ್ತು; ವಾಗ್ವೈಖರಿ, ಒಳಸಂಚು, ಪಕ್ಷಾಂತರ ಮತ್ತು ಮತದಾನ ಕಾಲದಲ್ಲಿ ರಕ್ತಪಾತ – ಎಲ್ಲವೂ

ತಮ್ಮ ಕೆಲಸ ಮಾಡುತ್ತಿದ್ದವು. ಜೂಲಿಯಸ್ ಸೀಜರ್ ಈ ಎಲ್ಲ ಆಟಗಳಲ್ಲಿ ನಿಸ್ಸೀಮನಾಗಿದ್ದ.

ಶುಕ್ರದೇವತೆಯ ಕುಲದವರೆಂದು ಹೇಳಿಕೊಳ್ಳುತ್ತಿದ್ದ ಪುರಾತನ ಆಢ್ಯ ಮನೆತನದಲ್ಲಿ ಸೀಜರ್ ಅಪಾಯದಲ್ಲೇ ಹುಟ್ಟಿ ಅಪಾಯದಲ್ಲೇ ಬಾಳಿ ಅಪಾಯದಲ್ಲೇ ಜೀವನವನ್ನು ಮುಗಿಸಿದ. ಹೆರಿಗೆಗೆ ತಡೆಯಾದ್ದರಿಂದ ತಾಯಿ ಹೊಟ್ಟೆ ಸೀಳಿ ಅವನನ್ನು ಹೊರತೆಗೆದರು (ಆದರಿಂದಲೇ ಅವನಿಗೆ ಸೀಜರ್ ಎಂಬ ಅಡ್ಡಹೆಸರು ಬಂತಂತೆ). ನೋಡುವುದಕ್ಕೆ ಅವನು ಆಳಾಗಿರಲಿಲ್ಲ, ಶರೀರದಾರ್ಢ್ಯವೂ ಅಷ್ಟಕ್ಕಷ್ಟೇ; ಸಾಲದ್ದಕ್ಕೆ ಅವನಿಗೆ ಅಪಸ್ಮಾರ ರೋಗವಿತ್ತು. ಜೂಲಿಯಸ್ ಸೀಜರನ 15ನೇ ವಯಸ್ಸಿನಲ್ಲಿ ತಂದೆ ತೀರಿಕೊಂಡಿದ್ದ. ಮನೆತನಕ್ಕೆ ಬಡತನವೂ ಬಂದಿತ್ತು. ಇವಾವುವೂ ಸೀಜರನ ಮಹತ್ವಾಕಾಂಕ್ಷೆಯನ್ನು ತಡೆಯಲಿಲ್ಲ.

ಕುಲದ ಬಲದಿಂದ ರಾಜಕಾರಣದಲ್ಲಿ ಅವನಿಗೆ ಸಲೀಸಾಗಿ ಪ್ರವೇಶ ಸಿಕ್ಕಿತು. ಧನದ ಬಲಕ್ಕಾಗಿ ಅವನು ಶ್ರೀಮಂತ ಕುವರಿಯೊಬ್ಬಳನ್ನು 16ನೇ ವಯಸ್ಸಿನಲ್ಲಿ ಮದುವೆಯಾಗಿ ಆ ಮೇಲೆ ಅವಳನ್ನು ಬಿಟ್ಟು ರಾಜಕಾರಣ ಸಿನ್ನಾಸ ಮುಗಳನ್ನು ಮಾಡಿಕೊಂಡು ಆಳುವ ಜನತಾ ಪಕ್ಷದ ಸದಸ್ಯನಾದ. (ಅವನ ಮದುವೆಗಳೆಲ್ಲ ರಾಜಕೀಯ ಮದುವೆಗಳೇ). ಕ್ರಿ. ಪೂ. 83ರಲ್ಲಿ ಜನತಾ ಪಕ್ಷ ಅಧಿಕಾರ ಕಳೆದುಕೊಂಡು ಲೂಸಿಯಸ್ ಸುಲ್ಲಾನ ನೇತೃತ್ವದಲ್ಲಿ ಆಢ್ಯ ಪಕ್ಷದ ಸರ್ವಾಧಿಕಾರ ಸ್ಥಾಪಿತವಾದಾಗ ಜೂಲಿಯಸ್ ಸೀಜರನಿಗೆ ಮರಣದಂಡನೆಯಾಗುವುದು ಸ್ವಲ್ಪದರಲ್ಲಿ ತಪ್ಪಿತು. ಆದರೆ ಜೀವ ಉಳಿಸಿಕೊಳ್ಳುವ ಸಲುವಾಗಿ ಜನತಾ ಪಕ್ಷ ಬಿಡುವುದಕ್ಕೂ ತನ್ನ ಎರಡನೇ ಹೆಂಡತಿಯನ್ನು ತ್ಯಜಿಸುವುದಕ್ಕೂ ಅವನು ಒಪ್ಪಲಿಲ್ಲ.

ಇತಿಹಾಸ ಪ್ರಸಿದ್ಧವಾದ ಕಡಲುಗಳ್ಳರ ಪ್ರಕರಣ ನಡೆದಾಗ ಸೀಜರನಿಗೆ 21 ವರ್ಷ. ಅವನನ್ನು ಸೆರೆಹಿಡಿದ ರಕ್ತಪಿಪಾಸು ಕಡಲುಗಳ್ಳರು 20 ಟೇಲೆಂಟ್ (ಬಂಗಾರದ ನಾಣ್ಯ) ಬಿಡುಗಡೆ ದಂಡ ಕೊಡದಿದ್ದರೆ ಕೊಲ್ಲುವುದಾಗಿ ಬೆದರಿಸಿದರು. "ನನ್ನ ಜೀವಕ್ಕೆ ನೀವು ಬಹಳ ಕಡಿಮೆ ಬೆಲೆಕಟ್ಟಿದಿರಿ!" ಎಂದು ಕಳ್ಳರನ್ನು ಹಾಸ್ಯಮಾಡಿ ಸೀಜರ್ ದಂಡದ ಹಣ ತರಲು ಸಂಗಡಿಗರನ್ನು ಕಳಿಸಿದ. ಅದು ಬರುವುದಕ್ಕೆ 38 ದಿನ ಹಿಡಿಯಿತು. ಆ ಅವಧಿಯನ್ನೆಲ್ಲ ಸೀಜರ್ ಯಾವ ಭಯವಿಲ್ಲದೆ ಪದ್ಯಹೇಳುವುದು, ಭಾಷಣ ಮಾಡುವುದು, ತನ್ನ ಬಂಧನಕಾರರೊಡನೆ ಆಟವಾಡುವುದು, ಅವರನ್ನು ಹಾಸ್ಯಮಾಡುವುದರಲ್ಲಿ ಕಳೆದು, ನಡುನಡುವೆ ಅವರನ್ನು ಗಲ್ಲಿಗೇರಿಸುವುದಾಗಿಯೂ ಹೆದರಿಸುತ್ತಿದ್ದ. ಇದೆಲ್ಲ ಹುಡುಗಾಟವೆಂದು ಅವರು ಬಗೆದಿದ್ದರು. ಹಣ ಬಂತು. ಸೀಜರನ ಬಿಡುಗಡೆಯಾಯಿತು. ಮೈಲೆಟಸ್ ಬಂದರ ಸೇರಿದವನೇ ಅವನು ಸಶಸ್ತ್ರವಾಗಿ ಒಂದು ಹಡಗೇರಿ ಕಳ್ಳರನ್ನು ಬೆನ್ನಟ್ಟಿದನು. ಅವರನ್ನು ಸೆರೆಹಿಡಿದು ದಡಕ್ಕೆ ಎಳೆತಂದನು. ಅವರ ದುರ್ಧನವನ್ನೆಲ್ಲ ತೆಗೆದುಕೊಂಡು ಅವರನ್ನು ಗಲ್ಲಿಗೇರಿಸಿ ತನ್ನ ಮಾತು ಪೂರೈಸಿದನು.

ಕ್ರಿ.ಪೂ. 78ರಲ್ಲಿ ಸುಲ್ಲಾ ಸತ್ತಮೇಲೆ ಸೀಜರ್ ರೋಮನ್ ರಾಜಕಾರಣದಲ್ಲಿ ಧಿಡೀರಾಗಿ ಪ್ರವೇಶಿಸಿದನು. ಜನಸಾಮಾನ್ಯರ ಪ್ರೀತಿ ಗಳಿಸುವುದಕ್ಕಾಗಿ ಅವನು ತನ್ನ ಖರ್ಚಿನಿಂದ ಆಟ, ಕೂಟ, ನೋಟಗಳನ್ನು ಸಂಘಟಿಸಿದ; ಅವನ ಮಾತುಗಾರಿಕೆ, ನಡೆನುಡಿಗಳು ಮತ್ತು ಕೊಡುಗೈ ಜನರನ್ನು ಮುಗ್ಧಗೊಳಿಸಿದವು. ಆದರೆ ಇದೆಲ್ಲ ಅವನ ಪಕ್ಷದ ಶ್ರೀಮಂತ ಸಹಕಾರಿ ಕ್ರಾಸಸ್ಸನಿಂದ ಸಾಲವೆತ್ತಿ ಮಾಡಿದ ವೆಚ್ಚ. ತನ್ನದು ಒಳ್ಳೇ ಬಂಡವಾಳ ಹೂಡಿಕೆಯೆಂದು ಅವನಿಗೆ ಗೊತ್ತಿತ್ತು. ಅವನ ಜನಪ್ರಿಯತೆ ಹೆಚ್ಚಿತು. ಜನತಾ ಪಕ್ಷಕ್ಕೆ ಜನ ನುಗ್ಗತೊಡಗಿದರು. ಸಾವಕಾಶವಾಗಿ ಅದರ ಮೇಲೆ ಸೀಜರ್ ಹಿಡಿತ ಸ್ಥಾಪಿಸಿದ. ಕ್ರಿ.ಪೂ. 69ರಲ್ಲಿ ಕ್ವೇಸ್ಟರ್ ಹುದ್ದೆಗೆ ಆರಿಸಲ್ಪಟ್ಟ ಮೇಲೆ ಆತನ ರಾಜಕೀಯ ಪ್ರಗತಿಯ ವೇಗ ಹೆಚ್ಚಿತು. ಕ್ರಿ.ಪೂ. 63ರಷ್ಟು ಹೊತ್ತಿಗೆ ಕೆಲಮಟ್ಟಿಗೆ ತನ್ನ ಜನಪ್ರಿಯತೆಯ ಬಲದಿಂದ, ಕೆಲಮಟ್ಟಿಗೆ ಒಳಸಂಚು ಮತ್ತು ಲಂಚದ ಬಲದಿಂದ ಜೂಲಿಯಸ್ ಸೀಜರ್ ತನ್ನ ಎದುರಾಳಿ ಕ್ಯಾತುಲಸ್ಸನನ್ನು ಸೋಲಿಸಿ ರೋಂನ ಪ್ರಧಾನ ಪುರೋಹಿತ ಪದವಿಗೆ ಆರಿಸಿ ಬಂದ. ಚುನಾವಣೆಯ ದಿನ ಮನೆಯಿಂದ ಹೊರಡುವಾಗ ಅವನು ತಾಯಿಯನ್ನು ತಬ್ಬಿಕೊಂಡು, "ಅಮ್ಮಾ, ಹಿಂತಿರುಗಿದರೆ ಪ್ರಧಾನ ಪುರೋಹಿತನಾಗಿ ಹಿಂತಿರುಗುತ್ತೇನೆ. ಇಲ್ಲದಿದ್ದರೆ ನನಗೆ ದೇಶಭ್ರಷ್ಟತೆಯೇ ಗತಿ", ಎಂದು ಹೇಳಿದನಂತೆ. ಅಷ್ಟು ತೀವ್ರವಾಗಿತ್ತು ಸ್ಪರ್ಧೆ.

ರೋಮನ್ ಮಹಿಳೆಯರು ತಮ್ಮ ಪಾತಿವ್ರತ್ಯಕ್ಕಾಗಲಿ, ರೋಮನ್ ಮಹನೀಯರು ರಾಜಕೀಯ ನಿಷ್ಠೆಗಾಗಲಿ ಪ್ರಸಿದ್ಧರಾಗಿರಲಿಲ್ಲ. ಪ್ರಧಾನ ಪುರೋಹಿತ ಸೀಜರನ ಹೆಂಡತಿ ಪಾಂಪಿಯಳೇ ಪಾಬ್ಲಿಯಸ್

ಕ್ಲಾಡಿಯುಸ್ ಎಂಬ ಶ್ರೀಮಂತ ತರುಣನೊಡನೆ ಗುಪ್ತ ಪ್ರಣಯದ ಚಲ್ಲಾಟ ನಡೆಸಿದ್ದಾಳೆಂಬ ಅಪವಾದದಿಂದಾಗಿ ಅವನು ಅವಳನ್ನು ಪರಿತ್ಯಜಿಸಬೇಕಾಯಿತು. ಸೀಜರ್ ಇದನ್ನೇನೂ ಮನಸ್ಸಿಗೆ ಹಚ್ಚಿಕೊಳ್ಳಲಿಲ್ಲ. ಅವನ ಧ್ಯೇಯ ರಾಜಕೀಯವಾಗಿತ್ತು.

ಆಗ ರೋಮನ್ ಸೇನಾಪತಿಗಳಲ್ಲಿ ದಿಗ್ವಿಜಯಿ ಪಾಂಪೆ ಅಪ್ರತಿಮ ವೀರನೆಂದು ಹೆಸರಾಗಿದ್ದ. ಆಢ್ಯ ಪಕ್ಷದ ಅಳಿದುಳಿದ ಶಕ್ತಿಯನ್ನು ನಿರ್ನಾಮ ಮಾಡುವುದಕ್ಕಾಗಿ ಸೀಜರ್ ಪಾಂಪೆಯೊಡನೆ ಒಂದು ಒಪ್ಪಂದ ಮಾಡಿಕೊಂಡು ಅವನಿಗೆ ತನ್ನೊಬ್ಬ ಮಗಳನ್ನು ಮದುವೆ ಮಾಡಿಯೂ ಕೊಟ್ಟ. ಇಂದಲ್ಲ ನಾಳೆ ಪಾಂಪೆಯೊಡನೆ ಅಧಿಕಾರಕ್ಕಾಗಿ ತಾನು ಪ್ರಾಣಾಂತಿಕ ಹೋರಾಟ ಹೂಡಬೇಕಾಗುವುದೆಂದು ಅವನಿಗೆ ಆಗಲೇ ಗೊತ್ತಿತ್ತು. ಆದರೆ ಸದ್ಯಕ್ಕೆ ಅವನೊಡನೆ ಬಾಂಧವ್ಯ ಸ್ಥಾಪಿಸುವುದಕ್ಕೆ ಅದು ತಡೆಯಾಗಲಿಲ್ಲ.

ಈ ಎಲ್ಲ ಸಂಧಿ ಸಂಧಾನಗಳ ಫಲವಾಗಿ ಜೂಲಿಯಸ್ ಸೀಜರ್, ಪಾಂಪೆ ಮತ್ತು ರೋಮ್ ನಗರದ ಕುಬೇರನಾದ ಲೈಸಿನಿಯಸ್ ಕ್ರಾಸಸ್ –ಈ "ತ್ರಿಮೂರ್ತಿ" ಆಳಿಕೆಯ ಪ್ರತಿಷ್ಠೆಯಾಯಿತು. ಕ್ರಿ.ಪೂ. 58ನೇ ವರ್ಷದ ಬಗ್ಗೆ ಪ್ರೇಟರ್ ಹುದ್ದೆಗೆ ಆರಿಸಲ್ಪಟ್ಟಿದ್ದ ಪಿಸೋವಿನ ಮಗಳು ಕಲ್‌ಪೂರ್ಣಿಯಳನ್ನು ಸೀಜರ್ ಲಗ್ನವಾಗಿ ಕೈ ಬಲಪಡಿಸಿಕೊಂಡ. ಕ್ರಿ.ಪೂ. 58ರಲ್ಲಿ ಅವನನ್ನು ಗಾಲ್ ಪ್ರಾಂತದ (ಈಗಿನ ಫ್ರಾನ್ಸ್) ರಾಜಪಾಲನಾಗಿ ನೇಮಿಸಿ ಕಳಿಸಲಾಯಿತು.

ಕ್ರಿ.ಪೂ. 69–68ರಲ್ಲಿ ಸ್ಪೇನಿನ ಆಡಳಿತಗಾರನಾಗಿದ್ದಾಗಲೇ ಸೀಜರನ ಸೈನಿಕ ಕೌಶಲದ ಪರಿಚಯವಾಗಿತ್ತು. ಕೈ ಬೆರಳಲ್ಲೆಣಿಸಬಹುದಾದಷ್ಟು ಪಡೆಗಳೊಡನೆ ದಾಳಿಹೂಡಿ ಎಂದೂ ರೋಮನ್ ಪ್ರಭುತ್ವಕ್ಕೆ ತಲೆವಾಗದ ಕಲ್ಲೈಚಿ ಮತ್ತು ಲುಸಿತಾನಿ ಜನಾಂಗಗಳನ್ನು ಹಣಿದು ಆತ ಸಾಮ್ರಾಜ್ಯ ವಿಸ್ತರಣೆ ಮಾಡಿದ್ದ. ದೊರೆತ ಸೂರೆ ಅವನನ್ನು ಶ್ರೀಮಂತನನ್ನಾಗಿಯೂ ಮಾಡಿತ್ತು. ಯಾವಾಗಲೂ ಜನಪ್ರಿಯತೆಯ ಮೇಲೆ ಕಣ್ಣಿಟ್ಟ ಅವನು ಕೊಳ್ಳೆಯಲ್ಲಿ ದೊಡ್ಡ ಭಾಗವನ್ನು ತನ್ನ ಸೈನಿಕರಿಗೆ ಹಂಚಲು ಮರೆಯಲಿಲ್ಲ. ತನ್ನ ಪ್ರಾಂತದ ಆಡಳಿತವನ್ನೂ ವ್ಯವಸ್ಥಿತವಾಗಿ ನಡೆಸಿ ಹೆಸರು ಪಡೆದ. ಇಂದು ನಾವು ಬಹಳವಾಗಿ ಕೇಳುವ ಋಣ ವಿಮೋಚನಾ ಕ್ರಮಗಳ ಮೂಲ ಪುರುಷ ಬಹುಶಃ ಜೂಲಿಯಸ್ ಸೀಜರನೇ: ಸಾಲಗಾರನ ಮೇಲೆ ಸಾಲ ಕೊಟ್ಟಾತ ಒಮ್ಮೆಲೇ ಕ್ರಮ ಕೈಗೊಳ್ಳದೆ ಅವನ ವಾರ್ಷಿಕ ಆದಾಯದ ಮೂರರಲ್ಲೆರಡು ಅಂಶವನ್ನು ಮಾತ್ರ ಸಾಲ ತೀರುವ ವರೆಗೆ ಸ್ವೀಕರಿಸಬೇಕೆಂಬ ಅವನ ವ್ಯವಸ್ಥೆ ಬಹುಶಃ ಸ್ವಾನುಭವಜನ್ಯವಾಗಿತ್ತು! ಮುಂದೆ ರೋಮನ್ ಸಾಮ್ರಾಜ್ಯದ ಸರ್ವಾಧಿಕಾರಿಯಾದ ಮೇಲೆ ಬಡ್ಡಿ ಬಾಕಿಯನ್ನೆಲ್ಲ ರದ್ದು ಮಾಡುವ ಕಾನೂನನ್ನು ಕೂಡ ಅವನು ಮಾಡಿದ್ದನ್ನು ಇಲ್ಲಿ ಉಲ್ಲೇಖಿಸಬಹುದು.

ಆದರೆ ವಿಜೇತನಾಗಿಯೂ ಆಡಳಿತಗಾರನಾಗಿಯೂ ಜೂಲಿಯಸ್ ಸೀಜರನ ಕೀರ್ತಿಗೂ ಮುಂದೆ ಅವನ ಪ್ರಭುತ್ವಕ್ಕೂ ತಳಹದಿ ಬಿದ್ದದ್ದು ಗಾಲ್ ಪ್ರಾಂತದಲ್ಲಿಯೇ. ಅವನು ಒಟ್ಟು ಹತ್ತು ವರ್ಷ ಗಾಲ್ ಪ್ರಾಂತವನ್ನು ಆಳಿದನು. ಇಟಲಿಯ ಉತ್ತರ ಗಡಿಗೆ ತಗಲಿದ್ದ ಕೆಲ ಪ್ರದೇಶಗಳಷ್ಟೇ ಮೊದಲು ರೋಮನ್ ಸಾಮ್ರಾಜ್ಯಕ್ಕೆ ಸೇರಿತ್ತು. ಹತ್ತು ವರ್ಷಗಳಲ್ಲಿ ಜೂಲಿಯಸ್ ಸೀಜರ್ ಅದನ್ನು ಆ ಸಮುದ್ರಾಂತವಾಗಿ ವಿಸ್ತರಿಸಿ, ಸಮುದ್ರ ದಾಟಿ ಬ್ರಿಟನ್ನಿಗೂ ದಾಳಿಯಿಟ್ಟನು. ಪ್ಲುಟಾರ್ಕನ ಪ್ರಕಾರ ಅವನ ಆಳಿಕೆಯಲ್ಲಿ ಅವನು ಮುನ್ನೂರು ರಾಜ್ಯ



ಇಷ್ಟು ದಿನ ಅಮಿತಾಭ್ ಬಚ್ಚನ್ ಥರಾ ಇರುವವನನ್ನೇ ಮದ್ವೆಯಾಗ್ತೀನಿ ಅಂತ ಹಠ ಹಿಡಿದಿದ್ದಳು... ಈಗ ಅಮೋಲ್ ಪಾಲೇಕರ್ ಅಂತಾಳೆ......

ಗಳನ್ನು ಗೆದ್ದು, ಎಂಟುನೂರು ಪಟ್ಟಣಗಳಿಗೆ ಲಗ್ಗೆ ಹಾಕಿ 30 ಲಕ್ಷ ಶತ್ರು ಸೈನ್ಯವನ್ನು ಸೋಲಿಸಿದನು. (ಅವರಲ್ಲಿ 10 ಲಕ್ಷ ಜನ ಸತ್ತರು, 20 ಲಕ್ಷ ಸೆರೆ ಸಿಕ್ಕಿದರು). ಇಷ್ಟೆಲ್ಲ ಮಾಡುವುದಕ್ಕೆ ಅವನು ಬಳಸಿದ್ದು ಒಟ್ಟು ಕೇವಲ 40–50 ಸಾವಿರದ ಸೈನ್ಯ. ಅವನ ನೇತೃತ್ವಯೋಗ್ಯತೆ ಆಗಲೇ ಅಸಂದಿಗ್ಧವಾಗಿ ಪ್ರಾಮಾಣಿತವಾದದ್ದು. ಅವನು ಸಾಮಾನ್ಯ ಸೈನಿಕರನ್ನು ಮಹಾವೀರರನ್ನಾಗಿ ಮಾಡಬಲ್ಲವನಾಗಿದ್ದ. ಅವನ ಸೈನಿಕನೊಬ್ಬನ ಬಲಗೈ ಮಾರ್ಸೆಲಿಸ್ ಬಳಿ ನೌಕಾ ಯುದ್ಧದಲ್ಲಿ ಕತ್ತರಿಸಿ ಹೋದಾಗ ಎಡಗೈಯಿಂದಲೇ ಯುದ್ಧಮಾಡಿ ಅವನು ಶತ್ರುನೌಕೆಯನ್ನು ವಶಪಡಿಸಿಕೊಂಡದ್ದು ಇತಿಹಾಸ ಪ್ರಸಿದ್ಧವಾಗಿದೆ. ಶೌರ್ಯಕ್ಕೆ ಮನ್ನಣೆ ಮತ್ತು ಪ್ರತಿಫಲ ಕೊಡುವುದರಲ್ಲಿ ಅವನ ಔದಾರ್ಯದಿಂದಾಗಿ ಸೈನಿಕರು ಅವನನ್ನು ದೇವತೆಯಂತೆ ಆರಾಧಿಸುತ್ತಿದ್ದರು.

ಹಾಗೆಯೇ ತಾನು ಸೇನಾಪತಿಯೆಂಬುದಕ್ಕಾಗಿ ಅಥವಾ ಮಲರೋಗಿ ಎಂಬುದಕ್ಕಾಗಿ ರಣರಂಗದ ಯಾವ ಕಷ್ಟದಿಂದಲೂ ಅವನು ತಪ್ಪಿಸಿಕೊಳ್ಳಲಿಲ್ಲ. ರಥದಲ್ಲೇ ಮಲಗುವುದು ಯುದ್ಧಕಾಲದ ಅವನ ಪದ್ಧತಿಯಾಗಿತ್ತು. ವಿಶ್ರಾಂತಿ ಕಾಲದಲ್ಲೂ ಅವನು ಕಾರ್ಯತತ್ಪರನಾಗಿ ಆಡಳಿತದ ಪತ್ರಗಳನ್ನೂ ಆಜ್ಞೆಗಳನ್ನೂ ಬರೆಸುತ್ತಿದ್ದ. ಕುದುರೆ ಸವಾರಿ ಮಾಡುತ್ತಿದ್ದಂತೆಯೇ ಅವನ ಪಕ್ಕದಲ್ಲೇ ಇಬ್ಬರು ಕರಣಿಕರು ಸವಾರಿ ಮಾಡುತ್ತಿದ್ದರು. ಸೀಜರ್ ಏಕಕಾಲದಲ್ಲಿ ಇಬ್ಬರಿಗೂ ಬೇರೆ ಬೇರೆ ವಿಷಯಗಳಲ್ಲಿ ಅಪ್ಪಣೆಗಳನ್ನು ಹೇಳಿ ಬರೆಸಬಲ್ಲಷ್ಟು ಅವಧಾನವನ್ನು ಸಾಧಿಸಿದ್ದ. ಸಂಕೇತ ಭಾಷೆಯಿಂದ ಸುದ್ದಿ ಕಳಿಸುವ ಹೊಸ ಉಪಾಯವನ್ನೂ ಸೀಜರ್ ರೂಪಿಸಿಕೊಂಡಿದ್ದ. ಕುದುರೆ ಸವಾರಿಯಲ್ಲಿ ಅವನ ವೇಗ ಅಪ್ರತಿಮವಾಗಿತ್ತು. ರೈನ್ ನದಿಗೆ ಸೇತುವೆ ಕಟ್ಟಿ ನದಿ ದಾಟಿ ಜರ್ಮನ್ ಶತ್ರುಗಳನ್ನು ಸೋಲಿಸಿದ್ದು ಒಂದು ಮಹಾ ಸಾಹಸವಾಗಿದ್ದರೆ, ಶತ್ರು ಪ್ರದೇಶದ ಮೂಲಕ ನುಗ್ಗಿ ಸಮುದ್ರ ದಾಟಿ ಆವರೆಗೆ ಅಜ್ಞಾತವಾಗಿದ್ದ ಬ್ರಿಟನನ್ನು ಜಯಿಸಿದ್ದು ಪರಾಕ್ರಮದ ಪರಮಾವಧಿಯೆಂದು ಭಾವಿಸಲ್ಪಟ್ಟಿದೆ.

ಜೂಲಿಯಸ್ ಸೀಜರನ ಹೆಚ್ಚುತ್ತಿರುವ ಯಶಸ್ಸು ಮತ್ತು ಪ್ರಭಾವದಿಂದ ರೋಂನಲ್ಲಿ ಒಂದೆಡೆ ಹೊಟ್ಟೆಕಿಚ್ಚೂ ಇನ್ನೊಂದೆಡೆ ಭಯವೂ ಕೆರಳಿತು. ಅವನನ್ನು ಗಾಲ್‌ನ ರಾಜ್ಯಪಾಲ ಪದದಿಂದ ಬಿಡಿಸಿ ಮರಳಿ ಕರೆಸಬೇಕೆಂಬ ಪ್ರಯತ್ನಗಳು ಪ್ರಾರಂಭವಾಗಿದ್ದವು. ಈ ಪಿತೂರಿಯನ್ನು ವಿಫಲಗೊಳಿಸಲು ಸೀಜರ್ ಬಗೆಬಗೆಯ ಭೇದ ದಾನೋಪಾಯಗಳನ್ನು ಪ್ರಯೋಗಿಸಿದನು. ಪ್ರಥಮತಃ ಅವನು ಕ್ರಾಸಸ್ ಮತ್ತು ಪಾಂಪೆಯೊಡನೆ ಒಡಂಬಡಿಕೆ ಮಾಡಿಕೊಂಡನು. ಅವನನ್ನು ಅವನ ಅತ್ಯಾಚಾರಗಳಿಗಾಗಿ ವಿಚಾರಣೆಗೊಳಪಡಿಸುವ ಯೋಚನೆಗೆ ಚಾಲನೆ ದೊರೆತಾಗ ಅದನ್ನು ತಪ್ಪಿಸುವುದಕ್ಕೆ ನ್ಯಾಯಮೂರ್ತಿಯಾದ ಕ್ಯೂರಿಗೆ ಲಂಚಕೊಟ್ಟು ಒಳಗುಮಾಡಿಕೊಂಡನು. ರೋಮ್‌ನ ಅತ್ಯಂತ ಮಹತ್ವದ ಅಧಿಕಾರ ಸ್ಥಾನವಾದ ಕಾನ್ಸಲ್ ಪದಕ್ಕೆ ಸ್ಪರ್ಧಿಸುವ ದೃಷ್ಟಿಯಿಂದ ಎಲ್ಲ ಪ್ರಭಾವಶಾಲಿ ಅಧಿಕಾರಸ್ಥರಿಗೆ ಧಾರಾಳ ಲಂಚವನ್ನು ಕೊಟ್ಟು ಕಳಿಸಿದನು.

ಮೊದಲಿಂದಲೂ ಸೀಜರ್ ಪಾಂಪೆಯನ್ನು ಕೊನೆಗೊಳಿಸಿ ತನ್ನನ್ನು ಎದುರಾಳಿಯಿಲ್ಲದವನನ್ನಾಗಿ ಮಾಡಿಕೊಳ್ಳುವ ಅಂತರಂಗವುಳ್ಳವನಾಗಿದ್ದನೆಂಬುದು ಪಾಂಪೆಗೂ ಗೊತ್ತಿತ್ತು. ಮೊದಮೊದಲು ಸೇನಾಪತಿತ್ವದಲ್ಲಿ ತನ್ನೆದುರು ಸೀಜರ್ ತುಚ್ಛನೆಂದು ಭಾವಿಸಿದ್ದ ಪಾಂಪೆಗೆ ಈಗ ಚಿಂತೆಯಾಯಿತು. ಚುನಾವಣೆಗಳಲ್ಲಿನ ಭ್ರಷ್ಟಾಚಾರ, ಹಿಂಸಾಚಾರ, ರಾಜಧಾನಿಯಲ್ಲಿ ಹಬ್ಬಿದ ಅನಾಗರಿಕತೆ ಇವುಗಳಿಂದ ಬೇಸತ್ತ ಕೆಲ ಮುತ್ಸದ್ದಿಗಳು ಇದಕ್ಕೆಲ್ಲ ರಾಜಸತ್ತೆಯೇ ಪರಿಹಾರವೆಂದೆಣಿಸುತ್ತಿದ್ದರು. ಅವರು ಈ ಪದವಿಗೆ ವೀರನಾದರೂ ದಯಾಳುವಾದ ಪಾಂಪೆಯೇ ಯೋಗ್ಯನೆಂದು ಬಗೆದಿದ್ದರು. ಪಾಂಪೆ ತೋರಿಕೆಗೆ ಅದನ್ನು ನಿರಾಕರಿಸಿದರೂ ಒಳಗೊಳಗೆ ಸರ್ವಾಧಿಕಾರಿಯಾಗಲು ಹಂಬಲಿಸುತ್ತಿದ್ದನೆಂಬುದು ಸೀಜರನ ಮಿತ್ರರಿಂದ ಅವನಿಗೆ ವರದಿಯಾಗದೆ ಇರಲಿಲ್ಲ.

ಈ ನಿಟ್ಟಿನಲ್ಲೇ ಸೀಜರ್ ಕ್ರಿ.ಪೂ. 49–48ರಲ್ಲಿ ಕಾನ್ಸಲ್ ಚುನಾವಣೆಗೆ ನಿಲ್ಲಲು ನಿರ್ಧರಿಸಿದ್ದು. ಪಾಂಪೆ ಮತ್ತು ಆಢ್ಯ ಪಕ್ಷದ ಅವನ ಸ್ನೇಹಿತರು ಸೀಜರನ ಮುನ್ನಡೆ ತಡೆಯುವುದಕ್ಕಾಗಿ ಅವನನ್ನು ಗಾಲ್ ಪ್ರಾಂತದ ರಾಜ್ಯಪಾಲ ಪದದಿಂದ ಹಿಂದೆ ಕರೆಸಿಕೊಳ್ಳಲು ನಿರ್ಧರಿಸಿದ್ದಲ್ಲದೆ ಅವನು ಕಾನ್ಸಲ್ ಆಗಿ ಆರಿಸಲ್ಪಡದಂತೆ ಉಪಾಯ ಹೂಡಿದರು.

ಪರಮ ಅಧಿಕಾರಕ್ಕೆ ಗುರಿಯಿಟ್ಟ ಯಾವ ಮಹತ್ವಾಕಾಂಕ್ಷಿಯೂ ಕಟ್ಟಳೆಗಳು, ಸಂವಿಧಾನ ಮೊದಲಾದವುಗಳನ್ನು ಲೆಕ್ಕಿಸುವುದಿಲ್ಲವೆಂಬುದಕ್ಕೆ ಜೂಲಿಯಸ್ ಸೀಜರ್ ಅಪವಾದವೆನಿಸಲಿಲ್ಲ. ತನ್ನ ಮೇಲೆ ಕಾನೂನು ಪ್ರಕಾರವೇ ಜಾರಿಗೊಳಿಸಲಾದ ಆಜ್ಞೆ

ಯನ್ನು ಧಿಕ್ಕರಿಸಿ ಅವನು ಗಾಲ್ ಪ್ರಾಂತದ ಗಡಿಯಾದ ರೂಬಿಕಾನ್ ಹಳ್ಳವನ್ನು ತನ್ನ ಯುದ್ಧ ಪರಿಣತ ಸೈನಿಕರೊಡನೆ ದಾಟಿಬಂದನು. ಇದು ಬಹಿರಂಗ ಬಂಡಾಯವೇ ಆಗಿತ್ತು. ಈ ಸಂದಿಗ್ಧ ಕಾಲದಲ್ಲಿ, ಹಲವು ಕಾಳಗಗಳ ವೀರನಾದ ಪಾಂಪೆಯ ಧೈರ್ಯ ಯಾಕೋ ತತ್ತರಿಸಿತು. ಅವನು ರೋಂ ನಗರವನ್ನು ಅರಾಜಕವೆಂದು ಸಾರಿ ನಗರದಿಂದ ತನ್ನ ಸೈನ್ಯದೊಡನೆ ಹೊರಬಿದ್ದು ಹೋದನು. ಪ್ರಮುಖರೆಲ್ಲ ಅವನ ಹಿಂದೆ ಧಾವಿಸಿದರು. ಅರುವತ್ತೇ ದಿನಗಳ ಅವಧಿಯಲ್ಲಿ ಇಡೀ ಇಟಲಿ ಹನಿ ರಕ್ತ ಚೆಲ್ಲದೆ ಸೀಜರನ ವಶವಾಯಿತು. ರಾಜಧಾನಿಯನ್ನು ಪ್ರವೇಶಿಸಿ ಸೀಜರ್ ಸರಕಾರಿ ಬೊಕ್ಕಸದ ಬಾಗಿಲಿಗೆ ಬಂದಾಗ, ನ್ಯಾಯಾಧಿಪತಿ ಮೆಟೆಲ್ಲಸ್ ಅವನನ್ನು ತಡೆದು ಕಾನೂನು ಮೇರೆಗೆ ಸೀಜರನಿಗೆ ಬೊಕ್ಕಸಕ್ಕೆ ಕೈಹಾಕುವ ಅಧಿಕಾರವಿಲ್ಲವೆಂದು ಹೇಳಿದಾಗ, ಅವನು ಶಾಂತ ತಿರಸ್ಕಾರದಿಂದ, "ಕಾನೂನಿನ ಕಾಲ ಬೇರೆ, ಬಲಪ್ರಯೋಗದ ಕಾಲ ಬೇರೆ. ಯುದ್ಧಕಾಲದಲ್ಲಿ ವಾಕ್ಸ್ವಾತಂತ್ರ್ಯ ಒಪ್ಪಲಾಗುವುದಿಲ್ಲ. ನಾನು ಶಸ್ತ್ರ ಸಂನ್ಯಾಸ ಮಾಡಿದ ಮೇಲೆ ಬೇಕಾದರೆ ಬಂದು ನಿನ್ನ ಭಾಷಣ ಮಾಡು. ಈಗ ತೊಲಗು. ಇಲ್ಲದಿದ್ದರೆ ನಿನಗೆ ಮರಣದಂಡನೆ ಕೊಡಬೇಕಾದೀತು", ಎಂದು ನುಡಿದು ಕಮ್ಮಾರರನ್ನು ಕರೆಸಿ ಬಂಡಾರದ ಬೀಗಮುದ್ರೆ ಒಡೆದು ಒಳಹೊಕ್ಕನು.

ಆ ಮೇಲೆ ಜೂಲಿಯಸ್ ಸೀಜರ್ ಪಾಂಪೆಯ ಬೆಂಬಲಿಗರನ್ನೂ ಸರಕಾರೀ ಬಲಗಳನ್ನೂ ಬೆನ್ನಟ್ಟಿ ಸ್ಪೇನಿಗೆ ಹೋದನು. ಅವರನ್ನು ಸೋಲಿಸಿ ರೋಂಗೆ ಬಂದು ನೌಕಾಪಡೆಯನ್ನು ಸಂಘಟಿಸಿ, ಅಡ್ರಿಯಾಟಿಕ್ ಸಮುದ್ರದಾಚೆ ಪಾಂಪೆಯನ್ನು ಬೆಂಬತ್ತಿದನು. ಕ್ರಿ.ಪೂ. 48 ಆಗಸ್ಟ್ 9ರಂದು ನಡೆದ ಕೊನೆಯ ಕದನದಲ್ಲಿ ಹೊಚ್ಚ ಹೊಸ ಗತ್ತೊಂದನ್ನು ಅವನು ಪ್ರಯೋಗಿಸಿದನಂತೆ. ಪಾಂಪೆಯ ಆಢ್ಯ ಕುಲೀನ ವರ್ಗದ ತರುಣ ಸೈನಿಕರ ಮುಖಕ್ಕೆ ಗುರಿಯಿಟ್ಟು ತಮ್ಮ ಈಟಿಗಳನ್ನು ಬೀಸಬೇಕೆಂದು ತನ್ನ ಸೈನಿಕರಿಗೆ ಸೀಜರ್ ಸೂಚಿಸಿದ್ದನು. ಜೀವ ಹೋಗುವುದಕ್ಕಿಂತ ಮುಖ ವಿಕಾರವಾಗುವುದಕ್ಕೆ ಅಂಜಿದ ಅವರು ಸೀಜರನ ಪಡೆಗಳನ್ನು ಎದುರಿಸಲೊಲ್ಲದೆ ಚಲ್ಲಾಪಿಲ್ಲಿಯಾದರು. ಇಂಥಾ ಗಳಿಗೆಯಲ್ಲಿ ಪಾಂಪೆ ಹತಬುದ್ಧನಂತೆ ತನ್ನ ಡೇರೆಯನ್ನು ಹೊಕ್ಕು ನಿರ್ವಿಣ್ಣನಾಗಿ ಕುಳಿತುಬಿಟ್ಟದ್ದು ಸೀಜರನ ಪಕ್ಷದಲ್ಲಿ ದೈವವೇ ಕೆಲಸಮಾಡುತ್ತದೆ ಎಂಬ ಭಾವನೆಯನ್ನು



ಇವರನ್ನು 'ಭಕ್ತ ಮಾರ್ಕಾಂಡೇಯ' ಅಂತ ತಿಳೀಬೇಡಿ. ಅರ್ಚಕರಿಗೆ ನಿದ್ದೆ ಬಂದಾಗ ಹಾಗೇ ನಿದ್ದೆ ಮಾ...ಡ್ತಾರೆ

ಉಂಟುಮಾಡುತ್ತದೆ. ಸೀಜರನ ಸೈನಿಕರು ಅಲ್ಲಿಗೂ ನುಗ್ಗಿದಾಗ ಪಾಂಪೆ ಪಲಾಯನ ಮಾಡಿ ಇಜಿಪ್ತ್ ಸೇರಿ ಅಲ್ಲಿನ ರಾಜ ಪ್ಟೊಲೆಮಿಯ ಆಶ್ರಯ ಕೇಳಿದನು. ಅಲ್ಲಿ ಮುಂದೆ ಆತನ ಕೊಲೆಯಾಯಿತು.

ವಿಜಯಿ ಜೂಲಿಯಸ್ ಸೀಜರ್ ಪಾಂಪೆಯ ಪಕ್ಷದಲ್ಲಿ ಹೋರಾಡಿದ ಅನೇಕ ಪ್ರಮುಖರಿಗೆ ಕ್ಷಮಾದಾನ ಮಾಡಿದನು. ತನ್ನ ಶತ್ರುವಿನ ಮುರಿದು ಬಿದ್ದ ಮೂರ್ತಿಯನ್ನು ಕೂಡ ಪುನಃ ನಿಲ್ಲಿಸುವ ಮೂಲಕ ತನ್ನ ವಿಶಾಲ ಮನೋವೃತ್ತಿಯನ್ನು ಪ್ರದರ್ಶಿಸಿದನು. ರೋಮನ್ ಗಣರಾಜ್ಯದ ಸಂವಿಧಾನ ಮಾತ್ರ ಸತ್ತಂತೆಯೆ ಆಗಿತ್ತು. 11 ದಿನಗಳ ಮಟ್ಟಿಗೆ ಅವನು ತನ್ನನ್ನು ಸರ್ವಾಧಿಕಾರಿಯಾಗಿ ಮಾಡಿಕೊಂಡು ಯಾವ ಆತಂಕವೂ ಇಲ್ಲದೆ ತಾನೇ ಕ್ರಿ.ಪೂ. 48ನೇ ವರ್ಷಕ್ಕೆ ಕಾನ್ಸಲ್ ಆಗಿ ಆರಿಸಿ ಬರುವಂತೆ ನೋಡಿಕೊಂಡನು. ಮುಂದಿನ ಹತ್ತು ವರ್ಷಗಳ ವರೆಗೆ ಆತ ಸರ್ವಾಧಿಕಾರಿಯೇ ಆಗಿ ಉಳಿದನು.

ತನ್ನ ಜೀವನದ ಮಹತ್ವಾಕಾಂಕ್ಷೆ ಕೈಗೂಡಿದ ಮಾತ್ರಕ್ಕೆ ಸೀಜರನ ದೈತ್ಯ ಉತ್ಸಾಹ ವಿರಮಿಸಲೊಪ್ಪಲಿಲ್ಲ. ಪ್ರಥಮತಃ ಪಾಂಪೆಯನ್ನು ಬೆನ್ನಟ್ಟಿ

ಅವನು ಇಜಿಪ್ತಿಗೆ ಹೋದನು. ಆಗಿನ್ನೂ ಸ್ವತಂತ್ರ ವಾಗಿದ್ದ ಆ ದೇಶದಲ್ಲಿ ರಾಜ ಪ್ಟೊಲೆಮಿಯನಿಗೂ ಅವನ ತಂಗಿ ಮತ್ತು ಪತ್ನಿ ಕ್ಲಿಯೋಪಾತ್ರಾಳಿಗೂ ಅಧಿಕಾರದ ಬಗ್ಗೆ ಕಲಹವಿತ್ತು. ಅದರಲ್ಲಿ ತೊಡಕಿ ಕೊಂಡ ಸೀಜರ್ ವಿಶ್ವಮೋಹಿನಿ ಕ್ಲಿಯೋಪಾತ್ರಾಳ ಮೋಹಪಾಶದಲ್ಲಿ ಸಿಲುಕಿದ. 20 ವಯಸ್ಸಿನ ಈ ರಾಣಿಯಿಂದ 52 ವರ್ಷದ ಸೀಜರ್ ಒಂದು ಮಗು ವನ್ನೂ ಪಡೆದನು.

ಇಜಿಪ್ತಿನಲ್ಲಿ ಅಲ್ಲಿನ ನಪುಂಸಕ ಪ್ರಧಾನಿ ಪೋಥಿ ನಸ್ಸನಿಂದ ಒಂದು ಭೋಜನ ಸಮಾರಂಭದಲ್ಲಿ ಸೀಜರನ ಕೊಲೆಯ ಪ್ರಯತ್ನವಾದಾಗ ಅವನು ತಪ್ಪಿಸಿಕೊಂಡದ್ದೂ ಅನಂತರ ನೌಕಾ ಯುದ್ಧದಲ್ಲಿ ಸಮುದ್ರಕ್ಕೆ ಹಾರಿ ಈಸಿ ಪಾರಾದದ್ದೂ ಅವನ ಇನ್ನೊಂದು ಚರಿತ್ರಾರ್ಹ ವೈಯಕ್ತಿಕ ಸಾಹಸದ ಕಥೆ. ಆಗ ಅವನು ಕೈಯಲ್ಲಿ ಕೆಲ ಅಮೂಲ್ಯ ಹಸ್ತಪ್ರತಿ ಗಳನ್ನು ಹಿಡಿದುಕೊಂಡು, ಅವುಗಳಿಗೆ ಬಿಂದು ನೀರು ತಗಲದಂತೆ ಒಂದೇ ಕೈಯಿಂದ ಈಸಿದನಂತೆ! ಮುಂದೆ ನಡೆದ ಬಲು ಕಠಿಣವಾದ ಹೋರಾಟದಲ್ಲಿ ಪ್ಟೊಲೆಮಿ, ಅವನ ಪ್ರಧಾನ ಮಂತ್ರಿ ಮತ್ತು ಅನು ಯಾಯಿಗಳನ್ನು ನಿರ್ನಾಮ ಮಾಡಿ ಸೀಜರ್ ತನ್ನ ಪ್ರಿಯಕರಿಯನ್ನು ರಾಣಿಯಾಗಿಸಿದನು.

ಅಲ್ಲಿಂದ ಏಶಿಯಾದಲ್ಲಿ ತಲೆಯೆತ್ತಿದ ವಿರೋಧ ವನ್ನು ಅಡಗಿಸುವುದಕ್ಕೆ ಅವನು ಹೋದದ್ದೂ ಇತಿ ಹಾಸದಲ್ಲಿ ಗಾದೆ ಮಾತಾಗಿದೆ. ಈ ಸಾಹಸವನ್ನು ಸ್ವತಃ ಸೀಜರ್ ತನ್ನ ಮಿತ್ರನಿಗೆ ವರ್ಣಿಸಿದ್ದು ಮೂರೇ ಶಬ್ದಗಳಲ್ಲಿ: Vehi, Vidi, Vici – ಬಂದೆ, ಕಂಡೆ, ಗೆದ್ದೆ! ಅನಂತರ ಅವನು ಉತ್ತರ ಆಫ್ರಿಕಾದಲ್ಲಿ ತಳವೂರಿಕೊಂಡಿದ್ದ ತನ್ನ ವಿರೋಧಿ ಗಳ ಮೇಲೆ ದಂಡೆತ್ತಿಹೋಗಿ ಅಷ್ಟೇ ಕ್ಷಿಪ್ರವಾದ ಸತ್ರದಲ್ಲಿ ಅವರನ್ನೆಲ್ಲ ನಿಗ್ರಹಿಸಿ ರೋಂಗೆ ಮರಳಿ ದನು. ಅಲ್ಲಿ ಮಹಾ ವಿಜಯೋತ್ಸವವೊಂದನ್ನು ಆಚರಿಸಿ, ಇಡೀ ನಗರದ ಜನತೆಯನ್ನು ಔತಣದಿಂದ ತೃಪ್ತಿಪಡಿಸಿದನು. ಎಲ್ಲ ಮುಗಿದ ಮೇಲೆ ರೋಮ್ ನಗರದಲ್ಲಿ ಜನಗಣನೆ ನಡೆಸಿದರು. 3,20,000 ಜನರಿದ್ದ ಪಟ್ಟಣದಲ್ಲಿ ಬರೇ 1,50,000 ಜನ ಉಳಿದಿದ್ದರು. ಮಹತ್ವಾಕಾಂಕ್ಷೆಯ ಬೆಲೆ ಯಾವಾ ಗಲೂ ಗುರುತರವಾಗಿರುತ್ತದೆ.

ರೋಮನ್ ಸಂಪ್ರದಾಯ, ಮನೋವೃತ್ತಿಯು ಮೂಲತಃ ಪ್ರಜಾತಂತ್ರಾತ್ಮಕವಾದದ್ದು. ಆದರೆ ಅರಾಜಕತೆ, ಅಂತರ್ಯುದ್ಧಗಳಿಂದ ಕಂಗಾಲಾದ ಸೆನೇಟು ಸೀಜರನ ಸರ್ವಾಧಿಕಾರವನ್ನು ಅನಿವಾರ್ಯ ವಾದ ಅಗತ್ಯವೆಂದು ಒಪ್ಪಿಕೊಳ್ಳುವುದೇ ವಿಹಿತ ವೆಂದೆಣಿಸಿತು. ಅವನ ಮೇಲೆ ಗೌರವ ಬಿರುದುಗಳ ಹೊಗಳಿಕೆ ಕೊಂಡಾಟಗಳ ಮಳೆಗರೆಯುವುದು ಆರಂಭವಾಯಿತು. ಅವನನ್ನು ಹೊಗಳುಭಟರು "ದೇವತಾತ್ಮ" ಎಂದು ಕರೆದರು. ಅವನು ತನ್ನ ವಿರೋಧಿಗಳಿಗೆ ತೋರಿಸಿದ ಕ್ಷಮೆಯ ಸ್ಮಾರಕವಾಗಿ ಕ್ಷಮಾದೇವಿಯ ಒಂದು ದೇವಾಲಯ ನಿರ್ಮಿಸ ಲಾಯಿತು. ಅವನ ಒಂದು ಮೂರ್ತಿಯನ್ನು ರೋಮ್‌ನ ಒಂದು ದೇವಾಲಯದಲ್ಲಿ ಸ್ಥಾಪಿಸ ಲ್ಪಾಯಿತು. ವರ್ಷದ ಏಳನೇ ತಿಂಗಳಾದ ಕ್ವಿಂಟಿ ಲಿಸ್‌ಗೆ ಸೀಜರನ ಹೆಸರಿಟ್ಟು ಜುಲೈ ಎಂದು ಕರೆಯ ತೊಡಗಿದರು (ಅವನು ಹುಟ್ಟಿದ ತಿಂಗಳು ಅದಾ ಗಿತ್ತು). ಅವನೂ ತನ್ನ ಹಳೇ ವಿರೋಧಿಗಳಿಗೆ – ವಿಶೇಷವಾಗಿ ಮುಂದೆ ಅವನ ಕೊಲೆಯ ಪಿತೂರಿ ಮಾಡಲಿದ್ದ ಬ್ರೂಟಸ್, ಕ್ಯಾಶಿಯಸ್ ಮೊದಲಾದವ ರಿಗೆ – ದೊಡ್ಡ ಹುದ್ದೆಗಳನ್ನಿತ್ತು ಸಂತೋಷಪಡಿ ಸಲು ಯತ್ನಿಸಿದ. ಜನಸಾಮಾನ್ಯರನ್ನು ಮೆಚ್ಚಿಸುವು ದಕ್ಕೆ ಆಟಪಾಟ, ಉತ್ಸವ ಮೆರವಣಿಗೆ, ಧಾನ್ಯ ದಾನಗಳನ್ನು ಸಂತತವಾಗಿ ಏರ್ಪಡಿಸುತ್ತಲೇ ಇದ್ದ.

ರೋಮನ್ ಸಾಮ್ರಾಜ್ಯಕ್ಕಾಗಿ ಸೀಜರ್ ಇನ್ನೂ ಘನತರವಾದ ಮಹತ್ವಾಕಾಂಕ್ಷೆಯ ಯೋಜನೆಗಳ ಹೊಳಹು ಹಾಕಿದ್ದ. ಏಶಿಯಾದಲ್ಲಿ ರೋಮನ್ ಸಾಮ್ರಾಜ್ಯದ ಆಚೆಗಿದ್ದ ಪಾರ್ಥಿಯ, ಕಾಸ್ಪಿಯನ್ ಸಮುದ್ರ ಪ್ರದೇಶ, ಕಾಕಸಸ್ ಪರ್ವತ, ಅದರೀಚೆಗೆ ಸೀಥಿಯ (ಈಗಿನ ಯುಕ್ರೇನ್) ಮತ್ತು ಅದರ ಪಶ್ಚಿಮಕ್ಕೆ ಜರ್ಮನಿ ಇವನ್ನೆಲ್ಲ ಜಯಿಸಿ ಸಾಮ್ರಾಜ್ಯ ವನ್ನು ನಾಲ್ಕೂ ದಿಕ್ಕುಗಳಲ್ಲಿ ಆಸಮುದ್ರಾಂತವಾಗಿ ವಿಸ್ತರಿಸುವುದು ಒಂದು ಅವನ ಯೋಜನೆಯಾ ಗಿತ್ತು. ಅವನು ಕಲ್ಪಿಸಿದ ಸಾಹಸಪೂರ್ಣ ಸ್ಥಾಪತ್ಯ ಯೋಜನೆಗಳಲ್ಲಿ ಕೊರಿಂಥಿನ ಭೂಸಂಧಿಯನ್ನು ಕಡಿದು ಸಮುದ್ರ ಕಾಲುವೆ ನಿರ್ಮಿಸುವುದು, ಟೈಬರ್ ನದಿಯ ದಿಕ್ಕು ಬದಲಿಸಿ ನೌಕೆಗಳ ಆಗಮನ ವನ್ನು ಸುರಕ್ಷಿತವಾಗಿ ಮಾಡುವುದು, ಪೊಮೆಂ ಥಿಯಂ ಮತ್ತು ಸೇಥಿಯದ ಭಾರೀ ಜವುಳು ಭೂಮಿ ಗಳ ನೀರನ್ನು ಶೋಷಿಸಿ ಕೃಷಿಯೋಗ್ಯವಾಗಿ ಮಾಡು ವುದು – ಇವು ಸೇರಿದ್ದವು.

ಆದರೆ ಈ ಅದ್ಭುತ ಯೋಜನೆಗಳನ್ನು ಕೃತಿಗಿಳಿ ಸುವ ಮೊದಲೇ ವಿಧಿ ಸೀಜರನ ಮೇಲೆ ತಿರುಗಿ ಬಿತ್ತು. ಎರಡು ಸಂಗತಿಗಳು ಅವನ ಅಧಃಪತನಕ್ಕೆ

ಕಾರಣವಾದವು. ಮೊದಲನೆಯದಾಗಿ, ಅವನು ತನ್ನ ಸ್ವಾಭಾವಿಕ ನಿರ್ಭಯತೆಯಿಂದಾಗಿ ತನ್ನ ಅಂಗರಕ್ಷಕ ಪಡೆಯನ್ನು ವಿಸರ್ಜಿಸುವ ಅಜಾಗ್ರತೆಯನ್ನು ತೋರಿಸಿದ್ದ. ಎರಡನೆಯದಾಗಿ ಅವನನ್ನು ಆರಾಧಿಸುತ್ತಿದ್ದ ರೋಮನ್ ಜನಸಾಮಾನ್ಯರ ಮನಸ್ಸಿನಲ್ಲಿಯೂ ಅವನು ತನ್ನನ್ನು ರಾಜನಾಗಿ ಮಾಡಿಕೊಳ್ಳಲು ಪಿತೂರಿ ನಡೆಸಿದ್ದಾನೆಂಬ ಸಂಶಯ ಬರುವಂತೆ ಮಾಡಿಕೊಂಡ. ಕುರಿಗಾಹಿಗಳ ಒಂದು ಉತ್ಸವದಲ್ಲಿ ಸ್ವರ್ಣ ಸಿಂಹಾಸನದ ಮೇಲೆ ಆಸೀನನಾದ ಅವನಿಗೆ ಮೂರು ಸಲ ಅವನ ಸ್ನೇಹಿತರು (ಅದರಲ್ಲಿ ಶತ್ರುಗಳ ಅಂಗವೂ ಇದ್ದೀತು!) ಅವನಿಗೆ ರೋಮನ್ ಚಕ್ರಾಧಿಪತ್ಯದ ಚಕ್ರವರ್ತಿ ಪದದ ಕಿರೀಟವನ್ನು ಕೊಡುವುದಕ್ಕೆ ಬಂದರು. ಮೂರೂ ಸಲ ಅವನು ಅದನ್ನು ನಿರಾಕರಿಸಿದನು. ಆದರೆ ಇದು ಬರೇ ನಾಟಕವೆಂಬ ಸಂಶಯ ಜನಕ್ಕೆ ಬರುವಂತಿತ್ತು.

ಕ್ಲಿಯೋಪಾತ್ರಾಳೊಡನೆ ಅವನ ಸಂಬಂಧ ಸ್ವಾಭಿಮಾನಿ ರೋಮನ್ನರಿಗೆ ಸಹ್ಯವಾಗಲಿಲ್ಲವೆಂದೂ ಹೇಳಲಾಗಿದೆ. ಸಾಲದ್ದಕ್ಕೆ ಯಶಸ್ಸಿನ ಮದ ಅವನ ತಲೆಗೇರತೊಡಗಿತ್ತು. ರೋಮನ್ ಸಂವಿಧಾನವನ್ನು ಮೀರಿ ನಡೆಯುವುದು, ಸಿನೇಟ್ ಸಭೆಯನ್ನು ಅಗೌರವದಿಂದ ನಡೆಸಿಕೊಳ್ಳುವುದು, ಕಾಣಬಂದವರಿಗೆ ದರ್ಶನ ಕೊಡದಿರುವುದು, ಹೇಳಬಂದವರಿಗೆ ಕಿವಿಗೊಡದಿರುವುದು – ಈ ನಡವಳಿಕೆ ಅವನ ಶತ್ರುಗಳಿಗೆ ಅನುಕೂಲವಾಗಿ ಪರಿಣಮಿಸಿತು.

ಸೀಜರನನ್ನು ಮುಗಿಸಿಬಿಡುವ ಒಳಸಂಚಿನ ನಾಯಕತ್ವಕ್ಕೆ ಸೀಜರನ ವಿರೋಧಿಗಳು ಮಾರ್ಕಸ್ ಬ್ರೂಟಸ್ಸನನ್ನು ಆರಿಸಿದರು. ಆತ ಅತ್ಯಂತ ಗೌರವಾಸ್ಪದ ರೋಮನ್ ನಾಗರಿಕ ಎನಿಸಿದ್ದ. ಪಾಂಪೆಯ ಅನುಯಾಯಿಯಾಗಿದ್ದರೂ ಅವನನ್ನು ಸೀಜರ್ ಕ್ಷಮಿಸಿದ್ದ; ಅವನ ಮೇಲೆ ಬಹಳ ನಂಬಿಕೆಯನ್ನೂ ಇರಿಸಿದ್ದ. ಒಳಸಂಚಿನ ಶಕುನಿ ಕ್ಯಾಶಿಯಸ್ ಎಂಬಾತ, ರೋಮನ್ ಪ್ರಜಾಪ್ರಭುತ್ವವನ್ನು ಕಾಪಾಡುವುದಕ್ಕೆ ಬ್ರೂಟಸನೇ ತಕ್ಕವನೆಂದು ಅವನನ್ನು ನಾನಾ ಉಪಾಯಗಳಿಂದ ಪ್ರಚೋದಿಸಿದ.

ಕ್ರಿ.ಪೂ. 44 ಮಾರ್ಚ್ ತಿಂಗಳು 15ನೇ ದಿನ. ಆ ಚರಿತ್ರಾರ್ಹ ದಿನದಲ್ಲಿ ಸಿನೇಟ್ ಸಭೆ ಸೇರಲಿತ್ತು. ಅದಕ್ಕೆ ಮುಂಚಿನ ರಾತ್ರಿ ಸೀಜರನ ಹೆಂಡತಿಗೆ ದುಃಸ್ವಪ್ನ ಬಿದ್ದಿತಂತೆ. ಒಬ್ಬ ಭವಿಷ್ಯವಾದಿ ಆ ತಿಂಗಳಲ್ಲಿ ಅವನಿಗೆ ಜೀವಾಪಾಯವುಂಟೆಂದೂ ಹೇಳಿದ್ದನಂತೆ. ಮುಂಚಿನ ರಾತ್ರಿ ಭೋಜನ ಕೂಟದಲ್ಲಿ ಲೋಕಾಭಿರಾಮ ಮಾತಿನಲ್ಲಿ ಎಂಥ ಸಾವು ಉತ್ತಮ ಎಂದೊಂದು ಪ್ರಶ್ನೆ ಬಂದಿತ್ತು. ಸೀಜರ್ ಎಲ್ಲರಿಗಿಂತ ಮೊದಲು, "ಆಕಸ್ಮಿಕ ಸಾವು!" ಎಂದು ಹೇಳಿದ್ದನಂತೆ. ಅದೃಷ್ಟ ಅವನ ಅಪೇಕ್ಷೆಗೆ ಅಸ್ತು ಎಂದಿತೇನೋ.

ಸಿನೇಟ್ ಸಭೆಗೆ ಸೀಜರ್ ಬಂದ. ಪಿತೂರಿಗಾರರೆಲ್ಲ ಸಶಸ್ತ್ರರಾಗಿ ಸಿದ್ಧರಾಗಿದ್ದರು. ಸೀಜರ್ ಆಸೀನನಾದೊಡನೆ ಟೆಲ್ಲಿಯಸ್ ಸಿಂಬರನೆಂಬೊಬ್ಬಾತ ತನ್ನ ಬಂಧುವಿಗೆ ಕ್ಷಮೆತೋರಿಸಬೇಕೆಂದು ಒಂದು ಅರ್ಜಿ ಸಲ್ಲಿಸುವ ನೆವದಿಂದ ಸೀಜರ್‌ನ ಹತ್ತಿರ ಹೋದ. ಅದಕ್ಕೆ ಬೆಂಬಲ ಕೊಡುವ ನೆವದಿಂದ ಇತರ ಪಿತೂರಿಗಾರರೂ ಮುಂದೊತ್ತಿದರು. ಸೀಜರ್ ಅರ್ಜಿಯನ್ನು ತಿರಸ್ಕರಿಸುತ್ತಲೇ ಟೆಲ್ಲಿಯಸ್ ಅವನ ಕೋಟನ್ನು ಹಿಡಿದು ಜಗ್ಗಿದ. ಆಳಿಗೊಬ್ಬರಂತೆ ಸೀಜರನನ್ನು ಇರಿದರು. ಕಡೆಗೆ ಬ್ರೂಟಸ್ ಅವನ ಕಿಬ್ಬೊಟ್ಟೆಯನ್ನು ಇರಿದಾಗ ಸೀಜರ್ ಅವನತ್ತ ತಿರುಗಿ, "Et, tu, Brutus...!"– ಬ್ರೂಟಸ್ ನೀನು ಕೂಡ! – ಎಂದು ಹೇಳಿ ಪ್ರತಿಭಟನೆ ಬಿಟ್ಟು ನೆಲಕ್ಕುರುಳಿದನಂತೆ. ವಿಧಿಯ ಪ್ರತೀಕಾರವೆಂಬಂತೆ ಪಾಂಪೆಯ ಪ್ರತಿಮೆಯ ಕಾಲಬುಡದಲ್ಲೇ ರಕ್ತದ ಮಡುವಿನಲ್ಲಿ ಆತ ಮಡಿದ.

ಈ ಘಟನೆಗೆ ಜನಸಾಮಾನ್ಯರ ಪ್ರಥಮ ಪ್ರತಿಕ್ರಿಯೆ ಅನಾಸಕ್ತವಾಗಿತ್ತು. ಮರುದಿನ ಸೀಜರನ ಶ್ಮಶಾನ ಯಾತ್ರೆ ಹೊರಟಾಗ ಅವನ ಮೃತ್ಯುಪತ್ರವನ್ನು ಒಡೆದು ಓದಲಾಯಿತು. ಅದರಲ್ಲಿ ಸೀಜರ್ ತನ್ನ ಸಂಪತ್ತಿನ ದೊಡ್ಡ ಅಂಶವನ್ನು ಜನತೆಗೆ ಹಂಚುವ ಉದ್ದೇಶವನ್ನು ಉಲ್ಲೇಖಿಸಿದ್ದನೆಂಬುದನ್ನು ಕೇಳುತ್ತಲೇ ಜನರ ಉದ್ವೇಗ ಕಟ್ಟೆಯೊಡೆದು ಹರಿಯಿತು. ಕಂಡಕಂಡ ಆಸನ ವಸ್ತುಗಳನ್ನು ತಂದು ರಾಜಬೀದಿಯಲ್ಲಿ ಒಟ್ಟಿ ಸೀಜರನ ಕಳೇವರವನ್ನು ಅದರ ಮೇಲಿಟ್ಟು ಬೆಂಕಿಹಚ್ಚಿದರು. ಆ ಮೇಲೆ ಅದರಿಂದ ದೊಂದಿಗಳನ್ನು ಎತ್ತಿಕೊಂಡು ಪಿತೂರಿಗಾರರ ಮನೆಗಳಿಗೆ ನುಗ್ಗಿ ಬೆಂಕಿಹಚ್ಚಿದರು. ಉಳಿದವರು ಪಿತೂರಿಗಾರರನ್ನು ಕಗ್ಗೊಲೆಗಡಿಯಲು ಅವರನ್ನು ಅರಸುತ್ತ ಹೊರಟರು. ಆದರೆ ಅವರು ಆಗಲೇ ನಗರಬಿಟ್ಟು ಪಲಾಯನ ಮಾಡಿದ್ದರು.

ಹೀಗೆ 56 ವಯಸ್ಸಿನಲ್ಲಿ ಸೀಜರನ ಜೀವನ ಮುಕ್ತಾಯವಾಯಿತು. ಶತ್ರು ಪಾಂಪೆ ಸತ್ತು ನಾಲ್ಕು ವರ್ಷದೊಳಗೆ ಇವನ ವೈಭವ ಕೊನೆಗೊಂಡಿತು. ಆದರೆ ಸೀಜರ್ ಯುರೋಪಿನ ಇತಿಹಾಸಕ್ಕೇ ಒಂದು

ಹೊಸ ಗತಿ ಕೊಟ್ಟಿದ್ದ. ರೋಮನ್ನರ ನಾಗರಿಕ ಕಟ್ಟಳೆಗಳು ಯುರೋಪಿಗೆಲ್ಲ ವಿಸ್ತರಿಸಿದುದು ಅವನಿಂದ. ಅವನು ರೋಮನ್ ನಾಗರಿಕತ್ವವನ್ನು ಗೆದ್ದುಕೊಂಡ ಪ್ರದೇಶಗಳ ಜನರಿಗೂ ವಿಸ್ತರಿಸಿದ. ಅನೇಕ ಆಡಳಿತ ಸುಧಾರಣೆಗಳನ್ನು ಜಾರಿಗೆ ತಂದ. ತನ್ನ ಸದಾ ಕಾರ್ಯಮಗ್ನ ಜೀವನದಲ್ಲಿಯೂ ಅವನು ಬರೆದಿಟ್ಟ ಗ್ರಂಥಗಳಲ್ಲಿ ಉಳಿದುಕೊಂಡ ಎರಡು ಕೃತಿಗಳು (ತನ್ನ ಗಾಲ್ ಆಳಿಕೆಯ ಮತ್ತು ಯಾದವೀ ಕಲಹದ ಆಖ್ಯಾಯಿಕೆ; ವಿಜಯಸತ್ರದ ಆಖ್ಯಾಯಿಕೆ) ಅನೇಕ ಅಸತ್ಯಗಳಿಂದ ಕೂಡಿದ್ದರೂ ಐತಿಹಾಸಿಕರಿಗೆ ಉತ್ತಮ ಆಧಾರ ಸಾಮಗ್ರಿಯಾಗಿದೆ.

ಅನೇಕ ಶತಮಾನ ಕಳೆದ ಮೇಲೆ ಇತಿಹಾಸಕಾರರು ತಮ್ಮ ಹಿಂನೋಟದಿಂದ ಸೀಜರನನ್ನು ಬಹಳ ಮೆಚ್ಚುತ್ತಾರೆ. ಅವಾಧವ್ಯವಾಗಿ ಬೆಳೆದು ಅರಾಜಕತೆಯಿಂದ ವಿದೀರ್ಣವಾಗಿದ್ದ ರೋಮನ್ ಆಧಿಪತ್ಯಕ್ಕೆ ಪ್ರಜಾಪ್ರಭುತ್ವಕ್ಕಿಂತ ರಾಜಸತ್ತೆ ಹೆಚ್ಚು ಉಚಿತವಾಗಿತ್ತಾದ್ದರಿಂದ ಸೀಜರನ ಮಹತ್ವಾಕಾಂಕ್ಷೆ ತಪ್ಪಾಗಿರಲಿಲ್ಲವೆಂದೂ ಹೇಳುತ್ತಾರೆ. ಆದರೆ ಸಮಕಾಲೀನರಾದ ವಿಚಾರಿಗಳಿಗೆ ಇತಿಹಾಸಕಾರರ ಹಿನ್ನೋಟದ ಸೌಕರ್ಯ ಇಲ್ಲವಲ್ಲ. ಅವರಿಗೆ ಪ್ರಸ್ತುತದ ದಬ್ಬಾಳಿಕೆಯ ಒತ್ತಡವನ್ನು ಅನುಭವಿಸಬೇಕಾಗುವುದರಿಂದ ಆ ಪರಿಸರದಲ್ಲಿ ತಮ್ಮ ಕೃತಿಗಳನ್ನು ಯೋಜಿಸಬೇಕಾಗುತ್ತದೆ. ಉದಾರಚರಿತ ಸೀಜರನ ಕೊಲೆ ಮಾಡಿದ ಪಿತೂರಿಗಾರರನ್ನು ದೂಷಿಸುವ ಮೊದಲು ನಾವು ಇದನ್ನು ನೆನಪಿಡಬೇಕಾಗುತ್ತದೆ. ಮಹತ್ವಾಕಾಂಕ್ಷಿಗಳು ತಮ್ಮ ದಬ್ಬಾಳಿಕೆಯನ್ನು ಸಮರ್ಥಿಸುವಾಗ ನಾಳೆ ಇತಿಹಾಸ ತಮ್ಮದು ಸರಿಯೆಂದು ಸಿದ್ಧಪಡಿಸುತ್ತದೆ ಎಂದು ಯಾವಾಗಲೂ ಸಾಧಿಸುತ್ತಾರೆ. ಆದರೆ ಅವರೂ ಅವರ ವಿರೋಧಿಗಳೂ ಸೇರಿಯೇ ಇತಿಹಾಸದ ಕೈಯ ಉಪಕರಣಗಳೆಂಬುದೇ ಬಹುಶಃ ಸರಿ. ●

ಪರಂಪರಾಗತ

ತಾಪತ್ರಯ

"ನನಗೆ ಹಲವಾರು ತಾಪತ್ರಯಗಳು" "ಅವನ ತಾಪತ್ರಯಗಳನ್ನು ಹೇಳಿತೀರದು"–ಎಂಬೆಲ್ಲ ವಾಕ್ಯಗಳನ್ನು ನಾವು ದಿನಬೆಳಗಾದರೆ ಕೇಳುತ್ತೇವೆ. ತಾಪತ್ರಯಗಳು ಹಲವಾರು ಆಗಲಾರವು. ಅವು ಮೂರೇ ತಾಪ+ತ್ರಯ=ತಾಪತ್ರಯ. ಹಣದ ಅಡಚಣೆ, ಕಾನೂನಿನ ಕೈಗೆ ಸಿಕ್ಕಿಕೊಂಡು ಒದ್ದಾಡುವುದು, ಆರೋಗ್ಯ ಸರಿ ಇಲ್ಲದಿರುವುದು, ಹತ್ತಾರು ಕೆಲಸಗಳು ಒಟ್ಟಿಗೇ ಒದಗಿಬರುವುದು, ನಾವು ಹೇಳುವ ತಾಪತ್ರಯಗಳಿಗೆ ವ್ಯಾಖ್ಯಾನವಾಗಿದ್ದರೆ ಅದು ನಮ್ಮ ಅಜ್ಞಾನ. ಅಧ್ಯಾತ್ಮಿಕ, ಅಧಿ ಭೌತಿಕ, ಅಧಿ ದೈವಿಕ, ಇವೇ ಮೂರು ತಾಪಗಳು. ಆತ್ಮಕ್ಕೆ ಸಂಬಂಧಪಟ್ಟ ಚಿಂತೆ, ಉನ್ನತಿಗೆ ಮಾಡುವ ಪ್ರಯತ್ನಗಳು, ಅದು ಜೀವದ ಜೊತೆಗೆ ಸೇರಿ ಅನುಭವಿಸುವ ಸಂಕಷ್ಟಗಳು. ಪರಮಾತ್ಮನನ್ನು ಪಡೆಯಲು ಪಡುವ ಪಂಚಾಂಪಾಡು ಇವೆಲ್ಲ ಶರೀರಿಗೆ ಇರುವ ಅಧ್ಯಾತ್ಮಿಕ ತಾಪ. (ತಾಪ ಅಂದರೆ ಉರಿ, ಬೇಗೆ, ಬಿಸಿ,) ಪ್ರಪಂಚದ ಸಚರಾಚರಗಳ ನಿಯಂತೃವಾದ ದೈವದ ಕೃಪೆ, ಅವಕೃಪೆಗಳಿಂದಲೂ ಶರೀರದ ತಾಪಗಳು ಬರುವುದಿದೆ. ಇವನ್ನು ಅಧಿದೈವಿಕ ತಾಪಗಳೆಂದು ಹೆಸರಿಸಬೇಕು. ಇನ್ನುಳಿದುದು ಭೌತಿಕ ತಾಪ. ಇದು ಸ್ವಯಂಕೃತಾಪರಾಧಗಳಿಂದ ಬರುವುದು. ಅಜೀರ್ಣವಾಗುವ ವರೆಗೆ ತಿಂದು ಭೇದಿ ಶುರುವಾದರೆ, ಲಂಚ ತಿಂದು ಸಿಕ್ಕಿಹಾಕಿಕೊಂಡರೆ, ಕುಡಿದು ಪ್ರಮತ್ತನಾಗಿ ಜಾರಿಬಿದ್ದು ಕಾಲು ಮುರಿದುಕೊಂಡರೆ, ತಿಳಿದೂ ತಿಳಿದೂ ತಪ್ಪು ಮಾಡಿದರೆ ಇದನ್ನೆಲ್ಲ ತಾಪತ್ರಯಗಳ ಸಾಲಿಗೆ ಸೇರಿಸುವಂತಿಲ್ಲ. ಇದನ್ನು 'ಅಧಿ ಭೌತಿಕ ತಾಪ' ಎನ್ನಬೇಕು. ಈ ಅಧಿ ಭೌತಿಕ ತಾಪದಿಂದಲೇ ಅಧ್ಯಾತ್ಮಿಕ, ಅಧಿ ದೈವಿಕ ತಾಪಗಳು ಉಂಟಾಗುವುದು. ಭೌತಿಕ ತಾಪಗಳು ಬರದಂತೆ ನೋಡಿಕೊಂಡು ಶರೀರತಃ ಮಾನಸಿಕವಾಗಿ ಆರೋಗ್ಯವಂತನಾಗಿದ್ದರೆ ಉಳಿದೆರಡು ತಾಪಗಳು ಬರುವುದಿಲ್ಲ. ಅದಕ್ಕೇ ಬಹುಶಃ ಸರ್ವಜ್ಞನಂತಹ ಮೇಧಾವಿಗಳು ಬಹಳ ಸೂಚ್ಯವಾಗಿ ಅಷ್ಟೇ ವಾಚ್ಯವಾಗಿ 'ಕಚ್ಚೆ, ಕೈ, ಬಾಯಿಗಳು ತನ್ನಿಚ್ಛೆಯೊಳಗಿರಲು......' ಎಂದು ಹೇಳಿರುವುದು. ಇದನ್ನು ಸಾಧಿಸಿ ಭೌತಿಕ ತಾಪದಿಂದ ಪಾರಾದರೆ ಉಳಿದೆರಡು ತಾಪಗಳು ಹತ್ತಿರವೂ ಬಾರದೆ ತಾಪತ್ರಯಗಳಿಂದ ದೂರವಾಗಿರಬಹುದು.

ಒಂದು ಕಾಲು ಜಾರಿದಾಗ ಇನ್ನೊಂದೂ ಜಾರಿ, ಕೈಯನ್ನೂ ಊರಿ, ಅದೂ ಜಾರಿ ಉರುಳಿ ಹೋಗುವಂತೆ ತಾಪತ್ರಯಗಳಿಂದ ತಪ್ಪಿಸಿಕೊಳ್ಳದಿದ್ದರೆ ಈಗ ನಾವು ಹೇಳುವಂತೆ "ಹಲವಾರು ತಾಪತ್ರಯಗಳು" ಎಂದೇ ಹೇಳಬೇಕಾಗುತ್ತದೆ.

–ರಸಿಕ ಪುತ್ತಿಗೆ

ನೋಬೆಲ್ ರಹಸ್ಯ



○ ಪಾ. ವೆಂ. ಆಚಾರ್ಯ

ಪ್ರತಿ ವರ್ಷ ಅಕ್ಟೋಬರ ತಿಂಗಳಲ್ಲಿ ಜಗತ್ತಿನ ಶ್ರೇಷ್ಠತಮ ವಿಜ್ಞಾನಿಗಳೂ ಸಾಹಿತಿಗಳೂ ವ್ಯಗ್ರ ಭಾವದಿಂದ ಎದುರು ನೋಡುತ್ತಿರುವ ಘಟನೆಯೊಂದಿದೆ. ಅದೆಂದರೆ ಈ ವರ್ಷದ ನೋಬೆಲ್ ಬಹುಮಾನ ತಮಗೆ ಬಂದಿದೆಯೆಂಬ ಕೇಬಲ್ ಸಮಾಚಾರ. ಇಂಥ ನೂರಾರು ಆಕಾಂಕ್ಷಿಗಳಲ್ಲಿ ಬಹಳವೆಂದರೆ ಒಂಭತ್ತು ಜನ ವಿಜ್ಞಾನಿಗಳಿಗೆ ಮೂರು ಜನ ಸಾಹಿತಿಗಳಿಗೆ ಆ ಅದೃಷ್ಟ ಖುಲಾಯಿಸಬಹುದಷ್ಟೆ. ಉಳಿದವರು ಮುಂದಿನ ವರ್ಷ ಗ್ರಹಗತಿಬದಲಾಗಬಹುದೆಂದು ನಿರೀಕ್ಷಿಸಿ ಸಮಾಧಾನ ತಾಳಬಹುದಷ್ಟೇ.

ಜಗತ್ತಿನ ಅತ್ಯಂತ ಪ್ರತಿಷ್ಠಾತ್ಮಕ ಬಹುಮಾನ ಈ ನೋಬೆಲ್ ಪಾರಿತೋಷಕ. ಕಳೆದ 75 ವರ್ಷಗಳಿಂದ ಅದರ ಬಗ್ಗೆ ಎಷ್ಟೇ ಟೀಕೆಗಳು ಬಂದಿರಲಿ, ಅದರ ಗೌರವ ಬೆಳೆಯುತ್ತಲೇ ಇದೆ; ಸಂಗಡಲೇ ಬಹುಮಾನದ ಮೊತ್ತವೂ ದೊಡ್ಡದಾಗುತ್ತಲೇ ಇದೆ. ಐನ್‌ಸ್ಟೈನ್, ನೀಲ್ಸ್ ಬೋಅರ್, ಸಿ. ವಿ. ರಾಮನ್, ರುದರ್ ಫೋರ್ಡ್, ಮಾರ್ಕೋನಿ, ಯೇಟ್ಸ್, ಠಾಕೂರ್, ಬರ್ನಾರ್ಡ್ ಶಾ ಮೊದಲಾದ ಪ್ರಭೃತಿಗಳ ಕೂಟದಲ್ಲಿ ಪ್ರವೇಶ ಪಡೆಯಲು ಹಂಬಲಿಸದವರು ಯಾರು? ಪ್ರತಿಯೊಂದು ಬಹುಮಾನವೂ ಇಂದು ಒಂದು ಲಕ್ಷ ಡಾಲರ್ (ಸುಮಾರು ಎಂಟು ಲಕ್ಷ ರೂಪಾಯಿ) ಮೇಲ್ಪಟ್ಟು ಬೆಲೆಬಾಳುತ್ತದೆ. (ಬಹಳವಾದರೆ ಅದು ಮೂರು ಜನರಲ್ಲಿ ಹಂಚಿಹೋಗಬಹುದು. ಅದು ಕೂಡ ಸಣ್ಣ ಮೊತ್ತವಲ್ಲ).

ಕಳೆದ ಶತಮಾನದ ಅಂತ್ಯದಲ್ಲಿ ಆಲ್ಫ್ರೆಡ್ ನೋಬೆಲ್ ಎಂಬ ಸ್ವೀಡಿಶ್ ವಿಜ್ಞಾನಿ ಬಿಟ್ಟುಹೋದ ಮೃತ್ಯುಪತ್ರದ ಪ್ರಕಾರ 1901ರಿಂದಲೂ ಕೊಡಲಾಗುತ್ತಿರುವ ಬಹುಮಾನಗಳಲ್ಲಿ ಮೂರು ವಿಜ್ಞಾನ ವಿಷಯಗಳಿಗೆ (ಭೌತಶಾಸ್ತ್ರ, ರಸಾಯನಶಾಸ್ತ್ರ ಮತ್ತು ಶರೀರ ಮತ್ತು ಔಷಧಶಾಸ್ತ್ರ) ಒಂದು ಸಾಹಿತ್ಯಕ್ಕೆ, ಒಂದು ಶಾಂತಿ ಕಾರ್ಯಕ್ಕೆ ಈಚೆಗೆ ಈ ಸಾಲಿನಲ್ಲಿ ಅರ್ಥಶಾಸ್ತ್ರದ ಒಂದು ಬಹುಮಾನವೂ ಸೇರಿಸಲ್ಪಟ್ಟಿದೆ.

ನೋಬೆಲ್ ಬಹುಮಾನಗಳನ್ನು ನಿರ್ಣಯಿಸುವ ಸಂಸ್ಥೆಗಳು ಸ್ವೀಡನ್‌ನಲ್ಲಿವೆ. (ಶಾಂತಿ ಬಹುಮಾನ ಮಾತ್ರ ನಾರ್ವೆಯಲ್ಲಿ ನಿರ್ಧರಿಸಲ್ಪಡುತ್ತದೆ). ನಿರ್ಣಯ ಕಾರ್ಯ ಅತ್ಯಂತ ಗೋಪ್ಯವಾಗಿ ನಡೆಯುವುದರಿಂದ ಅದಕ್ಕಾಗಿ ಹಂಬಲಿಸುವವರ ಮಾನಸಿಕ ಆತಂಕ ತೀವ್ರತರವಾಗಿರುತ್ತದೆ.

ಬಹುಮಾನ ನಿರ್ಣಯದ ರೀತಿ ಮಾತ್ರ ಗುಪ್ತವಾಗಿಲ್ಲ. ಭೌತ ಮತ್ತು ರಸಾಯನಶಾಸ್ತ್ರ (ಮತ್ತು ಅರ್ಥಶಾಸ್ತ್ರ) ಬಹುಮಾನಗಳನ್ನು ಪ್ರಾಚೀನವೂ ಸಾರ್ವತ್ರಿಕವಾಗಿ ಗೌರವಾರ್ಹವೂ ಆದ ರಾಯಲ್ ಸ್ವೀಡಿಶ್ ವಿಜ್ಞಾನ ಅಕಾಡಮಿ ನಿರ್ಣಯಿಸುತ್ತದೆ. ರಾಯಲ್ ಅಕಾಡಮಿಯ ಸುಮಾರು 200ಸದಸ್ಯರು ಮೂರರಿಂದ ಐದರ ವರೆಗೆ ಸದಸ್ಯರಿರಬಹುದಾದ ಬಹುಮಾನ ಸಮಿತಿಗಳನ್ನು ಆರಿಸುತ್ತಾರೆ. ಶರೀರ ಮತ್ತು ಔಷಧಶಾಸ್ತ್ರ ಬಹುಮಾನವನ್ನು ನಿರ್ಣಯಿಸುವುದು ಸ್ಟಾಕ್ ಹೋಂನ ಕೆರೋಲಿನ್‌ಸ್ಕ ಔಷಧ ಶಾಸ್ತ್ರೀಯ ಸಂಸ್ಥೆ. ಸಾಹಿತ್ಯ ಬಹುಮಾನದ ಯಜ

ನೋಬೆಲ್ ಯುದ್ಧವನ್ನು ದ್ವೇಷಿಸುತ್ತಿದ್ದ. ತನ್ನ ಉಗ್ರ ಡೈನಮೈಟನ ಧ್ವಂಸಶಕ್ತಿಯನ್ನು ಕಂಡು ರಾಷ್ಟ್ರಗಳು ಯುದ್ಧವನ್ನು ತ್ಯಜಿಸಿ ಬಿಡುವವೆಂದು ಆತ ನಂಬಿದ್ದನಂತೆ!

ಮಾನ ಸ್ವೀಡಿಶ್ ಸಾಹಿತ್ಯ ಅಕಾಡಮಿ. ಶಾಂತಿ ಬಹುಮಾನವನ್ನು ಮಾತ್ರ ನಾರ್ವೆಯಪಾರ್ಲಿಮೆಂಟು ಆರಿಸುವ ಐವರ ಸಮಿತಿ ನಿರ್ಧರಿಸುತ್ತದೆ. ಶಾಂತಿ ಬಹುಮಾನ ಹೊರತು ಮತ್ತೆಲ್ಲಾ ಬಹುಮಾನಗಳು ವ್ಯಕ್ತಿಗಳಿಗೆ ದೊರೆಯಬಹುದೇ ಹೊರತು ಸಂಸ್ಥೆ ಗಳಿಗಲ್ಲ.

ನಾಮಕರಣ ವಿಧಿ

ಆಯಾ ವರ್ಷದ ಬಹುಮಾನಗಳಿಗೆ ಉಮೇದ್ವಾರರನ್ನು ಸೂಚಿಸುವುದಕ್ಕೆ ಜಗತ್ತಿನ ಪ್ರಮುಖ ವೈಜ್ಞಾನಿಕ – ಸಾಹಿತ್ಯ ಸಂಸ್ಥೆಗಳಿಗೂ ವಿಶ್ವವಿದ್ಯಾಲಯಗಳಿಗೂ ಹಿಂದಿನ ವರ್ಷವೇ ಕರೆಗಳು ತಲುಪುತ್ತವೆ. ಆಮಂತ್ರಣವಿಲ್ಲದೆ ಬಂದ ಸೂಚನೆಗಳಿಗೆ ಕಸದ ಬುಟ್ಟಿಯೇ ಗತಿ. ಆಗಲೆ ನೋಬೆಲ್ ಬಹುಮಾನ ಪಡೆದವರು ಉಮೇದ್ವಾರರ ನಾಮಕರಣ ಮಾಡಬಹುದು. ಆದರೆ ಯಾರೂ ತಮ್ಮ ಹೆಸರನ್ನೇ ಸೂಚಿಸಲಾಗದು. ಎಲ್ಲಾ ನಾಮಕರಣಗಳು ಫೆಬ್ರುವರಿ ಒಂದರೊಳಗೆ ಅಕಾಡಮಿಗಳ ಕೈಸೇರಬೇಕು. ಆ ಮೇಲೆ ಬಂದವುಗಳನ್ನು ಗಣ್ಯ ಮಾಡುವುದಿಲ್ಲ.

ಫೆಬ್ರುವರಿ 1ರಿಂದ ಸಮಿತಿಗಳು ನಾಮಕರಣಗಳನ್ನು ಸೋಸಲಾರಂಭಿಸುತ್ತವೆ. ಅಕ್ಟೋಬರಿಗೆ ಮೊದಲೇ ಅವು ತಮ್ಮ ಸೂಚನೆಗಳನ್ನು ಸಿದ್ಧಪಡಿಸಿರುತ್ತವೆ. ಬಂದ ನೂರಾರು ಹೆಸರುಗಳಲ್ಲಿ ಹತ್ತಿಪ್ಪತ್ತು ಆರಿಸಲ್ಪಟ್ಟು ಅಕ್ಟೋಬರಿನಲ್ಲಿ ಆಯಾ ಅಕಾಡಮಿಗಳ ಸರ್ವ ಸದಸ್ಯರ ಸಭೆಗಳು ಸೇರಿರುತ್ತದೆ. ಇವರಲ್ಲಿ ಕೆಲವರು ಸ್ವತಃ ಉಮೇದ್ವಾರರಿರಬಹುದು. ಸಮಿತಿಗಳ ವರದಿಗಳನ್ನು ಒಂದೊಂದಾಗಿ ಓದಿದ ನಂತರ ಅಕಾಡಮಿ ಸದಸ್ಯರು ಮತದಾನ ಮಾಡುತ್ತಾರೆ. ಚರ್ಚೆ ನಡೆಯುವುದು ಅಪರೂಪ. ಹೆಚ್ಚಿನ ನಿರ್ಧಾರಗಳು ಸರ್ವಾನುಮತದಿಂದ ಆಗುತ್ತವೆ. ಜಗತ್ತಿನಲ್ಲಿ ಸ್ವೀಡಿಶ್ ಜನರೇ ಅತ್ಯಂತ ಸಂಭಾವಿತರು ಎಂಬುದು ಆಲ್ಫ್ರೆಡ್ ನೋಬೆಲ್ಲನ ಅಭಿಪ್ರಾಯವಾಗಿತ್ತಂತೆ. ಅವನ ಈ ವಿಶ್ವಾಸಕ್ಕೆ ಈವರೆಗೆ ಚ್ಯುತಿ ಬಂದಿಲ್ಲ. ಏಕೆಂದರೆ, ಸ್ವತಃ ಉಮೇದ್ವಾರರಿರಬಹುದಾದ ಅಕಾಡಮಿ ಸಭೆಗಳಲ್ಲಿ ಪಕ್ಷಪಾತದ ನಿರ್ಣಯ ಆಯಿತು ಎಂಬ ಅಪವಾದ ಬಂದಿಲ್ಲ. (74 ವರ್ಷಗಳಲ್ಲಿ ಮೂರು ಸಲ ಮಾತ್ರ ಸ್ವೀಡನ್ನಿಗೆ ಭೌತಶಾಸ್ತ್ರ ಬಹುಮಾನ ಬಂದಿದೆ).

ನಿರ್ಣಯಗಳಾಗುತ್ತಲೇ ಅಕಾಡಮಿಗಳು ಪತ್ರಿಕೆಗಳಿಗೆ ತಿಳಿಸಿ ವಿಜೇತರಿಗೆ ಕೇಬಲ್ ಸಂದೇಶ ಕಳಿಸುತ್ತವೆ. ಡಿಸೆಂಬರ್‌ನಲ್ಲಿ ಸ್ಟಾಕ್‌ಹೋಂನಲ್ಲಿ ನಡೆಯುವ ಸಮಾರಂಭಗಳಲ್ಲಿ ವಿಜೇತರು ಸ್ವತಃ ಹಾಜರಾಗಿ ಸಂಕ್ಷಿಪ್ತವಾದ ಸ್ವೀಕಾರ ಭಾಷಣಗಳನ್ನು ಮಾಡಿ ಬಹುಮಾನಗಳನ್ನು ಸ್ವೀಕರಿಸುವರು.

ಆಲ್ಫ್ರೆಡ್ ನೋಬೆಲ್

ನೋಬೆಲ್ ಬಹುಮಾನಗಳನ್ನು ಸ್ಥಾಪಿಸಿದ ಆಲ್ಫ್ರೆಡ್‌ನೋಬೆಲ್ 1883ರಲ್ಲಿ ಸ್ಟಾಕ್‌ಹೋಂನಲ್ಲಿ ಹುಟ್ಟಿದ. ಯಾವ ಶಾಲೆ ಕಾಲೇಜಿಗೂ ಹೋಗದೇ ಅವನು ರಸಾಯನಶಾಸ್ತ್ರ ಪ್ರವೀಣನಾದ. ಅವನು ಹಲ ವಿಷಯಗಳಲ್ಲಿ ವಿಚಿತ್ರ ವ್ಯಕ್ತಿ. ಮಾತು ತೀರ ಕಡಿಮೆ. ಆದರೆ ಸಾಹಿತ್ಯಪ್ರೇಮಿ, ಬಹು ಭಾಷಾವಿದ. ಇಂಗ್ಲೀಷ್ ಕವಿ ಶೆಲ್ಲಿಯನ್ನು ಮೆಚ್ಚಿದ್ದ ಆತ ಇಂಗ್ಲೀಷಿನಲ್ಲಿ ಕವಿತೆಗಳನ್ನೂ ಬರೆದಿದ್ದನಂತೆ. ಈ ಮನೋವೃತ್ತಿ ಈ ವಿಜ್ಞಾನ ಪರಿಣತಿಗಳೊಡನೆ ಅವನು ಒಳ್ಳೇ ವ್ಯಾಪಾರ ಕೌಶಲವನ್ನೂ ಪಡೆದು ಬಂದಿದ್ದ.

"ಹುಚ್ಚು ವಿಜ್ಞಾನಿ" ಎಂದೇ ಅವನಿಗೆ ಹೆಸರು ಬಿದ್ದಿತ್ತು. ಅವನ ಹೆಚ್ಚಿನ ಸ್ಫೋಟಕ ರಾಸಾಯನಿಕಗಳ ಅನ್ವೇಷಣದಲ್ಲಿತ್ತು. 31ನೇ ವಯಸ್ಸಿನಲ್ಲಿ ಅವನು ಸ್ವೀಡನ್ನಿನಲ್ಲಿ ದ್ರವ ನೈಟ್ರೋಗ್ಲಿಸರೀನ್ ಸ್ಫೋಟಕ ಕಾರಖಾನೆಯಲ್ಲಿ ಸ್ಫೋಟವಾಗಿ ಇಡೀ ಕಾರಖಾನೆಯೇ ಧ್ವಂಸವಾಗುವುದರ ಜತೆ ಅವನ ತಮ್ಮನೂ ನಾಲ್ವರು ಕಾರ್ಮಿಕರೂ ಸತ್ತರು.

ಮುಂದೆ ಸ್ವೀಡಿಶ್ ಸರಕಾರ ಕಾರಖಾನೆಯ ಪುನರ್ನಿರ್ಮಾಣಕ್ಕೆ ಅನುಮತಿ ನಿರಾಕರಿಸಿತು. ಪಟ್ಟು ಬಿಡದೆ ಆತ ಸಂಶೋಧನೆಗಳನ್ನು ಮುಂದುವರಿಸಿ ಆ ಕಾಲದ ಅತ್ಯಂತ ಭಯಂಕರ ಸ್ಫೋಟ ಡೈನೆಮೈಟನ್ನೂ ಹೊಗೆ ಬಿಡದ ಕದನಿ ಮದ್ದನ್ನೂ ಸೃಷ್ಟಿಸಿದ. ಯುದ್ಧಪ್ರಿಯ ರಾಷ್ಟ್ರಗಳು ಈ ಶೋಧಗಳನ್ನು ಎರಡೂ ತೋಳುಗಳಿಂದ ಸ್ವೀಕರಿಸಿದವು. ನೋಬೆಲ್ ಆಗಿನ ಪ್ರಪಂಚದ ಅತ್ಯಂತ ಶ್ರೀಮಂತರಲ್ಲಿ ಒಬ್ಬನಾದ. ಹಣದಿಂದ ಹಣ ಹುಟ್ಟಿಸುವ ಉಪಾಯ ಬಲ್ಲ ಅವನು ದೇಶವಿದೇಶಗಳಲ್ಲಿ ಲಾಭದಾಯಕ ಉದ್ಯಮಗಳ ಪಾಲುಗಳಲ್ಲಿ ಹಣ ತೊಡಗಿಸಿದ.

ತನ್ನ ಸಂಪತ್ತಿನ ಒಂದು ಭಾಗವನ್ನು ಶಾಂತಿ ಕಾರ್ಯಕ್ಕಾಗಿ ಬಹುಮಾನ ಕೊಡುವುದಕ್ಕೆ ವಿನಿಯೋಗಿಸಿದವನೇ ಅತ್ಯಂತ ಮಾರಕಾಸ್ತ್ರವೊಂದನ್ನು ನಿರ್ಮಿಸಿದವನೆಂದು ನಂಬುವುದು ಕಷ್ಟ. ಆದರೆ ನೋಬೆಲ್

ಯುದ್ಧವನ್ನು ನಿಜಕ್ಕೂ ದ್ವೇಷಿಸುತ್ತಿದ್ದ. ತನ್ನ ಉಗ್ರ ಡೈನಮೈಟಿನ ಧ್ವಂಸಶಕ್ತಿಯನ್ನು ಕಂಡು ರಾಷ್ಟ್ರಗಳು ಯುದ್ಧವನ್ನು ತ್ಯಜಿಸಿಬಿಡುವವೆಂದು ಅವನು ನೆರೆ ನಂಬಿದ್ದನಂತೆ!

ಮದುವೆಯನ್ನೇ ಆಗದ ನೋಬೆಲ್ 1895ರಲ್ಲಿ ಉಯಿಲು ಬರೆದು ತನ್ನ ಸಂಪತ್ತಿನ ಹೆಚ್ಚಿನ ಭಾಗವನ್ನು "ಮಾನವ ಕುಲದ ಹಿತಕ್ಕಾಗಿ" ಮಾಡಲಾದ ಅತಿ ಶ್ರೇಷ್ಠ ಸಂಶೋಧನೆಗಳಿಗೆ ವಾರ್ಷಿಕ ಬಹುಮಾನಗಳನ್ನು ಹಂಚುವುದಕ್ಕಾಗಿ ವಿನಿಯೋಗಿಸಬೇಕೆಂದು ವಿಧಿಸಿದ. ಅವನು ವಿಧಿಸಿದ್ದು ಐದು ಬಹುಮಾನಗಳು: ಒಂದು ಬಹುಮಾನವನ್ನು ಮೂರಕ್ಕಿಂತ ಹೆಚ್ಚು ಜನರಿಗೆ ಪಾಲು ಮಾಡುವಂತಿಲ್ಲವೆಂದೂ ಅವನು ಶರ್ತ ಹಾಕಿದ್ದ. ಅವನ ಈ ಐದು ಬಹುಮಾನಗಳಿಗೆ 1969ರಲ್ಲಿ ಸ್ವೀಡನ್ನಿನ ಕೇಂದ್ರೀಯ ಬ್ಯಾಂಕು ತನ್ನ ನಿಧಿಯಿಂದ ಆರನೆಯ ಅರ್ಥಶಾಸ್ತ್ರೀಯ ಬಹುಮಾನವೊಂದನ್ನು ಸೇರಿಸಿತು.



ಸಂಪಾದಕರನ್ನು ಕುರಿತು ನಾನು ಬರೆದಿದ್ದ ವ್ಯಂಗ್ಯಚಿತ್ರ ಅವರ ಮನಸ್ಸಿಗೆ ಬರಲಿಲ್ಲಾಂತ ಕಾಣುತ್ತೆ!

ಕಚ್ಚಾಟ

ನೋಬೆಲ್ಲನ ಉಯಿಲಿನ ಜಾರಿ ನಿರಾಯಾಸವಾಗಿ ಆಗಲಿಲ್ಲ. 1896ರಲ್ಲಿ ಅವನು ಇಟೆಲಿಯಲ್ಲಿ ಸತ್ತು, ಉಯಿಲು ಪ್ರಕಟವಾಗುತ್ತಲೇ ಕೋಲಾಹಲವೆದ್ದಿತು. ಅವನ ಬಂಧುಗಳು ತಮಗೆ ಅನ್ಯಾಯವಾಯಿತೆಂದು ಕೂಗಿದರು. ಸ್ವೀಡಿಶ್ ಪತ್ರಿಕೆಗಳು ನೋಬೆಲ್ಲನ ಉಯಿಲು ದೇಶಭಕ್ತಿ ವಿಹೀನವೆಂದು ಟೀಕಿಸಿದವು: ಯಾಕೆಂದರೆ ಬಹುಮಾನಗಳನ್ನು ಪ್ರಪಂಚದ ಯಾವುದೇ ರಾಷ್ಟ್ರದವರು ಪಡೆಯಬಹುದೆಂದು ಆತ ಹೇಳಿದ್ದ. ಶಾಂತಿ ಬಹುಮಾನ ಹಂಚಲು ನಾರ್ವೆಗೆ ಹಕ್ಕು ಕೊಡುವುದು ತಪ್ಪೆಂದು ಪ್ರಭಾವಶಾಲಿಯಾದ ಕೆ. ಎಚ್. ಬ್ರಾಂಟಿಂಗ್ ಖಂಡಿಸಿದ. (25 ವರ್ಷಗಳ ನಂತರ ಆ ಬ್ರಾಂಟಿಂಗನಿಗೇ ನೋಬೆಲ್ ಶಾಂತಿ ಬಹುಮಾನ ಬಂತು). ಇದೆಲ್ಲ ಸಾಲದ್ದಕ್ಕೆ ಫ್ರೆಂಚ್ ಸರಕಾರ ನೋಬೆಲ್ ಸಂಪತ್ತಿನಲ್ಲಿ ತನಗೆ ಹಕ್ಕು ಇದೆಯೆಂದು ಹುಯಿಲೆಬ್ಬಿಸಿತು. ಇದಲ್ಲದೆ ನೋಬೆಲ್ಲನ ಸಂಕ್ಷಿಪ್ತವಾದ ಉಯಿಲಿನ ಭಾಷೆಯಲ್ಲಿ ಅನೇಕ ಸಂದಿಗ್ಧಾಂಶಗಳಿದ್ದು ಕಾನೂನು ಕ್ರಮಗಳಿಗೆ ಆಸ್ಪದ ಕೊಡುವಂತಿತ್ತು. ಆದರೆ ಕೊನೆಗೆ, ಬುದ್ಧಿವಂತರಾದ ಸ್ವೀಡಿಶ್ ಜನರು ನೋಬೆಲ್ಲನ ಇಚ್ಛೆಗೆ ತಲೆಬಾಗಿದರು. ಅವನ ಹಣವನ್ನು ನೋಡಿಕೊಳ್ಳುವುದಕ್ಕೆ ಸ್ವೀಡನ್ನಿನ ಅರ್ಥಶಾಸ್ತ್ರಿ, ವಿಜ್ಞಾನಿ ಸರಕಾರಿ ತಜ್ಞರಿಂದ ಕೂಡಿದ ಒಂದು ಸ್ಥಾವರ ಸ್ಥಾಪಿಸಲ್ಪಟ್ಟು ಬಹುಮಾನಗಳ ನಿಯಮಗಳು ರೂಪಿಸಲ್ಪಟ್ಟವು. 1901ರಿಂದ ಬಹುಮಾನ ವಿತರಣೆ ಆಗತೊಡಗಿತು. ಯಾವುದಾದರೊಂದು ವರ್ಷದಲ್ಲಿ ಯೋಗ್ಯ ಉಮೇದ್ವಾರನಿಲ್ಲದಿದ್ದರೆ ಆ ವರ್ಷ ಆ ಬಹುಮಾನವನ್ನು ತಡೆಹಿಡಿದು ಮುಂದಿನ ವರ್ಷ ಬೇಕಾದರೆ ಅದೇ ವಿಷಯದಲ್ಲಿ ಇಬ್ಬರಿಗೆ ಬಹುಮಾನ ಕೊಡಬಹುದು.

ಕೂಟರಹಸ್ಯ

ಪ್ರಾರಂಭದಲ್ಲೇ ನೋಬೆಲ್ ನಿಧಿಯ ಧರ್ಮದರ್ಶಿಗಳು ನಿರ್ಧರಿಸಿ ಇಂದಿನ ವರೆಗೂ ಪಾಲಿಸಿಕೊಂಡು ಬಂದ ಒಂದು ನಿಯಮ ಸಂಪೂರ್ಣ ರಹಸ್ಯದ್ದು. ಬಹುಮಾನ ಸಮಿತಿಗಳಲ್ಲಾಗಲಿ ಅಕಾಡಮಿ ಸಭೆಗಳಲ್ಲಾಗಲಿ ನಡೆದ ಚರ್ಚೆಗಳ, ಹಾಜರು ಪಡಿಸಿದ ದಾಖಲೆಗಳ, ಮುಂದೆ ಬಂದ ಹೆಸರುಗಳ, ಸದಸ್ಯರಿಂದಾಗಲಿ ಹೊರಗಿನವರಿಂದಾಗಲಿ ಬೇರೆ ಬೇರೆ ಉಮೇದ್ವಾರರ ಕೆಲಸದ ಬಗ್ಗೆ ಬಂದ ಅಭಿಪ್ರಾಯಗಳ, ಸಭೆಗಳಲ್ಲಿ ಆದ ಮತಭೇದಗಳ ಯಾವೊಂದು ವಿಷಯವೂ ಬಹಿರಂಗವಾಗಕೂಡದೆಂದು ಕಡ್ಡಾಯ ಮಾಡಿಕೊಳ್ಳಲಾಗಿದೆ. ಅನೇಕ ಸರಕಾರಗಳು ಕೂಡ ತಮ್ಮ ರಹಸ್ಯ ಕಾಗದ ಪತ್ರಗಳನ್ನು 25 ವರ್ಷಗಳ

ನಂತರ ಸಾರ್ವಜನಿಕರಿಗೆ ತೆರೆದಿಡುತ್ತವೆ. ಆದರೆ ನೋಬೆಲ್ ಬಹುಮಾನ ನಿರ್ಣಯಗಳ ಬಗ್ಗೆ ಈ 75 ವರ್ಷಗಳಲ್ಲಿ ಒಂದು ಚೂರು ಕಾಗದವೂ ಬೆಳಕು ಕಂಡಿಲ್ಲ. ಎಷ್ಟೋ ಜನರು, ಶಿಕ್ಷಣ ತಜ್ಞರ ಅವಗಾಹನೆಗಾಗಿ ನಿರ್ದಿಷ್ಟ ಕಾಲಾನಂತರ ಈ ದಾಖಲೆಗಳನ್ನು ಬಿಡುಗಡೆಮಾಡಬೇಕೆಂದು ವಾದಿಸಿದ್ದಾರೆ. ಆದರೆ ಬಹುಮಾನಗಳಿಗೆ ಮಾಡುವ ಆಯ್ಕೆಗಳು ಬಾಹ್ಯ ಒತ್ತಡಗಳಿಂದ ಮುಕ್ತವಾಗಿರಬೇಕಾದರೆ ಮತ್ತು ಉಮೇದ್ವಾರರ ಬಗ್ಗೆ ತರಿಸುವ ಅಭಿಪ್ರಾಯಗಳು ಪ್ರಾಮಾಣಿಕವಾಗಿರಬೇಕಾದರೆ ರಹಸ್ಯವನ್ನು ಕಾಯ್ದುಕೊಳ್ಳುವುದು ಅತ್ಯವಶ್ಯವೆಂದು ನೋಬೆಲ್ ನಿಧಿ ಭಾವಿಸಿದೆ.


ಸ್ವೀಡಿಶ್ ಜನ ಸ್ವಭಾವದಿಂದಲೇ ಪ್ರಚಾರಪ್ರಿಯರಲ್ಲ. ಅತಿಯಾದ ಪ್ರಚಾರದಿಂದ ನಿರ್ವ್ಯಾಜವಾಗಿ ವಿಚಾರಿಸಲು ಆತಂಕವಾಗುತ್ತದೆಂದು ಅವರು ಭಾವಿಸುತ್ತಾರೆ. ಆದ್ದರಿಂದ ನೀವು ನೋಬೆಲ್ ಬಹುಮಾನದ ಆಸೆ ಇಟ್ಟುಕೊಂಡಿದ್ದರೆ ನಿಮ್ಮ ರಚನೆ, ಸಂಶೋಧನೆಗಳ ಬಗ್ಗೆ ಪತ್ರಿಕೆಗಳಲ್ಲಿ ಭಾಷಣಮೂಲಕವಾಗಿಯಾಗಲಿ ನೀವು ಹೆಚ್ಚು ಪ್ರಚಾರ ಮಾಡುವ ಹುಮ್ಮಸವನ್ನು ಬಿಡಬೇಕು. ನಿಮ್ಮ ಪರವಾಗಿ ಇತರರು ಡಂಗುರ ಸಾರುವುದನ್ನೂ ನೋಬೆಲ್ ಭಾಗ್ಯವಿಧಾತರು ಮೆಚ್ಚುವುದಿಲ್ಲ. ನಿಮಗೆ ಈ ಸಲದ ಬಹುಮಾನ ಬರಬಹುದು ಎಂದು ನೀವಾಗಲಿ ನಿಮ್ಮ ಸಮರ್ಥಕರಾಗಲಿ ಬಹಿರಂಗವಾಗಿ ಊಹಾಪೋಹ ಮಾಡುವುದೂ ಹಿತಕರವಲ್ಲ. ನೀವು ಜಗತ್ತಿನಲ್ಲೇ ಅತ್ಯಂತ ಪ್ರಖರ ಬುದ್ಧಿಯವರಾಗಿದ್ದು ಅದ್ಭುತ ಸಂಶೋಧನೆಗಳನ್ನು ಮಾಡಿದ್ದರೂ ಅಕಾಲ ಪ್ರಚಾರದ ಹುಟ್ಟಿಗೆ ಬಲಿಯಾದರೆ ಚಾನ್ಸು ಕಳೆಕೊಳ್ಳುವಿರಿ. ಇಂಥವರಿಗೆ ಈ ಸಲ ನೋಬೆಲ್‌ಬಹುಮಾನ ಖಂಡಿತವೆಂದು ಬಹುವಾಗಿ ಊಹಾಪೋಹ ಎದ್ದಿದ್ದರೆ ಅಂಥವರಿಗೆ ಕೊಡಬೇಕೆಂದು ಮೊದಲು ಶಿಫಾರಸುಮಾಡಿದ ಸಮಿತಿ ತನ್ನ ಶಿಫಾರಸುಗಳನ್ನು ಬದಲು ಮಾಡಿದ ಉದಾಹರಣೆಗಳುಂಟಂತೆ!

ಬಹುಮಾನ ಯಾವಾಗಲೂ ಒಬ್ಬನ "ಪ್ರಚಂಡ" ಶೋಧಕ್ಕೆ ಬರುತ್ತದೆನ್ನಲು ಬಾರದು. ನೋಬೆಲ್ ಪ್ರಭುಗಳು "ಪ್ರಚಂಡ"ರನ್ನೂ ಅಷ್ಟು ಮೆಚ್ಚುವುದಿಲ್ಲ. ಐನ್‌ಸ್ಟೈನರಿಗೆ ಬಹುಮಾನ ಬಂದದ್ದು ಅವರ ಜಗತ್ಪ್ರಸಿದ್ಧ ಸಾಪೇಕ್ಷತಾ ಸಿದ್ಧಾಂತಕ್ಕಾಗಿ ಅಲ್ಲ – ಬೇರೆ 'ಚಿಲ್ಲರೆ' ಶೋಧಕ್ಕಾಗಿ. ತಾತ್ಪರ್ಯವೆಂದರೆ ಊಹಾತ್ಮಕ ವಿಜ್ಞಾನಕ್ಕಿಂತಲೂ ಗಟ್ಟಿಮುಟ್ಟಾದ ವಿಜ್ಞಾನಕ್ಕೆ ಪ್ರಭುಗಳು ಮಹತ್ವ ಕೊಡುತ್ತಾರೆ.

ಒತ್ತಾಯಗಳನ್ನು ತಡೆಯಲು ಇಷ್ಟೇ ಮುಂಜಾಗ್ರತೆ ಇರುವುದು ಸರಿ. ಆದರೆ ನೀವು ಸಾಕಷ್ಟುಪ್ರಭಾವಶಾಲಿಗಳಾಗಿದ್ದರೆ ನಿಮ್ಮ ಉಮೇದ್ವಾರನನ್ನು ಮುಂದೊತ್ತುವುದು ಕೆಲವೊಮ್ಮೆ ಸಾಧ್ಯವಾಗಬಹುದು. ಪ್ರಸಿದ್ಧ ರಸಾಯನ ಶಾಸ್ತ್ರ ವಿಜ್ಞಾನಿ ಮತ್ತು ನೋಬೆಲ್ ಬಹುಮಾನ ವಿಜೇತ ರುದರ್ಫೋರ್ಡರು ತಮ್ಮ ಶಿಷ್ಯರಲ್ಲೊಬ್ಬನಿಗೆ ಬಹುಮಾನವನ್ನು ಅದೇ ವರ್ಷ ಕೊಡಲೇ ಬೇಕೆಂದು ಪರಿಣಾಮಕರವಾಗಿ ಒತ್ತಾಯ ತಂದ ಉದಾಹರಣೆಯನ್ನು ಬಲ್ಲವರು ಹೇಳುತ್ತಾರೆ. ಅವರ ಉಮೇದ್ವಾರ ಸುದೈವಿಯಾಗಿದ್ದ. ಒಂದು ವರ್ಷ ತಡವಾಗಿದ್ದರೆ ಅವನಿಗೆ ಶಾಶ್ವತವಾಗಿ ಅವಕಾಶ ತಪ್ಪಿ ಹೋಗಬಹುದಾಗಿತ್ತು. ಏಕೆಂದರೆ ಅದೇ ರಂಗದಲ್ಲಿ ಕೆಲಸ ಮಾಡುತ್ತಿದ್ದ ಇತರರು ಮುಂದೆ ಅವನಿಗಿಂತ ಮಹತ್ವದ ಅಂಶಗಳನ್ನು ಕಂಡುಹಿಡಿದರು.

ನೀವು ಮಾಡಿದ ಸಂಶೋಧನೆಯ ಹಿರಿಮೆ ಎಷ್ಟಿದ್ದರೂ ನೀವು ನೋಬೆಲ್ ಬಹುಮಾನಕ್ಕಾಗಿ ಸಾಕಷ್ಟು ವರ್ಷ ಕಾಯಬೇಕಾಗುವುದೆಂಬುದು ಸಾಮಾನ್ಯ. ಕಷ್ಟದಲ್ಲಿರುವ ತರುಣ ಉತ್ಸಾಹಿ ವಿಜ್ಞಾನಿಗಳಿಗೆ ನೆರವಾಗುವುದು ನೋಬೆಲ್ಲನ ಒಂದು ಧ್ಯೇಯವಾಗಿತ್ತು. ಆದರೆ ಧ್ಯೇಯ ಹಿಂದೆ ಬಿದ್ದಿದೆ. ನಿಮ್ಮ ಯಾವ ಶೋಧಕ್ಕಾಗಿ ಬಹುಮಾನ ಕೊಡಲ್ಪಡುತ್ತಿದೆಯೋ ಅದನ್ನು ಮಾಡಿ ಹತ್ತು ಹದಿನೈದು ವರ್ಷಗಳ ನಂತರ ನಿಮಗೆ ಬಹುಮಾನ ಬರುವುದು ಅಪರೂಪವಲ್ಲ. ಅಷ್ಟು ಹೊತ್ತಿಗೆ ನಿಮಗೆ ಈ ನೆರವಿನ ಅಗತ್ಯ ಅಷ್ಟಾಗಿ ಉಳಿದಿರಲಿಕ್ಕಿಲ್ಲ. ಹರಗೋವಿಂದ ಖೊರಾನಾ ಅವರಂಥ ಕೆಲವರಿಗಷ್ಟೆ ಬೇಗನೆ ಬಹುಮಾನ ಬಂದದ್ದುಂಟು. ಒಂದು ಮಹಾ ಸಂಶೋಧನೆ ನೋಬೆಲ್ ಪ್ರಭುಗಳ "ನಜರಿಗೆ" ಬಂದು ವಿಚಾರಣೆ ಮುಗಿಯುವಷ್ಟರಲ್ಲಿ ವಿಜ್ಞಾನಿ ಸತ್ತರೆ ಅವನು ಶಾಶ್ವತವಾಗಿ ನೋಬೆಲ್ ಬಹುಮಾನಕ್ಕೆ ಎರವಾಗುತ್ತಾನೆ. (ಸತ್ತವರಿಗೆ ಬಹುಮಾನ ಕೊಡಲಾಗುವುದಿಲ್ಲ. ಆದರೆ ಬಹುಮಾನವನ್ನು ಘೋಷಿಸಿದ ತರುವಾಯ ಸ್ವೀಕರಿಸುವ ಮುನ್ನ ನಿಧನರಾದವರಿಗೆ ಅದು ಸಿಗುತ್ತದೆ. 1931ರಲ್ಲಿ ಸಾಹಿತ್ಯ ಬಹುಮಾನ ಪಡೆದ ಎರಿಕ್ ಕಾರ್ಲ್‌ಫೆಲ್ಟ್ ಬಹುಮಾನ ಸ್ವೀಕರಿಸಲು ಸ್ವತಃ ಬದುಕುಳಿಯಲಿಲ್ಲ).





ಬೌಂಡರಿಗೆ ನಾಲ್ಕಕ್ಕಿಂತ ಜಾಸ್ತಿ ರಸ್ತಾಗಿದ್ರೆ ತುಂಬಾ ರನ್ ಗಳಿಸಬಹುದಿತ್ತು. ಅಲ್ವಾ...

ಅಪ್ರಿಯ ಪ್ರಸಂಗ

ಅಧಿಕಾಂಶ ದೇಶಗಳ ಸರಕಾರಗಳು ತಮ್ಮ ನಾಗರಿಕರಿಗೆ ನೋಬೆಲ್ ಪಾರಿತೋಷಕ ಬಂದರೆ ಅದನ್ನು ಹೆಮ್ಮೆಯ ವಿಷಯವೆಂದು ಭಾವಿಸುತ್ತವೆ. ಇದಕ್ಕೆ ಅಪವಾದಗಳೂ ಉಂಟು. 1937ರಲ್ಲಿ ಹಿಟ್ಲರ್ ಜರ್ಮನಿ ಜರ್ಮನ್ ನಾಗರಿಕರು ನೋಬೆಲ್ ಬಹುಮಾನಗಳನ್ನು ಸ್ವೀಕರಿಸದಂತೆ ಕಾನೂನು ಮಾಡಿತು. ನಾಜೀ ವಿರೋಧಿಯಾಗಿದ್ದ ಕಾರ್ಲ್ ವಾನ್ ಆಸಿಯೆತ್‌ಸ್ಕಿ (Karl Von Ossietzky) ಎಂಬ ಜರ್ಮನ್ನನಿಗೆ 1935ರ ನೋಬೆಲ್ ಶಾಂತಿ ಬಹುಮಾನ ಕೊಟ್ಟದ್ದರಿಂದ ಹಿಟ್ಲರ್ ಕೆರಳಿದ್ದು ಇದಕ್ಕೆ ಕಾರಣವಾಗಿತ್ತು. ಸೋವಿಯಟ್ ರಶಿಯವೂ ನೋಬೆಲ್ ಪಾರಿತೋಷಕಗಳಿಗೆ ಅಷ್ಟಾಗಿ ಸಂತೋಷ ತೋರಿಸಿಲ್ಲ. 1933ರಲ್ಲಿ ಐವಾನ್ ಬುನಿನ್ನನಿಗೆ ನೋಬೆಲ್ ಬಹುಮಾನ ಬಂದ 25 ವರ್ಷಗಳ ನಂತರ ಆ ಪಾರಿತೋಷಕ ಪಡೆದ (1958) ರಶಿಯನ್ ಸಾಹಿತಿ ಬೋರಿಸ್ ಪ್ಯಾಸ್ಟರ್‌ನಾಕನಿಗೆ ಅದನ್ನು ಸ್ವೀಕರಿಸಲು ಸ್ವೀಡನ್ನಿಗೆ ಹೋಗಲಾಗಲಿಲ್ಲ. ಅವನ "ಡಾಕ್ಟರ್ ಜಿವಾಗೋ" ಕಾದಂಬರಿ ಆಳುವವರಿಗೆ ಅಪ್ರಿಯವಾಗಿದ್ದದ್ದೇ ಇದಕ್ಕೆ ಕಾರಣವಾಗಿತ್ತು. 1970ರಲ್ಲಿ ಅಲೆಗ್ಸಾಂಡರ್ ಸೋಲ್ಜೆನಿಸಿತ್‌ಸ್ಕಿಗೆ ಬಹುಮಾನ ಬಂದಾಗ ಇದರ ಪುನರಾವರ್ತನೆಯಾಯಿತು.

ಆಕ್ಷೇಪಗಳು

ಈ ನಿಟ್ಟಿನಲ್ಲಿ ನೋಬೆಲ್ ಪಾರಿತೋಷಕಗಳ ಬಗ್ಗೆ ಇರುವ ಕೆಲ ಆಕ್ಷೇಪಗಳನ್ನು ಚರ್ಚಿಸಬಹುದು. ನೋಬೆಲ್ ಸಮಿತಿಗಳದು ಬಹಳ ಮಂದಗತಿ, ಅದು ಬಹುಮಾನ ಕೊಟ್ಟಾಗ, ಅದನ್ನು ಪಡೆದವನಿಗೆ ಅದರ ಆರ್ಥಿಕ ಮಹತ್ವ ಉಳಿದಿರುವುದಿಲ್ಲವೆಂಬುದು ಒಂದು ಮಾತಾಯಿತು. ಇನ್ನೊಂದೆಂದರೆ, ನೋಬೆಲ್ಲನು ವಿಜ್ಞಾನದಲ್ಲಿ ಮೂರೇ ಶಾಖೆಗಳಿಗೆ ತನ್ನ ಉಯಿಲಿನಲ್ಲಿ ಅನುವುಮಾಡಿಕೊಟ್ಟದ್ದರಿಂದ ಅನೇಕ ಹಿರಿಯ ವಿಜ್ಞಾನಿಗಳು ಅದರಿಂದ ವಂಚಿತರಾಗಿದ್ದಾರೆ. ವಿಜ್ಞಾನಿಗಳ ತಾಯಿಯಾದ ಗಣಿತಕ್ಕೇ ಬಹುಮಾನ ಇಲ್ಲ. ಅತಿ ಪ್ರಾಚೀನವಾದ ಮತ್ತು ಇಂದಿಗೂ ತನ್ನ ಕ್ಷೇತ್ರವನ್ನು ವಿಸ್ತರಿಸುತ್ತಿರುವ ಖಗೋಲ ವಿಜ್ಞಾನಕ್ಕೆ 1974ರ ವರೆಗೂ ನೋಬೆಲ್ ಪಾರಿತೋಷಕ ಸಿಗಲಿಲ್ಲ. ಆಗಲೂ ಭೌತಶಾಸ್ತ್ರದ ಅಂಗವಾಗಿ ಗಣಿಸಿ ಅದಕ್ಕೆ ಬಹುಮಾನ ಬಂತು. ಭೂಗರ್ಭಶಾಸ್ತ್ರಕ್ಕಾಗಲಿ ಯಂತ್ರಶಾಸ್ತ್ರಗಳಿಗಾಗಲಿ ಬಹುಮಾನ ಇಲ್ಲದ್ದು ಇನ್ನೊಂದು ಕೊರತೆ.

ಇದಕ್ಕೂ ಅರ್ಥಪೂರ್ಣವಾದದ್ದೆಂದರೆ ನೋಬೆಲ್ಲನು ದೇಶಭೇದವಿಲ್ಲದೆ ಪ್ರಪಂಚಕ್ಕೇ ತನ್ನ ಕೊಡುಗೆ ಇತ್ತಿದ್ದರೂ ಪಾಶ್ಚಾತ್ಯ ದೇಶಗಳೇ ಅದರ ಫಲಗಳನ್ನು ಹೆಚ್ಚು ಅನುಭವಿಸುತ್ತಿವೆ ಎನ್ನುವುದು. ನೋಬೆಲ್ ಸಮಿತಿಗಳು ಪ್ರತಿ ವರ್ಷ ಸೂಚನೆಗಳಿಗಾಗಿ ಕಳಿಸುವ 800 ಅಥವಾ ಅದಕ್ಕೂ ಹೆಚ್ಚು ಆಮಂತ್ರಣಗಳಲ್ಲಿ ಏಶಿಯ ಆಫ್ರಿಕಗಳ ಸಂಸ್ಥೆಗಳಿಗೆ ಬರುವವು ತೀರ ಕಡಿಮೆ. ಭಾರತದಲ್ಲೇ ಮಾಡಿದ ಕೆಲಸಕ್ಕೆ ಭಾರತೀಯರಿಗೆ (ರಾಮನ್) ದೊರೆತದ್ದು ಒಂದೇ ಒಂದು ವಿಜ್ಞಾನ ಬಹುಮಾನ. ಖೊರಾನಾ ಅಮೇರಿಕದಲ್ಲಿ ಸಂಶೋಧನೆ ಮಾಡಿ ಅದನ್ನು ಗೆದ್ದರು. ಜಪಾನ್ ಈ ವಿಷಯದಲ್ಲಿ ಸ್ವಲ್ಪ ಹೆಚ್ಚು ಸುದೈವಿಯಾಗಿದೆ. ಇನ್ನೂ ಹೆಚ್ಚು ವಿಷಾದಕರವೆಂದರೆ ಸಾಹಿತ್ಯ ಬಹುಮಾನದ ಅವಸ್ಥೆ. ಜಪಾನೊಂದು ಹೊರತು ಪಾಶ್ಚಾತ್ಯೇತರ ದೇಶಗಳಿಗೆ ಬಂದ ಬಹುಮಾನಗಳು ಒಂದು ಕೈಬೆರಳ ಲೆಕ್ಕಕ್ಕಿಂತ ಕಮ್ಮಿ. ಇಲ್ಲಿನ ಭಾಷೆಗಳಲ್ಲಿ ಬರುವ ಸಾಹಿತ್ಯ ಕೃತಿಗಳಿಗೆ ಇಂಗ್ಲೀಷಿಗೆ ಅನುವಾದವಾಗದೆ ಅವಕಾಶವೇ ಸಿಗುವುದಿಲ್ಲ. ಠಾಕೂರರ ಗೀತಾಂಜಲಿ ಇಂಗ್ಲೀಷಿಗೆ ಅನುವಾದವಾಗಿ ಅದು ಡಬ್ಲ್ಯು. ಬಿ. ಯೇಟ್ಸ್‌ನ ಥ್ಯಾನ್ಸಿಗೆ ಬಂದದ್ದರಿಂದ ಅದು ಗೆದ್ದಿತಷ್ಟೇ.

ನೋಬೆಲ್ ಬಹುಮಾನಗಳಿಗಾಗಿ ಹಂಬಲಿಸುವವರು ನೂರುಗಟ್ಟಳೆಯಲ್ಲಿದ್ದರೂ ಅದನ್ನು ಹೀಗಳೆಯುವ ನೋಬೆಲ್ ವಿಜೇತರೇ ಇದ್ದಾರೆ. ವಿಲಿಯಂ ಸ್ಟಕೆ ಎಂಬ ವಿಜ್ಞಾನಲೇಖಕರು ಕಳೆದ ವರ್ಷ 12 ಜನ

ನೋಬೆಲ್ ವಿಜ್ಞಾನಿಗಳನ್ನು ವಿಚಾರಿಸಿದಾಗ ಅವರಲ್ಲಿ ಹೆಚ್ಚಿನವರಿಗೆ ಆ ಬಗ್ಗೆ ಅಷ್ಟೇನೂ ಗೌರವವಿಲ್ಲೆಂದು ತೋರಿ ಬಂತು. ಭೌತಶಾಸ್ತ್ರಿ ಪಾಲ್ ಡಿ – ರಾಕರಂಥ ಕೆಲವರ ಮುಖ್ಯ ಆಕ್ಷೇಪವೆಂದರೆ ಯೋಗ್ಯತಾ ಸಂಪನ್ನರಾದ ಎಷ್ಟೋ ಜನರಿಗೆ ಅದು ಸಿಗದೆ ಹೋಗುತ್ತದೆ ಎನ್ನುವುದು. ಅದೊಂದು ಯೋಗ್ಯತಾ ಪರೀಕ್ಷೆಯಾಗದೆ ಅದೃಷ್ಟ ಪರೀಕ್ಷೆಯಾಗಿದೆ ಅಷ್ಟೇ. ಅದ್ದರಿಂದ ಬಹುಮಾನ ಬಂದದ್ದಕ್ಕೆ ಏನೂ ಮಹತ್ವವಿಲ್ಲ – ಇದು ಒಂದು ದೃಷ್ಟಿ.

ಇಬ್ಬರಂತೂ ನೋಬೆಲ್ ಬಹುಮಾನ ಅದನ್ನು ಪಡೆದವರ ಮೇಲೆ ಬಹಳ ದುಷ್ಪರಿಣಾಮ ಮಾಡಿದೆ ಎನ್ನುತ್ತಾರೆ. "ಒಬ್ಬನ ಅಹಂಕಾರವಂತೂ ಎಷ್ಟು ಉಬ್ಬಿಬಿಟ್ಟಿತೆಂದರೆ ಅವನು ತನ್ನ ಹೆಸರಿನ ಮುಂದೆ N.L.(ನೋಬೆಲ್ ಲಾರೇಟ್) ಎಂದು ಬರೆಯತೊಡಗಿದ", ಎಂದು ಔಷಧಶಾಸ್ತ್ರ ಬಹುಮಾನ ವಿಜೇತ ಆರ್ಚಿಬಾಲ್ಡ್ ಹಿಲ್ ಹೇಳಿದ್ದಾನೆ. ಹೆಮ್ಮೆಯಿಂದಾಗಿ ಮುಂದೆ ಅವರ ಸಂಶೋಧನೆಗಳಿಗೇ ವಿಘ್ನವಾಗುತ್ತದೆ. ನೋಬೆಲ್ ಪ್ರಭುಗಳು ಅಹಂಕಾರಿಗಳನ್ನು ಹೊರಗಿಡಲು ಸರ್ವ ಪ್ರಯತ್ನ ಮಾಡುತ್ತಾರೆ. ಅವರು ಬಹುಮಾನ ಕೊಟ್ಟನಂತರ ಮುಂದಿಯ ತಲೆ ಉಬ್ಬಿದರೆ ಅವರೇನು ಮಾಡಿಯಾರು!

ಬಹುಮಾನ ಬಂದ ಮೇಲೆ ಅದರಲ್ಲಿ ಹುಳುಕು ತೆಗೆಯುವುದು ಏನು ಕಷ್ಟ! ಅದು ಬರುವ ವರೆಗೆ ಅದಕ್ಕೆ ಹಾತೊರೆಯದವರೇ ಇಲ್ಲ. ಅದರ ಕೊರತೆಗಳೇನಿದ್ದರೂ ಅದು ವಿಜ್ಞಾನ– ಸಾಹಿತ್ಯಗಳಲ್ಲಿ ಹೆಚ್ಚಿನ ಬೆಳವಣಿಗೆಗೆ ಈ 75 ವರ್ಷಗಳಲ್ಲಿ ಮತ್ತಾವ ಪ್ರತ್ಯೇಕ ಪ್ರೋತ್ಸಾಹಕ್ಕಿಂತಲೂ ಹೆಚ್ಚು ಪ್ರಚೋದನೆ ಕೊಟ್ಟಿದೆ.

ಮೊತ್ತ ಬೆಳೆಯುತ್ತಿದೆ

ನೋಬೆಲ್ ನಿಧಿಯ ಆಸ್ತಿಯನ್ನು ನೋಡಿಕೊಳ್ಳುತ್ತಿರುವವರಲ್ಲಿ ಅನೇಕರು ಬೌದ್ಧಿಕರಾಗಿದ್ದರೂ ಅವರ ಆಡಳಿತ ಅತ್ಯಂತ ದಕ್ಷವಾಗಿದೆ. ನೋಬೆಲ್ ನಿಧಿ ಬೆಳೆಯುತ್ತ ಅದು ಕೊಡುವ ಬಹುಮಾನಗಳ ಮೊತ್ತ ಹೆಚ್ಚುತ್ತ ಹೋಗಲು ನೋಬೆಲ್ ಸ್ಥಾನದವರ ದಕ್ಷತೆಯೆ ಕಾರಣ. ಪ್ರತಿ ವರ್ಷದ ಆದಾಯದಲ್ಲಿ ಸೇಕಡಾ 10ರಷ್ಟನ್ನು ಮೂಲಧನಕ್ಕೆ ಸೇರಿಸುತ್ತಾರೆ. ಉಳಿದದ್ದರಲ್ಲಿ ಕಾಲು ಭಾಗ ಆಡಳಿತ ವೆಚ್ಚಕ್ಕೆ ವಿನಿಯೋಗವಾಗುತ್ತದೆ. ಅಷ್ಟು ಕಳೆದ ಮೇಲೆ ಉಳಿದದ್ದೆಲ್ಲ ಬಹುಮಾನ ವಿತರಣೆಗೇ ಹೋಗುತ್ತದೆ. ಮತ್ತು ನೋಬೆಲ್ ಸಮಿತಿಗಳು ಬೆಳೆಯುತ್ತಿರುವ ಏಶಿಯ ಆಫ್ರಿಕಗಳ ಕಡೆ ಹೆಚ್ಚು ಗಮನ ಕೊಟ್ಟರೆ ಬಹುಮಾನದ ಹಿರಿಮೆಗೆ ಹೆಚ್ಚಳ ಬಂದೇ ಬಂದೀತು. ●

ಚಿಂತನಶೀಲರು ಕಂಡಂತೆ

ಸಂಸ್ಕೃತಿಯೆಂದರೆ ಮನುಷ್ಯರ ಅನ್ಯೋನ್ಯ ಸಂಬಂಧಗಳಲ್ಲಿ ನಯ – ವಿನಯಗಳ ಸೊಬಗು, ಸ್ವಗುಣ ಪರಗುಣಗಳ ಸಮ್ಮಿಶ್ರಿತ ಕಾಂತಿ. – ಡಿ. ವಿ. ಗುಂಡಪ್ಪ

ಪ್ರಪಂಚವೊಂದು ದೊಡ್ಡ ಕನ್ನಡಿಯಂತೆ. ಯಾರು ಹೇಗಿರುತ್ತಾರೋ ಅವರಿಗೆ ಅದು ಹಾಗೇ ಕಾಣುತ್ತದೆ. ನಮ್ಮ ಪ್ರತಿಬಿಂಬವನ್ನೇ ಪ್ರಪಂಚದಲ್ಲಿಯೂ ಕಾಣುವುದು. –ಈಸೋಪ್

ವಿಚಾರದಲ್ಲಿ ಉದಾರತನ, ಕೃತಿಯಲ್ಲಿ ಮಾನವೀಯತೆ ಮತ್ತು ವಿಜಯದಲ್ಲಿ ಸಂಯಮ ಉಳ್ಳವನೇ ದೊಡ್ಡವನು. – ಬಿಸ್ಮಾರ್ಕ್

ಜಗದ ದೇಗುಲದಲ್ಲಿ ಜಗದುದಯ ಕಾರಣನ ಕಾಣದವನೆಂತು ಕಾಣ್ವನು ಶಿವನ ಗುಡಿಯಲಿ? – ಕುವೆಂಪು

ಹೆಂಗಸಿನ ಮನಸ್ಸು ರೇಷ್ಮೆಯ ನೂಲಿನಂತೆ, ನಯ, ನುಣುಪು, ಆದರೆ ಅಷ್ಟೇ ಗಟ್ಟಿ; ಅದರಲ್ಲಿ ಗಂಟು ಬಿದ್ದಿತೆಂದರೆ ಬಿಚ್ಚುವುದಕ್ಕಾಗದು. – ಎ. ಆರ್. ಕೃ.

ಸತ್ಯವಿದ್ದೆಡೆ ಪ್ರೀತಿ, ಪ್ರೀತಿಯಿದ್ದೆಡೆ ಸತ್ಯ. ಸತಿ– ಪತಿಗಳಂತೆ ಇವು ತಳುಕು ಮಳಕೋ – ಮಧುರ ಚೆನ್ನ

ವೈವಿಧ್ಯವನ್ನು ಚೆನ್ನಾಗಿ ಅರಿತಷ್ಟೂ ಏಕತೆಯನ್ನು ಮನಗಾಣುವುದು ನಮಗೆ ಸುಲಭವಾಗುತ್ತದೆ. – ಸ್ಪಿನೋಜ

– (ಸಂಗ್ರಹ) ಶ್ರೀಮತಿ ಗಾಯಿತ್ರಿ ಸುಬ್ರಹ್ಮಣ್ಯಂ, ಬೆಂಗಳೂರು


ವಿದೇಶಗಳಲ್ಲಿ ಭಾರತದ ಕಲೆಗಳನ್ನು
ಜನಪ್ರಿಯಗೊಳಿಸಲು ಶ್ರಮಿಸುವ ಸಾಹಸಿ

ಶ್ರೀ ಅಯ್ಯನದೇವ ಅಂಗಡಿ

ಪಾವೆಂ

ಮಾಂಚೆಸ್ಟರ್ ಗಾರ್ಡಿಯನ್" ಪತ್ರಿಕೆಯ ಈಚಿನ ಒಂದು ಸಂಚಿಕೆಯಲ್ಲಿ ಬ್ರಿಟನ್ನಿನಲ್ಲಿ ಏರ್ಪಟ್ಟ ಸಿತಾರ್‌ಪಟು ರವಿಶಂಕರರ ಸಂಗೀತ ಕಾರ್ಯಕ್ರಮದ ವಿಮರ್ಶೆಯೊಂದು ಬಂತು. ವಿಮರ್ಶಕ ಹ್ಯೂಗೋ ಕೋಲ್‌ರು, ರವಿಶಂಕರರ ಕಾರ್ಯಕ್ರಮ ಮೂರೂವರೆ ಘಂಟೆ ಕಾಲ ನಡೆದರೂ ತಮಗೆ ಅದು ಮುಗಿಯಿತಲ್ಲಾ ಅನಿಸಿತು ಎಂದು ಬರೆದಿದ್ದಾರೆ. ಇದು ದೊಡ್ಡ ಹೊಗಳಿಕೆಯೆ: ಏಕೆಂದರೆ, ಒಂದನೆಯದಾಗಿ ಭಾರತೀಯ ಸಂಗೀತ ಯುರೋಪಿಯನ್ನರಿಗೆ ಪರಕೀಯ; ಎರಡನೆಯದಾಗಿ, ಸ್ವರವಿಸ್ತಾರಪ್ರಧಾನವಾದ ನಮ್ಮ ತಾಸುಗಟ್ಟಳೆ ನಡೆಯುವ ಸಂಗೀತ ಕಚೇರಿಗಳು, ಗಡಿಯಾರ ನೋಡಿ ನಡೆಯುವ ಆ ಜನರ ಸಹನೆಗೊಂದು ಅಗ್ನಿಪರೀಕ್ಷೆ. ಹೀಗಿದ್ದೂ ಈ ಕಚೇರಿ ಅವರಿಗೆ ಇಷ್ಟು ಮೆಚ್ಚಿಕೆಯಾದರೆ ಅದು ಸಂಗೀತಗಾರನ ಸಾಮರ್ಥ್ಯಕ್ಕೊಂದು ಹೆಗ್ಗಳಿಕೆಯಲ್ಲವೆ? ಅದೇ ಲೇಖನದಲ್ಲಿ ಅಮೇರಿಕದಲ್ಲಿ ರವಿಶಂಕರರ ಜನಪ್ರಿಯತೆಯನ್ನು ಪ್ರಸ್ತಾಪಿಸಿ ಶಾಸ್ತ್ರೀಯ ಸಂಗೀತ(ಭಾರತೀಯ ಮಾತ್ರವಲ್ಲ)ದ ಧ್ವನಿಮುದ್ರಿಕೆಗಳಲ್ಲಿ ರವಿಶಂಕರರವೇ ಎಲ್ಲಕ್ಕೂ ಹೆಚ್ಚು ಮಾರುತ್ತವೆ ಎಂದು ಹೇಳಲಾಗಿದೆ.

ರವಿಶಂಕರರು ಇಲ್ಲೇ ಇರಲಿ. ಅಲ್ಲೇ ಇರಲಿ, ಪ್ರಥಮ ಶ್ರೇಣಿಯ ಸಂಗೀತಪಟುಗಳೆಂಬುದು ನಿಜ. ಆದರೂ ಯಾಂತ್ರಿಕ ಸ್ವರಸ್ಥಾಯಿಗಳಿಗೆ ಪಳಗಿಹೋದ ಯುರೋಪಿಯನ್ ಕಿವಿಗಳಿಗೆ ಶುದ್ಧ ಸ್ವರಗಳ ಭಾರತೀಯ ಸಂಗೀತವನ್ನು ಒಗ್ಗಿಸುವ ಕೆಲಸ ರಾತ್ರಿ ಬೆಳಗಾಗುವುದರೊಳಗೆ ಆಗಿದ್ದಲ್ಲ. ಈ ಕಾರ್ಯದಲ್ಲಿ ಕನ್ನಡಿಗರಾದ ಅಯ್ಯನದೇವ ಅಂಗಡಿಯವರ ಪಾತ್ರ ದೀರ್ಘಕಾಲ ನೆನೆಯತಕ್ಕಂಥಾದ್ದೆಂದು ಅನೇಕರಿಗೆ ಗೊತ್ತಿಲ್ಲ. ೧೯೫೬ ರಲ್ಲಿ ರವಿಶಂಕರರನ್ನು ಇಂಗ್ಲಂಡಿನ ಶ್ರೋತೃಗಳಿಗೆ ಪ್ರಥಮತಃ ಲಂಡನ್ನಿನ ಏಶಿಯನ್ ಮ್ಯೂಜಿಕ್ ಸರ್ಕಲ್ಲಿನವರು ಪರಿಚಯ ಮಾಡಿಕೊಟ್ಟರು. ಈ ಸಂಸ್ಥೆಯ ಸ್ಥಾಪಕ ನಿರ್ದೇಶಕರು ಶ್ರೀ ಅಂಗಡಿಯವರೇ. ಅಂದಿನಿಂದ ಯುರೋ





ಪಿನ ಸಂಗೀತಪ್ರಿಯರಿಗೆ ಅನೇಕ ಭಾರತೀಯ ಸಂಗೀತಗಾರರನ್ನೂ ನೃತ್ಯ ವಿಶಾರದರನ್ನೂ ಮಾತ್ರವಲ್ಲ, ಜಪಾನಿ ಕಲಾವಿದರನ್ನೂ ಪರಿಚಯ ಮಾಡಿ ಕೊಡುತ್ತಲೇ ಇದೆ ಈ ಸಂಸ್ಥೆ. ಅದರ ಅಂತಾರಾಷ್ಟ್ರೀಯ ಅಧ್ಯಕ್ಷರಾದ ಯೆಹುದಿ ಮೆನುವಿನ್ ಅವರು ಸ್ವತಃ ಜಗದ್ವಿಖ್ಯಾತ ವಾಯಲಿನ್ ವಾದಕರಾಗಿದ್ದಾರೆ. ಭಾರತೀಯ ಸಂಗೀತ-ನಾಟ್ಯಕಲೆಗಳಿಗೆ ವಿದೇಶಗಳ ಮನಸ್ಸು ಇಂದು ಸ್ವಾಗತ ನೀಡುತ್ತಿದೆ.

ಅಯ್ಯನದೇವ ಅಂಗಡಿಯವರು ಬದಾಮಿ ತಾಲೂಕಿನ (ವಿಜಾಪುರ ಜಿಲ್ಲೆ)ಯ ಜಲ್ಲನೂರಿನಲ್ಲಿ ಹುಟ್ಟಿ ಧಾರವಾಡದಲ್ಲಿ ಮಾಧ್ಯಮಿಕ ಮತ್ತು ಕಾಲೇಜು ಶಿಕ್ಷಣ ಹೊಂದಿ ಮುಂದೆ ಪುಣೆಯ ದಖ್ಖನ್ ಕಾಲೇಜಿನಿಂದ ಪದವೀಧರರಾದರು. ಪ್ರತಿಭಾಶಾಲಿಗಳಾದ ಅವರು ತಮ್ಮ ಪ್ರಿಯ ವಿಷಯವಾಗಿದ್ದ ಗಣಿತದಲ್ಲಿ ಉಚ್ಚ ಪದವಿ ಗಳಿಸುವ ಹಂಬಲದಿಂದ ೧೯೨೪ ರಲ್ಲಿ ಬ್ರಿಟನ್ನಿಗೆ ಹೋದರು, (ಅದೇ ವರ್ಷ ಡಾ| ಡಿ.ಸಿ.ಪಾವಟೆಯವರೂ ಗಣಿತದಲ್ಲಿ ವಿಶೇಷಜ್ಞರಾಗಲು ಇಂಗ್ಲಂಡಿಗೆ ಹೋದದ್ದು).

ಗಣಿತ ಸಾಧನೆಗಾಗಿ ಬ್ರಿಟನ್ನಿಗೆ ಹೋದ ಅಂಗಡಿಯವರಿಗೆ ಸ್ವಲ್ಪ ಸಮಯದಲ್ಲೇ ಇತರ ವಿಷಯಗಳಲ್ಲಿ ಆಸಕ್ತಿ ಹುಟ್ಟಿತು. ಆಗ ಆ ದೇಶದಲ್ಲಿ ಪ್ರಖರವಾಗುತ್ತಿದ್ದ ಸಮಾಜವಾದಿ ಚಳವಳಿ ಅವರನ್ನು ತನ್ನ ಸುಳಿಯಲ್ಲಿ ಸೆಳೆದುಕೊಂಡಿತು. ಭಾರತೀಯ ಸ್ವಾತಂತ್ರ್ಯ ಆಂದೋಲನದ ಬಿರುಗಾಳಿ ಲಂಡನ್ನಿಗೂ ಬೀಸುತ್ತಿತ್ತು. ಅವರು ೧೯೨೬ರಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಲಂಡನ್ ಶಾಖೆಯಲ್ಲಿ ಸೇರಿದರು. ಅದೇ ವರ್ಷ ಅವರು ಬ್ರಿಟಿಶ್ ಲೇಬರ್ ಪಾರ್ಟಿಯನ್ನು ಸೇರಿದರು. ಉಚ್ಚ ಶಿಕ್ಷಣ ಮುಗಿಸಿ ಭಾರತಕ್ಕೆ ಹಿಂದಿರುಗುವ ವಿಚಾರವನ್ನು ಬದಿಗಿರಿಸಿ ಬ್ರಿಟನ್ನಿನಲ್ಲೇ ಭಾರತೀಯರನ್ನು ಸಂಘಟಿಸುವ ಮತ್ತು ಬ್ರಿಟಿಶ್ ಜನಸಾಮಾನ್ಯರಲ್ಲಿ ಭಾರತದ ಆಕಾಂಕ್ಷೆಗಳ ಔಚಿತ್ಯವನ್ನು ಪ್ರಸಾರ ಮಾಡುವ ಕಾರ್ಯದಲ್ಲಿ ಮಗ್ನರಾದರು. ಪತ್ರಿಕಾ ವ್ಯವಸಾಯದಿಂದ ಜೀವಿಕೆಯನ್ನು ಗಳಿಸುತ್ತ ಅವರು ಸಾರ್ವಜನಿಕ ಕಾರ್ಯಗಳಲ್ಲಿ ನಿರತರಾದರು. ಭಾರತದಲ್ಲಿ ಕಾಂಗ್ರೆಸ್ ಸಮಾಜವಾದಿ ಪಕ್ಷ ಸ್ಥಾಪನೆಯಾದ ಮೇಲೆ ೧೯೩೪ ರಲ್ಲಿ ಅಂಗಡಿಯವರು ಲಂಡನ್ನಿನಲ್ಲಿ ಕಾಂಗ್ರೆಸ್ ಸಮಾಜವಾದಿ ಪಕ್ಷದ ಸಂಘಟನಾಕಾರ್ಯದರ್ಶಿಯಾದರು. ಅವರು ಈ ಸ್ಥಾನದಲ್ಲಿರುವಾಗಲೇ ೧೯೩೬ ರಲ್ಲಿ ಪಂಡಿತ ಜವಾಹರಲಾಲ ನೆಹರೂ ಅವರು ಬ್ರಿಟನ್ನಿಗೆ ಬಂದರು. ಅಂಗಡಿಯವರು ನೆಹರೂ ಅವರ ಸಂಗಡ ಬ್ರಿಟನ್ನಿನಲ್ಲಿ ಭಾರತೀಯ ಚಳವಳಿಯ ಯೋಜನೆಯನ್ನು ಚರ್ಚಿಸಿದರು.

ಅಯ್ಯನದೇವ ಅಂಗಡಿಯವರು ೧೯೩೧-೩೨ ರಲ್ಲಿ, ಮತ್ತೆ ೧೯೩೮-೩೯ ರಲ್ಲಿ, ಯುದ್ಧಾನಂತರ ಅನೇಕ ಸಲ ಝೆಕೊಸ್ಲೊವಾಕಿಯದಲ್ಲಿ ಭಾಷಣ ಪ್ರವಾಸಗಳನ್ನು ನಡೆಸಿದರು. ಇಂಗ್ಲಿಷ್, ಫ್ರೆಂಚ್ ಎರಡನ್ನೂ ಚೆನ್ನಾಗಿ ಮಾತಾಡಬಲ್ಲ ಅವರಿಗೆ ಯುರೋಪಿನಲ್ಲಿ ಭಾಷಾಪ್ರತಿಬಂಧವೇನೂ ಇದ್ದಿಲ್ಲ. ಜಪಾನಿನಲ್ಲಿ ಪ್ರವಾಸ ಕೈಕೊಂಡ ನಂತರ ಅವರು ಬರೆದ "ಜಪಾನ್ ಕ್ಯಾಂಫ್" ಪ್ರಮುಖ ಸಾಹಿತಿ ಎಚ್. ಜಿ. ವೆಲ್ಸ್‌ರಿಂದ "ಡೇಲೀ ಟೆಲಿಗ್ರಾಫ್" ಮೊದಲಾದ ಪತ್ರಿಕೆಗಳಿಂದ ಮೆಗ್ಗಳ ಪ್ರಶಂಸೆಯನ್ನು ಪಡೆಯಿತು. ಭಾರತಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಅಯ್ಯನದೇವರು ಯುರೋಪಿನ ಅನೇಕ ದೇಶಗಳಲ್ಲಿ ಏಶಿಯದ ಸಾಂಸ್ಕೃತಿಕ ವಿಷಯಗಳ ಮೇಲೆ ಅಸಂಖ್ಯ ಭಾಷಣಗಳನ್ನು ಮಾಡಿದ್ದಾರೆ. ವಾಸ್ತವಿಕವಾಗಿ ಭಾಷಣಗಳು ಅಂಗಡಿಯವರ ಸ್ವಂತ ವೈಶಿಷ್ಟ್ಯ. ಯುರೋಪಿನಲ್ಲಿ ಕಳೆದ ನಲುವತ್ತು ಚಿಲ್ಲರೆ ವರ್ಷಗಳಲ್ಲಿ ತಾವು ಕೊಟ್ಟ ಭಾಷಣಗಳು ಹತ್ತು ಸಾವಿರಕ್ಕೆ ಹತ್ತಿರವಾಗಿರಬೇಕೆಂದು ಅವರು ಹೇಳುತ್ತಾರೆ.

ಅಯ್ಯನದೇವರು ಮೊದಲಿಂದಲೂ ಸಾಂಸ್ಕೃತಿಕ ವಿಷಯಗಳಲ್ಲಿ— ವಿಶೇಷವಾಗಿ ಗ್ರೀಕ್ ಮತ್ತು ಭಾರತೀಯ ಸಂಸ್ಕೃತಿಗಳ ವಿಷಯದಲ್ಲಿ ಕೌತುಕವುಳ್ಳವರಾಗಿದ್ದರು. ೧೯೪೬ ರಲ್ಲಿ ಭಾರತ ಸ್ವಾತಂತ್ರ್ಯದ ಹೊಸಲಲ್ಲಿ ನಿಂತಿದ್ದಾಗ ಯುರೋಪಿನಲ್ಲಿ ಭಾರತದ ವಿಷಯ ತಿಳಿವಳಿಕೆ

ಹುಟ್ಟಿಸುವುದಕ್ಕೆ ಯಾವ ತರಹದ ಸಾಂಸ್ಕೃತಿಕ ಚಟುವಟಿಕೆಗಳನ್ನು ಕೈಕೊಳ್ಳಬೇಕೆಂಬುದಕ್ಕೆ ಒಂದು ವರದಿ ಸಿದ್ಧಪಡಿಸಲು ಸರದಾರ ಪಟೇಲರು ಅಂಗಡಿಯವರಿಗೆ ಸೂಚಿಸಿದರು. ಭಾರತ ಅನಾಗರಿಕ ದೇಶವೆಂಬ ಬ್ರಿಟಿಶ್ ಪ್ರಚಾರ ಯುರೋಪಿನಲ್ಲಿ ಸಾಕಷ್ಟು ಆಳವಾಗಿ ಪರಿಣಾಮ ಮಾಡಿತ್ತಲ್ಲ. ಮುಂದಿನ ವರ್ಷದ ಪ್ರಾರಂಭದಲ್ಲಿ ಅಯ್ಯನದೇವರು ಇಪ್ಪತ್ತು ಮೂವತ್ತು ತರಬೇತಾದ ನೌಕರರುಳ್ಳ ಒಂದು ಸಾಂಸ್ಕೃತಿಕ ಕೇಂದ್ರವನ್ನು ಯುರೋಪಿನಲ್ಲಿ ಸ್ಥಾಪಿಸಬಹುದೆಂದು ವರದಿ ಮಾಡಿದರು. ಆದರೆ ಭಾರತದ ವಿಭಜನೆ ಮತ್ತು ಅನಂತರದ ಘಟನೆಗಳಿಂದಾಗಿ ವರದಿ ಹಿಂದೆ ಬಿತ್ತು.

ಆದರೂ ಏಶಿಯದ— ಆದರಲ್ಲೂ ಭಾರತದ— ಸಾಂಸ್ಕೃತಿಕ ವಿಚಾರಗಳಲ್ಲಿ ಯುರೋಪಿನಲ್ಲಿ ಹೊಸ ಆಸಕ್ತಿ ಜಾಗೃತವಾಗಿರುವುದನ್ನು ಕಂಡ ಅಂಗಡಿಯವರಿಗೆ ಕಬ್ಬಿಣ ಬಿಸಿಯಿರುವಾಗಲೇ ಬಡಿಯಬೇಕೆಂದು ಅನಿಸಿ ತಮ್ಮ ಸ್ವಂತ ಸಾಹಸದಿಂದ ಕಾರ್ಯೋನ್ಮುಖರಾದರು. ೧೯೫೩ ರಲ್ಲಿ ಅವರು ಲಂಡನ್ನಿನಲ್ಲಿ ಕೊಟ್ಟ ಆರು ಭಾಷಣಗಳು ಅವರ ಏಶಿಯನ್ ಮ್ಯೂಜಿಕ್ ಸರ್ಕಲ್ (ಏಶಿಯ ಸಂಗೀತ ಕೇಂದ್ರ) ಸ್ಥಾಪನೆಗೆ ನಾಂದಿಯಿಟ್ಟವು. ಆ ಭಾಷಣಗಳಲ್ಲಿ ಅವರು ಆರಿಸಿದ ಧ್ವನಿಮುದ್ರಿಕೆಗಳ ಸಹಾಯದಿಂದ ಭಾರತೀಯ ರಾಗ ಪದ್ಧತಿಯನ್ನು ವಿವರಿಸಿದರು. ಅದಕ್ಕೆ ದೊರೆತ ಸ್ವಾಗತದಿಂದ ಹುರುಪುಗೊಂಡು ಅವರು ಪ್ರಮುಖ ಭಾರತೀಯ ಸಂಗೀತಗಾರರ ಕಚೇರಿಗಳನ್ನು ಏರ್ಪಡಿಸುವ ಧೈರ್ಯ ಮಾಡಿದರು.

ಆದರೆ ಭಾರತೀಯ ಸಂಗೀತದ ಪ್ರಚಾರ ಸುಲಿದ ಬಾಳೆಯ ಹಣ್ಣಾಗಿರಲಿಲ್ಲ. ೧೯೫೬ ರಲ್ಲಿ ಆಕ್ಸ್‌ಫರ್ಡ್ ಮತ್ತು ಕೇಂಬ್ರಿಜ್ ವಿಶ್ವವಿದ್ಯಾಲಯಗಳ ಸಂಗೀತ ಸಭೆಗಳಲ್ಲಿ ರವಿಶಂಕರರ ಕಚೇರಿಗಳನ್ನು ಏರ್ಪಡಿಸಿದಾಗ ೧೫೦ ಜನರೂ ಕೇಳಲು ಬರಲಿಲ್ಲ. "ನಷ್ಟ ವಿಪರೀತವಾಗಿತ್ತು. ಒಮ್ಮೆಗೇ ೬,೦೦೦ ಪೌಂಡನ್ನು ಕಳೆದುಕೊಳ್ಳಬೇಕಾಯಿತು" ಎನ್ನುತ್ತಾರೆ ಅಂಗಡಿಯವರು. ಉಸ್ತಾದ ವಿಲಾಯತ ಖಾನರ ಹಾಗು ಜಪಾನಿ ಕೋತೋ ವಾದಕ ಶಿನ್ನಚಿ ಯೂಜಿಯವರ ಕಾರ್ಯಕ್ರಮಗಳಲ್ಲಿಯೂ ಬಲವಾದ ಆರ್ಥಿಕ ಏಟು ತಿನ್ನಬೇಕಾಯಿತು. ಕಾರಣ ಸ್ಪಷ್ಟವೇ ಇತ್ತು. ಈ ತರದ ಸಂಗೀತ ಅವರಿಗೆ ತೀರ ಹೊಸದು. ಅವರ ಕಿವಿಗಳಿಗೆ ಕೆಲವೇ ಸ್ಥಾಯಿಗಳ ಅನುಭವ. ವಿಕೃತ ಸ್ವರಗಳನ್ನೊಳಗೊಂಡ ರಾಗಗಳನ್ನು ಅರ್ಥಮಾಡಿಕೊಳ್ಳುವ ಸೂಕ್ಷ್ಮ ಶ್ರವಣಯತ್ನ ಅವರಿಗಿರಲಿಲ್ಲ. ಭಾರತೀಯ ಸಂಗೀತವನ್ನು ಪ್ರಥಮವಾಗಿ ಕೇಳುವ ಪಾಶ್ಚಾತ್ಯರು ಮೊದಲು ಅದರ ಸ್ವರ ವೈಫಲ್ಯದಿಂದ ದಿಕ್ಕುತಪ್ಪಿದವರಾಗುತ್ತಾರೆ. ಹಿಂದುಸ್ತಾನಿ ಸಂಗೀತಕ್ಕಿಂತಲೂ ಕರ್ನಾಟಕ ಸಂಗೀತ ಅವರಿಗೆ ಹೆಚ್ಚು ಹಿಡಿಸುತ್ತದೆಂದು ಅಯ್ಯನದೇವರ ಅಭಿಪ್ರಾಯ.

ಮೊದಲ ವರ್ಷಗಳ ಕಷ್ಟದ ನಂತರ ಭಾರತೀಯ ಸಂಗೀತಕ್ಕೆ ಮಾತ್ರವಲ್ಲದೆ ನೃತ್ಯಗಳಿಗೂ— ಯೋಗಾಸನಗಳಿಗೆ ಕೂಡ — ವಿದೇಶಗಳಲ್ಲಿ ಒಳ್ಳೇ ಸ್ವಾಗತ ದೊರೆಯಲಾರಂಭಿಸಿದೆ. ಅಯ್ಯನದೇವರು ಹಲವಾರು ಪ್ರಮುಖ ಕಲಾವಿದರ ಕಾರ್ಯಕ್ರಮಗಳನ್ನು ಆ ಮೇಲೆ ಏರ್ಪಡಿಸಿದ್ದಾರೆ. ೧೯೬೪ ರಲ್ಲಿ ಅವರು ೪೦ ವರ್ಷಗಳ ವಿದೇಶ ವಾಸ್ತವ್ಯದ ನಂತರ ಮೊದಲು ಭಾರತಕ್ಕೆ ಬಂದರು. ಅನಂತರ ಮತ್ತೆರಡು ಸಲ ಅವರು ಇಲ್ಲಿಗೆ ಬಂದು ಏಶಿಯನ್ ಮ್ಯೂಜಿಕ್ ಸರ್ಕಲ್ ಬಗ್ಗೆ ಈ ದೇಶದಲ್ಲಿ ಉತ್ಸಾಹ ವುಂಟುಮಾಡಲು ಯತ್ನಿಸಿದರು. ೧೯೬೫ ರಲ್ಲಿ ಅವರು ಲಂಡನ್ನಿನಲ್ಲಿ ಏರ್ಪಡಿಸಿದ ಸರೋದಪಟು ಅಲಿ ಅಕಬರಖಾನರ ಕಾರ್ಯಕ್ರಮ ಪ್ರಚಂಡ ಯಶಸ್ಸು ಪಡೆಯಿತು. ಕನ್ನಡಿಗರಾದ ಯು. ಎಸ್. ಕೃಷ್ಣರಾವ್ ಮತ್ತು ಚಂದ್ರಭಾಗಾದೇವಿಯರ ನೃತ್ಯ ಸಂಚಾರ ೧೯೬೭ ರಲ್ಲಿ ಹಲವು ತಿಂಗಳ ಕಾಲ ಅತ್ಯಂತ ಸಫಲವಾಗಿ ಜರುಗಿತು. ಈ ತಂಡ ಪ್ರದರ್ಶಿಸಿದ ನೃತ್ಯನಾಟಕಗಳಲ್ಲಿ ಹೊಯ್ಸಳ ರಾಣಿ ಶಾಂತಲೆಯನ್ನು ಕುರಿತಾದ್ದು

ಒಂದಾಗಿತ್ತೆಂದು ಇಲ್ಲಿ ಹೇಳಬೇಕು. ಇಂದ್ರಾಣಿ ರಹಮಾನ್, ದಮಯಂತಿ ಜೋಶಿ. ಶಾಂತಾ ರಾವ್ ಮೊದಲಾದವರ ಕಾರ್ಯಕ್ರಮಗಳನ್ನು ಏಶಿಯನ್ ಮ್ಯೂಜಿಕ ಸರ್ಕಲ್ ಏರ್ಪಡಿಸಿತು. ಯುರೋಪಿನಲ್ಲೆಲ್ಲ ಇಂದು ಭಾರತೀಯ ನೃತ್ಯ ಸಂಗೀತಗಳಿಗೆ ಒಳ್ಳೆಯ ಶ್ರೋತೃವೃಂದ ಸಿಗುತ್ತಿದೆಯೆಂಷ್ಟೇ ಅಲ್ಲ, ಅದನ್ನು ಅಭ್ಯಸಿಸಲು ನೂರಾರು ತರುಣ ತರುಣಿಯರು ಮ್ಯೂಜಿಕ್ ಸರ್ಕಲ್ಲು ನಡೆಸುತ್ತಿರುವ ವರ್ಗಗಳಿಗೆ ಬರುತ್ತಿದ್ದಾರೆ.

ಏಶಿಯನ್ ಮ್ಯೂಜಿಕ್ ಸರ್ಕಲಿನ ಕಾರ್ಯವ್ಯಾಪ್ತಿ ಬರೇ ಸಂಗೀತಕ್ಕಷ್ಟೇ ಸೀಮಿತವಾಗಿರದೆ ಭರತ ನಾಟ್ಯಶಾಸ್ತ್ರದಲ್ಲಿ ಹೇಳಿದ ಗೀತ, ನೃತ್ಯ, ನಾಟ್ಯ ಇವೆಲ್ಲ ಶಾಖೆಗಳನ್ನೂ ಒಳಗೊಂಡಿದೆ. ಅದು ಇಡೀ ಏಶಿಯಾದ ಕಲೆಯ ಜನಪ್ರಿಯತೆಗಾಗಿ ಯತ್ನಿಸುತ್ತಿದೆ. ಯುರೋಪಿನ ಪ್ರಮುಖ ವಿಶ್ವವಿದ್ಯಾಲಯಗಳಲ್ಲಿ ಭಾರತೀಯ ನಾಟ್ಯ-ಸಂಗೀತ ಶಾಸ್ತ್ರದ ತಾತ್ವಿಕ ಮತ್ತು ತಾಂತ್ರಿಕ ಹಿನ್ನೆಲೆಯ ಬಗ್ಗೆ ಭಾಷಣಗಳನ್ನೇರ್ಪಡಿಸಲಾಗುತ್ತಿದೆ. ಲಂಡನ್ನಿನ ಭಾರತೀಯ ನೃತ್ಯಸಂಗೀತ ಅಕಾದಮಿಯಲ್ಲಿ ಭಾರತೀಯವಲ್ಲದೆ ಬಾಲಿ (ಇಂಡೊನೇಶಿಯ) ಮತ್ತು ಕ್ಯಾಂಡಿ (ಸಿಂಹಳ) ನೃತ್ಯಗಳನ್ನೂ ಕಲಿಸುತ್ತಿದ್ದಾರೆ. ಏಶಿಯದ ವಿವಿಧ ದೇಶಗಳ ಸಂಗೀತ–ನೃತ್ಯವಿಶಾರದರಿಂದ ಕಾರ್ಯಕ್ರಮಗಳ ಏರ್ಪಾಡಂತೂ ಇದ್ದೇ ಇದೆ.

ಲಂಡನ್ನಿನಲ್ಲಿ ಏಶಿಯನ್ ಮ್ಯೂಜಿಕ್ ಸರ್ಕಲ್ಲಿನ ಅಂತಾರಾಷ್ಟ್ರೀಯ ಮುಖ್ಯ ಕಾರ್ಯಾಲಯವಿದೆ. ಬ್ರಿಟನ್ನಿನಲ್ಲಿಯೂ ಹನ್ನೆರಡಕ್ಕೂ ಹೆಚ್ಚು ಶಾಖೆಗಳನ್ನು ಹೊಂದಿದ ಈ ಸಂಸ್ಥೆಯ ಇತರ ಶಾಖೆಗಳು ಹತ್ತು ದೇಶಗಳಲ್ಲಿ ಪಸರಿಸಿವೆ. ಭಾರತದಲ್ಲಿಯೇ ಈಗ ಅದರ ಹತ್ತು ಹನ್ನೆರಡು ಶಾಖೆಗಳಿವೆ.



"ನಿಜವಾಗಿ ನೀವು ನನ್ನನ್ನು ಪ್ರೀತಿಸುತ್ತಿದ್ದರೆ ಆ ಹೂ ತಂದು ಕೊಡಲು ನೀವು ನಿರಾಕರಿಸುತ್ತಿದ್ದಿಲ್ಲ."

ವಿವಿಧ ದೇಶಗಳಲ್ಲಿ ಮ್ಯೂಜಿಕ್ ಸರ್ಕಲ್ಲಿನ ಸದಸ್ಯರ ಸಂಖ್ಯೆ ೨,೦೦೦ ಮಿಕ್ಕಿದೆ.

ಈಗ ಯೂರೋಪಿನ ಕಲಾಲೋಕದ ಹಿರಿಯ ಹೆಸರುಗಳು ಭಾರತೀಯ ಸಂಗೀತದಿಂದ ಸ್ಫೂರ್ತಿ ಹೊಂದತೊಡಗಿವೆಯೆಂದು ಅಂಗಡಿಯವರು ಹೇಳುತ್ತಾರೆ: "ನೀವು ಬೀಟಲುಗಳ ವಿಷಯ ಕೇಳಿದ್ದೀರಿ. ಪಾಶ್ಚಾತ್ಯ ಸಂಗೀತ ಪ್ರಪಂಚದಲ್ಲೇ ಅಲ್ಲೋಲ ಕಲ್ಲೋಲವೆಬ್ಬಿಸಿದ ಇವರು ಭಾರತೀಯ ಸಂಗೀತದಿಂದ, ವಿಶೇಷವಾಗಿ ರವಿಶಂಕರರ ಸಿತಾರಿನಿಂದ ಪ್ರಭಾವಿತರಾಗಿದ್ದಾರೆಂಬುದೂ ನಿಮಗೆ ಗೊತ್ತು. ಆದರೆ ಬೀಟಲ್ ಜಾರ್ಜ್ ಹ್ಯಾರಿಸನ್ನನಿಗೆ ಭಾರತೀಯ ವಾದ್ಯ ಸಂಗೀತದ ಪರಿಚಯ ಮೊದಲು ನಮ್ಮ ಮನೆಯಲ್ಲಿಯೆ ಆಯಿತು. ಅವನ 'ಸಾರ್ಜೆಂಟ ಪೆಪ್ಪರ್' ಮತ್ತು 'ರಿವಾಲ್ವರ್' ಧ್ವನಿಮುದ್ರಿಕೆಗಳಿಗೆ ನಾವೇ ಸಂಗೀತಗಾರರನ್ನು ಒದಗಿಸಿದೆವು. ಆಮೇಲೆ ತಾನೆ ಅವನಿಗೆ ರವಿಶಂಕರರ ಪರಿಚಯವಾದದ್ದು." ಬ್ರಿಟನ್ನಿನ ಪ್ರಮುಖ ಸಂಗೀತ ಕೃತಿಗಾರರಾದ ಎಡ್ಮಂಡ್ ರುಬ್ರಾ ಆಕ್ಸ್‌ಫರ್ಡಿನ ಏಶಿಯನ್ ಮ್ಯೂಜಿಕ್ ಸರ್ಕಲ್ಲಿನ ಅಧ್ಯಕ್ಷರೂ ಆಗಿದ್ದಾರೆ. ಅಂಗಡಿಯವರ ಮನೆಯಲ್ಲಿ ಅವರು ಅಲಿ ಅಕಬರಖಾನರ ಖಾಸಗಿ ಸಂಗೀತ ಕಚೇರಿಯಲ್ಲಿ ಹಾಜರಿದ್ದರು. ಅವರು ಆಗ ರಚಿಸುತ್ತಿದ್ದ ಸ್ಟ್ರಿಂಗ್ ಕ್ವಾರ್ಟೆಟ್‌ನ ಮೇಲೆ ಈ ಕಚೇರಿಯ ಪ್ರಭಾವ ಎಷ್ಟಾಯಿತೆಂದರೆ ಅದನ್ನು ಖಾನರಿಗೇ ಅವರು ಅರ್ಪಣ ಮಾಡಿದರು. "ಭಾರತೀಯ ಸಂಗೀತದ ಆತ್ಮ ಇದರಲ್ಲಿ ಪ್ರವೇಶಿಸಿದಂತೆ ನನಗನಿಸುತ್ತದೆ" ಎಂದವರು ಹೇಳಿದ್ದಾರೆ.

ಬ್ರಿಟನ್ನಿನಲ್ಲಿಯೆ ನೆಲೆಸಲು ನಿಶ್ಚಯಿಸಿದ ಅಂಗಡಿಯವರು ೧೯೪೧ ರಲ್ಲಿ ಚಿತ್ರಕಲಾವಿದೆಯಾದ ಮೇರಿ ಪೆಟ್ರೀಶಿಯ ಎಂಬ ತರುಣಿಯನ್ನು ವಿವಾಹವಾದರು. ಅವರ ಮಕ್ಕಳಿಗೆ ಅವರು ಮಿಶ್ರ ನಾಮಕರಣಮಾಡಿದ್ದಾರೆ. ಡೇನಿಯಲ್ ಶಂಕರ, ಡೊಮಿನಿಕ್ ಅಶೋಕ, ಡೇವಿಯನ್ ಕಬೀರ ಮತ್ತು ಚಂದ್ರಿಕಾ. ಚಂದ್ರಿಕಾ ಇನ್ನೂ ಶಾಲೆಯಲ್ಲಿದ್ದು ಭರತನಾಟ್ಯವನ್ನು ಅಭ್ಯಸಿಸುತ್ತಿದ್ದಾಳೆ. ಶಂಕರ ಕೇಂಬ್ರಿಜ್ಜಿನಲ್ಲಿ ಪಿಎಚ್.ಡಿ. ಮಾಡುತ್ತಿದ್ದಾನೆ. ಅಶೋಕ ಫಿಲ್ಮ್-ಟೆಲಿವಿಜನ್ ತಾಂತ್ರಿಕ ತರಬೇತಿ ಹೊಂದುತ್ತಿದ್ದರೆ ಕಬೀರ ಕೇಂಬ್ರಿಜ್ಜಿನಲ್ಲಿ ಇಂಗ್ಲೀಷ್ ಭಾಷಾ ವಿಶೇಷಜ್ಞನಾಗುತ್ತಿದ್ದಾನಲ್ಲದೆ ಸಂಗೀತಗಾರನೂ ಹೌದು.

ಅಂಗಡಿಯವರು ಬಸವಣ್ಣನವರ ತತ್ವಪ್ರಚಾರಕ್ಕಾಗಿ ಅಂತಾರಾಷ್ಟ್ರೀಯ ಬಸವ ಸಂಘವನ್ನು ಸ್ಥಾಪಿಸಿದ್ದಾರೆ. ಅದರ ಕೇಂದ್ರ ಕಚೇರಿ ಮುಂಬಯಿಯಲ್ಲಿದೆ. ಅವರು ಬಸವಣ್ಣನನ್ನು ಕುರಿತು ಒಂದು ಗ್ರಂಥ ರಚನೆ ಮಾಡುತ್ತಿದ್ದಾರೆ. ಆತ್ಮ ಚರಿತ್ರೆಯನ್ನೂ ಬರೆಯುತ್ತಿದ್ದಾರೆ.

ಕಳೆದ ಕೆಲ ತಿಂಗಳುಗಳಿಂದ ಅಯ್ಯನದೇವರು ಭಾರತದಲ್ಲಿದ್ದಾರೆ. ಇಲ್ಲಿಯ ತರುಣ ತರುಣಿಯರಲ್ಲಿ ಕಲೆಗಳ ವಿಷಯ ಆದರವನ್ನು ಹುಟ್ಟಿಸಬೇಕೆಂದು ಅವರ ಆಶೆ. ಆದರೆ ಎಲ್ಲ ಸಂಗತಿಗಳೂ—ಕಲೆಕೂಡ—ಇಲ್ಲಿ ರಾಜಕಾರಣದ ದಾಳವಾಗುತ್ತಿರುವುದು ಅವರಿಗೆ ನೋವನ್ನುಂಟು ಮಾಡಿದೆ. ಭಾರತೀಯ ಕಲೆಗಳ ಪ್ರಸಾರದಲ್ಲಿ ಸಾರ್ವಜನಿಕ ಸಂಭ್ರಮ ಮೂಡಬೇಕೆಂಬುದು ಅವರ ಆಶಯ.

ಯುರೋಪಿಯನ್ನರಲ್ಲಿ ಅನೇಕ ಜನ ವ್ಯವಸಾಯ ದೃಷ್ಟಿಯಿಂದಲೂ ನಮ್ಮ ನೃತ್ಯ ಸಂಗೀತಗಳನ್ನು ಅಭ್ಯಸಿಸತೊಡಗಿದ್ದಾರೆ. ಒಂದು ದಿನ ಅವರು ನಮ್ಮ ಆಟದಲ್ಲಿ ನಮ್ಮನ್ನೇ ಮೀರಿಸಬಹುದು. ಭಾರತೀಯ ಸಂಗೀತ ಪಶ್ಚಿಮದಲ್ಲಿ ಯಶಸ್ವಿಯಾಗಬೇಕಾದರೆ ಕೆಲ ಚಿಕ್ಕಪುಟ್ಟ ಬದಲಾವಣೆಗಳನ್ನು ಮಾಡಿಕೊಳ್ಳಬೇಕಾದೀತು. ಮೊದಲನೆಯದಾಗಿ ಹಾಡುವವರು ಮುಖವಿಕಾರ ಅಂಗವಿಕಾರಗಳನ್ನು ಕೈಬಿಡಬೇಕು. ಅವು ಶುದ್ಧ ಕಾಮಿಕ್ ಆಗಿ ಕಾಣಿಸುತ್ತವೆ. ಹಾಗೆಯೇ ಅರ್ಥವಿಲ್ಲದ ಆಲಾಪದಲ್ಲಿ ಅತಿರೇಕ ಸಮಯ ಕಳೆಯಬಾರದು. ಅದು ಬೇಸರ ತರುತ್ತದೆ ಎಂದು ಅಂಗಡಿಯವರು ಹೇಳುತ್ತಾರೆ. *

* * * * * * * * * * * * * * * * * *



[illegible]

ರಾಜಪುತ್ರಿಯನ್ನು ದಾಸಿಯಾಗಿ ಯಾವ ರಾಜ ತಾನೆ ಕಳಿಸಿಯಾನು. ವೃಷಪರ್ವ ಬಂದು ಚಿಂತಾಕ್ರಾಂತನಾಗಿ ಕುಳಿತುಬಿಟ್ಟನು. ಆಗ ಶರ್ಮಿಷ್ಠೆಯೇ ಬಂದು, "ತಂದೆ, ಇಡೀ ರಾಜ್ಯಕ್ಕೆ ಕುತ್ತು ಬಂದಿರುವಾಗ ನನ್ನೊಬ್ಬಳ ಸುಖ ಮುಖ್ಯವಲ್ಲ. ನನ್ನನ್ನು ದಾಸಿಯಾಗಿ ಕಳಿಸಿಬಿಡು. ನನ್ನ ತಪ್ಪಿಗಾಗಿ ದೈತ್ಯಕುಲವೇ ನಾಶವಾಗ ಬಾರದು," ಎಂದುಬಿಟ್ಟಳು.

ಸರಿ. ದೇವಯಾನಿಯ ಮದುವೆ ಆಯಿತು. ಶರ್ಮಿಷ್ಠೆ ದಾಸಿಯಾಗಿ ಯಯಾತಿಯ ಮನೆ ಸೇರಿದಳು. ತೋಟದಲ್ಲಿ ದೂರದಲ್ಲೊಂದು ಗುಡಿಸಲಲ್ಲಿ ಇರತೊಡಗಿದಳು. ತಾನು ಗೆದ್ದೆನೆಂದು ದೇವಯಾನಿ ಉಬ್ಬಿದಳು. ವರ್ಷಗಳೇ ಕಳೆದವು. ಒಂದು ದಿನ ದೇವಯಾನಿ ಉದ್ಯಾನದಲ್ಲಿ ಯಯಾತಿ ಒಬ್ಬ ಹುಡುಗನೊಡನೆ ಲಲ್ಲೆಯಾಡುವುದನ್ನು ನೋಡಿದಳು. ವಿಚಾರಿಸಿದಾಗ ಅದು ಶರ್ಮಿಷ್ಠೆಯ ಮಗನೆಂದು ತಿಳಿಯಿತು. ಯಯಾತಿ ಅವಳನ್ನು ಗುಪ್ತವಾಗಿ ವರಿಸಿ ಈಗಾಗಲೆ ಮೂರು ಮಕ್ಕಳಾಗಿವೆಯೆಂದು ಕೇಳಿ ದೇವಯಾನಿಯ ಹೊಟ್ಟೆಯಲ್ಲಿ ಕಿಚ್ಚೆದ್ದಿತು. ಅವಳು ತಂದೆಯ ಬಳಿಗೆ ಓಡಿದಳು: "ನಿನ್ನ ಅಳಿಯನ ಲಂಪಟತನ ನೋಡು," ಎಂದು ಜರೆದಳು. ಶುಕ್ರಾಚಾರ್ಯ ಸಿಡಿದೆದ್ದು ಬಂದು, "ಯೌವನ ಮದದಿಂದ ನೀನು ಹೀಗೆ ಅಕಾರ್ಯ ಮಾಡಿದ್ದೀಯೇ. ನಿನಗೆ ಮುಪ್ಪು ಬರಲಿ!" ಎಂದು ಯಯಾತಿಯನ್ನು ಶಪಿಸಿದನು.

ನೋಡಿದಳು ದೇವಯಾನಿ. ತನ್ನ ಗಂಡ ತನ್ನ ತಲೆಯನ್ನೇ ಹೊರಲಾರದಂಥ ಜರಠನಾಗಿಬಿಟ್ಟಿದ್ದಾನೆ. ಅವಳ ಎದೆ ಧಸ್ಸೆಂದಿತು. ತಂದೆಗೆ ಮತ್ತೆ ಬೇಡಿಕೊಂಡಳು: "ನನ್ನ ಪತಿಯ ಯೌವನವನ್ನು ತಿರುಗಿಕೊಡಿಸಪ್ಪಾ." ಇಷ್ಟರಲ್ಲಿ ಶುಕ್ರಾಚಾರ್ಯನಿಗೆ ಮಗಳ ಅತಿರೇಕಗಳು ಸಾಕಾಗಿ ಹೋಗಿದ್ದವು. "ನೋಡು ಮಗಳೇ, ಶಾಪ ಕೊಟ್ಟಿದ್ದನ್ನು ಹಿಂತೆಗೆದುಕೊಳ್ಳಲಾದೀತೇ? ಬೇಕಾದರೆ ಹೀಗೆ ಮಾಡಲಿ ನಿನ್ನ ಗಂಡ. ಮಕ್ಕಳಲ್ಲಿ ಯಾರಾದರೂ ಅವನ ಮುಪ್ಪನ್ನು ತೆಗೆದುಕೊಳ್ಳುವುದಾದರೆ, ಅವನ ಯೌವನವನ್ನು ಪಡೆದು ಇಷ್ಟವಿರುವಷ್ಟು ಕಾಲ ಭೋಗಿಸಿ ಆಮೇಲೆ ಮುಪ್ಪನ್ನು ಹಿಂದೆ ಪಡೆಯಲಿ. ಹೀಗೆ ಮುಪ್ಪನ್ನು ಯಾವ ಮಗ ತೆಗೆದುಕೊಳ್ಳಲು ಒಪ್ಪುವನೋ ಅವನಿಗೆ ರಾಜ್ಯ ಕೊಡಲಿ."

ಯಯಾತಿಗೆ ಇನ್ನೂ ಭೋಗಾಭಿಲಾಷೆ ಇತ್ತು. ಅವನು ಮೊದಲು ದೇವಯಾನಿಯ ಮಕ್ಕಳಿಬ್ಬರನ್ನೂ ಕರೆದು ಕೇಳಿದನು. ಅವರು ಮುಪ್ಪನ್ನು ಸ್ವೀಕರಿಸಲು ಒಪ್ಪಲಿಲ್ಲ. ಶರ್ಮಿಷ್ಠೆಯ ಇಬ್ಬರು ಮಕ್ಕಳೂ ಒಪ್ಪಲಿಲ್ಲ. ಆದರೆ ಅವಳ ಮಗ ಪೂರು ಮಾತ್ರ ತಂದೆಗಾಗಿ ಮುಪ್ಪನ್ನು ಅಂಗೀಕರಿಸಿದ. ಶುಕ್ರಾಚಾರ್ಯನ ಮಾತಿನಂತೆ ಪೂರುವಿಗೇ ರಾಜ್ಯವಾಯಿತು. ಉಳಿದ ಮಕ್ಕಳಾದ ಯದು, ತುರ್ವಸು, ಅನು, ದ್ರುಹ್ಯು ಇವರನ್ನು ಯಯಾತಿ ದೇಶದಿಂದ ಹೊರಡಿಸಿದನು.

ಈ ಪೂರುವಿನ ಸಂತಾನದವರೇ ಚಕ್ರವರ್ತಿಗಳಾಗಿ ಮುಂದೆ ಕುರುವಂಶವಾಯಿತು. ಪಾಂಡವ ಕೌರವರು ಅದೇ ವಂಶದವರು.

ದೀರ್ಘಕಾಲ ಯೌವನವನ್ನು ಭೋಗಿಸಿ ಪುರುವಿಗೆ ಅವನ ರಾಜ್ಯ ಮತ್ತು ಯೌವನವನ್ನು ತಿರುಗಿಕೊಟ್ಟು ಯಯಾತಿ ವೈರಾಗ್ಯದಿಂದ ವಾನಪ್ರಸ್ಥಕ್ಕೆ ಹೋದನು. ದಾಸಿಯಾಗಿ ಬಂದ ಶರ್ಮಿಷ್ಠೆ ರಾಜಮಾತೆಯಾದಳು. ✡



ಗೆಲವು ನಿತ್ಯವಲ್ಲ; ಸೋಲು ಕೂಡ.

•

ಸತ್ಯವನ್ನು ಬಹಳ ಎಳೆಯಬೇಡ, ಅದು ತಿರುಗಿ ನಿನ್ನ ಮೇಲೆಯೆ ಚಿಮ್ಮಬಹುದು.

ಅವರು ಕಟ್ಟಿದ ಗ್ರಂಥಮಾಲೆ
ಆಧುನಿಕ ಕನ್ನಡದ ಇತಿಹಾಸದಲ್ಲೊಂದು ಮೈಲುಗಲ್ಲು.

ಕನಸುಗಾರ ಜಿ. ಬಿ.


ಪಾವೆಂ

ಕನ್ನಡ ಸಾಹಿತ್ಯಲೋಕದಲ್ಲಿ ಮನೋಹರ ಗ್ರಂಥಮಾಲೆ ಮತ್ತು ಅದರ ಜಿ. ಬಿ. ಜೋಶಿಯವರನ್ನು ಅರಿಯದವರು ಇರಲಿಕ್ಕಿಲ್ಲ. ನಲುವತ್ತು ವರ್ಷಗಳ ಅವಧಿಯಲ್ಲಿ ಮನೋಹರ ಗ್ರಂಥಮಾಲೆ ಸುಮಾರು ಇನ್ನೂರು ಪುಸ್ತಕಗಳನ್ನು ಪ್ರಕಟಿಸಿದೆ. ಈ ಅವಧಿಯಲ್ಲಿ ಉದ್ದಾಮ ಸಾಹಿತಿಗಳು ಎನಿಸಿದವರಲ್ಲಿ ಬಹು ಜನರು ತಮ್ಮ ಪ್ರಥಮ ಪ್ರಾಮುಖ್ಯ ಗ್ರಂಥಗಳನ್ನು ಈ ಮಾಲೆಯ ಮೂಲಕ ಪ್ರಕಟಿಸಿದ್ದಾರೆ. 'ಮನೋಹರ'ದ ಮೂಲಕ ಮೊದಲು ಸಾಹಿತ್ಯದಲ್ಲಿ ಪ್ರವೇಶಿಸಿದವರು ಹಲವರು ಇಂದು ಕಾವ್ಯ, ನಾಟಕ, ಕಾದಂಬರಿ, ವಿಮರ್ಶಾಪ್ರಪಂಚದಲ್ಲಿ ಪ್ರಮಾಣಪುರುಷರೆನಿಸಿದ್ದಾರೆ.

ಶಿವರಾಮ ಕಾರಂತರ 'ಮರಳಿ ಮಣ್ಣಿಗೆ' ಮೊದಲು ಬೆಳಕು ಕಂಡದ್ದು 'ಮನೋಹರ'ದಲ್ಲಿ. ಆನಂದಕಂದರ ಪ್ರಥಮ ಕಾದಂಬರಿ 'ಸುದರ್ಶನ', ಅ.ನ.ಕೃ. ಪ್ರಥಮ ಪ್ರಸಿದ್ಧ ಕಾದಂಬರಿ 'ಸಂಧ್ಯಾರಾಗ', ಕನ್ನಡದಲ್ಲೇ ಆಗ ಅಪೂರ್ವ ಎನಿಸಿದ ಜಿ. ಪಿ. ರಾಜರತ್ನಂ ಅವರ ಆತ್ಮಕಥೆ 'ಹತ್ತು ವರ್ಷ', ಕೆ. ವಿ. ಅಯ್ಯರರ ಜನಪ್ರಿಯ ಕಾದಂಬರಿ 'ಶಾಂತಲಾ', ರಾವ್ ಬಹಾದ್ದೂರರ ಬಹು ಪ್ರಶಂಸಿತ 'ಗ್ರಾಮಾಯಣ' ಅನಂತಮೂರ್ತಿಯವರ ಬಹು ಚರ್ಚಿತ 'ಸಂಸ್ಕಾರ' ಇವನ್ನೆಲ್ಲ ಮನೋಹರ ಗ್ರಂಥಮಾಲೆಯೇ ಪ್ರಥಮತಃ ಪ್ರಕಟಿಸಿದ್ದು. ಇಂದು ಕಾದಂಬರೀಪ್ರಪಂಚದಲ್ಲಿ ಹೆಸರಾಂತ ಎಂ. ಕೆ. ಇಂದಿರಾ, ಯಶವಂತ ಚಿತ್ತಾಲ, ಶಾಂತಿನಾಥ ದೇಸಾಯಿ, ವಿ. ಎಂ. ಇನಾಂದಾರ್, ನಾಟಕಕಾರ ಗಿರೀಶ ಕಾರ್ನಾಡ್, ವಿಮರ್ಶಕ ಕೀರ್ತಿನಾಥ ಕುರ್ತಕೋಟಿ ಮತ್ತು ಇನ್ನೂ ಹಲವಾರು ಜನ 'ಮನೋಹರ'ದೊಡನೆಯೆ ಸಾಹಿತ್ಯದಲ್ಲಿ ತಮ್ಮ ಪಯಣವನ್ನು ಆರಂಭಿಸಿದರು. ಗೋಕಾಕರ ಏಳು ಭಾಗಗಳ 'ಇಜ್ಜೋಡು', ಮಿರ್ಜಿ ಅಣ್ಣಾರಾಯರ ಬೃಹತ್ 'ರಾಷ್ಟ್ರಪುರುಷ' ಕಾದಂಬರಿಗಳನ್ನು ಅದು ಪ್ರಸಿದ್ಧಿಸಿತು. ಈಗ ಸಿನೆಮ ಆಗಿರುವ ಆಲನಹಳ್ಳಿಯವರ 'ಕಾಡು' ಕಿರು ಕಾದಂಬರಿಯನ್ನೂ ಜಿ.ಬಿ.ಯವರೆ ಬೆಳಕಿಗೆ ತಂದವರು.

ಇದೀಗ ೭೦ರಲ್ಲಿ ಕಾಲಿರಿಸಿದ (ಜನನ ೧೯೦೪ ಜನವರಿ) ಶ್ರೀಮಾನ್ ಗೋವಿಂದ ಭೀಮಾಚಾರ್ಯ ಜೋಶಿಯವರು ಸ್ವತಃ ನಾಟಕಕಾರ, ಕಾದಂಬರಿಕಾರ, ಮತ್ತು ಕನಸುಗಾರರೂ ಹೌದು. ಸಾಹಿತ್ಯದಲ್ಲಿ ಮತ್ತು ತನ್ಮೂಲಕ ಪ್ರಕಾಶನ ವ್ಯವಸಾಯದಲ್ಲಿ ಅವರು ಪ್ರವೇಶಿಸಿದ್ದು ಆಕಸ್ಮಿಕವೇ. ತಮ್ಮ ತಂದೆ ಭೀಮಾಚಾರ್ಯರಂತೆ ಅವರು ಸುಶ್ರಾವ್ಯವಾಗಿ ಹಾಡುತ್ತ (ಅವರು ಪುರಾಣ ಹೇಳುತ್ತಿದ್ದರು) ಪುರಾಣಿಕರಾಗಬಹುದಿತ್ತು. ಚಿಕ್ಕಪ್ಪನ ಜಾಗೆ ರೇಲ್ವೆಯಲ್ಲಿ

ಸೇರಿ ಸ್ಟೇಶನ್ ಮಾಸ್ತರಾಗಿ ವಿಶ್ರಾಂತಿ ಹೊಂದಬಹುದಾಗಿತ್ತು. (ಅವರನ್ನು ರೇಲ್ವೆ ಕಾರಕೂನ ಸ್ಥಳಕ್ಕೆ ಆರಿಸಿಯೂ ಆಗಿತ್ತು; ಆದರೆ ಅವರು ಸೇರಲಿಲ್ಲ.) ಕಟ್ಟುಮಸ್ತಾದ ಶರೀರ ಸಂಪತ್ತನ್ನುಳ್ಳ ಅವರು ಪೋಲೀಸ್ ಕೆಲಸಕ್ಕೂ ಅರ್ಜಿ ಹಾಕಿದ್ದುಂಟು (ಯಾಕೋ ಅವರನ್ನು ಆರಿಸಲಿಲ್ಲ). ಎಳನೇ ವಯಸ್ಸಿಗೆ ತಂದೆಯನ್ನು ಕಳೆದುಕೊಂಡು, ಕಕ್ಕನ ನೆರಳಲ್ಲಿ ಬೆಳೆದು, ಮನೆತನಕ್ಕೆ ಹೇಳಿಕೊಳ್ಳುವ ಆಸ್ತಿಯಿಲ್ಲದ್ದರಿಂದ ಐವರು ಅಣ್ಣತಮ್ಮಂದಿರಲ್ಲೊಬ್ಬರಾದ ಅವರು ವಾರಾನ್ನದ ನೆರವಿನಿಂದ ಕಲಿತು ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಇಂಟರ್‌ವರೆಗೆ ತಲುಪಲಿಕ್ಕೆ ೨೫ ವಯಸ್ಸಾಗಿತ್ತು. "ಈ ಅಧ್ಯಾಪನದ ಮಧ್ಯದಲ್ಲೇ ಆದರ್ಶವಾದದ ಕೀಲುಗುದುರೆ ಸವಾರಿ ಬೇರೆ ಆಯಿತು," ಎನ್ನುತ್ತಾರವರು. ಇಂಗ್ಲಿಷ್ ನಾಲ್ಕನೇ ಇಯತ್ತೆಯಲ್ಲಿ ಓದುತ್ತಿದ್ದಾಗ ಗಾಂಧೀಜಿಯ ಶಾಲಾ ಬಹಿಷ್ಕಾರದ ಚಳವಳಿ ಸೇರಿ, ಶಾಲೆ ಬಿಟ್ಟು, ಅದೇ ಪ್ರಭಾವದಲ್ಲೇ ಪಂಢರಪುರಕ್ಕೆ ಹೋಗಿ ಎರಡು ವರ್ಷ ಮಾಗ್ಗದ ಕೆಲಸ



ಕಲಿತರು, ಆದರೆ ಅವು ನುಲಿಯುವ ಕೈಗಳಾಗಿರಲಿಲ್ಲ. "ಅಣ್ಣ ಗುರುರಾಜಾಚಾರ್ಯರು ಈ ಕಷ್ಟದಲ್ಲೇ ಹಟ ಸಾಧಿಸಿ ಕಲಿತು ಬಿ. ಎ. ಆಗಿ, ಓಡಿಹೋಗಿ ಸಂಸ್ಕೃತದ ಶಾಸ್ತ್ರೀಯಾಭ್ಯಾಸವನ್ನೂ ಮಾಡಿ ಹೈಸ್ಕೂಲಲ್ಲಿ ಹೆಡ್ಮಾಸ್ತರರೂ ಆದರು. ಆದರೆ ನಾನು ಅರ್ಧವಿದ್ಯೆಯನ್ನೇ ಪಡೆದು ಬಂದಿದ್ದೆ. ಕರ್ನಾಟಕ ಕಾಲೇಜು ಹಾಸ್ಟೆಲಿನಲ್ಲಿ ಬಡಿಸುವ ಮಾಣಿಯಾಗಿ ನೇಮಿಸಿ (ನಾಮಮಾತ್ರ ಕೆಲಸಕ್ಕೆ) ಊಟದ ಸೌಕರ್ಯ ಮಾಡಿ ಕೊಟ್ಟು ರಂಗನಾಥ ಮುಗಳಿಯವರು ಸಹಾಯ ಮಾಡಿದರು. ಆದರೆ ನಾನು ಇಂಟರ್ ದಾಟಲು ಸಮರ್ಥನಾಗಲಿಲ್ಲ. ಅಲ್ಲಿಗೆ ಮುಗಿಸಿ ನೌಕರಿಯ ಬಗ್ಗೆ ಒಂದೆರಡು ಅರೆ ಮನಸಿನ ಪ್ರಯತ್ನಗಳ ನಂತರ ನಾನು ಆಗ ತಾನೇ ಗೆಳೆಯರ ಗುಂಪು ಆಲೂರ ವೆಂಕಟರಾಯರಿಂದ ವಹಿಸಿಕೊಂಡಿದ್ದ 'ಜಯ ಕರ್ನಾಟಕ' ಸೇರಿದೆ. ಅದಕ್ಕೂ ಮುಗಳಿಯವರೇ ಕಾರಣ."

೧೯೩೩ರಲ್ಲಿ ಗೆಳೆಯರ ಗುಂಪು ಒಡೆದ ಮೇಲೆ 'ಜಯ ಕರ್ನಾಟಕ'ದಲ್ಲಿದ್ದವರಿಗೆ ದಿಕ್ಕು ತಪ್ಪಿದಂತಾಯಿತು. ಶಂ. ಬಾ. ಜೋಶಿ, ರಾಯದುರ್ಗ, ಬೇಟಗೇರಿ ಕೃಷ್ಣಶರ್ಮ, ಗೋವಿಂದರಾವ್ ಚುಳಕಿ ಮೊದಲಾದವರು ಸೇರಿ ಒಂದು ಗ್ರಂಥಮಾಲೆಯನ್ನೇ ಪ್ರಾರಂಭಿಸುವ ವಿಚಾರ ಮಾಡಿ ಜಿ. ಬಿ. ಜೋಶಿಯವರನ್ನೂ ಅದರಲ್ಲಿ ಸೇರಲು ಆಮಂತ್ರಿಸಿದರು. ಬೆಟಗೇರಿಯವರು ಆಗಲೇ ಬರೆದು ಮುಗಿಸಿದ್ದ 'ಸುದರ್ಶನ' ಕಾದಂಬರಿ ಕೈಲಿದ್ದುದೊಂದೇ ಈ ಸಾಹಸಕ್ಕೆ ಅವರ ಧೈರ್ಯವಾಗಿತ್ತು. ಕಾಯಂ ಚಂದಾದಾರರನ್ನು ಸೇರಿಸಿಕೊಂಡು ವರ್ಷಕ್ಕೆ ಆರು ಪುಸ್ತಕಗಳನ್ನು ಪ್ರಕಟಿಸುವುದು. ಬರುವ ಮುಂಗಡ ಚಂದಾ ಬಂಡವಾಳವಾಯಿತು. ಯೋಜನೆಯ ಅಧ್ವರ್ಯುಗಳಲ್ಲೊಬ್ಬರಾದ ರಾಯದುರ್ಗರ ಹತ್ತಿರ ಪ್ರೆಸ್ ಇತ್ತು. ಮುಂಬಯಿಯ ಕಾಗದ ವ್ಯಾಪಾರಿಯೊಬ್ಬರು ಮೂರು ತಿಂಗಳ ದರ್ಶನಿ ಹುಂಡಿಯ ಮೇಲೆ ಕಾಗದ ಒದಗಿಸಲೊಪ್ಪಿದರು. ಹೀಗೆ ೧೯೩೩ ಅಗಸ್ಟ ೧೫ ರಂದು ಬೇಟಗೇರಿ ಕೃಷ್ಣಶರ್ಮರ ಅದೇ 'ಸುದರ್ಶನ'ದೊಡನೆ ಗ್ರಂಥಮಾಲೆಯ ಹಡಗ ಅರಿಯದ

ಸಾಗರದಲ್ಲಿಳಿಯಿತು. 'ಮನೋಹರ ಗ್ರಂಥ ಮಾಲೆ' ಎನ್ನುವ ಹೆಸರನ್ನೂ ಬೆಟಗೇರಿಯವರೇ ಸೂಚಿಸಿದ್ದು.

"ಸರಿ ಚುಳಕಿಯವರು ಆಫೀಸು ನೋಡಿಕೊಂಡರು. ನಾವು ಮೂವರು ಪುಸ್ತಕದ ಗಂಟು ಹೊತ್ತು ಮೂರು ದಿಕ್ಕುಗಳಿಗೆ ಹೊರಟೆವು. ನಾವು ಮುದ್ರಿಸಿದ್ದು ಸಾವಿರ ಪ್ರತಿ. ಅಷ್ಟು ಚಂದಾದಾರರನ್ನು ಕಲೆ ಹಾಕುವುದು ನಮ್ಮಿಂದಾಗಲಿಲ್ಲ. ತೀರ ನಿರಾಶೆಯೂ ಆಗಲಿಲ್ಲ. ಆದರೆ ವರ್ಷದ ಅಂತ್ಯದಲ್ಲಿ ಎಲ್ಲಾ ಲೆಕ್ಕ ಹಾಕಿದಾಗ ಕಾಗದ ಮುದ್ರಣ ವೆಚ್ಚ ಕೊಟ್ಟು ನಮ್ಮ ಪ್ರಯಾಣದ ಖರ್ಚು ಕಳೆದು ತಲಾ ತಿಂಗಳಾ ಆರು ರೂಪಾಯಿಗಳ ಘನ ಸಂಬಳ ನಮಗೆ ಪ್ರತಿಯೊಬ್ಬರಿಗೂ ಬಂದಿತ್ತು. ನಾವೆಲ್ಲರೂ ಆಗಲೆ ಲಗ್ನವಾಗಿ ಸಂಸಾರವಂದಿಗರಾಗಿದ್ದವು. ಇದರಲ್ಲಿ ನಾಲ್ಕು ಸಂಸಾರಗಳ ಹೊಟ್ಟೆ ನತ್ತಿ ಸಾಗುವುದು ಅಸಾಧ್ಯವೆಂದು ಖಚಿತವಾಗಿ ಎರಡನೇ ವರ್ಷದ ಅಂತ್ಯಕ್ಕೆ ನಾವು ಬೇರೆಯಾದೆವು. ಇದ್ದ ಪುಸ್ತಕದ ಸ್ಟಾಕು, ಕಪಾಟು, ಖುರ್ಚಿ ಎಲ್ಲವನ್ನೂ ಹಂಚಿಕೊಂಡೆವು. ಮಾಲೆಯನ್ನು ಮುನ್ನಡೆಸುವ ಜವಾಬ್ದಾರಿ ನಾನು ವಹಿಸಿಕೊಂಡೆ. ಬೇಂದ್ರೆ, ಮುಗಳಿ, ಗೋಕಾಕರನ್ನು ಸಾಹಿತ್ಯ ವಿಷಯ ಸಲಹೆಗಾರರಾಗಿರಲು ಒಪ್ಪಿಸಿ ಗ್ರಂಥ ಮಾಲೆ ಮುನ್ನಡೆಸಿದೆ. ಈ ಮಾತಿಗೆ ಇನ್ನೇನು ನಾಲ್ವತ್ತು ವರ್ಷವಾಗುತ್ತದೆ."

"ಈ ಎಲ್ಲ ವರ್ಷಗಳಲ್ಲಿ ಮಾಲೆಯ ಆರ್ಥಿಕ ಉತ್ಕರ್ಷ ಎಷ್ಟಾಗಿದೆ?" ಎಂದು ನಾನು ಕೇಳಿದೆ.

"ಸತ್ಯ ಹೇಳುವುದಾದರೆ ಹಣಕಾಸಿನ ಅಡಚಣೆ ನನಗೆ ಎಂದೂ ತಪ್ಪಿಲ್ಲ. ತಲೆಗೆ ಮುಸಕೆಳೆದರೆ ಕಾಲಿಗಿಲ್ಲ; ಕಾಲಿಗೆಳೆದರೆ ತಲೆಗಿಲ್ಲ ಎನ್ನುವ ಹಾಗೆಯೇ ನಡೆದುಬಂದಿದೆ. ಇದಕ್ಕೆ ಒಂದು ಕಾರಣ ನನಗೆ ತೀರ ಈಚಿಗಿನವರೆಗೆ ಸ್ವತಂತ್ರವಾದ ಪ್ರೆಸ್ಸು ಇದ್ದಿಲ್ಲವೆಂಬುದು. ನಡುವೆ ಪಾಲುಗಾರಿಕೆಯಲ್ಲಿ ಒಂದು ಪ್ರೆಸ್ ಹಾಕುವ ಪ್ರಯೋಗ ಮಾಡಿದ್ದೇನೋ ನಿಜ, ಆದರೆ ಪಾಲುಮಾರಿಕೆಯಿಂದ ನೀ ಕೆಡಬೇಡ ಕೆಡಬೇಡ ಎಂದ ಹಾಗೆಯೆ ಆಯಿತು. ಕೆಲ ಸಲ ಕರ್ನಾಟಕದಲ್ಲೇ ಬಲು ತುಟ್ಟಿ ಎನಿಸಿದ ಪ್ರೆಸ್ಸುಗಳಲ್ಲಿ ಮಾಲೆಯ ಪುಸ್ತಕಗಳನ್ನು ಮುದ್ರಿಸುತ್ತಿದ್ದೆವು."

ಆದರೂ ಜಿ.ಬಿ.ಯವರು ಈ ಆರ್ಥಿಕ ಬಿಕ್ಕಟ್ಟಿನ ವಿಷಯ ಹೆಚ್ಚು ದೂರುವುದಿಲ್ಲ. "ಕುಂಟುತ್ತಲೋ ಕೂರುತ್ತಲೋ ಐದು ಮಕ್ಕಳ ಸಂಸಾರವನ್ನು ಇದರ ಬಲದಿಂದಲೇ ಸಾಗಿಸಿದ್ದೇನೆ. ನನ್ನ ಮನೆಯಲ್ಲಿ ಅನೇಕಾನೇಕ ಹಿರಿ-ಕಿರಿಯ ಸಾಹಿತಿ ಮಿತ್ರರನ್ನು ಅತಿಥಿಗಳಾಗಿ ಉಪಚರಿಸಿದ್ದೇನೆ," ಎಂದು ಜಿ. ಬಿ. ಯವರು ಸಮಾಧಾನ ಮಾಡಿಕೊಳ್ಳುತ್ತಾರೆ.

ವಸ್ತುಸ್ಥಿತಿಯೆಂದರೆ ಜಿ. ಬಿ. ಯವರು ಗೆಳೆಯರ ಗುಂಪಿನ ಇತರ ಅನೇಕರ ಹಾಗೆಯೇ ಅಷ್ಟೇನೂ ಪ್ರಾಕ್ಟಿಕಲ್ ಮನುಷ್ಯನಲ್ಲ; ಅವರು ಭಾವನಾಪರ ವ್ಯಕ್ತಿ. ಎಲ್ಲಿ ಸಭೆಗಳು, ಎಲ್ಲಿ ಸಮ್ಮೇಲನಗಳು ಎಂದು ಅವರು ಇನ್ನೂ ಇತರ ಪುಸ್ತಕ ಪ್ರಕಾಶಕರನೇಕರ ಹಾಗೆ ಸರಸ್ವತೀ ಭಾರ ಹೊತ್ತು ತಿರುಗಾಡಿದ್ದಾರೆ. ಮಾರಾಟ ಎಷ್ಟು, ಉಳಿತಾಯ ಎಷ್ಟು ಎಂದು ಮುಂದಾಲೋಚನೆ ಮಾಡುವವರಲ್ಲ. ತಮ್ಮ ಗ್ರಂಥಮಾಲೆಯ ಉತ್ಸವವೊಂದನ್ನು ಗದಗಿನಲ್ಲಿ ಭರ್ಜರಿಯಾಗಿಯೆ ಮಾಡಿ ಸಾಲದ ಭಾರ ಹೆಚ್ಚಿಸಿಕೊಂಡರು. ಹೋಗಬರುವ ಮತ್ತು ಊಟ ವಸತಿಯ ಖರ್ಚು ಕೊಟ್ಟು ಸಾಹಿತ್ಯ ಚರ್ಚೆಯ ಸೆಮಿನಾರುಗಳನ್ನೂ ಏರ್ಪಡಿಸಿದರು. ಇವೆಲ್ಲ ಖರ್ಚಿನ ಬಾಬುಗಳೇ ಆದವು ಹೊರತು ಗಮನಾರ್ಹ ಪ್ರತಿಫಲ ದೊರೆಯಲಿಲ್ಲ. ಅವರಿಗಿಂತ ತಡವಾಗಿ ಪುಸ್ತಕ ವ್ಯವಹಾರಕ್ಕಿಳಿದವರು ಮುದ್ರಣಾಲಯ ಹಾಕಿ, ಧಾರಾಳ ವ್ಯವಹಾರ ಮಾಡಿ ತುಂಬ ಯಶಸ್ವಿಯಾಗಿದ್ದಾರೆ ಇದೇ ಧಾರವಾಡದಲ್ಲಿ.

"ಆದರೆ ನೀವು success ಅನ್ನು ಇದೊಂದೇ ಅಳತೆಗೋಲಿನಿಂದ ಯಾಕೆ ಅಳೆಯುತ್ತೀರಿ? ನೋಡಿರೀಗ, ನನಗೆ ಕರ್ನಾಟಕದ ಹೆಚ್ಚು ಕಡಿಮೆ ಎಲ್ಲ ಸಾಹಿತಿಗಳ ಸ್ನೇಹ ಸಿಕ್ಕಿದೆ. ನಮ್ಮ ಮಾಲೆಗೆ ಪುಸ್ತಕ ಬರೆದುಕೊಟ್ಟವರಲ್ಲಿ ಒಂದೆರಡು ಬಲು ಅಪರೂಪ ಪ್ರಸಂಗಗಳನ್ನು ಬಿಟ್ಟರೆ ಮತ್ತೆ ಎಲ್ಲರೊಡನೆಯೂ, ತುಂಬಾ ಬಿಗಿ ಎಂಬ ಹೆಸರುಳ್ಳವರೊಡನೆಯೂ, ನನಗೆ ಅತ್ಯಂತ ಹಿತವಾದ ಸಂಬಂಧ ಉಳಿದಿದೆ. ಮೇಲಾಗಿ ಗ್ರಂಥ ಮಾಲೆ ಕೆಲ ಮಹತ್ವದ ಸಾಧನೆಗಳನ್ನೂ

ಮಾಡಿದೆ," ಎಂದು ಜೋಶಿಯವರು ಮಾಲೆ ಮಾಡಿದ ಕೆಲ ಸಾರ್ಥಕ ಕಾರ್ಯಗಳನ್ನು ಎಣಿಸುತ್ತಾರೆ.

ಹೌದು, ಗ್ರಂಥಮಾಲೆ ಕೆಲ ಪ್ರಪ್ರಥಮಗಳನ್ನು ಸಾಧಿಸಿದೆ. ಅದು ಪ್ರಕಟಿಸಿದ 'ನವಿಲುಗರಿ' ಕನ್ನಡದ ಪ್ರಪ್ರಥಮ ಸಣ್ಣ ಕಥೆಗಳ ಜಳ್ಳೀ ಅಂಥಾಲಜಿ. (ಅ.ನ.ಕೃ. 'ಕಾಮನ ಬಿಲ್ಲು' ಬಂದದ್ದು ಆಮೇಲೆ). 'ಕೋಲ್ಮಿಂಚು' ಎಂಬ ಕನ್ನಡದ ಪ್ರಥಮ ಏಕಾಂಕ ಅಂಥಾಲಜಿಯನ್ನೂ ಅದೇ ಹೊರತಂದಿತು. ಶರಚ್ಚಂದ್ರರ ಬಂಗಾಲಿ ಕಾದಂಬರಿಗಳನ್ನು ಪ್ರಥಮತಃ ಕನ್ನಡಿಗರಿಗೆ ಕೊಟ್ಟದ್ದೂ ಅದೇ. 'ಸುಳುವು ಹೊಳವು' ಕನ್ನಡದ ಪ್ರಥಮ ಹರಟೆ ಅಂಥಾಲಜಿ. ೧೯೪೪ರಲ್ಲಿ ಗ್ರಂಥಮಾಲೆಯಿಂದ ಕನ್ನಡದಲ್ಲೇ ಮೊಟ್ಟ ಮೊದಲ ಬಾರಿ ಒಂದು ಕಾದಂಬರಿ ಸ್ಪರ್ಧೆ, ಲೇಖನ ಸ್ಪರ್ಧೆ ಏರ್ಪಡಿಸಿದ್ದೂ ಈ ಗ್ರಂಥಮಾಲೆಯು. ೧೯೫೭ರಲ್ಲಿ ಅನೇಕ ಲೇಖಕರು ಸೇರಿ ಒಂದು ಕಾದಂಬರಿ ಬರಯುವ ಪ್ರಯೋಗವನ್ನು ಅವರು ಮಾಡಿದ ಫಲವಾಗಿ 'ಖೋ' ಕಾದಂಬರಿ ಬಂತು. ಜನಪ್ರಿಯ ಲೇಖಕರಿಗೇ ತಗಲಿಕೊಳ್ಳದೆ ಹೊಸ ಹೊಸ ಲೇಖಕರನ್ನು ಕನ್ನಡಕ್ಕೆ ಅವರು ಪರಿಚಿತ ಮಾಡಿದ್ದಾರೆ. ಕಥೆ ಕಾದಂಬರಿಗಳನ್ನಷ್ಟೇ ಅಲ್ಲದೆ, ನಾಟಕ, ಪ್ರಬಂಧ, ಪ್ರವಾಸ ಕಥನ, ಬಿಡಿಮುತ್ತುಗಳಾಗಿ ಕವನ, ಗಂಭೀರ ಲೇಖನಗಳು, 'ಮನ್ವಂತರ' ಪ್ರಕಾಶನದ ಮೂಲಕ ಗಂಭೀರ ಸಾಹಿತ್ಯ ಪ್ರಶ್ನೆಗಳ ಚರ್ಚೆ ಹೀಗೆ ಎಲ್ಲ ಬಗೆಯ ಸಾಹಿತ್ಯವನ್ನೂ ಜಿ.ಬಿ. ಕೊಟ್ಟಿದ್ದಾರೆ.

"ಪ್ರಾರಂಭದಲ್ಲಿ ನಿಮಗೆ ಎಷ್ಟು ಚಂದಾದಾರರಿದ್ದರು?"

"ಪ್ರತಿ ಪುಸ್ತಕದ ಸಾವಿರ ಪ್ರತಿಗಳನ್ನು ಹಾಕಿದರೂ ಮೊದಲ ಏಳು ವರ್ಷಗಳಲ್ಲಿ ಸರಾಸರಿ ೩೫೦ ಕ್ಕಿಂತ ಹೆಚ್ಚು ಚಂದಾದಾರರು ಇರಲಿಲ್ಲ. ಆದರೆ ಗದಗಿನ ಸಾಹಿತ್ಯೋತ್ಸವದ ನಂತರ ಚಂದಾದಾರರ ಸಂಖ್ಯೆ ೭೦೦ ರ ವರೆಗೂ ಏರಿತು. ಈಗ ಸುಮಾರು ೧೮೦೦ ಜನ ಕಾಯಂ ಚಂದಾದಾರರಿದ್ದಾರೆ."

ಚಂದಾದಾರರನ್ನು ಸೇರಿಸಿಕೊಳ್ಳಲು ಹೋಗುವಾಗ ಕೆಲವೊಮ್ಮೆ ಕಳ್ಳಾಟಿಕೆಯಲ್ಲೇ ಹೋಗಬೇಕಾಗುತ್ತಿತ್ತು. ತರುಣರು ಹಿರಿಯರ ಕಣ್ಣು ತಪ್ಪಿಸಿ ಚಂದಾದಾರರಾಗಲು ಬಯಸುತ್ತಿದ್ದುದುಂಟು. ಆದರೂ ಯಾರ ಮನೆಯಿಂದಲೂ ಕತ್ತು ಹಿಡಿದು ದಬ್ಬಿಸಿಕೊಂಡ ಅನುಭವ ತಮಗೆ ಬರಲಿಲ್ಲವೆಂದು ಅವರು ಸಮಾಧಾನಪಟ್ಟುಕೊಳ್ಳುತ್ತಾರೆ! ಹಾಗೊಮ್ಮೆ ಅನುಭವ ಬಂದಿದ್ದರೂ ಅದನ್ನು ಕೂಡ ಮರೆಸುವಂಥ ಹೃದಯಸ್ಪರ್ಶಿ ಅನುಭವ ತಮಗೆ ಬಂದದ್ದನ್ನು ಜೋಶಿಯವರು ಹೇಳುತ್ತಾರೆ. ಹುಬ್ಬಳ್ಳಿಯಲ್ಲಿ ಒಂದಡೆ ಒಬ್ಬರು ಚಂದಾದಾರರಿದ್ದರು. ಅನೇಕ ಚಂದಾದಾರರ ಹಾಗೆ ಅವರು ಕೂಡ ಉದ್ದರಿ ಚಂದಾದಾರರೇ. (ಹೊಸ ವರ್ಷದ ಪುಸ್ತಕಗಳನ್ನು ಕೊಟ್ಟು ಹಳೇ ವರ್ಷದ ಚಂದಾ ವಸೂಲ್ಮಾಡಿಕೊಂಡು ಬರುವುದು ರೂಢಿ). ಒಮ್ಮೆ ಚಂದಾ ವಸೂಲ್ಮಾಡಲು ಆ ಮನೆಗೆ ಹೋದಾಗ ಮನೆಯ ಯಜಮಾನಿಯೊಬ್ಬಳೇ ಇದ್ದಳು. ಸರಿಯಾಗಿ ಮುಖ ನೋಡದೆ ಯಜಮಾನರಿಲ್ಲವೇ? ಎಂದು ಜೋಶಿಯವರು ಕೇಳಿದರು. ಆ ಮಹಿಳೆ ಗದ್ಗದಳಾಗಿ "ಇಲ್ಲ, ಅವರು ಹೋಗಿಬಿಟ್ಟರು. ಆದರೆ ಅವರು ನಿಮ್ಮ ಚಂದಾ ಬಾಕಿಯನ್ನು ಕೊಡಬೇಕೆಂದು ಮಾತ್ರವಲ್ಲ, ನಾನು ಬದುಕಿರುವಷ್ಟು ಕಾಲ ನಿಮ್ಮ ಮಾಲೆಗೆ ಚಂದಾದಾರಳಾಗಿದ್ದು ಪುಸ್ತಕಗಳನ್ನು ಓದುತ್ತಿರಬೇಕೆಂದು ಬರೆದಿಟ್ಟು ಹಣದ ವ್ಯವಸ್ಥೆ ಮಾಡಿದ್ದಾರೆ," ಎಂದಳು. ಇಂದಿಗೂ ಅವಳು ಚಂದಾದಾರಳಾಗಿ ಉಳಿದಿದ್ದಾಳೆ.

ಮನೋಹರ ಗ್ರಂಥಮಾಲೆ ವಿವಾದಾಸ್ಪದ ಪುಸ್ತಕಗಳನ್ನು ಪ್ರಕಟಿಸಲು ಎಂದೂ ಅಂಜಿಲ್ಲ. ಪ್ರಥಮ ವರ್ಷದಲ್ಲೇ ಶ್ರೀರಂಗರ 'ವಿಶ್ವಾಮಿತ್ರ ಸೃಷ್ಟಿ' ಕಾದಂಬರಿ ಬ್ರಾಹ್ಮಣವರ್ಗದಲ್ಲಿ ಕೋಲಾಹಲ ಎಬ್ಬಿಸಿತು. ಅನೇಕ ಚಂದಾದಾರರು ಸಿಟ್ಟಿಗೆದ್ದು ಚಂದಾ ನಿಲ್ಲಿಸಿಬಿಟ್ಟರು. ಅವರದೂ ಅಷ್ಟು ತಪ್ಪಿಲ್ಲ ಅನ್ನಿ. ಕಾದಂಬರಿಯಲ್ಲಿ ಸಾಲಿಗ್ರಾಮ ಹೋಗಿ ಚಪ್ಪಲಿಯ ಮೇಲೆ ಬೀಳುತ್ತದೆ! ಈಚೆಗಿನ ವರ್ಷಗಳಲ್ಲಿ ಅನಂತಮೂರ್ತಿಯವರ 'ಸಂಸ್ಕಾರ' ಎಬ್ಬಿಸಿದ ಗಲಿಬಿಲಿ ಎಲ್ಲರಿಗೂ ನೆನಪಿದೆ. ಕೃಷ್ಣಾನಂದ ಕಾಮತರ 'ನಾನೂ ಅಮೇರಿಕೆಗೆ ಹೋಗಿದ್ದೆ' ಮತ್ತು 'ವಂಗದರ್ಶನ'

ಇವೆರಡೂ ಜನಸಾಮಾನ್ಯರ ಇಷ್ಟವಾದ ಕಲ್ಪನೆಗಳನ್ನು ನಿರ್ದಾಕ್ಷಿಣ್ಯವಾಗಿ ಮೆಟ್ಟಿಹಾಕುತ್ತವೆ. ಕಳೆದ ವರ್ಷದಲ್ಲಿ ಹೊರಬಂದ ಬಿ. ಜಿ. ಎಲ್. ಸ್ವಾಮಿಯವರ 'ಕಾಲೇಜು ರಂಗ' ಕೆಲ ವರ್ಗಗಳಲ್ಲಿ ರೋಷ ಎಬ್ಬಿಸುವುದಲ್ಲಿ ಸಂದೇಹವಿಲ್ಲ— ಅದೂ ಮದ್ರಾಸ್ ಕಡೆ.

ನಾವು: "ಲೇಖಕರೊಡನೆ ನಿಮ್ಮ ಅನುಭವವೇನು?"

ಆಗಲೇ ಹೇಳಿದ ಹಾಗೆ ಒಟ್ಟಿನ ಮೇಲೆ ಲೇಖಕರೊಡನೆ ಅವರ ಸಂಬಂಧ ತುಂಬಾ ಹಾರ್ದಿಕವೇ ಆಗಿ ಉಳಿದಿದೆ. ಆದರೆ ತಮ್ಮ ಪುಸ್ತಕಗಳಿಗೆ ವಸ್ತುವನ್ನು ಇತರೆ ಭಾಷೆಗಳಿಂದ ಧಾರಾಳವಾಗಿ ಬಳಸಿಕೊಂಡು ಮೂಲವನ್ನು ಸ್ಮರಿಸಲು ಮರೆತು ತುಂಬಾ ಸಂಕೋಚ ಪಡುವಂಥ ಪರಿಸ್ಥಿತಿಯನ್ನು ತಂದೊಡ್ಡಿದ ಒಬ್ಬಿಬ್ಬ ಲೇಖಕರಿದ್ದಾರೆ. ಇಬ್ಬರು ಲೇಖಕರು ಮೂರನೇ ಸ್ಥಳದಿಂದ ಸಾಮಗ್ರಿಯನ್ನು ಬಳಸಿಕೊಂಡು ಒಬ್ಬರ ಮೇಲೊಬ್ಬರು ಕೃತಿಚೌರ್ಯದ ಆರೋಪ ಹೊರಿಸಿ ಕಡೆಗೆ ಇಬ್ಬರೂ ಮೂರನೇ ಕಡೆಯಿಂದ ತೆಗೆದುಕೊಂಡ ಸಂಗತಿ ಮತ್ತಾರಿಂದಾದರೂ ಹೊರಬಿದ್ದು ಮೋಜಿನ ಪ್ರಸಂಗ ಬಂದದ್ದುಂಟು!

ಆದರೆ ಅವರು ನಿಜವಾಗಿ ಹೆದರಿದ್ದು ಒಬ್ಬ ಮಹಿಳಾ ಲೇಖಕರ ಸಂದರ್ಭದಲ್ಲಿ. ಅವರ ಕಾದಂಬರಿ ಮುದ್ರಣವಾಗಿ ಪ್ರತಿಗಳು ಹಂಚಲ್ಪಡುತ್ತಿದ್ದಂತೆ ಅವರಿಂದ ಒಂದು ಕರುಣಾಜನಕ ಪತ್ರ ಬಂತು. 'ಪುಸ್ತಕ ಪ್ರಕಟವಾದರೆ ನನಗೆ ಆತ್ಮಹತ್ಯೆ ಹೊರತು ಅನ್ಯಮಾರ್ಗವಿಲ್ಲ' ಅಂತ. ಜೋಶಿಯವರು ಗಾಬರಿಗೊಂಡು ಅಲ್ಲಿಗೆ ಧಾವಿಸಿದರು. ನೋಡುವಾಗ ಗಂಡನ ಮನೆಯಲ್ಲಿ ತುಂಬಾ ಪೀಡಿತಳಾದ ಆ ಮಹಿಳೆ ಅದನ್ನೇ ಆಧರಿಸಿ ಕಾದಂಬರಿ ಬರೆದು ಯೋಚನೆ ಇಲ್ಲದೆ ಪ್ರಕಟನೆಗೆ ಕಳಿಸಿಬಿಟ್ಟಿದ್ದಳು. ಅತ್ತೆ ಮತ್ತು ಮನೆಯವರಿಗೆ ಅವರ ಸುದ್ದಿ ಹತ್ತಿದರೆ ಅವಳ ಬದುಕೇ ಅಸಹನೀಯವಾದೀತೆಂಬ ಪ್ರಜ್ಞೆ ಆ ಮೇಲೆ ತಾನೇ ಅವಳಿಗೆ ಬಂದಿತ್ತು. ಅವರು ಹೋಗಿ ಅವಳ ಅತ್ತೆಯ ಕಾಲುಗಳನ್ನು ಅಕ್ಷರಶಃ ಹಿಡಿದುಕೊಂಡು ಕ್ಷಮಾಪಣೆ ಕೇಳಿ ಅಂದದ್ದು ಅನ್ನಿಸಿಕೊಂಡು ಪುಸ್ತಕವ ಮುನ್ನುಡಿಯನ್ನು ರದ್ದುಗೊಳಿಸಲು ಒಪ್ಪಿಕೊಂಡು ಬಂದರು. ಪುಣ್ಯಕ್ಕೆ ಈ ಘಟನೆಯಿಂದ ಆ ಸಂಸಾರ ಒಡೆಯದೆ ಅವರು ಈಗಲೂ ಸುಖವಾಗಿದ್ದಾರೆ.

ಮನೋಹರ ಗ್ರಂಥಮಾಲೆಯಲ್ಲಿ ಪ್ರಕಟನೆ ಹೊಂದಿದರೆ ಹೊಸ ಲೇಖಕನಿಗೆ ಮನ್ನಣೆ ದೊರೆತಂತೆ ಎಂಬ ಭಾವನೆ ಉಂಟಾಗುವಷ್ಟು ಗೌರವ ಮಾಲೆಗೆ ಬಂದಿದ್ದರೂ ಪ್ರಕಟನೆಗೆ ಉತ್ತಮ ಹಸ್ತಪ್ರತಿಗಳನ್ನು ದೊರಕಿಸುವುದು ಕಷ್ಟವೇ ಆಗಿದೆಯೆಂದು ಜಿ.ಬಿ.ಯವರು ಕೊರಗುತ್ತಾರೆ. ಇದಕ್ಕೆ ಪ್ರಕಾಶನ ಉದ್ಯೋಗದಲ್ಲಿರುವ ಮೇಲಾಟ, ವಿಶೇಷವಾಗಿ ಪತ್ರಿಕೆಗಳಿಂದ, ಕೆಲಮಟ್ಟಿಗೆ ಕಾರಣವಾಗಿರಬಹುದು. ಆದರೆ ಒಟ್ಟೇ ಉತ್ತಮ ದರ್ಜೆಯ ಪುಸ್ತಕಗಳನ್ನು ಬರೆಯುವುದೇ ಕಡಿಮೆಯಾಗುತ್ತಿದೆಯೋ ಎಂದು ಒಮ್ಮೊಮ್ಮೆ ಅವರಿಗೆ ಅನಿಸುತ್ತದೆ. ಹಿಂದಿನ ತಲೆಮಾರಿನವರ ಪ್ರಯತ್ನಶೀಲತೆ ಅಧ್ಯಯನ ಬಲ ಈಚೆಗಿನವರಿಗೆ ಇಲ್ಲದಿರುವುದೂ ಅಪಾರವೇಗದಿಂದ 'ಉತ್ತಮ ಸಾಹಿತ್ಯ'ದ ಫ್ಯಾಶನ್ನುಗಳು ಬದಲಾಗುತ್ತಿರುವುದೂ ಇದಕ್ಕೆ ಕಾರಣವಾಗಿರಬಹುದೆಂದು ಅವರು ಊಹಿಸುತ್ತಾರೆ. "ನಮ್ಮ ಮಾಲೆಯಲ್ಲೇ ಕೆಲ ಲೇಖಕರು ತಮ್ಮ ಅತ್ಯುತ್ತಮ ಪ್ರಥಮ ಕಾದಂಬರಿಗಳನ್ನು ಪ್ರಕಟಿಸಿದರು. ಅವೇ ಅವರ ಕೊನೆಯ ಕಾದಂಬರಿಗಳೂ ಆದವು. ಈ ಏಕಗ್ರಂಥಕ್ಕೆ ಸೀಮಿತವಾದ ಪ್ರತಿಭೆ ನನಗೆ ತುಸು ಸೋಜಿಗವನ್ನುಂಟು ಮಾಡಿದೆ."

ಈ ನಲುವತ್ತು ವರ್ಷಗಳ ಅನುಭವದಲ್ಲಿ ಕೆಲ ಹಿತಕರ ಬದಲಾವಣೆಗಳನ್ನೂ ಜೋಶಿಯವರು ಕಂಡಿದ್ದಾರೆ. ತುಂಗಭದ್ರೆಯ ಉತ್ತರಕ್ಕೆ ಬರೆಯಲ್ಪಟ್ಟ ಪುಸ್ತಕಗಳ ಭಾಷೆ ಅರ್ಥವಾಗುವುದಿಲ್ಲೆಂದು ಹಳೇ ಮೈಸೂರವರು ಹೇಳುತ್ತಿದ್ದುದು ಈಗ ಅಪರೂಪವಾಗಿದೆ. ವಾಸ್ತವಿಕವಾಗಿ ಹಳೇ ಹೊಸ ಮೈಸೂರುಗಳಲ್ಲಿ ಮಾಲೆಯ ಚಂದಾದಾರರ ಸಂಖ್ಯೆ ಈಗ ಸಮಸಮವಾಗಿದೆ. ಮಾಲೆಯೂ ಪ್ರಯತ್ನಪೂರ್ವಕವಾಗಿ ಎಲ್ಲ ಪ್ರದೇಶಗಳ ಲೇಖಕರ ಪುಸ್ತಕಗಳನ್ನು ಪ್ರಕಟಿಸಿದೆ.

ಮನೋಹರ ಗ್ರಂಥಮಾಲೆಯ ಒಂದು ದೊಡ್ಡ ಕಾರ್ಯವೆಂದರೆ 'ನಡೆದು ಬಂದ ದಾರಿ

ಎಂಬ ಹೆಸರಲ್ಲಿ ಆಧುನಿಕ ಕನ್ನಡ ಸಾಹಿತ್ಯದ ಬೆಳವಣಿಗೆಯನ್ನು ರೇಖಿಸುವ ಮೂರು ಬೃಹದ್ ಭಾಗಗಳನ್ನೊಳಗೊಂಡ ಗ್ರಂಥದ ಪ್ರಕಟನೆ. ಕೀರ್ತಿ ಕುರ್ತಕೋಟಿಯವರ ವಿಮರ್ಶನ ಮತ್ತು ಸಂಪಾದನ ಕೌಶಲ್ಯದಿಂದ ಈ ಗ್ರಂಥ ಸಾಹಿತ್ಯಕ್ಕೆ ಒಂದು ಅರ್ಥಪೂರ್ಣ ಕೊಡುಗೆಯಾಗಿದೆ.

ಎಪ್ಪತ್ತರಲ್ಲಿರುವ ಶ್ರೀ ಜಿ. ಬಿ. ಜೋಶಿಯವರ ಕಾರ್ಯಭಾರದಲ್ಲಿ ಈಗ ಅವರ ಮಗ ಶ್ರೀ ರಮಾಕಾಂತ ಜೋಶಿಯವರು ಪಾಲುಗೊಂಡಿದ್ದರೂ ಸ್ವತಃ ಜಿ. ಬಿ ಯಾವ ಅರ್ಥದಲ್ಲೂ ನಿವೃತ್ತರಾಗಿಲ್ಲ. ಅನಾರೋಗ್ಯದ ಹಲವು ಕುತ್ತುಗಳನ್ನು ದಾಟಿಬಂದಿದ್ದರೂ ಅವರು ಇನ್ನೂ ಉತ್ಸಾಹಿಯಾಗಿಯೇ ಇದ್ದಾರೆ. 'ಜಡಭರತ' ಎಂಬ ಹೆಸರಿಂದ ಅವರು 'ಧರ್ಮಸೆರೆ' ಎಂಬ ಕಾದಂಬರಿಯನ್ನು ನಲವತ್ತು ವರ್ಷ ಕೆಳಗೆಯೇ ಬರೆದರು. ಆನಂತರ ಅವರು ನಾಟಕಗಳನ್ನೂ ಬರೆದಿದ್ದಾರೆ. 'ಮೂಕಬಲಿ' ಮತ್ತು ಹೋದ ವರ್ಷ ಪ್ರಕಟವಾದ 'ಆ ಊರು ಈ ಊರು' ನಾಟಕಗಳು ನಮ್ಮ ಪರಂಪರೆಯವಲ್ಲದಿದ್ದರೂ ರಂಗಭೂಮಿಯ ಮೇಲೆ ರಂಜಿಸುವ ಒಳ್ಳೇ ನಾಟಕಗಳು. ಇನ್ನೊಂದು ನಾಟಕ ಸದ್ಯದಲ್ಲೇ ಹೊರಬರಲಿದೆ.

ಜೋಶಿಯವರು ಅಕ್ಷರಶಃ ಕನಸಿಗರು. ವಾಸ್ತವಿಕವಾಗಿ ಬೇಂದ್ರೆಯವರು ಅವರ ಕನಸುಗಳ ವೈಖರಿಯಿಂದಲೇ ಮೊದಲು ಅವರಿಂದ ಆಕರ್ಷಿತರಾದರಂತೆ. ತಮಗೆ ಬಿದ್ದ ಕನಸುಗಳನ್ನು ಮಾರು ದಿನ ನಿಚ್ಚಳವಾಗಿ ನೆನೆದುಕೊಳ್ಳಬಲ್ಲದ್ದು ಅವರ ಒಂದು ವಿಶೇಷ ಸಾಮರ್ಥ್ಯ. ತಾವು ನೇರದಿಂಡೆದ್ದು ಹಾರುತ್ತ ಹೋಗುವುದು ಅವರಿಗೆ ಬೀಳುವ ಒಂದು ಸಾಮಾನ್ಯ ಕನಸಂತೆ. ತಮಗೂ ತಮಗೆ ಸಂಬಂಧಿಸಿದವರಿಗೂ ಬರಲಿರುವ ಜಾಡ್ಯ—ಅಪಾಯಗಳು ಅವರಿಗೆ ಮುಂದಾಗಿ ಕನಸಿನಲ್ಲಿ ಕಂಡಿವೆ. ಚಿರತೆ ಏರಿ ಬರುವುದು ತಮಗೆ ಬರಲಿರುವ ಅನಾರೋಗ್ಯದ ಮುನ್ಸೂಚನೆಯಾಗಿದೆಯಂತೆ. ಗೆಳೆಯರ ಗುಂಪು ಒಡೆಯುವುದನ್ನೂ ಅವರು ಕನಸಿನಲ್ಲಿ ಮುಂಗಂಡಿದ್ದರು. ತಮ್ಮ ಕೆಲ ಕನಸುಗಳನ್ನು 'ಜಡಭರತನ' ಕನಸುಗಳು, ಎಂಬ ಹೆಸರಲ್ಲಿ ಅವರು ೧೯೫೦ರಲ್ಲಿ ಪ್ರಕಟಿಸಿದ್ದಾರೆ. ತಮ್ಮ ಕನಸುಗಳು ಹಿತಕರವಿರಲಿ ಭಯಂಕರವಿರಲಿ ಅವು ತಮಗೊಂದು ಸಮಾಧಾನವನ್ನು ಯಾವಾಗಲೂ ತಂದಿವೆಯೆಂದು ಅವರು ಹೇಳುತ್ತಾರೆ. ಅವರ ಎಲ್ಲಕ್ಕೂ ಮುಖ್ಯ ಕನಸು ಮನೋಹರ ಗ್ರಂಥಮಾಲೆಯೆ. ಅದು ಸಾರ್ಥಕ ಕನಸೇ ಸರಿ. ✡



ಆಲೆಕ್ಸಾಂಡ್ರಿಯದ ಅರಸು ಟಾಲೆಲೆ ಗಣಿತಜ್ಞ ಯೂಕ್ಲಿಡನಿಂದ ಭೂಮಿತಿ ಹೇಳಿಕೊಡುತ್ತಿದ್ದನು. ಆದರೆ ಆ ಕಠಿಣ ವಿದ್ಯೆ ಅವನಿಗೆ ಹತ್ತದುಂತಾಯಿತು. ಒಂದು ದಿನ ಆರಸ ಗುರುವನ್ನು ಕೇಳಿಯೇಬಿಟ್ಟ: "ಗುರುದೇವ, ಭೂಮಿತಿಯನ್ನು ಕಲಿಯಲು ಸುಲಭ ಮಾರ್ಗ ಯಾವುದೂ ಇಲ್ಲವೆ?"

ಯೂಕ್ಲಿಡ್ ಗಾಂಭೀರ್ಯದಿಂದ ಉತ್ತರಿಸಿದ: "ರಾಜನ್, ನಿನ್ನ ರಾಜ್ಯದಲ್ಲಿ ಜನಸಾಮಾನ್ಯರಿಗೆ ಹಾಗು ಶಿಷ್ಯರಿಗೆ ಪ್ರತ್ಯೇಕ ದಾರಿಗಳಿರಲು ಸಾಧ್ಯ. ಆದರೆ ಜ್ಞಾನ ಮಾರ್ಗ ಮಾತ್ರ ಎಲ್ಲರಿಗೂ ಒಂದೇ. ಅದರಲ್ಲಿ ಶಿಷ್ಯರಿಗೆಂದು ಪ್ರತ್ಯೇಕ ರಾಜಮಾರ್ಗವೇನೂ ಇಲ್ಲ."

ಅನಂತರ ಅರಸು ಟಾಲೆಮಿ ಭೂಮಿತಿ ಕಲಿಯಲು ಕಠೋರ ಪರಿಶ್ರಮ ಮಾಡತೊಡಗಿದ.


ಈಗ ನಮ್ಮದೂ
ಒಂದು ಖಾತೆ ಇದೆ.





ಸಂಶೋಧನ ತಪಸ್ವಿ— ಶಂ. ಬಾ. ಜೋಶಿಯವರು



ಪಾವೆಂ

ಸಾಹಿತಿಗಳನ್ನು ಋಷಿಗಳೆಂದು ಹೇಳುವುದಾದರೆ ಧಾರವಾಡದ ಸಾಧನಕೇರಿಯನ್ನು ಅನೇಕ ಋಷಿಗಳುಳ್ಳ ತಪೋವನವೆಂದು ಭಾವಿಸಬಹುದು. ಇಲ್ಲಿ ಕನ್ನಡದ ಖ್ಯಾತ ಆಚಾರ್ಯರಲ್ಲಿ ಅನೇಕರು ವಾಸವಾಗಿದ್ದರು, ಇದ್ದಾರೆ. ಶಂ ಬಾ. ಜೋಶಿಯವರು ಅವರಲ್ಲೊಬ್ಬರು. ಅವರನ್ನು ಸಂಶೋಧನತಪಸ್ವಿ ಎಂದು ನಾನು ಭಾವಿಸಿದ್ದೇನೆ. ಅವರಂತೆ ಕನ್ನಡ ನಾಡು, ಜನ, ನುಡಿ ಇವುಗಳ ಮೂಲವನ್ನು, ಏಳ್ಗೆ ಇಳಿಕೆಗಳನ್ನು ತಿಳಿಯುವ ಏಕಮಾತ್ರ ಹವ್ಯಾಸಕ್ಕಾಗಿ ಜೀವಮಾನವನ್ನೆಲ್ಲ ತೇಯ್ದ ಬೇರೊಬ್ಬ ಸಂಶೋಧಕನಿಲ್ಲವೆಂದರೆ ಅದು ಸತ್ಯಕ್ಕೆ ದೂರವಾಗದು.

ಕನ್ನಡದ ನೆಲೆಯನ್ನು ತಿಳಿಯುವ ಯತ್ನದಲ್ಲಿ ಕಂಡುಬಂದ ವಿಷಯಗಳನ್ನು ಜನರ ಮುಂದಿಡುವುದಕ್ಕಾಗಿ ಶಂ. ಬಾ. ಅವರು ಡಜನ್ನಿಗೂ ಹೆಚ್ಚು ಪುಸ್ತಕಗಳನ್ನು ಬರೆದಿದ್ದಾರೆ. ಈ ನಾಡನ್ನು ಕನ್ನಾಡು ಎಂದು, ನುಡಿಯನ್ನು ಕನ್ನುಡಿಯೆಂದು ಕೆಲವರು ಇಂದು ಉಲ್ಲೇಖಿಸುತ್ತಿದ್ದರೆ ಅದಕ್ಕೆ ಶಂ. ಬಾ. ಅವರ ಗ್ರಂಥಗಳೇ ಕಾರಣ. ಸಾಧನಕೇರಿಯ ಆದಿಋಷಿಯಾದ ದಿವಂಗತ ಆಲೂರು ವೆಂಕಟರಾಯರು ಕರ್ನಾಟಕದ ಗತವೈಭವವನ್ನು ಬೆಳಕಿಗೆ ತಂದಿದ್ದರೆ ಶಂ. ಬಾ. ಅವರು ಅದರ ಗತವೈಭವದ ಸಂಗಡ ಹತವೈಭವದ ಪದರುಗಳನ್ನೆಲ್ಲ ಬಿಡಿಸಿ ಈ ವೈಭವ ಗತಿಸಲು ಕಾರಣವೇನು ಎಂದು ಬೆದಕಿದ್ದಾರೆ. ತಮ್ಮ ಶೋಧದ ಆದಿರಿನ ಗುಂಟ ಸಾಗುತ್ತ ವೇದಕಾಲದ ವರೆಗೂ ಹಿಂಬರಿದ್ದಾರೆ. ಮತ್ತು ತಮಗೆ ಕಂಡಂಥ ಸತ್ಯವನ್ನು ಹಂಗು ಹೆದರಿಕೆಗಳಿಲ್ಲದೆ, ಆದೆಷ್ಟೇ ಅಪ್ರಿಯವಾಗಿರಲಿ ಪ್ರಕಟಿಸಿದ್ದಾರೆ.

ವಿಶೇಷವೆಂದರೆ, ಶಂ. ಬಾ. ಜೋಶಿಯವರು ಸ್ವಪ್ರಯತ್ನದಿಂದಲೇ ಇದೆಲ್ಲಕ್ಕೂ ದಾರಿ ಮಾಡಿಕೊಂಡಿದ್ದಾರೆ. ಅವರಿಗೆ ಪಿಎಚ್. ಡಿ. ಇಲ್ಲ, ಡಿಗ್ರಿಯೂ ಇಲ್ಲ, ಕೊನೆಗೊಂದು ಮೆಟ್ರಿಕ್ಯುಲೇಶನ್ ಸರ್ಟಿಫಿಕೇಟೂ ಇಲ್ಲ. ಮುಲ್ಕಿ ಪರೀಕ್ಷೆ ಮುಗಿಸಿ ಧಾರವಾಡದಲ್ಲಿ ಟ್ರೇನಿಂಗ್ ಕಾಲೇಜಿನಲ್ಲಿ ಟ್ರೇನಿಂಗ್ ಪಡೆದು ಅಷ್ಟೇ ಸಲಕರಣೆಯಿಂದ ವಿದ್ವತ್ ಪ್ರಪಂಚಕ್ಕಿಳಿದವರು ಅವರು. ಈ ಅಂಶವನ್ನು ಅವರ ವಿರುದ್ಧ ಉಪಯೋಗಿಸುವ ಡಿಗ್ರೀಮತ್ತರೂ ಇದ್ದಾರೆ. ನಿಜವಾಗಿ ಶಂ. ಬಾ. ಅವರು ಡಿಗ್ರೀವಂತರಾಗಿದ್ದರೆ ಅವರಿಗೆಷ್ಟು ಬೇಗ ವಿದ್ವನ್ಮಂಡಲಿಯಲ್ಲಿ ಮನ್ನಣೆ ದೊರೆಯಬಹುದಾಗಿತ್ತೋ ಅಷ್ಟು ಬೇಗ ಅದು ದೊರೆಯದಿರಲು ಈ 'ಕ್ವಾಲಿಫಿಕೇಶನ್' ಅಭಾವ ಮುಖ್ಯ ಕಾರಣವಾಗಿದೆ. ಈಚಿಗೆತಾನೇ ವಿಶ್ವವಿದ್ಯಾಲಯಗಳು ಅವರ 'ಅಸ್ತಿತ್ವ' ವನ್ನು ಗಮನಿಸತೊಡಗಿವೆ.


ಶಂಕರ ಬಾಳದೀಕ್ಷಿತ ಜೋಶಿಯರು ೧೮೯೬ ಜನವರಿಯಲ್ಲಿ ಬೆಳಗಾವಿ ಜಿಲ್ಲೆಯ ಗುರ್ಲ-ಹೊಸೂರಿನಲ್ಲಿ ಹುಟ್ಟಿದರು. ಜೋಶಿಯವರ ಪೂರ್ವಜರಲ್ಲಿ ಚಿದಂಬರ ದೀಕ್ಷಿತರು (೧೬೧೮) ದೊಡ್ಡ ಸಾಧುಗಳಾಗಿದ್ದರು. ವೇದವಿದ್ಯಾಪಾರಗವಾಗಿದ್ದ ಈ ಕುಲದ ಸಂಪತ್ತು ಶಂ. ಬಾ.

ಬಾಗಿಲಿಗೆ ಬರುತ್ತೇವೆ. ಗುಹೆಯೆದುರು ಒಂದು ಮಾಡು ಕಟ್ಟಲಾಗಿದೆ. ಅದೇ ಪೂಜಾರಿಗಳ ಕೋಣೆ. ಮುಂದೆ ಗುಹೆ ಸುಮಾರು ಇಪ್ಪತ್ತು ಅಡಿ ಒಳಗೆ ಹೋಗಿದೆ. ಎದುರುಗಡೆ ಅಡ್ಡವಾಗಿ ಬಂದ ಕಲ್ಲಿನ ನೈಸರ್ಗಿಕ ವಿಶಿಷ್ಟ ಆಕಾರವನ್ನೇ ಭೈರವೇಶ್ವರ ಎನ್ನಲಾಗುತ್ತಿದೆ. ಅಲ್ಲಿ ನೆಲದಿಂದ ಸುಮಾರು ಎರಡೂವರೆ ಅಡಿ ಎತ್ತರದಲ್ಲಿ ಕಲ್ಲು ಸಂದಿಯೊಳಗಿಂದ ಅರ್ಧ ಅಂಗುಲ ಗಾತ್ರದಲ್ಲಿ ನೀರು ಸುರಿಯುತ್ತಿರುತ್ತದೆ. ಮಳೆಗಾಲ, ಚಳಿಗಾಲ, ಬೇಸಿಗೆಗಳ ವೈಪರೀತ್ಯದಿಂದ ನೀರಿನ ಧಾರೆ ಹೆಚ್ಚುವುದೂ ಇಲ್ಲ, ಹರಿಗಡಿಯುವುದೂ ಇಲ್ಲ ಎನುತಾರೆ.

ಈ ಭೈರವೇಶ್ವರ ಬಂಡೆಯುನ್ನು ಒಂದಂಚಿನಿಂದ (ನಾವು ಎಡಗಡೆಯ ಅಂಚಿನಿಂದ ಏರಿದೆವು) ಬಳಸಿ ಒಂದು ನೂರು ಅಡಿಗಳಷ್ಟು ಏರಿದರೆ ಮೇಲೆ ಅಲ್ಲಿ ಭೈರವೇಶ್ವರ ಬಂಡೆ ಸೀಳು ಬಿಟ್ಟಿರುವುದು ಕಾಣುತ್ತದೆ. ಸೀಳಿನೊಳಗಡೆ ಕತ್ತಲೆಯಾದರೂ, ಮಬ್ಬು ಬೆಳಕಿದೆ. ಧೈರ್ಯವಾಗಿ ಮುಂದೆ ಹೋದರೆ ಹಾಗೆಯೇ ಹೋಗುತ್ತ ಬಂಡೆಯ ಇನ್ನೊಂದು ತುದಿಗೆ ಮುಟ್ಟಬಹುದು. ಅಲ್ಲಿಂದ ಮತ್ತೆ ಬಂಡೆಯನ್ನು ಬಳಸಿ ಕೆಳಗಿಳಿಯಬೇಕು. ಈ ಸೀಳನ್ನೇ ಶಿವನು ಓಡುವಾಗ ಬಂಡೆಯನ್ನು ಸೀಳಿಕೊಂಡು ಹೋದ ಎನ್ನುತ್ತಾರೆ.

ಯಾಣದಲ್ಲಿ ಭವ್ಯ ದೇವಾಲಯವಿಲ್ಲ, ಸುಂದರವಾದ ಮೂರ್ತಿಯಿಲ್ಲ, ಕಲಾ-ಕುಸುರಿನ ಕಂಬ ಕಿಡಕಿಗಳಿಲ್ಲ. ಸುಖವಾಗಿ ತಂಗಲು ಅನುಕೂಲತೆಯಿಲ್ಲ. ಗುಹೆಯೆದುರಿರುವ ಒಂದು ಮಾಡು, ಚಪ್ಪರಗಳನ್ನು ಬಿಟ್ಟರೆ ಅಲ್ಲಿ ಮನುಷ್ಯನಿರ್ಮಿತವಾದುದು ಮತ್ತೇನೂ ಇಲ್ಲ. ಅಸಾಮಾನ್ಯವಾದ ಪ್ರಕೃತಿಯ ಒಂದು ರೂಪ ಅದು. ಅದನ್ನು ಕಂಡು ಅಪ್ರತಿಭರಾಗಿ ನಿಲ್ಲುತ್ತೇವೆ ಹಾಗೆಯೆ ಈ ನಿಸರ್ಗ ವೈಚಿತ್ರ್ಯವನ್ನು ಪುರಾಣದ ಒಂದು ಸಂದರ್ಭಕ್ಕೆ ಹೊಂದಿಸಿದವರ ಕಲ್ಪನಾ ವೈಭವಕ್ಕೂ ಬೆರಗಾಗುತ್ತೇವೆ.

ಇಳಿದು ಬಂದ ದಾರಿಯು ಕಲ್ಪನೆಯಿದ್ದ ನಾವು ಹೆಚ್ಚು ವೇಳೆಯನ್ನು ಅಲ್ಲಿ ಕಳೆಯುವಂತಿರಲಿಲ್ಲ. ತಂದಿದ್ದ ಸಕ್ಕರೆಯಿಂದ ಪಾನಕ ಮಾಡಿ ಕುಡಿದು, ಬಿಸ್ಕೀಟು, ಮೂಸಂಬಿಗಳಿಂದಲೇ ತೃಪ್ತರಾಗಿ ಮೂರು ಗಂಟೆಗೇ ಮರಳಿ ಹೊರಟೆವು. ಕೈಯಲ್ಲೆಲ್ಲ ಒಂದೊಂದು ಬಿರುಸಾದ ಬಡಿಗೆ ಹಿಡಿದುಕೊಂಡು ಕಾಲಿನ ಶ್ರಮವನ್ನು ಸ್ವಲ್ಪ ಅದಕ್ಕೂ ಹಂಚಿಕೊಡುತ್ತ, ಉಸಿರಿಡುತ್ತ ದಾರಿ ಸವೆಸಿದೆವು. ನಾವು ಹೆಗಡೆ ಕಟ್ಟೆ ತಲುಪಿದಾಗ ಸಂಜೆ ಏಳು ಗಂಟೆ. *



ಮನುಷ್ಯನ ದುಃಖದ ಮೂಲ ಸ್ವಂತದ ದಾರಿದ್ರ್ಯಕ್ಕಿಂತಲೂ ಇತರರ ಸಂಪತ್ತು ಎನ್ನುವುದೇ ಹೆಚ್ಚು ನಿಜ.

—ಕಾರ್ನೇಜಿ

*
* *

ಜಗತ್ತಿನಲ್ಲಿ ಸಂಪೂರ್ಣ ತಪ್ಪು ಎನ್ನುವುದು ಇಲ್ಲವೇ ಇಲ್ಲ. ನಿಂತುಹೋದ ಗಡಿಯಾರ ಕೂಡ ದಿನದಲ್ಲಿ ಎರಡು ಸಲ ಸರಿಯಾಗಿರುತ್ತದೆ

*
* *

ಬರಿ ಶಾಲೆಗಳಲ್ಲಷ್ಟೆ ಶಿಕ್ಷಣ ಪಡೆದಿರುವವನು ಅಶಿಕ್ಷಿತನೇ ಸರಿ.

—ಜಾರ್ಜ ಸಂತಾಯನ

ತಂದೆಯವರ ಕಾಲಕ್ಕೇ ಸಂಪುಷ್ಟಕ್ಕೆ ಬಂದಿತ್ತು. ಶಂ. ಬಾ. ಏಳರಲ್ಲಿದ್ದಾಗ ಬಾಳ ದೀಕ್ಷಿತರು ಕಣ್ಮುಚ್ಚಿದರು. ಮೊದಲಿಂದಲೂ ಶಂಕರರಾಯರ ಆರೋಗ್ಯ ದುರ್ಬಲ. ಮೇಲೆ ತಬ್ಬಲಿತನ, ಬಡತನ. ಇಂಗ್ಲೀಷ್ ಶಾಲೆ ಕಲ್ಪನಾತೀತವಾಗಿತ್ತು. ಗುರ್ಲಹೊಸೂರಲ್ಲೇ ಪ್ರಾಥಮಿಕ ಶಾಲೆ ಮುಗಿಸಿ ಮುಲ್ಕೀ ಪಾಸಾಗ ಬೇಕಾದರೆ ಇಪ್ಪತ್ತು ದಾಟಿತ್ತು. ಅನಾರೋಗ್ಯ, ಬಡತನದಿಂದ ಬಂದ ದೈನ್ಯ, ಆ ದೈನ್ಯವನ್ನು ದೈನ್ಯವೆಂದು ಗುರುತಿಸಬಲ್ಲ ಸಂವೇದನ ಶೀಲತೆ, ಅದರಿಂದೊದಗಿದ ಅಭಿಮಾನಭಂಗ ಈ ಅಭಿಶಾಪಗಳಿಂದ ತಾವು ಚಿಕ್ಕಂದಿನಲ್ಲಿ ಮಂಕು ಹುಡುಗನೆಂದು ಪ್ರಸಿದ್ಧನಾಗಿದ್ದುದಾಗಿ ಶಂ. ಬಾ. ಹೇಳುತ್ತಾರೆ. ನಡುವೆ ಎರಡು ವರ್ಷ ಪುಣೆಯಲ್ಲಿ ತಮ್ಮ ಅಜ್ಜಿಯ ಮನೆಯಲ್ಲಿದ್ದಾಗ ಶಂ. ಬಾ. ಅವರಿಗೆ ಟಿಳಕ, ಗೋಖಲೆಯವರ ಚಟುವಟಿಕೆಗಳಿಂದ ದೇಶಭಕ್ತಿಯೂ ಸಾಮಾಜಿಕ ವಿಚಾರಗಳಲ್ಲಿ ನವೀನ ದೃಷ್ಟಿಯೂ ತಮ್ಮ ಅಜ್ಜಿಯ ಮನೆಯಲ್ಲಿ ಹುಡುಗಿಯರೂ ಶಾಲೆ ಕಾಲೇಜುಗಳಿಗೆ ಹೋಗುತ್ತಿದ್ದುದನ್ನು ಕಂಡು ತಮ್ಮ ನಿರ್ವಿದ್ಯತೆಯ ಅರಿವಿನಿಂದ ಅಧಿಕ ಕ್ಲೇಶವೂ ಉಂಟಾಗಿದ್ದವು. ಈ ಬಗೆಯ ಅನುಭವಗಳಿಂದ ಒಂದು ತರಹದ ಮುದುಡಿಕೊಳ್ಳುವ ಸ್ವಭಾವ ತಮ್ಮಲ್ಲಿ ಶಾಶ್ವತವಾಗಿ ಬೇರುಬಿಟ್ಟಿರಬೇಕೆಂದು ಶಂ.ಬಾ.ಬರೆದಿದ್ದಾರೆ.

ಆದರೆ ಪುಣೆಯಿಂದ ಅವರು ರಾಷ್ಟ್ರೀಯ ಭಾವನೆಯನ್ನೂ ಜಿಜ್ಞಾಸೆಯನ್ನೂ ಸತ್ಯವಾದದಲ್ಲಿ ಒಂದು ದಿಟ್ಟತನವನ್ನೂ ಸಂಪಾದಿಸಿಕೊಂಡು ಬಂದಿದ್ದರು. ಟ್ರೇನಿಂಗ್ ಕಾಲೇಜಿನಲ್ಲಿ ಅವರು ಉಪಟಳಗಾರನೆಂದು ಹೆಸರಾದರು. ಅಧ್ಯಾಪಕರಿಗೆ ಸವಾಲು ಹಾಕುವುದು, ಸಹ-ವಿದ್ಯಾರ್ಥಿಗಳಲ್ಲಿ ದೇಶಕ್ಕಾಗಿ ಏನಾದರೂ ಮಾಡಬೇಕೆಂಬ ಹಂಬಲವನ್ನು ಪ್ರಚೋದಿಸುವುದು ಅವರ ಉಪಟಳಗಳ ಮಾದರಿಗಳಾಗಿದ್ದವು. “ಮನುಷ್ಯ ಹೋಗಿ ಮಾಸ್ತರನಾದ, ಮಾಸ್ತರ ಹೋಗಿ ಮನುಷ್ಯನಾಗಲು ನಾವು ಯತ್ನಿಸಬೇಡವೆ?” ಎಂದವರು ಕೇಳುತ್ತಿದ್ದರು. ಆದರೆ ಇದೆಲ್ಲವೂ ಅವರ ಅಭ್ಯಾಸಕ್ಕೆ ಆತಂಕವಾಗಲಿಲ್ಲ. ಕೊನೆಯ ಪರೀಕ್ಷೆಯಲ್ಲಿ ಎರಡನೇ ರ್‍ಯಾಂಕ್ ಪಡೆದು ಪಾಸಾದರು.

ಇಂಗ್ಲೀಷ್ ಜ್ಞಾನವಿಲ್ಲದೆ ಆಧುನಿಕ ಪ್ರಪಂಚಕ್ಕೆ ಪ್ರವೇಶ ಅಸಾಧ್ಯವೆಂದರಿತು ಅವರು ABCಯಿಂದ ಅಭ್ಯಾಸ ಪ್ರಾರಂಭಿಸಿದ್ದರು. ಆಗವರಿಗೆ ೨೩. ಟ್ರೇನಿಂಗ್ ಮುಗಿದು ಚಿಕ್ಕೋಡಿಯಲ್ಲಿ ಹೊಸದಾಗಿ ಪ್ರಾರಂಭವಾದ ಹೈಸ್ಕೂಲಿನಲ್ಲಿ ಕನ್ನಡ ಶಿಕ್ಷಕರಾಗಿ ಸೇರಿದ ಮೇಲೂ ಅಭ್ಯಾಸ ಮುಂದುವರಿಸಿದರು. ಅಲ್ಲಿ ಅವರಿದ್ದುದು ಆರೇ ತಿಂಗಳು. ರಾಷ್ಟ್ರೀಯ ಚಳವಳಿಯಲ್ಲಿ ಸಕ್ರಿಯವಾಗಿ ಅವರು ಆಸಕ್ತಿ ವಹಿಸಿದ ವರದಿಗಳಿಂದ ಸರಕಾರಕ್ಕೆ ಕಣ್ಣು ಕಿಸುರಾಗಿತ್ತು. ಶಾಲಾ ಮಕ್ಕಳಲ್ಲಿ ಸರಕಾರಿ ಮೆಡಲ್ ಬಹಿಷ್ಕಾರ ಚಳವಳಿಯನ್ನು ಸಂಘಟಿಸಿ, ಇನ್‌ಸ್ಪೆಕ್ಟರರು ಬರುವಾಗ ಖಾಲಿ ಕ್ಲಾಸು ಎದುರಾಗುವಂತೆ ಮಾಡಿದ್ದಕ್ಕಾಗಿ ಅವರನ್ನು ಶಿಕ್ಷಾರೂಪದಲ್ಲಿ ಬೇರೆ ಹಳ್ಳಿಗೆ ವರ್ಗಾಯಿಸಲಾಯಿತು.

ಶಂ. ಬಾ. ಅವರಲ್ಲಿ ರಾಷ್ಟ್ರೀಯ ಭಾವನೆ ಉತ್ಕಟವಾಗಿತ್ತು. ಆದರೆ ನೇರವಾಗಿ ಸೆರೆಮನೆ ಸೇರಲು ಅವರ ಸಂಸಾರಭಾರ ಅವಕಾಶ ಕೊಡಲಿಲ್ಲ. “ಸೆರೆಮನೆವಾಸದ ಕಾಲದಲ್ಲಿ ನನ್ನ ಸಂಸಾರ ಭಾರ ಹೊರಲು ಕೆಲ ನಾಯಕರು ಭರವಸೆ ಕೊಟ್ಟರಾದರೂ ತನ್ನ ಕಾಲ ಮೇಲೆ ನಿಲ್ಲದ ದೇಶಭಕ್ತಿ ಪ್ರದರ್ಶನ ನನಗೆ ಹಿಡಿಸಲಿಲ್ಲ” ಎಂದವರು ಹೇಳುತ್ತಾರೆ. ಆದರೆ ಅವರ ವಿವಿಧ ಬರವಣಿಗೆ ಚಟುವಟಿಕೆಗಳಿಗಾಗಿ ಕೊನೆಗೆ ಧಾರವಾಡದ ಅವರ ಮನೆಯಲ್ಲೇ ದಿಗ್ಬಂಧನ, ದಿನಕ್ಕೆರಡು ಬಾರಿ ಪೋಲೀಸು ದರ್ಶನ—ಅನುಭವಿಸುವ ಪ್ರಸಂಗ ಬಾರದಿರಲಿಲ್ಲ. (೧೯೩೪).

ಶಂ. ಬಾ. ಜೋಶಿಯವರ ಮನೆಮಾತು ಮರಾಠಿಯಾದರೂ ಅವರ ಕನ್ನಡಾಭಿಮಾನ ಮೊದಲಿಂದಲೂ ಅಧಿಕವಾಗಿತ್ತು. ಧಾರವಾಡದ ಕನ್ನಡ ಚಟುವಟಿಕೆಗಳಲ್ಲಿ ಅವರು ಮುಖ್ಯ ಪಾತ್ರ ವಹಿಸುತ್ತಿದ್ದರು. ಧಾರವಾಡದ ತರುಣರಲ್ಲಿ ರಾಷ್ಟ್ರೀಯತೆಯನ್ನು ಕುದುರಿಸುವುದರಲ್ಲಿ ತೊಡಗಿದ “ಬಾಲ ಮಾರುತಿ” ಸಂಸ್ಥೆ

ಯಲ್ಲಿ ಮರಾಠಿ ಅಭಿಮಾನಿಗಳು ಕನ್ನಡವನ್ನು ಕಡೆಗಣಿಸುತ್ತಿದ್ದಾರೆಂದು ಕನ್ನಡ ಚಟುವಟಿಕೆಗಳಿಗೆ ಕೇಂದ್ರವಾಗಲು "ಚಿನ್ನಮಾರುತಿ"ಯನ್ನು ಸಂಘಟಿಸುವಲ್ಲಿ ಆಗ ಉದೀಯಮಾನ ಕವಿಗಳಾಗಿದ್ದ ಶ್ರೀ ಬೇಂದ್ರೆಯವರೊಡನೆ ಸಹಕರಿಸಿದರು. ಈ ಸಂಸ್ಥೆ ಸಾಹಿತ್ಯ ಚಟುವಟಿಕೆಗಳ ಮೂಲಕ ತುಂಬ ಜನಪ್ರಿಯವಾಯಿತು. ಕರ್ನಾಟಕದ ಕುಲಪುರೋಹಿತ ಆಲೂರ ವೆಂಕಟರಾಯರ ನೇತೃತ್ವದಲ್ಲಿ ಪ್ರಾರಂಭವಾದ "ಜಯಕರ್ನಾಟಕ"ದ ಆದಿಮ ದಿವಸಗಳಲ್ಲಿಯೂ ಅನಂತರ ಆ ಪತ್ರಿಕೆ ಗೆಳೆಯರ ಗುಂಪಿನ ಕೈಗೆ ಬಂದಾಗಲೂ ಶಂ. ಬಾ. ಜೋಶಿಯವರ ಸಂಘಟನಾ ಶಕ್ತಿಯ ಕೈವಾಡ ಅದರಲ್ಲಿತ್ತು. ೧೯೨೮ ರಲ್ಲಿ ಬೆಳಗಾವಿಯಲ್ಲಿ ಮಹಾರಾಷ್ಟ್ರ ಸಾಹಿತ್ಯ ಪರಿಷತ್ತು ಸೇರಲಿದ್ದಾಗ ಬೆಳಗಾವಿಯ ಕನ್ನಡತನವನ್ನು ಪ್ರಸ್ಥಾಪಿಸಲು ಏರ್ಪಡಿಸಲ್ಪಟ್ಟ ಇತಿಹಾಸ ಪ್ರಸಿದ್ಧ ಕರ್ನಾಟಕ ಪರಿಷತ್ತಿನ ಸೂತ್ರಧಾರರಲ್ಲಿಯೂ ಇವರೊಬ್ಬರಾಗಿದ್ದರು.

ಶಂ. ಬಾ. ಅವರ ಕನ್ನಡಾಭಿಮಾನ ಹಲ ವೇಳೆ ಬಲು ಉಗ್ರವಾಗಿ ಪ್ರಕಟವಾದದ್ದೂ ಉಂಟು. ಧಾರವಾಡದ ಒಂದು ಅಖಾಡಾಕ್ಕೆ ಮರಾಠಿ ಸಂತರ ಹೆಸರಿಡುವುದನ್ನು ಬಹಿರಂಗವಾಗಿ ವಿರೋಧಿಸಿ ಕೆಲ ಪ್ರತಿಷ್ಠಿತರ ವಿರೋಧವನ್ನು ಕಟ್ಟಿಕೊಂಡರು. ಬೆಳಗಾವಿಯಲ್ಲಿಯೂ ಅವರು ಮರಾಠಿಯ ಪ್ರತಿಷ್ಠೆಯನ್ನು ಇಳಿಸಲು ನಡೆಸಿದ ಚಟುವಟಿಕೆಗಳು ಅವರಿಗೆ ವೈಯಕ್ತಿಕವಾಗಿ ಹಿತವನ್ನು ಮಾಡಲಿಲ್ಲ.

ಮರಾಟಿಗರಲ್ಲಂತೂ ಶಂ. ಬಾ. ಅವರು ಎಂಥ "ದ್ರೋಹಿ"ಯೆಂದು ಬಗೆಯಲ್ಪಟ್ಟಿದ್ದರೆಂದರೆ ಧಾರವಾಡದ ಕೆಲ ಸ್ವಜಾತೀಯ ಮರಾಟಿಗರು ಅವರಿಗೆ, "ಕನ್ನಡ ಕನ್ನಡವೆಂದು ಕುಣಿ. ನೀನು ಸತ್ತರೆ ಹೆಣ ಎತ್ತಲು ನಾವಾರೂ ಬರುವುದಿಲ್ಲ" ಎಂದು ಹೆದರಿಸಿದರಂತೆ. ಆದರೆ ಶವ ಸಂಸ್ಕಾರದಿಂದ ಸತ್ತವನಿಗೆ ಸದ್ಗತಿಯಾಗುತ್ತದೆಂದು ನಂಬುವವರಲ್ಲಿ ಶಂ. ಬಾ. ಒಬ್ಬರಲ್ಲ !

ಈ ಎಲ್ಲ ಸಂಘಟನಾ ಯತ್ನಗಳಿಂದ ಅವರಲ್ಲಿ ಏನನ್ನಾದರೂ ಸಾಧಿಸಬಲ್ಲೆ ಎಂಬ ಆತ್ಮವಿಶ್ವಾಸ ಬಲಗೊಂಡಿತು. ಆದರೆ ಎರಡು ಸಂಗತಿಗಳು ಸಾರ್ವಜನಿಕ ಕಾರ್ಯಗಳಲ್ಲಿ ನೋವುಗಳನ್ನೂ ತಂದವು. ಒಂದು ಅವರ ಸ್ವಭಾವ. ಅವರು ಪುಣೆಯಲ್ಲಿದ್ದು ಸತ್ಯವನ್ನು ನಿಷ್ಠುರವಾಗಿ ಹೇಳಲು ಅಭ್ಯಾಸ ಮಾಡಿಕೊಂಡು ಬಂದಿದ್ದರು. ಇದು ಅವರ ಸುತ್ತ ಜನರನ್ನು ಕಲೆಹಾಕಿಕೊಳ್ಳಲು ಪ್ರೋತ್ಸಾಹದಾಯಕವಲ್ಲ ಎಂದು ಗೊತ್ತಾಯಿತು. ದುಡಿಯುವವರೇ ಬೇರೆ, ಫೋಟೋ ತೆಗೆಸಿಕೊಳ್ಳುವವರೇ ಬೇರೆ ಎಂದೂ ಅವರ ಅನುಭವಕ್ಕೆ ಬಂತು. ಇದನ್ನು ಸಹಿಸಲಾರದ್ದರಿಂದ ಶಂ. ಬಾ. ಅವರಿಗೆ ಬಹು ಕಾಲ ಯಾವ ಸಂಘಟನೆಯಲ್ಲೂ ದುಡಿಯುವುದು ಸಾಧ್ಯವಾಗಲಿಲ್ಲ.

ಶಂ. ಬಾ. ಜೋಶಿಯವರು ಜೀವಿಕೆಗಾಗಿ ೧೯೪೫ ರ ವರೆಗೂ ಶಿಕ್ಷಕವೃತ್ತಿಯನ್ನೇ ನಡೆಸಿದರು. ಶಿಕ್ಷಕನಾಗಿ ಅವರ ಸಾಮರ್ಥ್ಯವೂ ಉತ್ತಮವಾಗಿತ್ತು. ಆದರೆ ಅವರ ಆಕರ್ಷಣೆ ಬರವಣಿಗೆ ಮತ್ತು ಸಂಶೋಧನೆಯ ಕಡೆಗಿತ್ತು.

ಅವರ ಪ್ರಥಮ ಕೃತಿ (೧೯೨೧) ಶ್ರೀ ಅರವಿಂದರ ಜೀವನ ಚರಿತ್ರೆಯನ್ನು ಕುರಿತಾಗಿತ್ತು. ದೇಶಭಕ್ತಿಯನ್ನು ಪ್ರಚೋದಿಸುವುದು ಅದರ ಧ್ಯೇಯವಾಗಿತ್ತು. ಮುಂದೆ ಶ್ರೀ ಮುದವೀಡು ಕೃಷ್ಣರಾಯರು ಸೆರೆಮನೆಗೆ ಹೋದಾಗ ಅವರ "ಧನಂಜಯ" ದಲ್ಲಿಯೂ ಶ್ರೀ ದಿವಾಕರ ರಂಗರಾಯರು ಸೆರೆಯಲ್ಲಿದ್ದಾಗ ಆಲೂರರ ಕೈಕೆಳಗೆ "ಕರ್ಮವೀರ" ದಲ್ಲೂ ಲೇಖನ ಟೀಕೆ ಟಿಪ್ಪಣಿಗಳನ್ನು ಬರೆಯುತ್ತಿದ್ದರು. "ಜಯ ಕರ್ನಾಟಕ" ದಲ್ಲಿ ಅವರು ಬರೆಯುತ್ತಿದ್ದ ಸಾಮಯಿಕ ಟಿಪ್ಪಣಿಗಳು ಕಿಡಿಗಳಾಗಿಯೆ ಇದ್ದವು.

ಜೋಶಿಯವರದು ಭಾವನಾತ್ಮಕ ಬುದ್ಧಿಯಲ್ಲ, ಚಿಕಿತ್ಸಕ ಬುದ್ಧಿ. ವಿಷಯಗಳ ಮೂಲವನ್ನು ಕಂಡುಹಿಡಿಯುವ ಹಟ, ಅವರನ್ನು ಸಂಶೋಧನ ಮಾರ್ಗಕ್ಕೆಳೆಯಿತು. ಇದನ್ನು ಸಾಧ್ಯಮಾಡಿಕೊಳ್ಳಲು ಅವರು ಇಂಗ್ಲೀಷನ್ನು ಬಲು ಕಷ್ಟಪಟ್ಟು ಅರಗಿಸಿಕೊಂಡರು. ನಮ್ಮ ದೇಶದ ಇತಿಹಾಸ ಉಜ್ವಲ

ವಾಗಿತ್ತು. ಆದರ ಅವನತಿ ಏಕಾಯಿತು? "ಕಾವೇರಿಯಿಂದಮಾ ಗೋದಾವರಿ ವರಂ" ಕನ್ನಡ ನಾಡು ಇತ್ತಂತಲ್ಲಾ, ಈಗ ಕೃಷ್ಣೆಯಿಂದ ಕಾವೇರಿಯು ವರೆಗೂ ಉಳಿದಿಲ್ಲ. ಅದು ಗೋದಾವರಿಯು ವರೆಗೂ ಇದ್ದದ್ದು ನಿಜವೇ? ಬರೀ ವೃಥಾಭಿಮಾನವೇ? ದೇಶ ಕಟ್ಟಬೇಕಾದರೆ ಅದರ ನೆಲಕಟ್ಟನಲ್ಲಿರುವರುವ ಕಲ್ಲುಮುಳ್ಳುಗಳನ್ನು ತೆಗೆಯಬೇಕು. ನಮ್ಮ ದೌರ್ಬಲ್ಯದ ಮೂಲವನ್ನು ಕಾಣಬೇಕು, ಎಂದವರು ಸಂಶೋಧನೆಗಿಳಿದರು.

ಗೋದಾವರಿಯು ವರೆಗೆ ಕನ್ನಡ ನಾಡು ಇದ್ದದ್ದು ನಿಜವೇ? ಇದ್ದರೆ ಅದರ ಅವಶೇಷಗಳು ಈಗ ಮಹಾರಾಷ್ಟ್ರವೆನಿಸಿದ ಪ್ರದೇಶದಲ್ಲಿ ಇರಬೇಕಲ್ಲ. ಸ್ಥಳನಾಮ, ಸಂಸ್ಕೃತಿ, ಸಂಪ್ರದಾಯಗಳು, ದೇವತೆಗಳು ಇವುಗಳನ್ನು ಹೋಲಿಸಿ ಶಂ. ಬಾ. ಅವರು ಕನ್ನಡ ನಾಡು ಬಹಳ ಹಿಂದೆ ಗೋದಾವರಿಯುವರೆಗೇಕೆ, ನರ್ಮದೆಯು ವರೆಗೂ ಹಬ್ಬಿತೆಂದು ತೀರ್ಮಾನಿಸಿದರು.

ಒಂದು ಪ್ರಶ್ನೆಗೆ ಉತ್ತರ ದೊರಕಿದಾಗ ಇನ್ನೊಂದು ಪ್ರಶ್ನೆ ಎದುರಾಗುತ್ತಿತ್ತು. "ನಿನ್ನೆಯಿಲ್ಲದೆ ಇಂದಿಲ್ಲ, ಇಂದಿನಿಂದಲೇ ನಾಳೆ ಉತ್ಪತ್ತಿಯಾಗುತ್ತದೆ. ಈ ಮೂರೂ ಸ್ತರಗಳ ಕಾರಣ ಪರಿಣಾಮಗಳನ್ನು ಸರಿಯಾಗಿ ವಿವರಿಸಲಾರದ ಊಹೆ ಗ್ರಾಹ್ಯವಾಗದು." ಹೀಗಾಗಿ ಶಂ. ಬಾ. ಅವರು ದ್ರಾವಿಡ- ಆರ್ಯ, ಕನ್ನಡ- ಸಂಸ್ಕೃತ- ವೈದಿಕ ಇವೆಲ್ಲವುಗಳ ಸಂಬಂಧವನ್ನು ಬೆದಕುತ್ತ ವೇದಗಳ ವರೆಗೂ ಹೋದರು. ಹೆಸರುಗಳನ್ನು ಪರೀಕ್ಷಿಸಿದರು, ಕಥೆಗಳನ್ನು ಐತಿಹ್ಯಗಳನ್ನೂ ಹಿಂಜಿದರು, ದೇವತೆಗಳ ಉನ್ನತಿ ಅವನತಿಗಳ ಜಾಡು ಹಿಡಿದರು. ಇತಿಹಾಸ ಓದಿದರು, ಇತಿಹಾಸದ ತತ್ವಜ್ಞಾನವನ್ನೂ ಭಾಷೆ ಸಂಸ್ಕೃತಿಗಳ ತತ್ವಜ್ಞಾನವನ್ನೂ ಅಭ್ಯಸಿಸಿದರು. ಕ್ಯಾಸಿಯರರ್ ಮತ್ತು ಕಾರ್ಲ್ ಮ್ಯಾನ್‌ಹೈಮರು ಅವರ ಮೇಲೆ ತುಂಬ ಪ್ರಭಾವ ಬೀರಿದರು.

ಫಲವಾಗಿ ೧೯೩೩ ರಲ್ಲಿ "ಕಣ್ಮರೆಯಾದ ಕನ್ನಡ"ದಿಂದ ಪ್ರಾರಂಭವಾದ ಅವರ ಸಂಶೋ ಗ್ರಂಥಗಳ ಸಂಖ್ಯೆ ಈಗ ೧೨ ಮೀರಿದೆ. (ಕಣ್ಮರೆಯಾದ ಕನ್ನಡ, ಮೂಲ ಮಹಾರಾಷ್ಟ್ರ (ಮರಾಠಿ), ಕರ್ನಾಟಕದ ವೀರ ಕ್ಷತ್ರಿಯರು, ಕನ್ನಡ ನುಡಿಯು ಹುಟ್ಟು, ಶಿವರಹಸ್ಯ, ಎಡೆಗಳು ಹೇಳುವ ಕನ್ನಾಡ ಕಥೆ, ಕನ್ನುಡಿಯು ಜೀವಾಳ, ಯಕ್ಷ ಪ್ರಶ್ನೆ, ಮರ್ಹಾಟೀ ಸಂಸ್ಕೃತಿ: ಕಾಹೀಂ ಸಮಸ್ಯಾ (ಮರಾಠಿ), ಹಾಲು ಮತದರ್ಶನ, ಸಮಾಜದರ್ಶನ, ವೇದಕಾಲೀನ ದೇವಿಯರು (ಮರಾಠಿ), ಮತ್ತು ಕರ್ನಾಟಕ ಸಂಸ್ಕೃತಿಯು ಪೂರ್ವಪೀಠಿಕೆ). ಇದಲ್ಲದೆ ಸಾಹಿತ್ಯಪರಿಷತ್ತು ಕರ್ಣನ ಮೂರು ಚಿತ್ರಗಳನ್ನು ಕುರಿತು (ವ್ಯಾಸ, ಪಂಪ, ನಾರಣಪ್ಪ) ಮದ್ರಾಸಿನಲ್ಲಿ ಅವರ ವ್ಯಾಖ್ಯಾನ ಏರ್ಪಡಿಸಿತ್ತು.

ಕನ್ನಡದ ಮೂಲಜನಾಂಗ "ಕಣ್ಣ"ರು, ಅವರ ನಾಡು ಕನ್ನಾಡು, ಅದೇ ಮುಂದೆ "ಕನ್ನಡ"ವಾಯಿತು. ಕನ್ನಾಡಿಗರ ನುಡಿಗೆ ಕನ್ನುಡಿ ಎಂಬುದು ಚೆನ್ನು ಎಂದು ಅವರು ತೀರ್ಮಾನಿಸಿದರು. ಸ್ಥಳನಾಮಗಳಿಂದ ಸಂಸ್ಕೃತಿಯು ಮುಖಗಳನ್ನು ಪ್ರದರ್ಶಿಸಿದರು. ದೈವದೇವತೆಗಳ ಮೂಲ ಶೋಧಿಸಿ ಅವು ಹೇಗೆ ಆಯಾ ಜನಾಂಗದ ವಿಚಾರಗಳನ್ನೂ ಆಕಾಂಕ್ಷೆಗಳನ್ನೂ ಪ್ರಕಟಿಸುತ್ತವೆಯೆಂದು ತೋರಿಸಿದರು. ಈಗ ಪ್ರಕಟವಾಗುತ್ತಿರುವ "ಕರ್ನಾಟಕ ಸಂಸ್ಕೃತಿಯು ಪೂರ್ವ ಪೀಠಿಕೆ"ಯಲ್ಲಿ ಉಪನಿಷತ್ಕಾಲದಿಂದ ೧೦ ನೇ ಶತಮಾನದ ವರೆಗೆ ಕರ್ನಾಟಕದ ಮನಸ್ಸು ಹೇಗೆ ರೂಪುಗೊಂಡಿತೆಂದು ವಿವೇಚಿಸಿದ್ದಾರೆ. "ಹಾಲುಮತದರ್ಶನ"ದಲ್ಲಿ ಭಾರತದಲ್ಲಿ ಪ್ರಚುರವಾದ ಸವಿತೃ ಮತ್ತು ಅಪ-ರಸ ಸಂಪ್ರದಾಯಗಳ ಸುದೀರ್ಘ ವಿವೇಚನೆ ನಡೆದಿದೆ. ರಸ ಸಂಪ್ರದಾಯದ ಸಂಶೋಧನೆಯೇ ತಮ್ಮ ಜೀವನದ ಅತಿ ಸಂತೃಪ್ತಿಕರ ಕಾರ್ಯವೆಂದು ಅವರು ಹೇಳುತ್ತಾರೆ. ಅದಕ್ಕೆ ಪಟ್ಟ ಶ್ರಮದಿಂದ ಅವರಿಗೆ ತೀವ್ರ ಅನಾರೋಗ್ಯವಾಯಿತು. ಆದರೆ ಅದು ಪ್ರಕಟವಾದ್ದರಿಂದಲೇ ತಾವು ಬದುಕಿ ಉಳಿದುದಾಗಿ ಅವರು ಹೇಳುತ್ತಾರೆ. ಅವರ ಸಂಶೋಧನ ಕಾರ್ಯದ ವಿಸ್ತಾರ ವಿವರಗಳನ್ನು ಇಂಥ ಪರಿಚಯ ಲೇಖನದಲ್ಲಿ ದಿಗ್ದರ್ಶಿಸುವುದಕ್ಕೂ

ಎಡೆ ಸಾಲದು.

ಶಂ. ಬಾ. ಅವರ ಕೆಲ ನಿರ್ಣಯಗಳನ್ನು ಟೀಕಿಸುವವರಿದ್ದಾರೆ. ವಿಚಾರಪೂರ್ಣ ಟೀಕೆಗಳನ್ನು ಅವರು ಸ್ವಾಗತಿಸುತ್ತಾರೆ. ಅವರು ಶಿವನನ್ನು ವಿಮರ್ಶಿಸಿ ಕರ್ನಾಟಕದಲ್ಲಿಯೂ ಮರಾಠಿ ಸಂಸ್ಕೃತಿಗೆ ಕನ್ನಡ ಮೂಲವೆಂದು ಎತ್ತಿ ತೋರಿಸಿ ಮಹಾರಾಷ್ಟ್ರದಲ್ಲಿಯೂ ಅತಿರೇಕವಾದಿಗಳ ಕೋಪಭಾಜನರಾಗಿದ್ದಾರೆ.

ಆದರೆ ವಿಚಾರವಂತರು ಅವರ ಯತ್ನಗಳನ್ನು ಪ್ರಶಂಸಿಸಿದರು. ಬಿ. ಎಂ. ಶ್ರೀಯವರು "ಕನ್ನಡ ನುಡಿಯ ಹುಟ್ಟು"-ಅನ್ನು ಆ ಹತ್ತು ವರ್ಷಗಳಲ್ಲಿ ಹೊರಬಂದ ಶ್ರೇಷ್ಠ ಕೃತಿಗಳಲ್ಲೊಂದೆಂದು ಪ್ರಶಂಸಿಸಿದರು. ಶ್ರೀ ಗೋವಿಂದ ಪೈಯವರು ಅವರ ಯೋಗ್ಯತೆಗೆ ಮೆಚ್ಚಿಗೆ ವ್ಯಕ್ತಪಡಿಸಿದರು. ಪಂಡಿತಮನ್ಯರೇನೇ ಅನ್ನಲಿ ನಾಡಿನ ಮೂಲೆ ಮೂಲೆಗಳಿಂದ ಚಿಕಿತ್ಸಕ ವೃತ್ತಿಯವರು ಬರೆಯುತ್ತಿರುವ ಪತ್ರಗಳು ಅವರಿಗೆ ಅವರ ಕಾರ್ಯದಲ್ಲಿ ಮುಖ್ಯವಾಗಿ ಬಲವನ್ನು ಕೊಟ್ಟಿವೆ.

ಶಂ. ಬಾ. ಅವರು ಸಾಮಾಜಿಕ ಚಿಂತಕರೂ ಹೌದು. ಅವರ "ಯಕ್ಷಪ್ರಶ್ನೆ" ಭಾರತದಲ್ಲಿ ಪ್ರಜಾಪ್ರಭುತ್ವ ದಕ್ಕಬೇಕಾದರೆ ಜಾತಿ ಧರ್ಮ ಭಾವನೆಯಿಂದ ಹರಿಹಂಚಾಗದ ಏಕಾತ್ಮಕ ಸಮಾಜ ಸ್ಥಾಪನೆಗಾಗಿ ನಾವು ನಮ್ಮ ಆಚಾರ ವಿಚಾರಗಳನ್ನು ಮಾರ್ಪಡಿಸಿಕೊಳ್ಳಲೇಬೇಕೆಂದು ಪ್ರತಿಪಾದಿಸಿದ್ದಾರೆ. ಶಂ. ಬಾ. ಅವರ ಅಭಿಪ್ರಾಯದಲ್ಲಿ ನಾವು ಋತ-ಸತ್ಯ ನಿಷ್ಠವಾದ ವೈದಿಕ ದೈವತ ಕಲ್ಪನೆಯಿಂದ ಇಳಿದು ಪಾಪ ವಿಮೋಚಕ ದೇವನ ಕಲ್ಪನೆಗೆ ಬಡಲಾದುದು ನಮ್ಮ ಇಳಿಗಾಲದ ಒಂದು ಕಾರಣ. ವೇದಕಾಲದಲ್ಲಿ ನಾವು ಜೀವನ ಸಂಮುಖರಾಗಿದ್ದೆವು, ಅನಂತರ ಜೀವನ ವಿಮುಖರಾಗಿ ಕೆಟ್ಟೆವು. ಆಧುನಿಕ ಯುಗದಲ್ಲಿಯೂ ನಾವು ತಂಡಗಳ ಯುಗದ ದೇವತೆಗಳಿಗೆ ಅಂಟಿಕೊಂಡಿದ್ದೇವೆಂದು ಅವರು ಹೇಳುತ್ತಾರೆ. ನಾವು ಆದರ್ಶವಾದಿಗಳಾಗಬೇಕು, ವಸ್ತುಸ್ಥಿತಿಯನ್ನರಿತು ಆದರ್ಶ ಸಾಧನೆಗೆ ದುಡಿಯಬೇಕು, ಕೇವಲ ಐಹಿಕ ಸುಖದಿಂದ ಎಂದೂ ಜೀವನ ಸಾರ್ಥಕ್ಯವಾಗದು ಎಂಬುದೇ ಅವರ ತತ್ವಜ್ಞಾನ. ಅದನ್ನು ಬಾಳಲು ಅವರು ಯತ್ನಿಸಿದ್ದಾರೆ.


೭೦ ರಲ್ಲಿ ಅವರು ಇನ್ನೂ ಸಂಶೋಧನೆ ಮುಂದುವರಿಸಿದ್ದಾರೆ. ವೈದಿಕ ದೇವಿಯರನ್ನು ಕುರಿತು ಅವರ ಜಿಜ್ಞಾಸೆ ನಡೆದಿದೆ. ಸಾಧನಕೇರಿಯ ಮನೆಯಲ್ಲಿ ಪತ್ನಿ ಹಾಗು ಮೊಮ್ಮಗಳೊಡನೆ (ಮಗಳ ಮಗಳು) ಅವರು ವಾಸಿಸುತ್ತಿದ್ದಾರೆ. ಅವರ ಇಬ್ಬರು ಗಂಡು ಮಕ್ಕಳಲ್ಲಿ ಹಿರಿಯರು ಕೇಂಬ್ರಿಜ್, ಶಿಕ್ಯಾಗೊ, ಸ್ವಿಜರ್ಲಂಡುಗಳಲ್ಲಿ ಉಚ್ಚ ಶಿಕ್ಷಣ ಪಡೆದು ಈಗ ಸೀಬಾ ಕಂಪನಿಯಲ್ಲಿ ಸೇಂದ್ರಿಯ ರಸಾಯನ ಶಾಸ್ತ್ರ ಸಂಶೋಧಕರಾಗಿದ್ದಾರೆ. (ಈ ಸಂಚಿಕೆಯಲ್ಲಿ ಸ್ವಿಜರ್ಲಂಡ್ ಮೇಲಿನ ಲೇಖ ಅವರದೇ). ಎರಡನೆಯವರು ಇಸ್ರೇಲಿನಲ್ಲಿ ರಿಪ್ರೊಡಕ್ಟಿವ್ ಬಯಾಲಜಿ ಮೇಲೆ ಸಂಶೋಧನೆ ನಡೆಸುತ್ತಿದ್ದಾರೆ. ಇಬ್ಬರೂ ಸ್ವಪ್ರಯತ್ನದಿಂದಲೇ ಛಾತ್ರವೃತ್ತಿ ಬಲದಿಂದ ಇದನ್ನು ಸಾಧ್ಯ ಮಾಡಿಕೊಂಡಿದ್ದಾರೆ. *



ರಾಜ, ಮಂತ್ರಿ, ವೈದ್ಯ ಮತ್ತು ಯತಿ ಜನರಿಗೆ ಮುಪ್ಪು ಶೋಭೆಯನ್ನು ತಂದರೆ ವೇಶ್ಯೆ, ಜಟ್ಟಿ ಮತ್ತು ಗಾಯಕರನ್ನು ಅದು ವಿಡಂಬನೆ ಮಾಡುತ್ತದೆ.

* * *

ಯಾವನು ಪ್ರಶ್ನೆ ಕೇಳುತ್ತಾನೊ ಅವನು ಮೊದಲಿನ ೫ ಮಿನಿಟುಗಳವರೆಗೆ ಮಾತ್ರ ಮೂರ್ಖನಿರುತ್ತಾನೆ. ಆದರೆ ಯಾವನು ಎಂದೂ ಪ್ರಶ್ನೆ ಕೇಳುವುದಿಲ್ಲವೊ ಅವನು ಸದಾ ಸರ್ವದಾ ಮೂರ್ಖನಾಗಿಯೆ ಇರುತ್ತಾನೆ.



ನೆರಹಿನ ಸುರುಳಿ

ಗಾಂಧೀಜಿ ನನಗೇನು ಮಾಡಿದರು ?

ಬರೆದವ : ಒಬ್ಬ ಸಾಮಾನ್ಯ

ಗಾಂಧೀಜಿಯ ಜನ್ಮ ಶತಾಬ್ದಿ ಹತ್ತಿರ ಹತ್ತಿರವಾಗುತ್ತಿರುವಾಗ ಆ ಮಹಾತ್ಮನಿಂದ ನನ್ನ ಜೀವನದ ಮೇಲಾದ ಪರಿಣಾಮಗಳನ್ನು ಚಿಂತಿಸುತ್ತಿರುತ್ತೇನೆ. ನಾನು ನನ್ನನ್ನು ಗಾಂಧೀವಾದಿಯೆಂದು ಕರೆದುಕೊಳ್ಳಲಾರೆ. ಈ ದೇಶದಲ್ಲಿ ನಿಜವಾಗಿ ಎಲ್ಲ ವಿಧದಿಂದ ಗಾಂಧೀವಾದಿ ಎನ್ನಿಸಿಕೊಳ್ಳುವವರು ಕೈಬೆರಳಲ್ಲೆಣಿಸುವಷ್ಟು ಜನ ಇದ್ದಾರೋ ಇಲ್ಲವೋ. ಏಕೆಂದರೆ ಗಾಂಧೀವಾದವೆಂಬುದೊಂದು ತರ್ಕಬದ್ಧವಾದ ತಾತ್ವಿಕ ಮೀಮಾಂಸೆಯೆಂದು ನಾನೆಣಿಸುವುದಿಲ್ಲ. ಅದು ಎತ್ತರಕ್ಕೆ ಹಾರುವ ಬೌದ್ಧಿಕ ಕಸರತ್ತಲ್ಲ. ಅದು ಒಂದೊಂದೇ ಮೆಟ್ಟಲು ಹತ್ತಿ ನೆಲದ ಸ್ಪರ್ಶವನ್ನು ಬಿಡದೆನೇ ಎತ್ತರದಲ್ಲಿ ಬಾಳುವ ಜೀವನವಿಧಾನ. ಅದು ಬೌದ್ಧಿಕ ಕಸರತ್ತಿಗಿಂತಲೂ ಕಠಿನವಾದ ಕಸರತ್ತು. ಏಕೆಂದರೆ ತಾನು ಮಾಡಿ ತೋರಿಸಲಾರದ್ದನ್ನು ಆಡಿ ತೋರಿಸುವುದು ಗಾಂಧೀವಾದಕ್ಕೊಂದು ದ್ರೋಹ. ಮತ್ತೆ ನಮ್ಮಲ್ಲಿ ಯಾರು ತಾನೇ ಸ್ವತಃ ಮಾಡಲಾರದ್ದನ್ನು ಉಪದೇಶಿಸಲು ಆತುರಪಡುವುದಿಲ್ಲ? ನಿಜವಾದ ಗಾಂಧೀವಾದಿ ಗಾಂಧಿಯೊಬ್ಬನೆಯೋ ಏನೋ.

ಆದರೂ ನಮ್ಮೀ ದೇಶದಲ್ಲಿ ತೀರ ಗಾಂಧೀವಾದಿಯಲ್ಲದವನು ಯಾರಿದ್ದಾನು? ಗಾಂಧಿಯ ಶಕ್ತಿ ಇಲ್ಲಿಯ ನೆಲ ನೀರು ಗಾಳಿಗಳಲ್ಲಿ ಬೆರೆತುಹೋಗಿದೆ. ಯಾವುದೋ ಹಿತಂಕರವಾದ ವಿಕಿರಣಶೀಲ ಧಾತುವಿನ ಹಾಗೆ ಅದು ಶತಮಾನಗಳ ಕಾಲ ನಮ್ಮೀ ದೇಶದಲ್ಲಿ ತನ್ನ ವಿದ್ಯುತ್ಕಣಗಳನ್ನು ವಿಸರ್ಜಿಸುತ್ತಲೇ ಉಳಿಯುವುದು. ಗಾಂಧಿಯನ್ನು ಕೊಂದವನೂ ಮೊದಲು ಅವನನ್ನು ನಮಿಸಿದನಂತಲ್ಲ.

ನನಗೆ ಎಂಟು ವರ್ಷವಾಗಿದ್ದಿರಬೇಕು. ಆಗ ನಾನಿದ್ದದ್ದು ಮಲೆನಾಡಿನ ಕೊಂಪೆಯಲ್ಲಿ. ೧೯೨೨ ಇರಬಹುದು. ಪತ್ರಗಳೇ ವಾರಕ್ಕೊಮ್ಮೆ ಬರುತ್ತಿದ್ದ ಸ್ಥಳ. ರಾಜಕಾರಣವೆಲ್ಲಿಂದ ಬರಬೇಕು? ಅಲ್ಲಿ ನಾನು ಮೊದಲ ಬಾರಿ ಗಾಂಧಿಯನ್ನು ಕಂಡೆ— ಯಾರೋ ಜವಳಿ ಹೊತ್ತು ಮಾರುವವನು ತಂದಿದ್ದ ಖಣಗಳ ಗಂಟಿನಲ್ಲಿ. ೪೫ ವರ್ಷಗಳ ಹಿಂದಿನ ಆ ಖಣ ಇಂದಿಗೂ ನಿಚ್ಚಳವಾಗಿ ನನ್ನ ನೆನಪಿನಲ್ಲಿ ನಿಂತುಹೋಗಿದೆ. ಕರಿಯ ಖಣದ ಮೈಮೇಲೆಲ್ಲ ಸಾಲುಸಾಲಾಗಿ महात्मा गांधी की जै ಎಂದು ಬಾಲಬೋಧ ಲಿಪಿಯಲ್ಲಿ ನೇಯ್ದಿತ್ತು. ವ್ಯಾಪಾರಿ— ಅವನ ಹೆಸರೇಕೆ, ಮುಖ ಕೂಡ ಸ್ಮರಣೆಯಲ್ಲಿಲ್ಲ— ಗಾಂಧೀ ಮಹಾತ್ಮನ ಹಿರಿಮೆಯನ್ನು ಬಣ್ಣಿಸಿದ. ಅವನ ಮಹಿಮೆಯಿಂದ ರೋಗಗಳು ವಾಸಿಯಾಗುತ್ತವೆ ಎಂದ. ನನ್ನ ತಾಯಿಗೆ ಹೆಗಲೊಂದು ನೋವಿತ್ತು. ತೋಳನ್ನು ಸರಿಯಾಗಿ ಮೇಲೆತ್ತಲು ಆಗುತ್ತಿರಲಿಲ್ಲ. ಗಾಂಧಿಗೆ ಒಂದು ರೂಪಾಯಿ ಕಾಣಿಕೆ ಹೇಳಿಕೊಳ್ಳಿ, ಗುಣವಾಗುತ್ತೆ, ಎಂದ

ತಾಯಿ ಹರಸಿಕೊಂಡರು. ಕೆಲವು ದಿನಗಳಲ್ಲೇ ಗುಣವಾಯಿತು. ಯಾರ ಮೂಲಕವೋ ಒಂದು ರೂಪಾಯಿ ಕಳಿಸಿದರು ತಾಯಿ. ಗಾಂಧೀಜಿ ಆಗ ತಿಲಕ ಸ್ವರಾಜ್ಯ ಫಂಡಿಗೆ ಹಣ ಕೂಡಿಸುತ್ತಿದ್ದರೆಂದು ಎಷ್ಟೋ ವರ್ಷಗಳ ನಂತರ ಓದಿ ನನ್ನ ತಾಯಿಯ ರೂಪಾಯಿ ಆ ಫಂಡು ಸೇರಿತೆಂದು ತರ್ಕಿಸಿದೆ. ಗಾಂಧೀ ಮಹಿಮೆಯಿಂದ ತಾಯಿಗೆ ಗುಣವಾಯಿತು ಎಂದು ನಂಬುವಷ್ಟು ಮೂಢನಾನಲ್ಲ. ಆದರೂ ಆ ತರಳ ವಯಸ್ಸಿನಲ್ಲಿ ಗಾಂಧಿ ನನ್ನ ಮನಸ್ಸಿನಲ್ಲಿ ಸ್ಥಿರವಾಗಿ ಮೂಡಿಬಿಟ್ಟ. ಅನಂತರ ಹಿರಿಯರು ಶಹರಿಗೆ ಹೋಗಿ ಬಂದಾಗ ಗಾಂಧಿಯನ್ನು ಕುರಿತು ಕೆಲವೊಮ್ಮೆ ಮಾತು ಏಳುತ್ತಿತ್ತು. ಹೆಚ್ಚಾಗಿ ನಿಂದಾತ್ಮಕ ಚರ್ಚೆ. ಗಾಂಧಿ ಹೊಲೆಯರನ್ನೂ ಬ್ರಾಹ್ಮಣರನ್ನೂ ಒಂದು ಮಾಡಬೇಕೆನ್ನುತ್ತಾನೆ. ಈ ದೇಶಕ್ಕೆ ಶಾಂತಿ ಸಮಾಧಾನಗಳನ್ನು ಕೊಟ್ಟ ಬ್ರಿಟಿಶ್ ಬಾದಶಹನನ್ನು ಓಡಿಸಬೇಕೆನ್ನುತ್ತಾನೆ. ಗಾಂಧಿ ಮಹಾತ್ಮನಲ್ಲ ದುರಾತ್ಮ ಇತ್ಯಾದಿ. ಆದರೆ ನನ್ನ ಮನಸ್ಸಿನಲ್ಲಿ, ಬಹುಶಃ ಅಹಮದಾಬಾದಿನ ಇಲ್ಲವೆ ಮುಂಬಯಿಯ ಯಾವುದೋ ಗಿರಣಿಯಲ್ಲಿ ನೇಯಲ್ಪಟ್ಟಿದ್ದ ಆ ಮಹಾತ್ಮಾಗಾಂಧೀಕೀ ಜೈ ಎಂಬ ಬಿಳಿಯ ಅಕ್ಷರಗಳ ಸಾಲುಗಳು ಹಾಗೆಯೆ ಅಚ್ಚೊತ್ತಿದ್ದವು. ಗಾಂಧಿಯನ್ನು ದ್ವೇಷಿಸುವುದು ನನಗೆ ಅಸಾಧ್ಯವಾಗಿಹೋಗಿತ್ತು.

ವರ್ಷಗಳು ಕಳೆದವು. ನಾನು ಶಹರಕ್ಕೆ ಬಂದೆ. ಹೈಸ್ಕೂಲು ಸೇರಿದೆ. ಗಾಂಧೀಜಿಯ ಸುದ್ದಿಗಳು ನಮ್ಮ ಕಿವಿಗೆ ಆಗಾಗ್ಗೆ ಬೀಳುತ್ತಿದ್ದವು. ಅವನ ಸತ್ಯನಿಷ್ಠೆ ಕತೆಕತೆಯಾಗಿ ಹಬ್ಬಿತ್ತು. ನಮ್ಮ ಮನೆಯ ವಾತಾವರಣದಲ್ಲಿ ಗಾಂಧೀ ವಿರೋಧವೇ ಇನ್ನೂ ಇದ್ದರೂ ಹೇಗೋ ಏನೋ ನನ್ನ ಹೃದಯದಲ್ಲಿ ಆತನ ಬಗ್ಗೆ ಸಾವಕಾಶವಾಗಿ ಆದರ ಹೆಚ್ಚುತ್ತ ಹೋಯಿತು.

ಬಂತು ಉಪ್ಪಿನ ಸತ್ಯಾಗ್ರಹ. ಒಂದು ದಿನ ಬೀದಿಯಲ್ಲಿ ಹೊರಟಿದ್ದ ಮೆರವಣಿಗೆಯಲ್ಲಿ ಸಿಕ್ಕಿಕೊಂಡ ನನಗೆ ಶಾಲೆ ಸೇರುವುದು ತಡವಾಯಿತು. ಮಾಸ್ತರರು ನನ್ನನ್ನು ಹೊರಗೆ ನಿಲ್ಲಿಸಿದರು. ಹೀಗೆ ರಾಜದ್ರೋಹಿಗಳ ಸಂಗಡ ಸೇರಿಕೊಂಡರೆ ನನ್ನ ಸ್ಕಾಲರ್‌ಶಿಪ್ ರದ್ದು ಮಾಡುವುದಾಗಿ ಹೆದರಿಸಿದರು. ಹೀಗೆ ಅನಾಯಾಸವಾಗಿ ನಾನು ರಾಜದ್ರೋಹಿ, ದೇಶಭಕ್ತ ಪದವಿಗೆ ತೇರ್ಗಡೆ ಹೊಂದಿದ್ದೆ. ನನಗೆ ಹೆದರಿಕೆಯೂ ಆಯಿತು, ಗೋಪ್ಯವಾಗಿ ಒಂದಿಷ್ಟು ಹರ್ಷಪುಳಕವೂ ಆಯಿತು.

ಆದರೆ ವರ್ಷ ಕಳೆಯುವುದರೊಳಗೆ ವಾತಾವರಣದಲ್ಲಿ ಸಾವಕಾಶ ಬದಲಾವಣೆಯಾಗಿದ್ದನ್ನು ನಾನು ಗಮನಿಸಿದೆ. ನಮ್ಮ ಸಂಬಂಧಿಕರಲ್ಲಿಯೇ ಒಬ್ಬರು ಖಾದಿಯಲ್ಲದಿದ್ದರೂ ಸ್ವದೇಶಿ ಬಟ್ಟೆಯ ಪ್ರತಿಜ್ಞೆ ತೊಟ್ಟಿದ್ದರು. ಮದ್ರಾಸ್ ಮಿಲ್ಲಿಗೆ ಶರಣು ಹೊಡೆದು ಕೃಷ್ಣರಾಜೇಂದ್ರ ಗಿರಣಿಯ ಧೋತರವನ್ನು ಅವರು ಉಡತೊಡಗಿದ್ದರು. ಅಸ್ಪೃಶ್ಯತಾನಿವಾರಣೆಯೊಂದು ಹೊರತು ಗಾಂಧಿ ಹೇಳುವುದೆಲ್ಲ ನಿಜ, ಎಂದು ಅವರ ಅಭಿಪ್ರಾಯವಾಗಿತ್ತು. ಮದ್ರಾಸ್ ಮಿಲ್ಲಿನ ಬದಲು ಕೃಷ್ಣರಾಜೇಂದ್ರ ಧೋತರ, ಅಸ್ಪೃಶ್ಯತಾ ನಿವಾರಣೆ ಹೊರತು ಗಾಂಧೀಪಕ್ಷ— ಅರ್ಥರಹಿತ ಬದಲಾವಣೆ ಎಂದು ಅನಿಸಬಹುದು. ಆದರೆ ಗಾಂಧಿಯ ಪ್ರಭಾವ ಕೆಲಸ ಮಾಡಿದ್ದೇ ಹಾಗೆ. ಒಬ್ಬರಲ್ಲಿ ಆ ಬದಲಾವಣೆ, ಇನ್ನೊಬ್ಬರಲ್ಲಿ ಈ ಪರಿವರ್ತನೆ, ಒಬ್ಬರಲ್ಲಿ ಒಂದು, ಒಬ್ಬರಲ್ಲಿ ಅರ್ಧ. ಒಟ್ಟು ಪರಿಣಾಮ ಬ್ರಿಟಿಶ್ ಸಾಮ್ರಾಜ್ಯದ ತಳವನ್ನು ಅಲುಗಿಸಲು ಸಾಕಾಯಿತು.

ಶಾಲೆಯಲ್ಲೂ ಹಾಗೆಯೆ. ಅನೇಕ ಉಪಾಧ್ಯಾಯರಲ್ಲಿ ವ್ಯಕ್ತವಾಗಿ ಪರಿವರ್ತನೆ ಕಾಣಿಸುತ್ತಿತ್ತು. ಒಬ್ಬರು ಇನ್‌ಸ್ಪೆಕ್ಶನ್ ದಿನ ಹೊರತು ಬೇರೆ ದಿನಗಳಲ್ಲಿ ಗಾಂಧೀಟೋಪಿಯೊಡನೆ ಶಾಲೆಗೆ ಬರುತ್ತಿದ್ದಾರೆ. ಇನ್ನೊಬ್ಬರು ಒಳಗೆ ಖಾದಿ ಶರ್ಟು ಹಾಕಿ ಮೇಲೆ ಮಿಲ್‌ಮೇಡ್ ಕೋಟು ಧರಿಸುತ್ತಿದ್ದಾರೆ. ಆ ವರ್ಷ ನಮಗೆ ಇಂಗ್ಲೀಷ್ ಉಪಪಠ್ಯ Socrates in an Indian Village ಎಂಬ, ನಿವೃತ್ತ ಬ್ರಿಟಿಶ್ ಅಧಿಕಾರಿ ಬರೆದ ಪುಸ್ತಕ. ಅದು ಭಾರತೀಯರ ಅಜ್ಞಾನ ಅಂಧಶ್ರದ್ಧೆಗಳನ್ನು ನಗೆಗೀಡು ಮಾಡುವಂಥಾದ್ದು. ಅದನ್ನು ಪಾಠಹೇಳುವ



ಉಪಾಧ್ಯಾಯರು ಅದರ ಪ್ರತಿ ಅಧ್ಯಾಯವನ್ನು ಖಂಡಿಸುತ್ತ ಹೋಗುತ್ತಾರೆ. ನಮ್ಮ ಇತಿಹಾಸಾಧ್ಯಾಪಕರು ಕಲಕತ್ತೆಯ ಕತ್ತಲು ಕೋಣೆಯ ಪ್ರಸಂಗವನ್ನು ಪಾಠ ಹೇಳುವಾಗ ಅದು ಬ್ರಿಟಿಶ್ ಪ್ರಚಾರಕರ ಕರಾಳ ಕಲ್ಪನೆ ಎಂದು ಈಚಿಗಿನ ಸಂಶೋಧನೆಗಳ ವಿವರ ಕೊಡುತ್ತಾರೆ. ಇನ್‌ಸ್ಪೆಕ್ಟರ್ ದಿನ ಬರುತ್ತದೆ. ಅಂದು ಎಲ್ಲ ಹುಡುಗರ ತಲೆ ಮೇಲೆ ಎಂದೂ ಇಲ್ಲದ ಗಾಂಧೀ ಟೊಪ್ಪಿ. ನನ್ನ ಹತ್ತಿರ ಯಾವ ಟೊಪ್ಪಿಯೂ ಇಲ್ಲ. ಆದರೆ ನನ್ನ ಹತ್ತಿರದ ಹುಡುಗ ತನ್ನ ಜೇಬಿನಿಂದ ಒಂದು ಬಿಳಿ ಟೊಪ್ಪಿ ತೆಗೆದು ನನ್ನ ತಲೆಮೇಲಿಡುತ್ತಾನೆ. ಮೊದಲನೇ ಇಂಗ್ಲಿಷ್ ಪೀರಿಯಡ್ಡಿಗೆ ಹೆಡ್ಮಾಸ್ತರೇ ಬರುತ್ತಾರೆ. "ಏನ್ರೋ! ನನ್ನ ಹೆಂಡತಿ ಮಕ್ಕಳ ಅನ್ನ ತೆಗೆಯಬೇಕಂತ ಮಾಡಿದ್ದೀರಾ? ಈ ಒಂದು ದಿನ ಟೊಪ್ಪಿಗಳನ್ನ ತೆಗೆದಿಡಿ, ನಾಳೆ ಬೇಕಾದರೆ ನಾನೂ ಹಾಕಿಕೊಳ್ಳುತ್ತೇನ" ಎನ್ನುತ್ತಾರೆ. ಹಿಂದಿನಂತೆ ಆರೋಪವಿಲ್ಲ, ಸ್ಕಾಲರ್‌ಶಿಪ್ ರದ್ದುಗೊಳಿಸುವ ಬಿಭೀಷಿಕೆ ಇಲ್ಲ. ಹುಡುಗರೆಲ್ಲ "ತೆಗೆಯೋದಿಲ್ಲ!" ಎಂದು ಕೂಗುತ್ತಾರೆ. ಹೆಡ್ಮಾಸ್ತರರ ಮುಖ ಅರಳುತ್ತದೆ. ಹೊರಟುಹೋಗುತ್ತಾರೆ. ಇನ್‌ಸ್ಪೆಕ್ಟರರು ಬರುತ್ತಾರೆ. ಬಿಳಿ ಕಿರೀಟಗಳನ್ನು ನೋಡುತ್ತಾರೆ. ಏನನ್ನೂ ಹೇಳುವುದಿಲ್ಲ. ಬಹುಶಃ ಅವರಿಗೂ ಒಳಗೆ ಸಂತೋಷವೇ ಆಗಿದೆ.

ಇದು ಗಾಂಧಿಯ ಕೆಲಸ. ಹೀಗೆ ಮಾಡಿ ಎಂದು ಆತ ನಮಗಾಗಲಿ ಉಪಾಧ್ಯಾಯರಿಗಾಗಲಿ ಹೇಳಿಲ್ಲ. ನಮ್ಮ ಒಳಗಿನ ದೇಶಾಭಿಮಾನದ ಕಿಡಿ ಕೆದರಿದವನು ಗಾಂಧಿ ಇರಲಿಕ್ಕಿಲ್ಲ. ಅದನ್ನು ಮಾಡಿದವರು ಅವನಿಗಿಂತ ಮುಂಚೆಯೇ ಆಗಿಹೋಗಿದ್ದಾರೆ. ಆದರೆ ಗಾಂಧಿ ಮಾತ್ರವೇ ನಮ್ಮೊಳಗಿನ ಹೆದರಿಕೆಯನ್ನು—ಹತ್ತು ಶತಮಾನಗಳ ಪರಾಧೀನತೆಯಲ್ಲಿ ಭಾರತೀಯ ಆತ್ಮವನ್ನು ಹೊಕ್ಕು ಹಾಸುಹೊಕ್ಕಾದ ಅಂಜುಬುರುಕತನವನ್ನು - ಹೊಡೆದೋಡಿಸಿದವನು. ಅವನ ಕಾರ್ಯಪದ್ಧತಿ ಗುಟ್ಟನ್ನೂ ಅದರೊಡನೆ ಅನಿವಾರ್ಯವಾಗಿ ಬರುವ ಭಯವನ್ನೂ ಅನಾವಶ್ಯಕವಾಗಿ ಮಾಡಿದೆ. ಅದು ಅವನ ವಿಶೇಷ. ಅವನು ಹೇಡಿತನದ ಅಗತ್ಯವೇ ಉಳಿಯದಂತೆ ಮಾಡಿದ್ದಾನೆ. ಅವನಿಗೆ ಅವನ ಭಾರತ ಗೊತ್ತು. ಅವನಿಗೆ ಅವನ ಎದುರಾಳಿ ಬ್ರಿಟನ್ ಗೊತ್ತು. ಅಭಯಂ ಸೋಽಸ್ತು!

ವರ್ಷ ಸುತ್ತುತ್ತದೆ. ನನ್ನ ಶಾಲೆ ಮುಗಿಯುತ್ತದೆ. ಗಾಂಧಿಯ ಹರಿಜನ ಉಪವಾಸ ಆಗುತ್ತದೆ. ನನಗೆ ಇದೆಲ್ಲ ಮಸುಕು ಮಸುಕಾಗಿ ಮಾತ್ರ ಅರ್ಥವಾಗುತ್ತದೆ. ಅನಂತರ ಹರಿಜನ ಚಳವಳಿಯೇ ಪ್ರಾರಂಭವಾಗುತ್ತದೆ. ಸ್ಥಳೀಯ ಕಾಂಗ್ರೆಸ್ ಮುಂದಾಳುಗಳು ಊರ ಮಧ್ಯದಲ್ಲಿ, ಸನಾತನಿಗಳ ಕೋಟೆಯಲ್ಲೇ ಅಸ್ಪೃಶ್ಯತೆಯನ್ನು ಖಂಡಿಸಿ ದಿನವೂ ಭಾಷಣ ಮಾಡುತ್ತಾರೆ. ಒಂದು ದಿನ ಅವರು ಅರ್ಧ ಶಿಕ್ಷಿತ ಹರಿಜನನನ್ನೇ ಒಬ್ಬನನ್ನು ಕರೆತಂದು ಮಠದ ಮುಂಭಾಗದಲ್ಲಿ ಅವನಿಂದ ಭಾಷಣ ಮಾಡಿಸುತ್ತಾರೆ. ಅವನು ಅಬದ್ಧವಾಗಿಯೇ ಆದರೂ ಸಂಸ್ಕೃತ ಶ್ಲೋಕ ಹೇಳಿ ತನ್ನ ಜಾತಿಗೆ ಮೇಲ್ಜಾತಿಯವರಷ್ಟೇ ಹಕ್ಕಿದೆಯೆಂದು ತೊದಲು ತೊದಲಾಗಿ ಭಾಷಣ ಮಾಡುತ್ತಾನೆ. ಹಿಂದಿನ ಕಾಲದಲ್ಲಾದರೆ ಇವನ ಎಲುಬು ಉಳಿಯುವುದು ಸಾಧ್ಯವಿರಲಿಲ್ಲ. ಒಂದೆರಡು ಸಲ ಭಾಷಣಕಾರರೊಡನೆ ವಾಕ್ಯಾರ್ಥ ಮಾಡಲು ಒಬ್ಬೊಬ್ಬ ಸನಾತನಿಗಳು ಬರುತ್ತಾರೆ. ಆದರೆ ತರ್ಕಶಕ್ತಿಯ ಮುಂದೆ ಗಾಂಧೀವಾದಿಗಳು ನಿರುತ್ತರರಾಗುತ್ತಾರೆ. ಆದರೆ ಅದರಿಂದ ಯಾರಿಗೂ ಏನೂ ಮನವರಿಕೆಯಾಗುವುದಿಲ್ಲ. ಸನಾತನಿಗಳ ವಾದ ನೂರು ಸಲ ಗೆದ್ದರೇನು, ಅಸ್ಪೃಶ್ಯತೆಯ ಮಾನಸಿಕ ಕೋಟೆ ಗಾಂಧೀ ಉಪವಾಸದೊಡನೆ ಕುಸಿದು ಬಿದ್ದಿತ್ತು. ಇನ್ನುಳಿದುದು ಬೀದಿ ಕಾಳಗಗಳು ಮಾತ್ರ. ಆ ಕಾಳಗಗಳು ಇನ್ನೂ ನಡೆದಿವೆ. ಯುದ್ಧ ಆಗಲೇ ಗೆದ್ದಾಗಿತ್ತು—ನೈತಿಕ ಯುದ್ಧ.

ನನ್ನ ಹೃದಯದಲ್ಲಿದ್ದ ಅಸ್ಪೃಶ್ಯತೆಯ ಕೋಟೆಯೂ ಕುಸಿಯುವುದರ ಅನುಭವ ನನಗೆ ಆಗಲೇ ಆಯಿತು. ನಾನೂ ಸನಾತನಿ ಕುಲದವ. ಹೊಲೆಯರನ್ನು ಮುಟ್ಟಿದರೆ ಜನಿವಾರ ಬದಲಿಸು

ತ್ತಿದ್ದವ. ಆದರೆ ಅಂದಿನಿಂದ ಹೊಲೆಯರನ್ನು ಮುಟ್ಟಿಸಿಕೊಂಡಾಗ ನನ್ನೊಳಗಿಂದ ಪವಿತ್ರವಾದದ್ದೇನೋ ಹೋಗುತ್ತಿದೆ ಎಂಬ ಭಾವನೆ ಎಂದೂ ತಲೆಯೆತ್ತಲಿಲ್ಲ. ನಾನು ಅಸ್ಪೃಶ್ಯರನ್ನು ಮುಟ್ಟುತ್ತೇನೆ, ಅವರೊಡನೆ ಕೂಡುತ್ತೇನೆ, ಉಣ್ಣುತ್ತೇನೆ ಕುಡಿಯುತ್ತೇನೆ ಎಂಬುದನ್ನು ನನ್ನ ಹಿರಿಯರಿಂದ ಕೂಡ ಮರೆಮಾಚಲು ನಾನು ಯತ್ನಿಸಲಿಲ್ಲ.

ಅದಾಗಿ ಕೆಲ ಸಮಯದಲ್ಲೇ ನಾನು "ಸತ್ಯಶೋಧನೆ"ಯನ್ನು ಓದಿದ್ದು. ನನಗೆ ನೆನಪಿದ್ದಾಗಿನಿಂದಲೂ ದೈವಭಕ್ತಿ ನನ್ನಲ್ಲಿ ಬಲವಾಗಿರಲಿಲ್ಲ. ಗಾಂಧೀ ಜೀವನಿಯನ್ನೋದಿಯೂ ಅದು ಬಲಗೊಳ್ಳಲಿಲ್ಲ. ಆದರೆ ಆತನ ಪರಿಪೂರ್ಣ ಸತ್ಯನಿಷ್ಠೆ ಆಳವಾಗಿ ನನ್ನ ಹೃದಯವನ್ನು ತಟ್ಟಿತು. ಉಳಿದೆಲ್ಲಕ್ಕೂ ಪ್ರಮಾಣ ಬೇಕು. ಸತ್ಯಕ್ಕೆ, ಸತ್ಯದ ಅವಶ್ಯಕತೆಗೆ ಮಾತ್ರ ಬಾಹ್ಯ ಪ್ರಮಾಣ ಬೇಕಿಲ್ಲ. ಅದು ಸ್ವಯಂವೇದ್ಯವಾದದ್ದು. ಈ ಮನುಷ್ಯನ ಹತ್ತಿರ ಅದು ಪೂರ್ಣ ಪರಿಮಾಣದಲ್ಲಿದೆ. ಆದ್ದರಿಂದ ಆತ ಮಹಾತ್ಮ. ಆದರೆ ಈತನ ಹಾಗಾಗಬೇಕು...... ಆ ಸಮಯದಲ್ಲಿ ಸ್ಪಷ್ಟವಾಗಿ ಹೀಗೆ ಯೋಚಿಸಿ ನಿರ್ಧರಿಸಿದೆನೆಂದಲ್ಲ. ಆದರೆ ಸುಮಾರಾಗಿ ಹೀಗೆ ನನಗೆ ಪ್ರತೀತಿ ಆಗಿರಬೇಕು. ಅದು ವಿಚಾರ ಮಾರ್ಗದಿಂದ ಬಂದ ಪ್ರತೀತಿ ಅಲ್ಲ. ನೇರವಾಗಿ ಬಂದದ್ದು. ಅಧ್ಯಾತ್ಮವಾದಿಗಳು ಅಪರೋಕ್ಷ ಜ್ಞಾನ ಎನ್ನುತ್ತಾರಲ್ಲ. ಆ ಬಗೆಯದು. ಪ್ರತ್ಯಕ್ಷಕ್ಕಿಂತಲೂ ನೇರವಾದ ಪ್ರತೀತಿ ಅದು. ಆದ್ದರಿಂದ ಅವರ ಪ್ರಭಾವ ಹೆಚ್ಚು ಗಹನವಾದದ್ದು.

ನನ್ನ ಬುದ್ಧಿಯೋ ? ಅದೆಂದೂ ಗಾಂಧೀಜಿಯ ಸಂಗಡ ಹೆಜ್ಜೆ ಇಡಲಿಲ್ಲ. ಎಂ. ಎನ್. ರಾಯರು ಬಂಧಮುಕ್ತರಾಗಿ Mother India ಪ್ರಾರಂಭಿಸಿದಾಗ ಅದನ್ನೋದುತ್ತಾ ಅವರ ವಿಚಾರಗಳಿಗೆ ನಾನು ಮಾರುಹೋಗಿದ್ದೆ. ಈಗಲೂ ರಾಯ್ ಮಹಾ ಗಹನಚಿಂತಕನೆಂದು ನಾನು ಭಾವಿಸುತ್ತೇನೆ. ಸುಭಾಷಬೋಸರ ವಿಕ್ರಾಂತ ವ್ಯಕ್ತಿತ್ವವೂ ನನ್ನನ್ನು ಸೆಳೆದಿತ್ತು. ೧೯೪೧ ರಲ್ಲಿ ಹಿಟ್ಲರನು ಸಮಾಜವಾದಿ ರಶಿಯವನ್ನು ಯುದ್ಧದಲ್ಲಿ ಎಳೆದಾಗ ನನಗೆ ಬಂದ ಕೋಪ ಅಷ್ಟಿಷ್ಟಲ್ಲ. ಆದರೆ ಗಾಂಧೀಜಿ ನನ್ನ ಹೃದಯದ ಮೇಲೆ ಪ್ರಭುತ್ವ ಸ್ಥಾಪಿಸಿದ್ದರು.

ಗಾಂಧಿಗೆ ಸಂಬಂಧಪಟ್ಟದ್ದೆಲ್ಲವೂ ನನ್ನ ಮೇಲೊಂದು ವಿಲಕ್ಷಣ ಅಧಿಕಾರವನ್ನು ಹೊಂದಿದಂತೆ ತೋರುತ್ತಿತ್ತು. ಮಹಾದೇವಭಾಯಿ ಸತ್ತ ಸುದ್ದಿ ಬಂದ ದಿನ ನನ್ನ ತಲೆಯೇ ತಾಳದಲ್ಲಿ ಉಳಿಯಲಿಲ್ಲ. ನಾನು ಅತ್ತು ಬಿಟ್ಟೆ. ಇಲ್ಲ, ಈ ಬ್ರಿಟಿಶರು ಗಾಂಧಿಗೆ ಹತ್ತಿರದವರೊಬ್ಬೊಬ್ಬರನ್ನೇ ವಿಷಹಾಕಿ ಕೊಂದು ಕೊನೆಗೆ ಗಾಂಧಿಯನ್ನೂ ಮುಗಿಸುತ್ತಾರೆ, ಎಂದುಕೊಂಡೆ. ಮಹಾದೇವ ದೇಸಾಯಿಯವರನ್ನು ಬ್ರಿಟಿಶರೇ ಕೊಂದರೆಂಬುದರಲ್ಲಿ ಆಗ ನನಗೆ ಎಳ್ಳಷ್ಟು ಸಂದೇಹವಿರಲಿಲ್ಲ. ಕಸ್ತೂರಬಾ ನಿಧನ ಮತ್ತೆ ನನ್ನ ಕುಶಂಕೆಗಳನ್ನು ಎಬ್ಬಿಸಿತು. ಆ ಮೇಲೆ ಗಾಂಧೀಜಿಯ ಉಪವಾಸವೇ ಬಂತು. ಆಗ ನಾನೊಂದು ಪತ್ರಿಕಾ ಕಚೇರಿಯಲ್ಲಿ ದುಡಿಯುತ್ತಿದ್ದೆ. ಗಳಿಗೆ ಗಳಿಗೆಗೆ ಮಹಾತ್ಮನ ಪ್ರಕೃತಿ ಕೆಡುತ್ತಿರುವ ವಾರ್ತೆಗಳು ಬರುತ್ತಿದ್ದವು. ಹದಿಮೂರನೇ ದಿನ ಅವರ ಜೀವ ತೀವ್ರ ಗಂಡಾಂತರದಲ್ಲಿರುವ ವಾರ್ತೆ ಬಂತು. ಅಕಟಕಟಾ! ಈತ ಸಾಯುತ್ತಾನೆ. ಏನು ಮಾಡುವಾ ! ನನ್ನ ಮುಂದೆ ಬಂದು ಕರಳತ ಸುದ್ದಿಗಳನ್ನು ಭಾಷಾಂತರಿಸುವಷ್ಟು ಸ್ಥಿಮಿತ ಕೂಡ ನನ್ನ ಮನಸ್ಸಿನಲ್ಲಿರಲಿಲ್ಲ.

ಯುದ್ಧ ಮುಗಿಯಿತು. ಸ್ವರಾಜ್ಯ ಬಂತು. ದೇಶ ಇಬ್ಭಾಗವೂ ಆಯಿತು. ಜನರ ಹತ್ಯೆ ಲೆಕ್ಕವಿಲ್ಲದಷ್ಟಾಯಿತು. ಈ ಸಂಧಿಯಲ್ಲಿ ನನ್ನ ಹಾಗೆ ಹಲವರ ರೋಷ ಗಾಂಧೀಜಿಯ ಮೇಲೆ ತಿರುಗಿರಬೇಕು. ಪ್ರೀತಿ ವಿಚಿತ್ರ ವಸ್ತು. ಅದು ದ್ವೇಷವಾಗಿ ಪರಿವರ್ತನೆ ಹೊಂದಲು ಬಹಳ ಕಾಲ ಹಿಡಿಯುವುದಿಲ್ಲ. ಪ್ರಯೋಗಶಾಲೆಯಲ್ಲಿ ಲಿಟ್ಮಸ್ ಕಾಗದದ ಬಣ್ಣ ಬದಲಾದ ಹಾಗೆ. ಓ ! ಈ ಮುದುಕನ ತಲೆ ಕೆಟ್ಟಿದೆ. ನಮ್ಮವರನ್ನು ಎಡೆಬಿಡದೆ ಕೊಲ್ಲುವವರನ್ನು ಕಾಯಲು ಈತ ಹೆಣಗುತ್ತಾನೆ. ಜಾತೀಯ ಸೌಹಾರ್ದಕ್ಕಾಗಿ, ಪಾಕಿಸ್ತಾನಕ್ಕೆ ೫೦ ಕೋಟಿ

ರೂಪಾಯಿ ಕೊಡಿಸುವುದಕ್ಕಾಗಿ, ಗಾಂಧೀಜಿ ಆಮರಣ ಉಪವಾಸ ಕೈಕೊಂಡದ್ದು ಒಂಟೆಯ ಬೆನ್ನು ಮುರಿದ ಕೊನೆಯ ಹುಲ್ಲುಕಡ್ಡಿಯಂತಾಯಿತು. ಇಲ್ಲ, ಈ ಗಾಂಧಿ ಹೋಗಬೇಕು. ಅವನು ಸಾಯದೇ ಈ ದೇಶ ಬದುಕಲಾರದು. ಈತ ಏಕೆ ಸಾಯುವುದಿಲ್ಲ? ಎಂದು ಹಲ್ಲು ಕಡಿಕಡಿದು ಹೇಳುತ್ತಿದ್ದೆ...

...ಮತ್ತೆ ೧೯೪೮ ಜನವರಿ ಮುವ್ವತ್ತರಂದು ಸಂಜೆ ಗಾಂಧೀಜಿಗೆ ಗುಂಡುಹಾಕಿದ ವಾರ್ತೆ ಬಂತು. ಮುಂದೆ ಹದಿನೈದು ನಿಮಿಷದಲ್ಲಿ, ಅವರ ಮರಣ ವಾರ್ತೆಯೇ ಬಂತು. ನನ್ನ ಮನಸಿಗೆ ಆಗ ಅನಿಸಿದ್ದನ್ನು ಶಬ್ದಗಳಲ್ಲಿ ಹೇಳುವುದು ಸಾಧ್ಯವೇ ಇಲ್ಲ. ನಾನು ಸ್ತಂಭಿತನೇ ಆಗಿಹೋಗಿದ್ದೆ. ರಾತ್ರಿ ಮನೆಗೆ ಹೋದವನು ಒಂದು ಗುಟುಕು ನೀರನ್ನೂ ಕುಡಿಯಲಿಲ್ಲ.

ಲಿಟ್ಮಸ್ ಕಾಗದದ ಬಣ್ಣ ಪುನಃ ಪೂರ್ತಿ ಬದಲಾಗಿಹೋಗಿತ್ತು. ಹಾಸಿಗೆಯ ಮೇಲೆ ಮಲಗಿದೆ. ಹುಚ್ಚು ಹುಚ್ಚು ಯೋಜನೆಗಳು ಮುತ್ತಿಗೆ ಹಾಕಿದವು. ನನ್ನ ಹೆಂಡತಿ ಹಣೆಮುಟ್ಟಿ ನೋಡಿದಳು. ಜ್ವರ ಕಾಯುತ್ತಿದೆ ಎಂದಳು. ಬರಲಿ, ಬರಲಿ. ನಾನು ಗಾಂಧಿಯನ್ನು ಕೊಂದಿದ್ದೇನೆ. ಜ್ವರ ಬಾರದಿದ್ದೀತೆ? ಎಂದುಕೊಂಡೆ. ಮರಳಿ ಮರಳಿ ಅದೇ ವಿಚಾರ. ನಾನು ಗಾಂಧಿ ಸಾಯಬೇಕೆಂದು ಬಯಸಿದೆ. ಅದಕ್ಕೇ ಗಾಂಧಿಯನ್ನು ಕೊಂದರು. ನನ್ನಂತೆ ಎಷ್ಟು ಜನ ಮಹಾತ್ಮರು ಅವನ ಸಾವನ್ನು ಹಾರೈಸಿದರೋ ಏನೋ. ಈ ಹಾರೈಕೆಗಳ ತೂಕವೆಲ್ಲ ಸಾಲಲಿಲ್ಲ. ಕಡೆಗೆ ನಾನೂ ಹಾರೈಸಿದೆ. ಸರಿ. ನನ್ನೊಂದು ಹಾರೈಕೆ ಕಡಿಮೆ ಬಿದ್ದಿತ್ತು. ನನ್ನ ಪಾಪ ಬಂದದ್ದೇ ತಡ, ತಕ್ಕಡಿಯ ತೊಲೆ ಇತ್ತ ಒಲಿಯಿತು. ದೇವರು, 'ಹಾಗಾದರೆ ಆಗಲಿ' ಎಂದು ಕೊಲೆಗಡುಕನನ್ನು ಕಳಿಸಿದ. ನಾನೊಬ್ಬ ಬಯಸದೇ ಉಳಿದಿದ್ದರೆ ಗಾಂಧಿ ಬದುಕಬಹುದಾಗಿತ್ತು. ನಾನೇ ಗಾಂಧೀಯನ್ನು ಕೊಂದೆ ಎಂದು ಜ್ವರಗ್ರಸ್ತ ಮಿದುಳು ಒಂದೇ ಸಮನೆ ಅರಚಿಕೊಳ್ಳುತ್ತಿತ್ತು.

ಕಣ್ಣಲ್ಲೇ ಬೆಳಗಾಯಿತು. ಜ್ವರ ಹಾಗೇ ಇತ್ತು. ಬೆಳಗಿನಿಂದ ರೇಡಿಯೋ ಸ್ಮಶಾನಯಾತ್ರೆಯ ವ್ಯವಸ್ಥೆಗಳನ್ನು ಬಿತ್ತರಿಸುತ್ತಿತ್ತು. ನಾನು ಅಂದೂ ಏನೂ ತಿನ್ನಲಿಲ್ಲ. ಜ್ವರ ಹಾಗೇ ಇತ್ತು. ಸಂಜೆ ಸ್ಮಶಾನಯಾತ್ರೆಯ ಸುದ್ದಿ ಬಿತ್ತರಣೆ ಆರಂಭವಾಯಿತು. ಗಾಂಧಿಯನ್ನು ಸುಟ್ಟರು. ರಘುಪತಿ ರಾಘವ ರಾಜಾರಾಮ್, ಪತಿತಪಾವನ ಸೀತಾರಾಮ್ ರಘುಪತಿ ರಾಘವ.. ಈ ರಾಮ ಭಜನೆಯಲ್ಲಿ ಕರುಣವಾದದ್ದೇನಿದೆಯೋ ನಾನರಿಯೆ. ಆ ಭಜನೆಯ ಧ್ವನಿ ಕೇಳಿದ್ದೆ ತಡ, ಕಟ್ಟು ಒಡೆದುಹೋಯಿತು. ನಾನು ಬಿಕ್ಕಿ ಬಿಕ್ಕಿ ಅಳತೊಡಗಿದೆ. ನನ್ನ ಹಣೆಯ ಮೇಲೆ ಕೈಯಿಟ್ಟು ಕುಳಿತಿದ್ದ ನನ್ನ ಹೆಂಡತಿ ಚಕಿತಳಾಗಿ ನನ್ನನ್ನೇ ದಿಟ್ಟಿಸತೊಡಗಿದಳು. "ಗಾಂಧಿ ಹೋಗಿಬಿಟ್ಟ. ಅವನನ್ನು ಸುಟ್ಟುಬಿಟ್ಟರು. ಅಯ್ಯೋ! ಇನ್ನೇನುಳಿಯಿತು!" ಎಂದು ಹಲುಬಿದೆ.

ಅದೇ ಕೆಲ ತಿಂಗಳ ಹಿಂದೆ ನನ್ನ ಗಂಡು ಮಗುವೊಂದು ಸತ್ತಿತ್ತು. ನಾನು ತೊಟ್ಟು ಕಣ್ಣೀರು ಹಾಕಿರಲಿಲ್ಲ. ನನ್ನ ಹೆಂಡತಿ ಅದನ್ನು ನೆನೆದುಕೊಂಡು, "ನಮ್ಮ ಮಗು ಸತ್ತಾಗ ಅಳಲಿಲ್ಲ, ಈತ ಯಾರೋ ಏನೋ ಸತ್ತ ಅಂತ ಹೀಗೆ ಜ್ವರ ಬರಿಸಿಕೊಂಡು ಅಳುತ್ತೀರಲ್ಲ" ಎಂದು ಕೂದಲು ನೇವರಿಸುತ್ತ ಹೇಳಿದಳು. ಅವಳಿಗೆ ತಿಳಿಹೇಳುವುದು ಹೇಗೆ— ಗಾಂಧಿ ನನಗೇನಾಗಬೇಕೆಂದು? ಅವಳನ್ನುವುದೂ ನಿಜ. ನಾನು ಅಳುವುದರಲ್ಲಿ ಬಹಳ ಹಿಂದೆ. ನಾನು ಎಷ್ಟೋ ಸಾವುಗಳನ್ನು ಕಂಡಿದ್ದೇನೆ. ಅಂಗುಲಂಗುಲವಾಗಿ ಜೀವ ಪ್ರವಾಹ ಇಳಿಯುವುದನ್ನು ನೋಡಿದ್ದೇನೆ. ನಾನು ಅತ್ತದ್ದು ಅಪರೂಪ. ಈಗೇಕೆ ಅಳುತ್ತಿದ್ದೇನೆಂದು ಅವಳಿಗೆ ಹೇಗೆ ತಿಳಿಹೇಳಲಿ? ನಾನು ತಂದೆಯನ್ನು ಕೊಂದ ಈಡಿಪಸ್; ಅದಕ್ಕೇ ಅಳುತ್ತಿದ್ದೇನೆ ಎನ್ನಲೇ? ಈತ ನೇರಕ್ಕೆ ಏನಾಗಬೇಕು ಎಂದು ವಿವರಿಸಲೇ? "ನಿನಗೆ ತಿಳಿಯದು, ನಿನಗೆ ತಿಳಿಯದು" ಎಂದಷ್ಟೇ ಹೇಳಿ ಮತ್ತೆ ಅಳತೊಡಗಿದೆ...

*

ಸರಿ ಸರಿ! ನೀನು ಗಾಂಧಿಯನ್ನು ಬಹಳ ಪ್ರೀತಿಸಿದ್ದೆ. ಆದರೆ ಏನುಪಯೋಗ? ಗಾಂಧಿಯಿಂದ ನೀನೇನು ಕಲಿತೆ? ಜೀವನವನ್ನು ಅವನ ಬೆಳಕಿನಲ್ಲಿ ಹೇಗೆ ಬದಲಾಯಿಸಿಕೊಂಡೆ? ಏನು ತ್ಯಾಗ ಮಾಡಿದೆ? ಸೆರೆಮನೆಗೆ ಹೋದೆಯಾ? ನೌಕರಿ ಬಿಟ್ಟೆಯಾ? ಹಳ್ಳಿಗೆ ಹೋದೆಯಾ? ಚರಕ ತಿರುಗಿಸಿದೆಯಾ? ಏನು ಮಾಡಿದೆ? ಎಂದು ನೀವು ಕೇಳುತ್ತೀರಿ. ನಿಜ, ನಾನು ನೂಲಲಿಲ್ಲ. ಖಾದಿ ಕೂಡ ಹಾಕುವುದಿಲ್ಲ. ಸೆರೆಮನೆಗೆ ಹೋಗಲಿಲ್ಲ. ೧೯೪೨ ರಲ್ಲಿ ಸ್ವಲ್ಪದರಲ್ಲಿ ತಪ್ಪಿತು. ಆದರೂ ಸೆರೆಮನೆಗೆ ಹೋಗಲೆಂದೇ ನಾನೇನೂ ಮಾಡಲಿಲ್ಲವೆಂದೊಪ್ಪುತ್ತೇನೆ. ತ್ಯಾಗ ಮಾಡಲು ತನ್ನ ಹತ್ತಿರ ಹೆಚ್ಚೇನೂ ಇಲ್ಲ. ನೌಕರಿ ಬಿಡಲು ನಾನು ಸರಕಾರಿ ನೌಕರಿಯಲ್ಲಿರಲೇ ಇಲ್ಲ.

ಏನೂ ಮಾಡಲಿಲ್ಲ. ನಾನು ಧರ್ಮರಾಯನಾಗಲಿಲ್ಲ; ಹರಿಶ್ಚಂದ್ರನಾಗಲಿಲ್ಲ; ಶಿಬಿಚಕ್ರವರ್ತಿಯಾಗಲಿಲ್ಲ. ಆದರೆ ನಾನು ಬಾಲ್ಯದಿಂದ ಹೇಗೆ ಬದಲಾಗುತ್ತ ಬಂದೆ, ನನ್ನ ಸುತ್ತಲೂ ಗಾಂಧಿಯಿಂದ ಏನು ಬದಲಾವಣೆ ಆಯಿತು ಎಂದು ಹೇಳಿದ್ದೇನೆ. ನನ್ನ ಸುತ್ತಲಿದ್ದವರಲ್ಲಾದ ಬದಲಾವಣೆಯೇ ನನ್ನಲ್ಲಾದರೆ ನನ್ನದೇನು ವಿಶೇಷ? ಎನ್ನಬೇಡಿ. ನೀವೂ ನಾನೂ ಹೆಚ್ಚಿನವರೆಲ್ಲರೂ ಸಾಮಾನ್ಯರು. ನಮ್ಮೆಲ್ಲರ ಚೇತನಗಳೂ ಗಿಂಡಿಗಳು – ಗುಡಾಣಗಳಲ್ಲ. ಎಲ್ಲವುಗಳಲ್ಲೂ ಹಿಡಿಯುವುದು ಅಷ್ಟಷ್ಟೇ. ಆದರೆ ಗಿಂಡಿ ತುಂಬಿದ್ದು ಸುಳ್ಳೆ?

ಮತ್ತೂ ಹೇಳುತ್ತೇನೆ ಕೇಳಿ- ಇದು ಹೆಚ್ಚು ಮುಖ್ಯವಾದದ್ದು. ನನ್ನ ತಪ್ಪನ್ನು ಪರರ ಹೆಗಲಿಗೆ ಹೊರಿಸಿ ಪಾರಾಗಬೇಕೆನಿಸಿದಾಗ ಒಳಗಿಂದ ಯಾರೋ ನನ್ನನ್ನು ಬೆರಳಿಂದ ತಿವಿದಂತಾಗುತ್ತದೆ. ಅದು ಗಾಂಧಿ. "ಹಿಮಾಲಯ ಪ್ರಮಾದ"ವನ್ನು ಒಪ್ಪಿಕೊಂಡ ಗಾಂಧಿ. ಪರರಿಗೆ ಸಿಗಬೇಕಾದ್ದನ್ನು ಎತ್ತಿ ಹಾಕುವ ಆಸೆ ಬಂದಾಗ ಹಿಂದೆ ಜಗ್ಗಿದ ಹಾಗಾಗುತ್ತದೆ. ಅದು ಗಾಂಧಿ. ಸುಳ್ಳು ಹೇಳಲು ಪ್ರಾರಂಭಿಸಿದಾಗ, ನಾಲಿಗೆ ತಡೆಯುತ್ತದೆ; ಸತ್ಯಶೋಧಕ ಗಾಂಧಿ ನರಮುಕ್ಕು ಹಾಕಲು ಯತ್ನಿಸುತ್ತಿರುತ್ತಾನೆ. ಯಾರನ್ನಾದರೂ ಕೊಲ್ಲಬೇಕೆಂಬಷ್ಟು ದ್ವೇಷ ಹುಟ್ಟಿದರೆ, ಗಾಂಧಿ ನವಖಾಲಿಗೆ ಹೋದದ್ದು ನೆನಪಾಗುತ್ತದೆ. ಇನ್ನೂ ಅಸಂಖ್ಯ ದುಷ್ಕಾರ್ಯಗಳಿಗೆ ಕೈ ಎತ್ತಿದಾಗ ಗಾಂಧಿ ಬ್ರೇಕ್ ಹಾಕುತ್ತಾನೆ. ಪ್ರತಿಸಲವೂ ಗಾಂಧಿ ಗೆಲ್ಲುತ್ತಾನೆ, ನಾನು ಗಾಂಧಿಮಯನಾಗುತ್ತೇನೆ ಎಂದಲ್ಲ. ಆದರೆ ಎಷ್ಟೋ ಸಲ ಆತ ಗೆಲ್ಲುತ್ತಾನೆ. ಗಾಂಧಿಯಿಂದಾಗಿ ನಾನು ಬಹಳ ಅನ್ಯಾಯವಾದದ್ದನ್ನು, ಹೇಯವಾದದ್ದನ್ನು, ಅನೈತಿಕವಾದದ್ದನ್ನು ಮಾಡುವ ಚಪಲದಿಂದ ಪಾರಾಗಿದ್ದೇನೆಂಬುದು ನಿಜ.

ಏನು ಮಹಾ ಎನ್ನುತ್ತೀರಾ? ಗಾಂಧಿಯ ಸುದ್ದಿಯನ್ನೂ ಅರಿಯದ ಎಷ್ಟೋ ಜನ ಸಂಭಾವಿತರಾಗಿದ್ದಾರೆ! ಸತ್ಯ. ಆದರೆ ನನ್ನನ್ನು ನೀವು ಅರಿತಿಲ್ಲ. ನಾನು ಪ್ರಕೃತಿಯಿಂದ ಎಂಥ ಸ್ವಾರ್ಥಿ, ನಿರ್ಘೃಣ ಎಂದು ನಿಮಗೆ ಗೊತ್ತಿಲ್ಲ. ನಾನು ಇಂದಿಗೂ ಸ್ವಾರ್ಥಿಯಾಗಿದ್ದೇನೆ. ಆದರೆ ಗಾಂಧಿ ನನ್ನನ್ನು ಸ್ವಾರ್ಥಸಾಧಕನಾಗಗೊಟ್ಟಿಲ್ಲ. ನಿರ್ಘೃಣನಾಗಿಯೇ ಉಳಿದಿದ್ದೇನೆ ಆದರೆ ಗಾಂಧಿಯಿಂದಾಗಿ ನಾನು ಕ್ರೂರನಾಗುವುದು ತಪ್ಪಿದೆ. ಹೇಡಿಯಾಗಿಯೆ ಇದ್ದೇನೆ. ಆದರೆ ಅಲ್ಪನಾಗದಂತೆ ಗಾಂಧಿ ನೋಡಿಕೊಂಡಿದ್ದಾನೆ.

ಮತ್ತೆ ಮಹಾತ್ಮರಾದವರು ಅದಕ್ಕಿಂತ ಹೆಚ್ಚೇನು ಮಾಡಬಲ್ಲರು? ಅವರು ನಮ್ಮನ್ನು ಸ್ವಲ್ಪ ಕಡಿಮೆ ಕೆಟ್ಟವರಾಗಿ ಸ್ವಲ್ಪ ಹೆಚ್ಚು ಒಳ್ಳೆಯವರಾಗಿ ಮಾಡಬಲ್ಲರಷ್ಟೇ. ಬರೇ ಸ್ವಲ್ಪ. ರವಷ್ಟು ಕಡಿಮೆ ಅಲ್ಪರಾಗಿ ಎಳ್ಳಷ್ಟು ಹೆಚ್ಚು ಉದಾರರಾಗಿ ಮಾಡಬಲ್ಲರಷ್ಟೇ. ಬರೇ ರವಷ್ಟು. ಆದರೆ ಈ ಲೇಶ ಅಂತರವೇ ಅಲ್ಲವೆ, ಪತಿತ ಅ-ಪತಿತರ ನಡುವೆ ಇರುವುದು? *






ಮಠಾಧಿಪತಿಗಳ ಸಾಮಾಜಿಕ ಕರ್ತವ್ಯಗಳನ್ನು
ಅವರು ಒತ್ತಿ ಹೇಳುತ್ತಾರೆ.

ಶ್ರೀ ಪೇಜಾವರ ಸ್ವಾಮಿಗಳು

ಪಾ. ವೆಂ. ಆಚಾರ್ಯ

ಹುಬ್ಬಳ್ಳಿಯ ಪ್ರಮುಖ ಪತ್ರಿಕಾ ಕರ್ತರೊಬ್ಬರು–ಸ್ಪಷ್ಟವಾದಕ್ಕೆ ಹೆಸರಾದವರು–ನನ್ನೊಡನೆ ಮಾತಾಡುವಾಗ ಮಠಾಧಿಪತಿಗಳ ವರ್ಗದಲ್ಲಿ ತಮ್ಮ ಮೇಲೆ ಪ್ರಭಾವ ಬೀರಿದ ಕೈಬೆರಳುಗಳಲ್ಲೆಣಿಸಬಹುದಾದಷ್ಟು ಜನರಲ್ಲಿ ಶ್ರೀ ಪೇಜಾವರ ಸ್ವಾಮಿಗಳೊಬ್ಬರು ಎಂದು ಹೇಳಿದ್ದರು. ಇಂಥ ಅಭಿಪ್ರಾಯವನ್ನು ನನ್ನ ಹತ್ತಿರ ವ್ಯಕ್ತಪಡಿಸಿದ ಇನ್ನೂ ಅನೇಕರಿದ್ದಾರೆ. ಜೀವನದಲ್ಲಿ ಒಬ್ಬ ವ್ಯಕ್ತಿಯ ಜಯಾಪಜಯಗಳನ್ನು ಎಣಿಸಬೇಕಾದಾಗ ಅವನ ಪ್ರಶಂಸಕರ ಅಭಿಪ್ರಾಯಗಳನ್ನು ಮಾತ್ರವಲ್ಲದೆ ಅವನ ವಿರೋಧಿಗಳ ಅಭಿಪ್ರಾಯಗಳನ್ನೂ ಗಮನಿಸಬೇಕಾಗುತ್ತದೆ. ಕ್ರಾಂತಿಯಿಂದಲೇ ಈ ದೇಶದ ಸಾಮಾಜಿಕ ಉನ್ನತಿ ಸಾಧ್ಯವಿದೆಯೆಂದು ನಂಬುವವರು ಶ್ರೀ ಪೇಜಾವರ ಸ್ವಾಮಿಗಳನ್ನು ತಮ್ಮ ಧ್ಯೇಯಕ್ಕೆ ಗಂಡಾಂತರಪ್ರಾಯರೆಂದು ಬಗೆಯುತ್ತಾರೆ. ಏಕೆಂದರೆ ಸ್ವಾಮಿಗಳಂಥವರು ಪ್ರಾಮಾಣಿಕತೆ, ಅನುಕಂಪಗಳಿಂದ ಪರಂಪರಾಗತ ಸಮಾಜದ ನಾಯಕತ್ವದಲ್ಲಿ ಇನ್ನೂ ಸತ್ವವಿದೆಯೆಂದು ತೋರಿಸುತ್ತಾರೆ ಇದು ಎಲ್ಲವನ್ನೂ ಕೆಡವಿಯೇ ಕಟ್ಟಬೇಕೆಂಬ ಕ್ರಾಂತಿಪಥದಿಂದ ಜನರನ್ನು ಪರಾವೃತ್ತಗೊಳಿಸುತ್ತದೆ. ಹೋದ ವರ್ಷ ಬೆಂಗಳೂರಿನಲ್ಲಿ ಸ್ವಾಮಿಗಳು ಹರಿಜನ ಕೇರಿಗಳಿಗೆ ಭೇಟಿ ಕೊಟ್ಟಾಗ ಬಲ ತುದಿಯ ಪರಂಪರಾವಾದಿಗಳೆಷ್ಟೋ ಅಷ್ಟೇ ಎಡ ತುದಿಯ ಕ್ರಾಂತಿವಾದಿಗಳೂ ಸಿಡಿದೆದ್ದರು. ಇದು ಸ್ವಾಮಿಗಳವರ ಕಾರ್ಯದ ಪ್ರಭಾವವನ್ನೇ ಸೂಚಿಸುತ್ತದೆ.

ಶ್ರೀ ಪೇಜಾವರ ಮಠಾಧೀಶರಾದ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರು ಕರ್ನಾಟಕದಲ್ಲಿ ಎಲ್ಲಾ ವರ್ಗಗಳ ಜನರ ಗೌರವವನ್ನೂ



ಪ್ರೇಮವನ್ನೂ ಸಂಪಾದಿಸಿದವರಾಗಿದ್ದಾರೆ. ಮಠಾಧಿಪತಿಗಳಿಗೆ ಧಾರ್ಮಿಕ ಮಾತ್ರವಲ್ಲದೆ ಸಾಮಾಜಿಕ ಹೊಣೆಗಾರಿಕೆಗಳೂ ಇವೆ; ಅವರು ಜನರ ಪಾರಲೌಕಿಕ ಹಿತಗಳಿಗೆ ಹೇಗೋ ಹಾಗೆ ಅವರ ಐಹಿಕ ಕಷ್ಟನಿಷ್ಠುರಗಳ ನಿವಾರಣೆಗೂ ದೀಕ್ಷಿತರಾಗಿರಬೇಕು ಎಂಬುದನ್ನು ಮನಗಂಡು ಪ್ರಥಮತಃ ಆ ದಿಸೆಯಲ್ಲಿ ಕಾಲಿಟ್ಟವರಲ್ಲಿ ಅವರೊಬ್ಬರು. ಒಂದು ಸಮಾಜದಲ್ಲಿ ಚದರಿರುವ ಶಕ್ತಿಯನ್ನು ಅರ್ಥಪೂರ್ಣವಾಗಿ ವಿನಿಯೋಗಿಸಬೇಕಾದರೆ ಸಂಘಟನೆಯೊಂದೇ ದಾರಿಯೆಂದು ಅವರಿಗೆ ತೋರಿತು. ಫಲವಾಗಿ ಅಖಿಲ ಭಾರತ ಮಾಧ್ವ ಮಹಾಮಂಡಲ ತಲೆಯೆತ್ತಿತು. ಇಂದು ಕರ್ನಾಟಕದಲ್ಲಷ್ಟೇ ಅಲ್ಲ, ಹೊರಗೂ ಅದರ ಶಾಖೆಗಳು ಹಬ್ಬಿವೆ. ಅದರ ಮೂಲಕ ಮತೀಯ ಜ್ಞಾನಪ್ರಸಾರವನ್ನು ಮಾತ್ರವಲ್ಲದೆ ವಿದ್ಯಾರ್ಥಿಗಳಿಗಾಗಿ– ಧಾರ್ಮಿಕ ಮತ್ತು ಲೌಕಿಕ ವಿದ್ಯೆಗಳೆರಡರಲ್ಲಿಯೂ ವ್ಯಾಸಂಗನಿರತರಾದವರಿಗಾಗಿ–ಹಾಸ್ಟೆಲುಗಳು ನಡೆಯುತ್ತಿವೆ. ಸ್ವಾಮಿಗಳು ಆ–ಸೇತು ಹಿಮಾಚಲ ಮತ್ತು ಆ–ದಿಲ್ಲಿ ಅಸ್ಸಾಮ್ ಸಂಚರಿಸಿ ಧರ್ಮದ ಸಂದೇಶವನ್ನು ಬೀರಿದ್ದಾರೆ. "ಗೊಡ್ಡು ಮಠಾಧಿಪತಿಗಳು" ಎನ್ನುವ ಆಕ್ಷೇಪವನ್ನು ಅವರು ತೊಡೆದು ಹಾಕಿದ್ದಾರೆ.

ಸ್ವಾಮಿಗಳಿಗೀಗ ೪೦ ವಯಸ್ಸು. ಉಡುಪಿಯ ಮಧ್ವಾಚಾರ್ಯ ಸಂಪ್ರದಾಯದ ಎಂಟು ಮಠಗಳಲ್ಲಿ ಒಂದರ ಅಧಿಪತಿಯಾಗಿ ಹತ್ತನೇ ವಯಸ್ಸಿಗಿಂತ ಮೊದಲೇ ಅವರು ದೀಕ್ಷಿತರಾದರು. ೧೮ನೇ ವಯಸ್ಸಿಗಿಂತ ಮೊದಲೇ ಅವರು ಮಠಗಳಲ್ಲಿ ಆಗ ಸಾಮಾನ್ಯವಾಗಿದ್ದ ಇಕ್ಕಟ್ಟುಗಳ ಬೇಲಿಯನ್ನು ಮುರಿದು ಹೊರಬಂದರು ಅವರು ಸಂಚಾರಗಳಲ್ಲಿ ವಿದ್ವಜ್ಜನರಿಗೇ ಅಲ್ಲ, ಸಾಮಾನ್ಯ ಜನರಿಗೂ ಧರ್ಮದ ಹಿರಿಮೆಯನ್ನೂ ಅದರ ರಕ್ಷಣೆಯ ಅವಶ್ಯಕತೆಯನ್ನೂ ಬಿಂಬಿಸುತ್ತ ಹೊರಟರು. ಇದರಿಂದ ಅವರು ಇಂದಿನ ಸಮಾಜದ ಅವಶ್ಯಕತೆಗಳೇನು ಎಂಬುದನ್ನು ಮನಗಂಡರು. ಅಂದಿನಿಂದ ಸುಮಾರು ೨೪ ವರ್ಷ ಕಾಲ ಅವರ ಜೀವನವೆಲ್ಲ ಲೋಕಕಲ್ಯಾಣಕ್ಕಾಗಿ ವಿನಿಯೋಗವಾಗಿದೆ.

೧೯೩೮ ರಲ್ಲಿ ಶ್ರೀ ಪೇಜಾವರ ಸ್ವಾಮಿಗಳು ಪಟ್ಟವೇರಿದಾಗ ಮಠಗಳ ಮೇಲಿನ ಗೌರವ ಬ್ರಾಹ್ಮಣ ಸಮಾಜದಲ್ಲಿ ಕೂಡ ತೀರ ಕೆಳ ಮಟ್ಟಕ್ಕಿಳಿದು ಹೋಗಿತ್ತು. ಅದಕ್ಕೂ ಕೆಡುಕೆಂದರೆ ಇದರ ಕಡೆ ಮಠಾಧಿಪತಿಗಳ ಗಮನವೇ ಇರಲಿಲ್ಲ. ಸ್ವಾರ್ಥಿಗಳಿಂದಲೂ ಪರೋಪಜೀವಿಗಳಿಂದಲೂ ಸುತ್ತುವರಿಯಲ್ಪಟ್ಟಿದ್ದ ಅವರಿಗೆ ಜಗತ್ತಿನ ತಥ್ಯಗಳ ಪರಿಚಯುವೇ ಆಗುತ್ತಿರಲಿಲ್ಲ ಪೇಜಾವರ ಮಠ ಉಡುಪಿಯಲ್ಲಿ ಅಷ್ಟು ಸಮೃದ್ಧವಲ್ಲದ ಮಠಗಳಲ್ಲೊಂದಾಗಿತ್ತು. ಈ ಶತಮಾನದಲ್ಲಿ ಅದು ತನ್ನ ಪಾಲಿಗಿಂತ ಹೆಚ್ಚಾಗಿಯೇ ದುರ್ದೈವಗಳನ್ನನುಭವಿಸಿತ್ತು. ಆದ್ದರಿಂದಲೆಯೋ ಏನೋ ತಮ್ಮ ಮನಸ್ಸು ತಮ್ಮ ವಯಸ್ಸಿನಲ್ಲಿ ಸಂನ್ಯಾಸ ದೀಕ್ಷೆ ಹೊಂದಿದ ಇತರ ಸ್ವಾಮಿಗಳಿಗಿಂತ ಹೆಚ್ಚು ಸಂವೇದನಶೀಲವಾಗಿತ್ತೆಂದು ಸ್ವಾಮಿಗಳು ಹೇಳುತ್ತಾರೆ. ಸಾಮಾನ್ಯವಾಗಿ ಸ್ವಾಮಿಗಳಿಗೆ ಪಾಠ ಹೇಳಲು ಮಠದಲ್ಲೇ ಆಚಾರ್ಯರನ್ನಿಟ್ಟುಕೊಳ್ಳುವುದು ರೂಢಿ. ಇದರ ಬದಲು ಸ್ವಾಮೀಜಿಯವರ ತಂದೆ ಶ್ರೀ ನಾರಾಯಣಾಚಾರ್ಯರು ಶಾಸ್ತ್ರ ಶಿಕ್ಷಣಕ್ಕಾಗಿ ಶ್ರೀವಿಶ್ವೇಶತೀರ್ಥರನ್ನು ಅದ್ವಿತೀಯ ವಿದ್ವಾಂಸರಾದ ಶ್ರೀ ಭಂಡಾರಕೆರೆ ಮಠಾಧಿಪತಿಗಳಲ್ಲಿಗೆ ಕಳಿಸಿದರು. ಅಲ್ಲಿ ಇತರ ನೂರಾರು ಸಮವಯಸ್ಕ ವಿದ್ಯಾರ್ಥಿಗಳೊಡನೆ ಸಂಪರ್ಕ ಬಂದು ಮಠಗಳ, ಮಠಾಧಿಪತಿಗಳ ಬಗ್ಗೆ ಜನರ ನಿಜವಾದ ಭಾವನೆಗಳು ಹೇಗಿವೆಯೆಂಬ ವಿಚಾರ ಅವರಿಗೆ ತಿಳಿಯಿತು. ಇತರ ಧರ್ಮಗಳು ತಮ್ಮ ಪ್ರಜೆಗಳನ್ನು ಯಾವ ರೀತಿ ಸಂಘಟಿಸುತ್ತಿವೆ ಯೆಂಬ ಅರಿವೂ ಆಯಿತು. ಹಿಂದೂ ಮಠ ಳನ್ನು ಕೇವಲ ಕೆಲವರ ಕೈಲಿ ಬಿಡದೆ ಅವು "ಸಮಾಜೀಕರಣ" ಮಾಡಬೇಕೆಂಬ ತೀರ್ಮಾನ ಅವರು ಬಂದರು. ಈ ವಿಷಯದಲ್ಲಿ ಆಗಲೇ ಹಿರಿಯರೊಡನೆ ಬಿಸಿ ಬಿಸಿ ವಾಗ್ವಾದ

ಆಗಿತ್ತು.

ವಿಶ್ವೇಶತೀರ್ಥರಿಗೆ ಸಾಹಿತ್ಯ, ಧಾರ್ಮಿಕ ಮತ್ತು ರಾಜಕೀಯ ಪತ್ರಿಕೆಗಳ ಓದಿನಿಂದ ದೇಶದ ಆಗುಹೋಗುಗಳ ತಿಳಿವಳಿಕೆ ಬೇಗನೇ ಬಂತು. ಗಾಂಧೀ ಬಂಧನದ ವಾರ್ತೆಯೋದಿ ಯಾವುದೋ ಒಂದು ಅವ್ಯಕ್ತ ವೇದನೆ ತಮ್ಮ ಬಾಲ ಮನಸ್ಸಿನಲ್ಲಿ ಹುಟ್ಟಿದ್ದನ್ನು ಅವರು ನೆನೆದುಕೊಳ್ಳುತ್ತಾರೆ. ಎರಡನೇ ಮಹಾ ಯುದ್ಧದ ಆದಿಯಲ್ಲಿ ಬ್ರಿಟಿಶ್ ಆಳರಸರಲ್ಲಿ ಅವರಿಗೆ ಎಷ್ಟು ಸಹಾನುಭೂತಿಯಿತ್ತೆಂದರೆ ಯುದ್ಧಕ್ಕೆ ಒಂದು ಪಥಕವನ್ನು ಸಂಘಟಿಸಿ ಕಳಿಸ ಬೇಕೆಂಬ ಅಪೇಕ್ಷೆ ಮೂಡಿತ್ತು; ಗಾಂಧೀ ಬಂಧ ನದ ನಂತರ ಆ ಅಭಿಪ್ರಾಯ ತಿರುಗಿ ತಾವೂ ಸತ್ಯಾಗ್ರಹ ಮಾಡಿ ಸೆರೆಮನೆಗೇಕೆ ಹೋಗಬಾರ ದೆಂಬ ಯೋಚನೆ ಬಂದದ್ದೂ ಉಂಟು. ಈ ಕಾಲದಲ್ಲಿ ಕೂಡ ಮಠಗಳು ದೇಶದ ಇರವು ತೆರೆವುಗಳಿಂದ ಎಷ್ಟು ದೂರ ಇದ್ದವೆಂದರೆ, ೧೯೪೭ ರಲ್ಲಿ ಬ್ರಿಟಿಶರು ಭಾರತವನ್ನು ಬಿಟ್ಟು ಹೋಗುವ ನಿರ್ಣಯ ಕೈಕೊಳ್ಳುತ್ತಿದ್ದಾಗ ಉಡುಪಿಗೆ ಭೆಟ್ಟಿ ಕೊಟ್ಟ ಮೈಸೂರು ದಿವಾನರಿಗೆ ಮಠಾಧೀಶರು ನೀಡಿದ ಮಾನಪತ್ರದಲ್ಲಿ, ಬ್ರಿಟಿಶ್ ಕೃಪಾಛತ್ರದಲ್ಲಿ ಮೈಸೂರು ಮಹಾರಾಜರು ಅಖಿಲ ಕರ್ನಾಟಕದ ಮಹಾರಾಜರಾಗಬೇಕೆಂಬ ಅಪೇಕ್ಷೆ ವ್ಯಕ್ತವಾಗಿತ್ತು!

ಗಾಂಧೀ ಆತ್ಮಕಥೆ ಮತ್ತು ಕನ್ನಡದಲ್ಲಿ ಅನು ವಾದವಾಗಿ ಬರುತ್ತಿದ್ದ ಹರಿಜನ ಲೇಖನಗಳ ನ್ನೋದಿ ಪ್ರಭಾವಿತರಾದ ಸ್ವಾಮೀಜಿಯವರು ಗಾಂಧೀಪಥವನ್ನು ಮೆಚ್ಚಿಕೊಂಡರು. ಅವರು ಇಂದಿಗೂ ಖಾದೀ ವ್ರತಸ್ಥರಾಗಿದ್ದಾರೆ. ಋಜು ಪಥದಲ್ಲೇ ಹೆಜ್ಜೆಯಿಡುತ್ತಾರೆ. ಸತ್ಯಾಗ್ರಹವನ್ನು ಗಾಂಧೀಜಿ ತಮ್ಮ ಸುತ್ತಲವರ ಚರ್ಯೆಯನ್ನು ತಿದ್ದಲು ಉಪಯೋಗಿಸಿಕೊಂಡ ಹಾಗೆ ಸ್ವಾಮೀಜಿ ಯವರೂ ಉಪಯೋಗಿಸಿದ್ದುಂಟು. ಉಡುಪಿ ಯಲ್ಲಿ ಹೀಗೆ ಉಪವಾಸಾಸ್ತ್ರಕ್ಕೆ ಗುರಿಯಾದ ಒಬ್ಬರು ದೊಡ್ಡ ದೈವೀ ವಿಪತ್ತುಗಳಿಗೊಳ-ಗಾದರೆಂಬ ಕಥೆಗಳನ್ನು ನಾನು ಕೇಳಿದ್ದೆ. ಇದು ಕಲ್ಪನಾವಿಲಾಸವೆಂದು ಶ್ರೀ ವಿಶ್ವೇಶತೀರ್ಥರು ನಗುತ್ತ ಹೇಳಿದರು. ತಮ್ಮ ಉಪವಾಸ ಆತ್ಮ-ಶುದ್ಧಿಗಾಗಿತ್ತಲ್ಲದೆ ಪರಪೀಡನೆಗಲ್ಲವೆಂದವರು ಹೇಳಿದರು.

ಬಾಲ್ಯದಲ್ಲೇ ಆದ ಹೃದಯಮಂಥನದಿಂದ ಸ್ವಾಮೀಜಿಯವರು ಒಂದು ನಿರ್ಣಯಕ್ಕೆ ಬಂದರು. ಧರ್ಮ ಜಗತ್ತನ್ನು ಧರಿಸುತ್ತದೆ ಎಂಬುದು ನಿಜ; ಆದರೆ ಜನರನ್ನು ಗಣನೆಗೆ ತೆಗೆ ದುಕೊಳ್ಳದ ಧರ್ಮ ಕೆರೆಯಿಲ್ಲದ ನೀರಿನಂತಾಗು ತ್ತದೆ

ಮಾಧ್ವ ಮಹಾಮಂಡಲ ಈ ಕೆರೆ ಇಲ್ಲದ ನೀರಿಗೆ ಕಟ್ಟೆ ಕಟ್ಟುವ ಪ್ರಥಮ ಯತ್ನವಾಗಿತ್ತು. ಅಖಿಲ ಭಾರತ ಮಾಧ್ವಮಂಡಲವನ್ನು ಇನ್ನೂ ೨೦ನೇ ವಯಸ್ಸಿನಲ್ಲಿ ಸ್ವಾಮೀಜಿಯವರು ಸ್ಥಾಪಿಸಹೊರ ಟಾಗ ಇದೊಂದು ಹುಚ್ಚು ಸಾಹಸವೆಂದು ನಕ್ಕ ವರಿದ್ದರು; ದುರುದ್ದೇಶವನ್ನು ಶಂಕಿಸಿದವರೂ ಇದ್ದರು. ಆದರೆ ಕನ್ನಡಿಯಂಥ ಬಾಳನ್ನು ಬಾಳಿದ ಸ್ವಾಮೀಜಿಯವರ ವಿಚಾರಗಳನ್ನೊಪ್ಪದ ವರೂ ಇಂದು ಅವರನ್ನು ಗೌರವಿಸುತ್ತಾರೆ

ಜನಸಂಪರ್ಕವನ್ನು ಸ್ವಾಮೀಜಿ ಪ್ರಧಾನವಾಗಿ ಗಣಿಸಿದರು. ಮಾಧ್ವ ಮಹಾಮಂಡಲದ ಸಂಘ-ಟನೆಗಾಗಿ ಅವರು ಪ್ರಥಮತಃ ಸಂಚರಿಸಿದಾಗ ಅವರು ಭೆಟ್ಟಿ ಕೊಟ್ಟ ಊರುಗಳಲ್ಲಿ ಪ್ರತಿಯೊಂದು ಮಾಧ್ವ ಮನೆಗೂ ಹೋಗುವ ಕಾರ್ಯಕ್ರಮ ಇಟ್ಟುಕೊಂಡಿದ್ದರು. ಇದರಲ್ಲಿ ಬಡವ ಬಲ್ಲಿದ ಭೇದವಿರಲಿಲ್ಲ ಇದಲ್ಲದೆ ತಮ್ಮ ವಸತಿಗಳಲ್ಲಿ ಜಾತಿ ಪಂಥ ಭೇದವಿಲ್ಲದೆ ಸಕಲ ವರ್ಗಗಳ ಜನ ರನ್ನೂ ಕಂಡರು. ಇದಕ್ಕೂ ಮೊದಲೇ ಹಿಂದು-ಗಳು ಒಟ್ಟಾಗಿ ನಿಲ್ಲಬೇಕು, ಇಲ್ಲವೇ ಬೇರೆ ಬೇರೆ ಯಾಗಿ ಬೀಳಬೇಕು ಎಂಬುದನ್ನವರು ಮನಗಂಡಿ ದ್ದರು. ಪೀಠಗಳು ಕೇವಲ ಬ್ರಾಹ್ಮಣರ ಒತ್ತೈಸಿಗ ಳಾದರೆ ಸಾಲದು. ವರ್ಣಾಶ್ರಮ ವ್ಯವಸ್ಥೆಯಲ್ಲಿ ಬ್ರಾಹ್ಮಣಾದಿ ವರ್ಣಗಳಿಗೆ ವಿಶಿಷ್ಟ ಕರ್ತವ್ಯಗಳನ್ನು ಹೇಳಿದ್ದರೂ ಆ ಕರ್ತವ್ಯಗಳ ಫಲಗಳಿಗೆ ಇಡೀ

ಸಮಾಜ ಅಧಿಕಾರಿಯಾಗಬೇಕೇ ಹೊರತು ಕೇವಲ ಪಂಗಡಗಳಲ್ಲ. ಈ ವಿಷಯವನ್ನು ಮರೆತದ್ದರಿಂದಲೇ ಮಠಾಧಿಪತಿಗಳ ಬಗ್ಗೆ ಅಸಡ್ಡೆ, ಉಚ್ಚ ವರ್ಣಗಳ ಬಗ್ಗೆ ವಿರೋಧ ಬೆಳೆದಿದೆ. ಈ ಚಿಂತನೆಯ ಫಲವಾಗಿಯೆ ಅವರು "ಮಾಧ್ವ" ಎಂದರೆ ಮಧ್ವಾಚಾರ್ಯರ ತತ್ತ್ವಗಳಲ್ಲಿ ನಂಬಿಕೆಯುಳ್ಳವನು ಎಂದು ವ್ಯಾಖ್ಯೆ ಹೇಳಿದ್ದು. ಇದು ತತ್ತ್ವಜ್ಞಾನವನ್ನು ವಿಶಿಷ್ಟ ಜಾತಿ ವರ್ಣಗಳ ಹಿಡಿತದಿಂದ ಬೇರ್ಪಡಿಸಿ ಇಡೀ ಹಿಂದೂ ಸಮಾಜದ ಸೊತ್ತಾಗಿ ಮಾಡುವ ಕ್ರಮವಾಗಿತ್ತು. ಸ್ವಾಭಾವಿಕವಾಗಿ ಹಳೇ ವಿಚಾರದ ಜನರಿಗೆ ಈ ವ್ಯಾಖ್ಯೆ ಒಪ್ಪಿತವಾಗಲಿಲ್ಲ. ಈ ಬಗ್ಗೆ ರೋಷದ ಪ್ರತಿಕ್ರಿಯೆಗಳೂ ಮಾಧ್ವ ಮಂಡಲವನ್ನು ವಿರೋಧಿಸುವ ಯತ್ನಗಳೂ ಒಳಗಿಂದೊಳಗೆ ದೀರ್ಘಕಾಲ ನಡೆದವು. ಆದರೆ ಸ್ವಾಮೀಜಿಯವರು ತಮ್ಮ ಸೋಲಿಲ್ಲದ ಸಹನೆಯಿಂದ ವಿರೋಧವನ್ನು ಸಾವಕಾಶವಾಗಿ ಸವೆಸಿದರು. ಇಂದು ತೀರ ಗತಾನುಗತಿಕರಲ್ಲದವರನ್ನು ಬಿಟ್ಟರೆ ಶ್ರೀ ವಿಶ್ವೇಶತೀರ್ಥರ ಕಾರ್ಯಕ್ರಮಗಳಿಗೆ ಸಾರ್ವತ್ರಿಕ ಬೆಂಬಲ ದೊರೆಯುತ್ತದೆ.

ಮಧ್ವಾಚಾರ್ಯರ ಒಂದು ಮಠದ ಬ್ರಾಹ್ಮಣ ಪೀಠಾಧಿಪತಿಯಾಗಿ ವಿಶ್ವೇಶತೀರ್ಥರು ದ್ವೈತ ವೇದಾಂತದ ಪ್ರತಿಷ್ಠಾಪನೆಯಲ್ಲಿ ಶ್ರದ್ಧೆ ವಹಿಸಿದ್ದಾರೆ. ಅದರಲ್ಲವರು ಪಾರಂಗತರೂ ಹೌದು. ಮಾನವನ ಬದುಕನ್ನೂ ಅವನ ನಿಸ್ತರಣ ಮಾರ್ಗವನ್ನೂ ದ್ವೈತ ವೇದಾಂತವೇ ಅತ್ಯಂತ ಸತ್ಯವಾಗಿಯೂ ಕಲ್ಯಾಣಕರವಾಗಿಯೂ ವಿವರಿಸುತ್ತದೆಂದು ಅವರು ನಂಬಿದ್ದಾರೆ. ಆದರೆ ಇದು ಇತರ ವೇದಾಂತ ಹಾಗು ಧರ್ಮ ಸಂಪ್ರದಾಯಗಳೊಡನೆ ಅವರ ಸೌಹಾರ್ದಕ್ಕೆ ಅಡ್ಡ ಬಂದಿಲ್ಲ. ೧೯೫೫ರಲ್ಲಿ ಅವರು ನವಲಗುಂದದಲ್ಲಿ ಗವಿಮಠದ ಸ್ವಾಮೀಜಿಯವರನ್ನು ಭೆಟ್ಟಿಯಾದರು. ಹುಬ್ಬಳ್ಳಿಯ ಮೂರು ಸಾವಿರ ಮಠದ ಸ್ವಾಮೀಜಿಯೊಡನೆಯೂ ಅವರು ಸಂಪರ್ಕ ಏರ್ಪಡಿಸಿಕೊಂಡಿದ್ದಾರೆ. ೧೯೬೭ರ ರಲ್ಲಿ ಕೂಡಲ ಸಂಗಮದಲ್ಲಿ ನೆರೆದ ಶ್ರೀ ಬಸವೇಶ್ವರ ಅಷ್ಟಶತಮಾನೋತ್ಸವದಲ್ಲಿ ಅವರು ಆಮಂತ್ರಿತರಾಗಿ ಭಾಗವಹಿಸಿದರು. ಅಂದು ಅವರು ಧರ್ಮಗಳ ಸಹಕಾರದ ಅವಶ್ಯಕತೆಯನ್ನು ಕುರಿತು ಮಾಡಿದ ಭಾಷಣ ತುಂಬಾ ಮೆಚ್ಚಿಕೆ ಪಡೆಯಿತು.

ಸ್ವಾಮೀಜಿಯವರ ದೃಷ್ಟಿಯಲ್ಲಿ ಅವರ ಕಾರ್ಯಕ್ರಮ ಪಂಚಮುಖವಾದದ್ದು. ಮಾಧ್ವತ್ವ, ಬ್ರಾಹ್ಮಣತ್ವ, ಹಿಂದುತ್ವ, ಭಾರತೀಯತ್ವ ಮತ್ತು ಮಾನವತ್ವ ಇವು ಅದರ ಪಂಚಮುಖಗಳು. ಇವು ಐದೂ ಅನ್ಯೋನ್ಯಾಶ್ರಯವಾದವುಗಳು. ಈ ದೃಷ್ಟಿಯಿಂದಲೇ ಅವರು ವಿಶ್ವ ಹಿಂದೂ ಪರಿಷತ್ತಿನ ಕರೆ ಬಂದಾಗ ಅದರಲ್ಲಿ ಭಾಗವಹಿಸಿದುದು ಮತ್ತು ಇಂದು ಅದರ ಕಾರ್ಯಕ್ರಮದಲ್ಲಿ ತೀವ್ರ ಆಸಕ್ತಿ ವಹಿಸುತ್ತಿರುವುದು. "ಹಿಂದೂ ಸಂಘಟನೆಯಿಂದ ಇತರ ಧರ್ಮಗಳ ಅನುಯಾಯಿಗಳು ಭಯಪಡಬೇಕಾಗಿಲ್ಲ ಹಿಂದುಗಳಲ್ಲಿರುವ ನಾನಾ ಪಂಗಡಗಳಿಂದಾಗಿ ಹುಟ್ಟಿದ ಅನೈಕ್ಯ ಹಿಂದುಗಳನ್ನು ಭೀತರಾಗಿ ಮಾಡಿದೆ. ಭಯ ಅಹಿಂಸೆಗೆ ಪೋಷಕವಲ್ಲ. ಸ್ವಭಾವತಃ ಸಹಿಷ್ಣುಗಳಾದ ಹಿಂದುಗಳಲ್ಲಿ ಸಂಘಟನೆಯಿಂದ ಐಕ್ಯ ಹೆಚ್ಚಾದರೆ ಭಯ ಮೂಲಕವಾಗಿ ಒದಗುವ ಅನಿಷ್ಟ ಪ್ರತಿಕ್ರಿಯೆಗಳು ತಪ್ಪುವವು," ಎಂದು ಸ್ವಾಮೀಜಿ ಹೇಳುತ್ತಾರೆ. ಧಾರ್ಮಿಕ ಸ್ವಾತಂತ್ರ್ಯದಲ್ಲಿ ಮತಾಂತರ ಸ್ವಾತಂತ್ರ್ಯವೂ ಸೇರಿದೆಯೆಂದು ಎಲ್ಲ ಧರ್ಮಗಳೂ ಒಪ್ಪುತ್ತವೆ. ಹೀಗಿರುವಾಗ ಹಿಂದುಗಳಿಂದ ಮತಾಂತರ ಹೊಂದಿರುವವರನ್ನು ಅವರು ಬಯಸಿದರೆ ಹಿಂದೂ ಧರ್ಮದೊಳಗೆ ಸ್ವೀಕರಿಸುವುದು ಯೋಗ್ಯವೆಂದೂ ಸ್ವಾಮೀಜಿ ಹೇಳುತ್ತಾರೆ. ಈ ವರೆಗೆ ಮತಾಂತರ ಏಕಮುಖ ಪ್ರವಾಹವಾಗಿತ್ತು. ಅದು ಉಭಯಮುಖ ಪ್ರವಾಹವಾಗುವುದಾದರೆ ಯಾರೂ ದೂರಬೇಕಾಗಿಲ್ಲ.

ಹರಿಜನರ ವಿಷಯದಲ್ಲಿ ಸ್ವಾಮೀಜಿಯ ಅಭಿಪ್ರಾಯಗಳು ಮಾನವೀಯ ದೃಷ್ಟಿಯಿಂದ ಪ್ರೇರಿತವಾಗಿವೆ. ವಿಧರ್ಮೀಯರಿಗೆ ಸಲೀಸಾಗಿ ಪ್ರ

ಶವಿರುವಲ್ಲಿ ನಮ್ಮವರೇ ಆದ ಪರಿಜನರಿಗೆ ಪ್ರವೇಶವಿಲ್ಲದಿರುವುದರ ಅಸಾಮಂಜಸ್ಯ ಬಾಲ್ಯದಿಂದಲೇ ಅವರ ಮನಸ್ಸನ್ನು ಕೊರೆಯುತ್ತಿತ್ತು. ಹರಿಜನನೊಬ್ಬನು ಅವರ ಭೆಟ್ಟಿಗೆ ಬರಬೇಕಾದಾಗ ತನ್ನ ಜಾತಿಯ ವಿಷಯದಲ್ಲಿ ಸುಳ್ಳು ತಿಳಿವಳಿಕೆ ಕೊಟ್ಟು ಮರಳಿ ಹೋದ ಮೇಲೆ ಪಶ್ಚಾತ್ತಾಪದಿಂದ ಸತ್ಯವನ್ನು ತಿಳಿಸಿದ ಘಟನೆಯೊಂದು ಅವರಿಗೆ ಮರೆಯಲಾರದ ನೆನಪಾಗಿದೆ. "ನಾನೇನೂ ಸಮಾಜ ಸುಧಾರಕನಲ್ಲ. ಒಂದು ತತ್ತ್ವಜ್ಞಾನದ ಪ್ರತಿನಿಧಿಯಾದ ಮಠಾಧಿಪತಿಯಾಗಿ ನಾನು ಸಕಲ ಹಿಂದುಗಳ ವಿಷಯದಲ್ಲಿ ನನಗಿರುವ ಕರ್ತವ್ಯವೆನಿಸಿದ್ದನ್ನೇ ಮಾಡಲು ಯತ್ನಿಸಿದ್ದೇನೆ. ದೇವರು, ಸತ್ಯವಾದ ಜ್ಞಾನ ಹಾಗು ಧರ್ಮ ಇವು ಆ ಈ ವರ್ಣ ಅಥವಾ ಜಾತಿಗೆ ಗುತ್ತಿಗೆಯಾದದ್ದಲ್ಲ. ಪ್ರತಿಯೊಬ್ಬನಿಗೆ ಅವು ಗಮ್ಯವಾಗಿರಬೇಕು. ಈ ಮಾತಿನಲ್ಲಿ ನನಗಿರುವ ನಂಬಿಕೆಯನ್ನು ಬಹಿರಂಗವಾಗಿ ತೋರಿಸಲೆಂದು ನಾನು ಬೆಂಗಳೂರಲ್ಲಿ ಹರಿನಜರ ವಸತಿಗಳಿಗೆ ಭೆಟ್ಟಿ ಕೊಟ್ಟೆ. ಅವರು ನನ್ನಲ್ಲಿ ತೋರಿದ ಪ್ರೀತಿಗೆ ನಾನು ಋಣಿಯಾಗಿದ್ದೇನೆ." ಈ ಕೆಲಸವನ್ನು ಮುಂದುವರಿಸುವ ಉದ್ದೇಶ ತಮಗುಂಟೇ ? ಎಂದು ಕೇಳಿದರೆ, "ಇದೊಂದು ನಾಟಕವೆನಿಸುವಂತೆ ಹೋದಹೋದಲ್ಲಿ ಇದನ್ನು ಪುನರಾವರ್ತಿಸುವ ಉದ್ದೇಶ ನನಗಿಲ್ಲ. ನನ್ನ ಸಾರ್ವಜನಿಕ ಧರ್ಮೋಪದೇಶ ಕಾರ್ಯಕ್ರಮಗಳಿಗೆ ಅವರಿಗೆ ಪ್ರವೇಶ ಸಿಗುವಂತೆ ಯತ್ನಿಸುತ್ತಿದ್ದೇನೆ," ಎಂದು ಅವರು ಉತ್ತರಿಸಿದರು.

ಅಸ್ಪೃಶ್ಯತಾನಿವಾರಣೆ ಅಥವಾ ಹರಿಜನರಿಗೆ ಸಮಾನ ಹಕ್ಕುಗಳನ್ನು ದೊರಕಿಸುವ ಪ್ರಯತ್ನದಲ್ಲಿರುವ ತೊಡಕುಗಳನ್ನು ಸ್ವಾಮೀಜಿ ಬಲ್ಲರು. ಒಂದು ಕಷ್ಟವೆಂದರೆ ಸವರ್ಣೀಯರಲ್ಲಿ ಇದನ್ನು ಆಕ್ಷೇಪಿಸುವವರು ಬಹಿರಂಗವಾಗಿ ಹಾಗೆ ಮಾಡುತ್ತಿಲ್ಲ. ಒಳಗೊಳಗೆ ಗುಣಗುಟ್ಟುವ ಮತ್ತು ಸುತ್ತು ತಮ್ಮ ಅಸಂತೋಷವನ್ನು ಅನ್ಯ ರೀತಿಯಿಂದ ವ್ಯಕ್ತಪಡಿಸುವ ಮಾರ್ಗವನ್ನು ಅನುಸರಿಸುತ್ತಾರೆ. ಹಿಂದೂ ಜನರ ಈ ಪ್ರವೃತ್ತಿ ಎಷ್ಟೋ ಸಲ ಯಾವುದೇ ವಿವಾದಾತ್ಮಕ ಪ್ರಶ್ನೆಗಳನ್ನು ಚರ್ಚೆಯಿಂದ ಬಗೆಹರಿಸಲು ಅಡ್ಡಿಯಾಗುತ್ತದೆ. ಆದರೂ ಈ ವಿಷಯಗಳಲ್ಲಿ ದುಡುಕಿ ಫಲವಿಲ್ಲ. ಸಮಾಜದ ಬಹುಸಂಖ್ಯಾಕ ಜನರನ್ನು ನಮ್ಮೊಡನೆ ಸಾಗುವಂತೆ ಮಾಡದೆ ಇಚ್ಛಿತಾರ್ಥ ಸಿದ್ಧಿಸುವುದಿಲ್ಲ. ಇದಕ್ಕಾಗಿ ಒಮ್ಮೊಮ್ಮೆ ಎರಡು ಹೆಜ್ಜೆ ಮುಂದಿಟ್ಟು ಒಂದು ಹೆಜ್ಜೆ ಹಿಂದಿಡುವ ಪ್ರಸಂಗವೂ ಬರಬಹುದೆಂದು ಅವರಿಗೆ ತಿಳಿದಿದೆ.

ಹೋದ ವರ್ಷ ಸ್ವಾಮೀಜಿ ಬಂಗಾಲ ಅಸ್ಸಾಮ್ ಯಾತ್ರೆ ಮಾಡಿ ಬಂದರು. ಮಾಯಾಪುರದ ಬಂಗಾಲಿ ಮಾಧ್ವಸಂಪ್ರದಾಯದ ಗೌಡೀಯ ಮಠದಲ್ಲಿ ಅವರಿಗೆ ಸ್ವಾಗತ ಏರ್ಪಟ್ಟಿತ್ತು. ಬಂಗಾಲದಲ್ಲಿ ಜಾತಿ ಪದ್ಧತಿ ದಕ್ಷಿಣದಷ್ಟು ಬಿಗಿ ಎನಿಸಲಿಲ್ಲ. ಆದರೂ ಬೇರೆ ಕಾರಣಗಳಿಂದ ಅಲ್ಲಿ ಜನಮನ ಧಾರ್ಮಿಕ ವಿಚಾರಗಳಿಗೆ ಆಕರ್ಷಿಸಲ್ಪಡುವುದು ಕಷ್ಟವಾಗಿದೆ. ಅಸ್ಸಾಮಿನ ಜನ ಈ ವಿಷಯದಲ್ಲಿ ಭಿನ್ನರು. ಅವರು ಸರಳ ಮನಸ್ಸಿನವರು. ಹಳ್ಳಿಗೆ ಹಳ್ಳಿಯೇ ಭಜನೆ ಮಾಡುತ್ತ ದರ್ಶನಕ್ಕೆ ಎದ್ದು ಬರುತ್ತಿತ್ತು.

ವಿಶ್ವೇಶತೀರ್ಥರು ಈಚೆಗೆ ಉಡುಪಿಯಲ್ಲಿ ನಡೆದ ಎರಡು ಸಂನ್ಯಾಸಾಶ್ರಮ ತ್ಯಾಗದ ಪ್ರಕರಣಗಳಿಂದ ತೀರ ಚಿಂತಿತರಾಗಿದ್ದಾರೆ. ಬಾಲ್ಯಸಂನ್ಯಾಸದ ಸಂಸ್ಥೆಯು ಪುನರ್ವಿಚಾರ ಅಗತ್ಯವಾಗಬಹುದೆ ? ಎಂಬ ಪ್ರಶ್ನೆ ಅವರನ್ನು ಕಾಡುತ್ತಿದೆ. ಸಂನ್ಯಾಸಯೋಗ್ಯರಾದ ತರುಣರನ್ನೇ ಮಠಾಧಿಪತ್ಯಕ್ಕೆ ನೇಮಿಸಬೇಕು. ಅದಕ್ಕೆ ಪೂರ್ವತರಬೇತಿ ಪೂರ್ವ ಒಪ್ಪಿಗೆ ಅಗತ್ಯವಾಗುತ್ತದೆ. ಮಠಗಳ ಆಗುಹೋಗುಗಳಲ್ಲಿ ಪೂರ್ವಾಶ್ರಮ ಬಂಧುಗಳ ಹಸ್ತಕ್ಷೇಪವನ್ನು ತಪ್ಪಿಸಬೇಕು. ಸಮಾಜ ಈ ವಿಷಯದಲ್ಲಿ ಹೆಚ್ಚು ಆಸ್ಥೆ ಮತ್ತು ಜವಾಬ್ದಾರಿ ಹೊರಬೇಕು. ಇಲ್ಲದಿದ್ದರೆ ರಾಜಕೀಯ ಹಸ್ತಕ್ಷೇಪಕ್ಕೆ ಆಮಂತ್ರಣವಿತ್ತಂತಾದೀತು ಎಂಬ ಅರಿವು ಅವರಿಗುಂಟಾಗಿದೆ. ಇದಕ್ಕೋಸ್ಕರ ಸಂನ್ಯಾಸಯೋಗ್ಯರಾದ ಮತ್ತು ಅದರ ನಿಗ್ರಹ ನಿಷ್ಠೆಗಳನ್ನು ಪಾಲಿಸುವ ಪರೀಕ್ಷೆಗೊಳಪಟ್ಟು

ಸಫಲರಾದ ಬ್ರಹ್ಮಚಾರಿ ತರುಣರ ಒಂದು ತಂಡ ವನ್ನು ತರಬೇತು ಮಾಡಿ ಅವರಿಂದಲೇ ಆರಿಸುವ ವ್ಯವಸ್ಥೆಯಾದರೆ ಒಳಿತೆಂದು ಅವರ ಅಭಿಪ್ರಾಯ. ಇದಕ್ಕೆ ಇತರ ಮಠಾಧಿಪತಿಗಳು ಸಮ್ಮತಿಸು ವರೋ ನೋಡಬೇಕಾಗಿದೆ.

ಸ್ವಾಮೀಜಿಯವರ ಜೀವನ ತೆರೆದ ಪುಸ್ತಕ ದಂತಿದೆ. ಅವರ ಅರುವತ್ತೂ ಗಳಿಗೆ ಬಹಿರಂಗ ವಾಗಿಯೇ ಇದೆ. ಅವರು ಇಂದ್ರಿಯನಿಗ್ರಹಕ್ಕೆ ಅನುಕೂಲವಾದಂಥ ಮಿತಾಹಾರವನ್ನೇ ಮಾಡು ತ್ತಾರೆ. ಭಕ್ತರಿಗೆ ಬಡಿಸುವುದನ್ನೇ ತಾವೂ ಪರಿ-ಗ್ರಹಿಸುತ್ತಾರೆ. ಆದರೂ ಕುಳ್ಳೆನಿಸುವ ಅವರ ಕೃಶ ಕಾಯದಲ್ಲಿ ಅಪಾರ ಶಕ್ತಿ ಇದೆ. ಅದು ದಿನಕ್ಕೆ ಹದಿನೆಂಟು ಗಂಟೆಯ ವರ್ಷಾನುವರ್ಷ ಗಳ ನಿರಂತರ ಪರಿಶ್ರಮ ಭಾರವನ್ನು ತಾಳಿ ಕೊಂಡಿದೆ. ಆಡಂಬರ ಅವರ ಸ್ವಭಾವಕ್ಕೆ ಅತಿ ದೂರ. ಮುಗುಧನನ್ನೂ ಪಂಡಿತನನ್ನೂ ಅವರು ಅವರವರ ಸ್ತರದಲ್ಲೇ ಮಾತಾಡಿಸುತ್ತಾರೆ. ಒರಟು ಖಾದಿ ಕಾವಿ ಬಟ್ಟೆಯನ್ನು ಅವರು ಧರಿ ಸುತ್ತಾರೆ. ಪರ್ಯಾಯ ಪೀಠಾರೋಹಣದ ವೈಭವ ದಲ್ಲಿಯೂ ಅವರು ಈ ಸಾಮಾನ್ಯ ವಸ್ತ್ರದಲ್ಲೇ ಇದ್ದರು. ವೈಭವ ಕೃಷ್ಣನಿಗೆ; ಕೈಂಕರ್ಯ ತಮಗೆ ಎಂದವರ ಹೇಳಿಕೆ.

ಸಕಲ ಧರ್ಮ ಮತಗಳೊಡನೆಯೂ ಸ್ನೇಹ ದಿಂದಿರಬೇಕೆಂಬುದು ಅವರ ನಿಲುವು. ಇತರ ಸ್ವಾಮೀಜಿಗಳೊಡನೆ ಸೇರುವಾಗ ಸ್ಥಾನ ಮಾನದ ಉಚ್ಚ ನೀಚತ್ವದ ಶಂಕೆಯನ್ನೇ ಅವರು ಎತ್ತುವು ದಿಲ್ಲ. ಸಂದಾಕ್ಷಣ ತತ್ತ್ವಜ್ಞಾನ ವಿಚಾರದಲ್ಲಿ ಮಧ್ಯ ಪಂಚಾಯತಿಗೆ ಅವರೊಪ್ಪುವುದಿಲ್ಲ. ಅವ ರವರು ಕಂಡ, ಒಪ್ಪಿಕೊಂಡ ಸತ್ಯಗಳ ವಿಚಾರ ದಲ್ಲಿ ನಿರ್ಭಯವಾದ ಅಭಿವ್ಯಕ್ತಿಯೇ ಸತ್ಯಶೋಧ ನೆಗೆ ದಾರಿ. ನಾವೆಲ್ಲರೂ ಮಾನವರೆಂಬುದಕ್ಕಾಗಿ ವ್ಯವಹಾರದಲ್ಲಿ ಸಹಕಾರ ಬೇಕು. ದೇವರ ಅಸ್ತಿತ್ವವನ್ನೊಪ್ಪುವವರಲ್ಲೆಲ್ಲ ಆ ನಿಲುವಿನಲ್ಲಿ ಸಹಕಾರ ಬೇಕು. ಆದರೆ ತಾತ್ತ್ವಿಕ ನಂಬಿಕೆಯ ಪ್ರಶ್ನೆಗಳು ಮಧ್ಯಸ್ಥಿಗೆ ಒಳಪಡತಕ್ಕದ್ದಲ್ಲ.

ಸ್ವಾಮೀಜಿಯವರಿಗೆ ವಿದ್ಯಾರ್ಥಿಗಳ ಮೇಲೆ ಅಪಾರ ಪ್ರೇಮ. ಮೊದಲಿಂದಲೇ ಲೌಕಿಕ ವೈದಿಕ ವಿದ್ಯೆಗಳೆರಡರ ವಿದ್ಯಾರ್ಥಿಗಳಿಗೂ ಅವರು ಆಶ್ರಯವಿತ್ತಿದ್ದಾರೆ. ಈ ವಿಷಯದಲ್ಲಿ ಉಡು ಪಿಯ ಇತರ ಮಠಗಳೂ ಹಿಂದೆ ಬಿದ್ದಿಲ್ಲ. ಸ್ವಾಮೀ ಜಿಯ ಪರ್ಯಾಯ ಕಾಲದಲ್ಲಿ ಬ್ರಾಹ್ಮಣೇತರ ವಿದ್ಯಾರ್ಥಿಗಳಿಗೂ ಈ ಸಹಾಯ ದೊರೆಯ ಲಾರಂಭಿಸಿತು. ಸ್ವಾಮೀಜಿಯ ಕಾರ್ಯದ ಬಗ್ಗೆ ಜನಸಾಮಾನ್ಯರ ವಿಶ್ವಾಸದಿಂದಲೇ ಅವರ ಬಡ ಮಠ ಒಟ್ಟು ಇಪ್ಪತ್ತೈದು ಲಕ್ಷ ವೆಚ್ಚದ ಎರಡು ಎರಡು ಪರ್ಯಾಯಾವಧಿಗಳನ್ನು ನಿಸ್ತರಿಸಲು ಸಮರ್ಥವಾಯಿತು,

ಸಾಮೀಜಿಯವರ ೨೪ ವರ್ಷಗಳ ಪರಿಶ್ರಮಕ್ಕೆ ಸಾಕ್ಷಿಯಾಗಿ ಇಂದು ಮಾಧ್ವಮಂಡಲದ ಹಾಸ್ಟೆಲುಗಳು, ಬೆಂಗಳೂರಿನ ಪೂರ್ಣಪ್ರಜ್ಞ ವಿದ್ಯಾಪೀಠ, ರಾಮಕೃಷ್ಣ ಮಿಶನ್ನಿನ ರೀತಿಯಲ್ಲಿ ಕೆಲಸಮಾಡುವ ಶ್ರೀಕೃಷ್ಣ ಮಿಶನ್ನಿನ ದವಾಖಾನೆ ಗಳು ಉಡುಪಿಯ ಶ್ರೀಕೃಷ್ಣ ಮಠದ ಪರಿಸರದಲ್ಲಿ ಬೆಳೆದು ನಿಂತ ಅನೇಕ ಸಾರ್ವಜನಿಕ ಹಿತದ ಕಟ್ಟಡ ಗಳು ಕಾಣಿಸುತ್ತಿವೆ. ನಾಲ್ಕು ನೂರು ವರ್ಷಗಳ ಹಿಂದೆ ಉಡುಪಿಯಲ್ಲಿ ಮೂಡಿದ್ದ ವಾದಿರಾಜ ಸ್ವಾಮಿಗಳ ಸತ್ವಲೇಖೆಯ ನಂತರ ಉಡುಪಿಯಲ್ಲಿ ವಿಶ್ವೇಶತೀರ್ಥರೇ ಈ ಬಗೆಯ ಕೀರ್ತಿಗೆ ಭಾಜನ ರಾದವರೆನ್ನಬಹುದು. ▲





ಶ್ರೀ ಮಂಜುನಾಥ ಹೆಗಡೆ ಮತ್ತು ಕ್ಯಾನ್ಸರ್

ಕ್ಯಾ—೧

ಈ ಅಸಾಧ್ಯ ರೋಗಕ್ಕೆ ಅವರಲ್ಲಿ ಪ್ರತೀಕಾರವುಂಟೆ ?

ಸಾವೆಂ.

ಮಕ್ಕಳ ತಾಯ್ಮನೆ ಮಂಜುನಾಥ ದೇವರು ಹೆಗಡೆಯವರು ಇಂದು ಕರ್ನಾಟಕ ಮಹಾರಾಷ್ಟ್ರಗಳ ಅನೇಕ ಜಿಲ್ಲೆಗಳಲ್ಲಿ ಕ್ಯಾನ್ಸರ್ ಚಿಕಿತ್ಸಕ ಎಂದು ಹೆಸರಾಗಿದ್ದಾರೆ. ಉಳಿದ ಎಲ್ಲ ಕಡೆ ನಿರಾಶರಾಗಿ ಅತ್ಯವಸ್ಥೆಯನ್ನು ತಲುಪಿದ ಕ್ಯಾನ್ಸರ್ ರೋಗಿಗಳು ಹೆಗಡೆಯವರನ್ನು ಹುಡುಕಿಕೊಂಡು ಬರುತ್ತಾರೆ. ಅವರನ್ನು ಕರೆದುಕೊಂಡು ದೂರದೂರದ ಊರುಗಳಿಗೆ ಹೋಗುತ್ತಾರೆ. ಕೆಲ "ಕೈಬಿಟ್ಟ" ರೋಗಿಗಳು ಗುಣಮುಖರೂ ಆಗುತ್ತಾರೆ. ಕಳೆದ ಏಳುವರ್ಷಗಳಿಂದ ಬಗೆಬಗೆಯ ಕ್ಯಾನ್ಸರ್ ರೋಗಗಳಿಂದ ಬಳಲುವ ಎರಡೂವರೆ ಸಾವಿರಕ್ಕೂ ಮಿಕ್ಕಿದ ರೋಗಿಗಳು ಕೊನೆಯ ಉಪಾಯವೆಂದು ಹೆಗಡೆಯವರನ್ನು ಆಶ್ರಯಿಸಿದ್ದಾರೆ. ಸುಮಾರು ಸೇಕಡಾ ಏಳರಷ್ಟು ಜನ ಪೂರ್ಣ ಗುಣಹೊಂದಿದ್ದಾರೆಂದು ಅವರಿಟ್ಟ ಲೆಕ್ಕದಿಂದ ತಿಳಿಯುತ್ತದೆ.

ಮಂಜುನಾಥ ಹೆಗಡೆಯವರ ಕೀರ್ತಿಯನ್ನು ಕೇಳಿದ್ದ ನಾನು ಅವರನ್ನು ಕಂಡು ಅವರ ಚಿಕಿತ್ಸೆಯ ವಿಷಯ ಆಮೂಲಾಗ್ರವಾಗಿ ತಿಳಿದುಕೊಳ್ಳಬೇಕೆಂದು ಎಷ್ಟೋ ದಿನಗಳಿಂದ ಯೋಚಿಸುತ್ತಿದ್ದೆ. ಈಚೆಗೆ ಆ ಸಂದರ್ಭವೊದಗಿತು. ನನ್ನ ಸಾಮಾನ್ಯ ಸ್ವಭಾವದಂತೆ ನಾನು ಅವರಿಗೆಷ್ಟೋ 'ಭೇದಕ' ಪ್ರಶ್ನೆಗಳನ್ನು ಕೇಳಿದೆ. ಏನೊಂದು ಮುನಿಸಿಲ್ಲದೆ ಅವರು ಯಥಾರ್ಥ ಉತ್ತರಗಳನ್ನಿತ್ತರು. ೬೩ ಮೀರಿದ ಗೌರಕಾಯದ ತುಸು ಕುಳ್ಳ ಆದರೆ ದೃಢ ಮೈಕಟ್ಟಿನ ಈ ವ್ಯಕ್ತಿ ಇಂಗ್ಲೀಷ್ ವಿದ್ಯಾಭ್ಯಾಸವಿಲ್ಲದಿದ್ದರೂ ವೈಜ್ಞಾನಿಕ ದೃಷ್ಟಿಯ ಮನುಷ್ಯ ಎಂದು ನನಗೆ ತೋರಿತು.

ಮಂಜುನಾಥ ಹೆಗಡೆಯವರ ಮನೆತನವೇ ಐದಾರು ಶತಮಾನಗಳಿಂದ ವೈದ್ಯಕೀಯ ಚಾತುರ್ಯಕ್ಕಾಗಿ ಉತ್ತರ ಕನ್ನಡದಲ್ಲಿ ಪ್ರಸಿದ್ಧವಾದದ್ದು. ನಾಡೀ ಪರೀಕ್ಷೆಯಿಂದ ರೋಗ ನಿದಾನ ಮಾಡುವುದರಲ್ಲಿ ಒಂದು ಬಗೆಯ ವಂಶಪಾರಂಪರ್ಯದ ಕೌಶಲವು ಈ ಮನೆತನಕ್ಕೆ ದಾಯವಾಗಿ ಬಂದಿದೆ. ಮಂಜುನಾಥ ಹೆಗಡೆ

ಯವರ ೧೦ ವರುಷದ ಮಗ ಕೂಡ ಆಗಲೇ ನಾಡೀ ಪರೀಕ್ಷೆಯಲ್ಲಿ ಪ್ರವೀಣನಾಗುತ್ತಿದ್ದಾನೆ. ಮಂಜುನಾಥ ಹೆಗಡೆಯವರ ಮುತ್ತಜ್ಜ ಶಸ್ತ್ರ ಚಿಕಿತ್ಸೆಯನ್ನು ಕೂಡ ಮಾಡುತ್ತಿದ್ದರು. ಅವರಿಂದ ಮೃತಗರ್ಭದ ಆಪರೇಶನ್ ಮಾಡಿಸಿಕೊಂಡು ಬದುಕಿದವಳೊಬ್ಬಳು ಮೊನ್ನೆ ಮೊನ್ನೆ ತಾನೆ ತೀರಿಕೊಂಡಳು.

ಹೆಗಡೆಯವರ ಅಜ್ಜ ಅಧೈರ್ಯದಿಂದ ಶಸ್ತ್ರ ಚಿಕಿತ್ಸೆಯ ಕೈಬಿಟ್ಟರೂ ನಿಷ್ಣಾತ ವೈದ್ಯರಾಗಿದ್ದರು. ಅವರಿಗೆ ಗೊತ್ತಿಲ್ಲದ ಮಲೆನಾಡಿನ ಮೂಲಿಕೆಯೆ ಇದ್ದಿಲ್ಲವೆಂದರೂ ತಪ್ಪಿಲ್ಲ.

ಮಂಜುನಾಥ ಹೆಗಡೆಯವರ ತಂದೆ ಬೇಗನೇ ತೀರಿಕೊಂಡದ್ದರಿಂದ ಇವರು ನೇರವಾಗಿ ಅಜ್ಜನಿಂದಲೇ ವೈದ್ಯಕೀಯ ಪರಿಣತಿ ಪಡೆದರು. ಹೆಗಡೆಯವರ ಮನೆತನದ ಪ್ರಸಿದ್ಧಿ ವಿಶೇಷವಾಗಿ ಗರ್ಭಿಣಿ, ಬಾಣಂತಿ ಹಾಗು ಮಕ್ಕಳ ಚಿಕಿತ್ಸಾ ಕೌಶಲದ ಮೇಲೆ ನಿಂತಿದೆ. ಆದ್ದರಿಂದ "ಮಕ್ಕಳತಾಯ್ಮನೆ" ಎಂಬ ಹೆಸರು ಬಂದದ್ದು. ಗರ್ಭಪಾತ ನಿರೋಧಕ ತೈಲವು ಈ ಮನೆತನದ ಒಂದು ವೈಶಿಷ್ಟ್ಯವಾಗಿದೆ. ಗರ್ಭಕಾಮಿಲೆ – ಅರ್ಥಾತ್ ಗರ್ಭಿಣಿಯರ ಅನೀಮಿಯಕ್ಕೆ ಮಕ್ಕಳ ತಾಯ್ಮನೆಯವರ ವನಸ್ಪತಿ ಔಷಧ ಹೆಸರಾಂತದ್ದು. ಮಕ್ಕಳ ಯಕೃತ್ ದೋಷ (ಲಿವರ್) ಮತ್ತು ಮುಟ್ಟುದೋಷ (ರಿಕೆಟ್ಸ್) ಕ್ಕೂ ಸಿದ್ಧೌಷಧಿಗಳು ಅವರಲ್ಲಿವೆ. ಜಲೋದರ ಮತ್ತು ರಕ್ತದ ಒತ್ತಡದ ಚಿಕಿತ್ಸೆಯನ್ನೂ ಅವರು ಮಾಡುತ್ತಾರೆ.

ಮಕ್ಕಳ ತಾಯ್ಮನೆತನದವರು ಸ್ವಾನುಭವ ಸಿದ್ಧ ಔಷಧಗಳನ್ನು, ವಿಶೇಷವಾಗಿ ಸುತ್ತ ಮುತ್ತ ಸಿಗುವ ವನಸ್ಪತಿಗಳಿಂದ ನಿರ್ಮಿತವಾದವುಗಳನ್ನು ಹೆಚ್ಚಾಗಿ ಬಳಸುತ್ತ ಬಂದಿದ್ದಾರೆ. ಈ ಅನುಭೂತ ಔಷಧಿಗಳ ಬಗ್ಗೆ ಪ್ರಾಕಿನವರು ಬರೆದಿಟ್ಟ ಹಳೆಗನ್ನಡ ತಾಡವಾಲೆ ಪುಸ್ತಕಗಳ ಕೆಲ ಕೆಲ ಪುಟಗಳು ಈಗಲೂ ಇವೆ. ಅನೇಕ ವರ್ಷಗಳ ಹಿಂದೆ ಶಿರಸಿಯ ವಾಲಗಳ್ಳಿ ವೈದ್ಯರಿಂದ ಮಳೆಯಾಳಿ ಪದ್ಧತಿಯ ಕೆಲ ಪ್ರಯೋಗಗಳನ್ನು ಮಂಜುನಾಥ ಹೆಗಡೆಯವರು ಕಲಿತದ್ದಲ್ಲದೆ ಅನೇಕ ತಿಗಳಾರಿ (ತುಳು) ·ಲಿಪಿಯ ವೈದ್ಯಕ ಗ್ರಂಥಗಳನ್ನು ಪ್ರತಿಮಾಡಿಸಿಕೊಂಡರು.

"ಆದರೆ ಕ್ಯಾನ್ಸರ್ ಚಿಕಿತ್ಸಕನಾದೇನೆಂದು ಮಾತ್ರ ನಾನು ಕನಸಿನಲ್ಲಿಯೂ ನೆನೆಸಿರಲಿಲ್ಲ" ಎಂದು ಹೆಗಡೆಯವರು ಹೇಳಿದರು. "ಅದು ನನಗೆ ಗಂಟುಬಿದ್ದದ್ದು ಒಂದು ಆಕಸ್ಮಿಕಘಟನೆ."

೧೯೫೬ ರ ಸುಮಾರಿಗೆ ಕುಮಟಾ ತಾಲೂಕಿನ ಬರ್ಗಿ ಎಂಬಲ್ಲಿನ ಶಿವಾಚಾರಿ ಎಂಬ ಕಮ್ಮಾರನು ಹೆಗಡೆಕಟ್ಟೆಯಲ್ಲಿ ಮಂಜುನಾಥ ಹೆಗಡೆಯವರ ನೆರಮನೆಗೆ ಕೆಲಸಕ್ಕೆ ಬಂದಿದ್ದ. ಅವನ ಕಪಾಳದ ಮೇಲೆ ಕ್ಯಾನ್ಸರ್ ಆಗಿತ್ತು. ಮುಂಬಯಿಯ ಟಾಟಾ ಕ್ಯಾನ್ಸರ್ ಆಸ್ಪತ್ರೆಯ ವರೆಗೂ ಹೋಗಿ ನಿರಾಶನಾಗಿ ಬಂದಿದ್ದ. ರೋಗ ಉಲ್ಬಣಗೊಂಡು ತೂತು ಬಿದ್ದುದರಿಂದ ಬಾಯಿಗೆ ಹಾಕಿದ ಆಹಾರ ಹೊರಗೆ ಸೋರುತ್ತಿತ್ತು. "ಹ್ಯಾಗಾದರೂ ಮಾಡಿ ಇದನ್ನು ಗುಣಮಾಡಿ ಒಡೆಯಾ" ಎಂದು ಹೆಗಡೆಯವರಿಗೆ ದುಂಬಾಲುಬಿದ್ದ.

"ನನಗೆ ಕ್ಯಾನ್ಸರ್ ಚಿಕಿತ್ಸೆಯ ಗಂಧ ಕೂಡ ಇರಲಿಲ್ಲ. ಶಿವಾಚಾರಿಯ ಒತ್ತಾಯಕ್ಕೆ ಹಳೇ ಪುಸ್ತಕಗಳನ್ನು ಮಗುಚಿ ಹಾಕಿದೆ. ಒಂದೆಡೆ 'ಹುತ್ತಿನ ಹುಣ್ಣಿಗೆ' ಎಂದು ಒಂದು ಪ್ರಯೋಗವನ್ನು ಹೇಳಿತ್ತು. ಕ್ಯಾನ್ಸರ್ ವ್ರಣವು ಹುತ್ತದ ಹಾಗೆ ಬೆಳೆಯುತ್ತದೆ ಎಂಬ ಹೋಲಿಕೆಯಿಂದ ಇದು ಕ್ಯಾನ್ಸರ್ ಕುರಿತು ಇದ್ದೀತೆಂದುಕೊಂಡು ಓದಿದೆ. ಅಂತರ್ವ್ರಣಗಳಿಗೆ ಅನುಭೂತ ಔಷಧವನ್ನು ಅದರಲ್ಲಿ ಹೇಳಿತ್ತು. ಹೋದರೊಂದು ಕಲ್ಲು, ಬಂದರೊಂದು ಹಣ್ಣು. ಹೇಗೂ ಯಮನ ದವಡೆಯೊಳಗೆ ಕಾಲಿಟ್ಟ ಮನುಷ್ಯ ಎಂದುಕೊಂಡು ಔಷಧಿ ಕೊಟ್ಟೆ. ಮೂರು ತಿಂಗಳಲ್ಲೇ ಆತ ಗುಣಮುಖನಾದದ್ದು ನೋಡಿ ಅವನಿಗಿಂತ ನನಗೇ ಆಶ್ಚರ್ಯ"

ಎಂದರು ಹೆಗಡೆಯವರು.

ಸುದ್ದಿ ಕಾಳ್ಗಿಚ್ಚಿನಂತೆ ಹಬ್ಬಿತು. ನಿರಾಶರಾದ ಕ್ಯಾನ್ಸರ್ ರೋಗಿಗಳು ಹೆಗಡೆಯವರಲ್ಲಿಗೆ ಬರತೊಡಗಿದರು. ಒಂದೇ ವರ್ಷದಲ್ಲಿ ಸುಮಾರು ೬೦ ಪ್ರಕರಣಗಳು ಬಂದಿದ್ದವು. ಅವುಗಳಲ್ಲಿ ೪೦ ರಲ್ಲಿ ಗುಣಾಂಶ ಕಂಡು ಬಂದದ್ದು ನೋಡಿ ಹೆಗಡೆಯವರಿಗೆ ತಕ್ಕಷ್ಟು ಧೈರ್ಯ ಬಂತು. ಅನುಭವವೂ ಬಂತು. ಯಾವುದು ಆಶಾದಾಯಕ ಯಾವುದು ಅಸಾಧ್ಯ ಎಂದು ನೋಡಿದ ಕೂಡಲೆ ತಿಳಿಯುವಂತಾಯಿತು. ಪರವೂರುಗಳಿಗೂ ಸುದ್ದಿ ಹರಡಿತು. ಪತ್ರಿಕೆಗಳು ಬರೆದವು. ಧಾರವಾಡದ ಶ್ರೀ ಉಭಯಕರ ಗಣೇಶರಾಯರ ತಾಯಿಯ ಚಿಕಿತ್ಸೆ ಮಾಡಿದ ನಂತರ ಮಂಜುನಾಥ ಹೆಗಡೆಯವರ ಪ್ರಸಿದ್ಧಿ ಮತ್ತೂ ಹೆಚ್ಚಿತು. ಆ ಮಹಿಳೆಗೆ ಅನ್ನ ನಳಿಕೆಯ ಬಲ ಭಾಗದಲ್ಲಿ ಕ್ಯಾನ್ಸರ್ ಆಗಿತ್ತು. ಅದನ್ನು ಮಂಜುನಾಥ ಹೆಗಡೆಯವರು ಸುಮಾರು ಎರಡು ತಿಂಗಳುಗಳಲ್ಲಿ ಹಿಡಿತಕ್ಕೆ ತಂದು ಪೂರ್ಣ ಗುಣಪಡಿಸಿದರು.

"ಆದರೆ ನೀವು ಆಧುನಿಕ ರೀತ್ಯಾ ತರಬೇತಿ ಹೊಂದಿದ ಕ್ಯಾನ್ಸರ್ ತಜ್ಞರಲ್ಲ. ನೀವು ಗುಣಪಡಿಸಿದ ರೋಗವು ಕ್ಯಾನ್ಸರೇ ಎಂದು ಖಾತ್ರಿಯೇನು? ಬೇರೆ ಹುಣ್ಣಾಗಿದ್ದು ನೀವು ಕ್ಯಾನ್ಸರೆಂದು ಭ್ರಮಿಸಿದ್ದರೆ?" ಎಂದು ಕೇಳಿದೆ.

"ತಜ್ಞ ಡಾಕ್ಟರುಗಳಿಂದ ಕ್ಯಾನ್ಸರ್ ಎಂದು ಖಚಿತಗೊಳಿಸಲ್ಪಡದ ಪ್ರಕರಣಗಳನ್ನು ನಾನು ಹಿಡಿಯುವುದಿಲ್ಲ. ನಿಜವಾಗಿ ಅಲೋಪಥಿಯ ಪ್ರಯತ್ನಗಳೆಲ್ಲ ಮುಗಿದ ಮೇಲೆಯೆ ಜನರು ನನ್ನ ಕಡೆ ಬರುತ್ತಾರೆ" ಎಂದು ಹೆಗಡೆ ಹೇಳಿದರು.

ಅವರು ಅಂಕೆ ಸಂಖ್ಯೆಗಳನ್ನು ಕೊಟ್ಟರು. ಇದೇ ಮಾರ್ಚ್ ಮಧ್ಯದ ವರೆಗೆ ಅವರ ಕಡೆ ಬಂದ ಕ್ಯಾನ್ಸರ್ ರೋಗಿಗಳ ಸಂಖ್ಯೆ ೨೬೫೯; ಅವರಲ್ಲಿ ಪ್ರಾರಂಭದಲ್ಲಿಯೇ ಆಶೆ ಇಲ್ಲ ಎಂದು ನಿಶ್ಚಿತವಾಗಿದ್ದ ರೋಗಿಗಳು ೧೯೨೪; ಈ ನಿರಾಶಾ ಸ್ಥಿತಿಯಲ್ಲಿದ್ದವರಲ್ಲಿ ಕೂಡ ೮ ಜನ ಗುಣ ಹೊಂದಿದರು. ಆಶಾದಾಯಕವೆಂದು ಗಣಿಸಿದ ೭೬೮ ರಲ್ಲಿ ೧೮೭ ಜನ ಗುಣ ಹೊಂದಿದವರು. ಇದು ಸುಮಾರು ೨೩% ಆಗುತ್ತದೆ.

ಈ ಅಂಕೆ ಸಂಖ್ಯೆಗಳನ್ನು ನಾನು ಅಲೋಪಥಿ ಡಾಕ್ಟರ್ ಮಿತ್ರರೊಬ್ಬರ ಮುಂದಿಟ್ಟಾಗ ಇವೆಲ್ಲವೂ ಕ್ಯಾನ್ಸರ್ ಪ್ರಕರಣಗಳೇ ಇದ್ದ ಪಕ್ಷದಲ್ಲಿ ಗುಣ ಹೊಂದಿದವರ ಪ್ರಮಾಣ ಗಮನಾರ್ಹವಾದದ್ದೆಂದು ಹೇಳಿದರು. ತೀರ ಮುಂದುವರಿದ ಪ್ರಕರಣಗಳಲ್ಲಿ ನೂರಕ್ಕೊಂದು ಗುಣ ಹೊಂದಿದರೂ ಅದು ಗಣ್ಯವಾದದ್ದೆಂದೆಣಿಸಬೇಕು. "ಆದರೆ ವೈದ್ಯಕೀಯದಲ್ಲಿ Spontaneous recovery–ತಂತಾನೆ ಗುಣಹೊಂದುವ ಪ್ರಕರಣಗಳು, ಇವೆ. ನಾವು ಕೈ ಬಿಟ್ಟ ರೋಗಿಗಳು ನಮ್ಮ ಊಹೆಗಳನ್ನೆಲ್ಲ ಸುಳ್ಳುಗಳೆಂದು ಚಿಕಿತ್ಸೆಯಿಲ್ಲದೆ ಗುಣಹೊಂದುವುದುಂಟು" ಎಂದು ಕುಂಟು ಪಂಕ್ತಿ ಸೇರಿಸಿದರು.

ಆದರೆ ಇಂಥ spontaneous recovery ಪ್ರಕರಣಗಳು ಬಹಳ ವಿರಳವಾಗಿರುತ್ತವೆಂದು



ಪಟ್ಟಣದ ಮಧ್ಯದಲಿ ಹಗಲೇ ದರೋಡೆ !
ಪೋಲೀಸು ಸ್ಟೇಶನಿಗೆ ಟೆಲಿಫೋನು ಮಾಡೆ
ಅಷ್ಟ ಮಂತ್ರೀ ಯೋಗವಾಗಿದ್ದರಿಂದ
ಪೋಲೀಸನೊಬ್ಬನೂ ಸಿಗುವುದಿಲ್ಲೆಂದ

ಅವರು ಒಪ್ಪಿದರು.

ಶ್ರೀ ಹೆಗಡೆಯವರಿಗೆ ಅನೇಕ ಅಲೋಪಥಿ ವೈದ್ಯ ಮಿತ್ರರಿದ್ದಾರೆ. ಕ್ಯಾನ್ಸರ್ ವಿಷಯದಲ್ಲಿ ಆಧುನಿಕ ಸಂಶೋಧನೆಗಳನ್ನು ಕುರಿತು ತಿಳಿದುಕೊಳ್ಳಲು ಹೆಗಡೆಯವರು ಯತ್ನಿಸುತ್ತಿರುತ್ತಾರೆ. ಈಗವರು ತಮ್ಮ ಹಳೇ ಕಡತದ ಚಿಕಿತ್ಸಾ ಪದ್ಧತಿಯಲ್ಲಿ ಅನುಭವದಿಂದ ಸುಧಾರಣೆ ಮಾಡಿಕೊಂಡಿದ್ದಾರೆ. ಮೊದಲು ಗುಳಿಗೆ, ಪುಡಿಗಳನ್ನು ಕೊಡುತ್ತಿದ್ದರು. ಈಗ ಅವೇ ಗುಣಧರ್ಮಗಳುಳ್ಳ ಇತರ ವನಸ್ಪತಿಗಳ ಯೋಗದಿಂದ ತೈಲವನ್ನು ತಯಾರಿಸಿ ಪ್ರಯೋಗಿಸುತ್ತಿದ್ದಾರೆ. ಚಿಕಿತ್ಸೆಗೆ ಕಡುಪಥ್ಯವಿಲ್ಲವಾದರೂ ಸಾಮಾನ್ಯಪಥ್ಯಕ್ಕೆ ಒಪ್ಪಬೇಕಾಗುತ್ತದೆ. ಗುಣವಾಗುವುದಾದರೆ ಒಂದು ತಿಂಗಳಲ್ಲಿ ತಿಳಿದು ಹೋಗುತ್ತದೆ.

ಪಥ್ಯದ ವಿಚಾರ ಹೇಳುತ್ತ ಅವರು, "ಮಾಂಸಾಹಾರಿಗಳಿಗೆ ಕ್ಯಾನ್ಸರ್ ಆದರೆ ಗುಣಹೊಂದುವುದು ಕಷ್ಟ [illegible] ಭವ" ಎಂದು ತಿಳಿಸಿದರ[redacted]ದಲ್ಲಿ ಮಾಂಸಾಹಾರವನ್ನು ಪೂರ್ತಿ ವರ್ಜಿಸಿದವರೊಬ್ಬರಿಗೆ ರೋಗ ಗುಣವಾಗತೊಡಗಿತ್ತು. ಆದರೆ ಯಾವುದೋ ದುರ್ಬಲ ಕ್ಷಣದಲ್ಲಿ ಅವರು ಮಾಂಸ ತಿಂದರು. ಕೂಡಲೆ ರೋಗ ಮರುಕಳಿಸಿಬಿಟ್ಟಿತು" ಎಂದು ಹೇಳಿದರು.

"ಅಲೋಪಥಿ ಪದ್ಧತಿಯ ಆಸ್ಪತ್ರೆಗಳಲ್ಲಿ ನಿಮ್ಮ ಔಷಧವನ್ನು ಪ್ರಯೋಗಿಸಿ ನೋಡಿದ್ದುಂಟೆ?"

"ಇಲ್ಲ. ಹಾಗೆ ನಿರೀಕ್ಷಿಸುವುದೂ ತಪ್ಪು. ತಮ್ಮದಲ್ಲದ ಪದ್ಧತಿಯ ಹೊಸ ಔಷಧಗಳನ್ನು, ಪ್ರಾಣಿಗಳ ಮೇಲೂ ಅನಂತರ ನಿಯಂತ್ರಿತವಾಗಿ ಮತ್ತು ತುಲನಾತ್ಮಕವಾಗಿ ಮನುಷ್ಯರ ಮೇಲೂ ಪ್ರಯೋಗಿಸಿ ಸಿದ್ಧವಾಗದ ಔಷಧಗಳನ್ನು ಪ್ರಯೋಗಾರ್ಥವಾಗಿ ಕೊಡಲು ಅವರು ಹೇಗೆ ಒಪ್ಪುವರು" ಎಂದುಹೆಗಡೆಯವರು ಹೇಳಿದರು.


"ನೀವು ಪೇಟೆಂಟ್ ತೆಗೆಸಿ ಈ ಔಷಧದ ಪ್ರಯೋಗ ಹೆಚ್ಚು ವೈಜ್ಞಾನಿಕ ಹಾಗು ವಿಸ್ತಾರಪೂರ್ವಕ ಆಗುವಂತೆ ಮಾಡಬಾರದೇಕೆ?" ಎಂದು ಪ್ರಶ್ನಿಸಿದೆ.

"ಆ ದಿಶೆಯಲ್ಲಿ ಇನ್ನೂ ವಿಚಾರ ಮಾಡಿಲ್ಲ. ಅದರ ಕಾಯದೆ ಕ್ರಮಗಳೇನೋ ನಾನರಿಯೆ. ಆದರೆ ಹೆಚ್ಚು ವೈಜ್ಞಾನಿಕವಾಗಿ ಪರಿಶೀಲನೆ ನಡೆಸುವ ಯತ್ನದಲ್ಲಿದ್ದೇನೆ. ಈಗ ನನಗಿರುವ ಮುಖ್ಯ ತೊಡಕೆಂದರೆ ರೋಗಿಗಳನ್ನು ಪ್ರತ್ಯಕ್ಷ ನನ್ನ ಅಂಕೆಯಲ್ಲಿ ಆರೈಕೆಯಲ್ಲಿ ಇಟ್ಟುಕೊಂಡು ಔಷಧದ ಪರಿಣಾಮಗಳನ್ನು ದೈನಂದಿನವಾಗಿ ಗಮನಿಸುವ ಸೌಕರ್ಯಗಳಿಲ್ಲ. ನಮ್ಮ ಊರು ಹೆಗಡೆ ಕಟ್ಟೆ. ಬಲು ಚಿಕ್ಕ ಊರು (ಶಿರಸಿ ತಾಲೂಕು). ಆಸ್ಪತ್ರೆ ಇಲ್ಲ. ರೋಗಿಗಳಿಗೆ ಅವರಿದ್ದಲ್ಲೇ ಹೋಗಿ ಔಷಧ ಕೊಡಬೇಕು. ಆದರೆ ಸದ್ಯವೇ ಕೆಲ ಹಾಸಿಗೆಗಳುಳ್ಳ ಒಂದು ಆಸ್ಪತ್ರೆ ನಿರ್ಮಾಣವಾಗುವುದರಲ್ಲಿದೆ. ಅನಂತರ ನನ್ನ ತಿಳಿವಳಿಕೆಯ ಮಟ್ಟಿಗೆ ರೋಗಿಗಳನ್ನು ವೈಜ್ಞಾನಿಕವಾಗಿ ಪರಿಶೀಲಿಸಲು ಸಾಧ್ಯವಾಗಬಹುದು."

ಶ್ರೀ ಹೆಗಡೆಯವರ ಪ್ರಯೋಗಗಳಿಗೆ ಅನುಕೂಲತೆ ಒದಗಿಸಿಕೊಡುವುದು ಸಾರ್ವಜನಿಕರ ಕರ್ತವ್ಯವಾಗಿದೆ. ಯಾರಿಗೆ ಗೊತ್ತು? ವಿಜ್ಞಾನಿಗಳು ಹುಡುಕುತ್ತಿರುವ ರಾಮಬಾಣ ಈ ಹಳ್ಳಿಯ ವೈದ್ಯರ ಬತ್ತಳಿಕೆಯಲ್ಲೇ ಇರಬಹುದು.

ಆದರೆ ಮಂಜುನಾಥ ಹೆಗಡೆಯವರ ಸೇವೆ ಈ ಕ್ಯಾನ್ಸರ್ ಚಿಕಿತ್ಸೆಗೆ ಮಿತವಾಗಿಲ್ಲ. ಅದು ಅವರ ಈಚಿನ ಹವ್ಯಾಸ. ಮಕ್ಕಳು ಬಸಿರಿ ಬಾಣಂತಿಯರಿಗೆ ಆಯುಷ್ಯ ದಾನ ಮಾಡುವ ಅವರ ಸೇವಾಕಾರ್ಯ ಸುತ್ತ ಮುತ್ತಲ ಹಳ್ಳಿಗಳಿಗೆ ನಡೆದೇ ಇದೆ. ಅದಕ್ಕೆ ಅವರು ಪ್ರತಿಫಲ ತೆಗೆದುಕೊಳ್ಳುವುದಿಲ್ಲ—ಕೇವಲ ತೈಲದ ವೆಚ್ಚಕ್ಕಾಗಿ ತೆಂಗಿನಕಾಯಿ ತೆಗೆದುಕೊಳ್ಳುತ್ತಾರಷ್ಟೇ. *

ಆದಕ್ಕೆ ಪ್ರಕಾಶಕರೇ ಸಿಗಲಿಲ್ಲ — ಈಗ ಪ್ರತಿ ತಿಂಗಳು ೨ ಕೋಟಿ ಪ್ರತಿ ಮಾರುತ್ತದೆ.



ರೀಡರ್ಸ್ ಡೈಜೆಸ್ಟಿನ ಕಥೆ

ಸಾ. ನೆಂ.

"ರೀಡರ್ಸ್ ಡೈಜೆಸ್ಟ್" ಎಂಬ ಹೆಸರು ಇಂದು ಪತ್ರಿಕಾ ಪ್ರಪಂಚದಲ್ಲೊಂದು ಹೆಗ್ಗುರುತಾಗಿದೆ. ಪ್ರತಿ ತಿಂಗಳು ೨೬ ದೇಶಗಳಲ್ಲಿ ೧೩ ಭಾಷೆಗಳಲ್ಲಿ ಹೊರಡುವ ಆದರ ೩೦ ಆವೃತ್ತಿಗಳ ಎರಡು ಕೋಟಿ ಮೇಲ್ಪಟ್ಟು ಪ್ರತಿಗಳು ಮಾರಾಟವಾಗುತ್ತಿವೆ. ಇಷ್ಟು ಪ್ರಚಂಡ ಪ್ರಸಾರ ಯಾವ ದೇಶದ ಯಾವ ಪತ್ರಿಕೆಗೂ ಇಲ್ಲ. ಅಮೇರಿಕದಲ್ಲಿ ನ್ಯೂಯಾರ್ಕಿನ ಉತ್ತರದಲ್ಲಿರುವ ಪ್ಲೆಸೆಂಟ್‌ವಿಲೆಯ ಆದರ ೮೦ ಎಕರೆ ವಿಸ್ತಾರವಾದ ಸಂಪಾದಕೀಯ ಕಾರ್ಯಾಲಯಗಳಲ್ಲಿ ಒಂದು ನೂರು ಜನ ಸಂಪಾದಕ ಉಪಸಂಪಾದಕರು ಬೇರೆ ಬೇರೆ ಪತ್ರಿಕೆಗಳಲ್ಲಿ ಬಂದ ಲೇಖನಗಳನ್ನು ಓದುವ, ಕತ್ತರಿಸುವ, ಸಂಕ್ಷೇಪಿಸುವ, ಪುನರ್ಲೇಖಿಸುವ ಕಾರ್ಯದಲ್ಲಿ ನಿರತರಾಗಿರುತ್ತಾರೆ. ಆದರ ಸಂಚಾರಿ ಸಂಪಾದಕರು ಡೈಜೆಸ್ಟಿಗೆ ಬೇಕಾದ ವಿಶೇಷ ಲೇಖನಗಳಿಗಾಗಿ ವಿಷಯಗಳನ್ನು ಕಂಡು ಹಿಡಿಯಲು ಪಂಚಖಂಡಗಳನ್ನು ಸುತ್ತುತ್ತಾರೆ.

ಆದರ ವ್ಯವಹಾರ ಮತ್ತು ಪ್ರಚಾರ ಕಚೇರಿಗಳು ಬೇರೆಯೇ ಇವೆ. ಡೇಟನ್ ಎಂಬಲ್ಲಿ ಮೆಕ್‌ಕಾಲ್ ಮುದ್ರಣಾಲಯದಲ್ಲಿ ಆದರ ಅಮೇರಿಕನ್ ಸಂಸ್ಕರಣದ ಐದು ಲಕ್ಷ ಪ್ರತಿಗಳು ನಿತ್ಯ ಮುದ್ರಣ ಹೊಂದುತ್ತವೆ. ಇದೊಂದೇ ಆವೃತ್ತಿಗೇ ವರ್ಷಕ್ಕೆ ೫೦ ಸಾವಿರ ಟನ್ ಕಾಗದ ಬೇಕಾಗುತ್ತದೆ. ಇತರ ಆವೃತ್ತಿಗಳು ೩೪ ಸಾವಿರ ಟನ್ ಕಾಗದವನ್ನು ವೆಚ್ಚಮಾಡುತ್ತವೆ.

ಈ ಅಪೂರ್ವ ಪತ್ರಿಕೆಯ ಕಲ್ಪನೆ ೪೩ವರ್ಷಗಳ ಹಿಂದೆ ಯುರೋಪಿನ ರಣರಂಗದ ಒಂದು ಆಸ್ಪತ್ರೆಯಲ್ಲಿ ಜನ್ಮ ತಾಳಿತು. ಡಿ ವಿಟ್ ವಾಲೇಸ್

ನೆಂಬ ೨೯ ವರ್ಷದ ಅಮೇರಿಕನ್ ತರುಣ ವರ್ಡನ್ ರಣರಂಗದಲ್ಲಿ ವಿಪರೀತ ಗಾಯಗೊಂಡು ಶುಶ್ರೂಷೆ ಹೊಂದುತ್ತಿದ್ದ. ಆತ ಭಾರಿ ಒದುಗುಳಿ. ಆಸ್ಪತ್ರೆಗೆ ಬರುತ್ತಿದ್ದ ನೂರಾರು ಅಮೇರಿಕನ್ ಮಾಸಿಕ ಮತ್ತು ವಾರಪತ್ರಿಕೆಗಳನ್ನು ಆತ ಓದುತ್ತಿದ್ದ. ಅವನ ಜ್ಞಾನತೃಷ್ಣೆ ಅಗಾಧವಾಗಿತ್ತು. ಹಲವು ವಿಷಯಗಳನ್ನು ತಿಳಿದುಕೊಳ್ಳಲು ಆತ ಹಾತೊರೆಯುತ್ತಿದ್ದ. ಆದರೆ ಪತ್ರಿಕಾಲೇಖನಗಳನ್ನೋದುತ್ತ ಹೋದಂತೆ ಅವನಿಗೆ ಇಷ್ಟು ಉದ್ದುದ್ದ ಲೇಖನಗಳು ಸಾಮಾನ್ಯ ಓದುಗನಿಗೆ ಅಗತ್ಯವೆ? ಅವನ್ನೋದಲು ಅವನಿಗೆ ಸಮಯವುಂಟೇ? ಎಂಬ ಯೋಚನೆ ಹುಟ್ಟಿತು. ಬೇರೆ ಬೇರೆ ಪತ್ರಿಕೆಗಳಲ್ಲಿ ಬಂದ ಮಹತ್ವದ ಲೇಖನಗಳನ್ನು ಸಂಕ್ಷೇಪಿಸಿ ವಿವಿಧ ವಿಷಯುಗಳನ್ನೊಳಗೊಂಡ ಹೊಸ ತರದ ಪತ್ರಿಕೆಯನ್ನೇ ಪ್ರಕಟಿಸಿದರೆ ತನ್ನಂತೆ ಬಹು ವಿಷಯಗಳನ್ನು ತಿಳಿಯುವ ಆಸೆಯುಳ್ಳವರಿಗೆ ಉಪಯೋಗವಾಗಲಿಕ್ಕಿಲ್ಲವೆ?

ಯುದ್ಧ ಮುಗಿದು ಸೈನ್ಯದಿಂದ ಬಿಡುಗಡೆ ಹೊಂದಿ ಮರಳಿದೊಡನೆ ವಾಲೇಸ್ ತನ್ನ ಕಲ್ಪನೆಗೆ ವಾಸ್ತವಿಕ ರೂಪ ಕೊಡಲು ಅನುವಾದನು. ಆತನ ಸೋದರತ್ತೆ ಲೈಬ್ರೆರಿಯನ್ ಆಗಿದ್ದ ಮಿನಿಯಾಪಾಲಿಸ್‌ನ ಸಾರ್ವಜನಿಕ ಪುಸ್ತಕಾಲಯದಲ್ಲಿ ಕುಳಿತು ಪತ್ರಿಕೆಗಳ ಹಳೇ ಹೊಸ ಸಂಚಿಕೆಗಳನ್ನು ತಿರುವಿ ಹಾಕಿ ಉತ್ತಮ ಉಪಯುಕ್ತ ಲೇಖನಗಳನ್ನು ಗುರುತುಹಾಕಿಕೊಂಡನು. ಅವುಗಳನ್ನು ಸಂಕ್ಷೇಪಿಸುವ ಅಭ್ಯಾಸವನ್ನು ಪ್ರಾರಂಭಿಸಿದನು. ಲೇಖಕರ ಶೈಲಿ ಕೆಡಿಸದೆ, ಆಶಯವನ್ನು ಮೊಟಕಿಸದೆ ಅವರ ಮಾತುಗಳಲ್ಲೇ ತಾನು ಮಾಡಿದ ಸಂಗ್ರಹಗಳು ಮೂಲಕ್ಕಿಂತಲೂ ಸುವಾಚ್ಯವಾಗಿವೆಯೆಂದು ಅವನಿಗೆ ಅನಿಸಿತು.

ಸಂಗ್ರಹ, ಸಂಕ್ಷೇಪಕಾರ್ಯ ವಾಲೇಸನಿಗೆ ತೀರ ಹೊಸದೇನೂ ಆಗಿರಲಿಲ್ಲ. ಕಾಲೇಜಿನಲ್ಲಿದ್ದಾಗಿನಿಂದಲೇ ವೈವಿಧ್ಯಪೂರ್ಣ ಓದಿನ ಚಟವುಳ್ಳ ಆತ ಎಷ್ಟೋ ಲೇಖನಗಳ ಕಟಿಂಗುಗಳನ್ನು ಕಲೆ ಹಾಕಿದ್ದ. ಕೆಲಕಾಲ ಒಂದು ಬ್ಯಾಂಕಿನಲ್ಲಿ, ಅನಂತರ ಒಂದು ಪ್ರಕಾಶನ ಸಂಸ್ಥೆಯಲ್ಲಿ ದುಡಿದ ಆತ ರೈತರಿಗೆ ಬೇಕಾಗುವ ವಿಷಯಗಳನ್ನು ವಿವಿಧ ಮೂಲಗಳಿಂದ ಶೋಧಿಸಿ, ಸಂಕ್ಷೇಪಿಸಿ ೧೯೧೬ರಲ್ಲಿ ಪ್ರಕಟಿಸಿದ ೧೨೦ ಪುಟದ ಕೈಪಿಡಿಯ ಒಂದು ಲಕ್ಷ ಪ್ರತಿಗಳು ಮಾರಾಟವಾಗಿದ್ದವು.

೧೯೨೦ರ ಪ್ರಾರಂಭದಲ್ಲಿ ಡಿ ವಿಟ್ ವಾಲೇಸ ತನ್ನ ನಿಯೋಜಿತ "ರೀಡರ್ಸ್ ಡೈಜೆಸ್ಟ್"ನ ಪ್ರಥಮ ಸಂಚಿಕೆಯ ಕೆಲ ನೂರು ಮಾದರಿ ಪ್ರತಿಗಳನ್ನು ಮುದ್ರಿಸಿಕೊಂಡನು. ಈ ಸಂಚಿಕೆಯಲ್ಲೇ ಆತ "ರೀಡರ್ಸ್ ಡೈಜೆಸ್ಟ್"ನ ನೀತಿಯನ್ನು ಸಂಕ್ಷಿಪ್ತವಾಗಿ ವಿವರಿಸಿದ್ದ: ಪ್ರತಿ ಸಂಚಿಕೆಯಲ್ಲಿ ೩೧ ಲೇಖನಗಳು, ಪ್ರತಿಯೊಂದೂ ಉಪಯುಕ್ತ ಮತ್ತು ವಾಚನೀಯ ಲೇಖ. ಚುಟುಕಾದ ಚುರುಕಾದ ಲೇಖ.

ಅಂದಿನ ಪ್ರಮುಖ ಪತ್ರಿಕೆಗಳಿಂದ ಆರಿಸಿದ ಈ ೩೧ ಲೇಖಗಳಲ್ಲಿ ಜೀವನಕಲೆ, ಕೌಟುಂಬಿಕ ಜೀವನ, ವ್ಯವಹಾರೋಪಯೋಗಿ ಜ್ಞಾನ, ವಿಜ್ಞಾನ, ವಿನೋದ, ಚುಟುಕ, ವ್ಯಕ್ತಿ ಪರಿಚಯ ಎಲ್ಲ ಬಗೆಯ ವೈಶಿಷ್ಟ್ಯಗಳೂ ತುಂಬಿದ್ದವು.

ಡಿ ವಿಟ್ ವಾಲೇಸ್ ಪ್ರಚಾರ ತಂತ್ರದಲ್ಲಿ ಪ್ರವೀಣನಾಗಿದ್ದ. ಸಾಮಾನ್ಯ ಜನರಿಗೆ ಸಂದೇಶಗಳನ್ನು ಹೃದಯಸ್ಪರ್ಶಿಯಾಗುವಂತೆ ಹೇಗೆ ಮುಟ್ಟಿಸಬೇಕೆಂದು ಅವನಿಗೆ ಗೊತ್ತಿತ್ತು. "ಜ್ಞಾನ ಸಂಪಾದನೆ ಸುಲಭವಲ್ಲ. ನಿಮ್ಮಲ್ಲನೇಕರಿಗೆ ಅದಕ್ಕೆ ಬೇಕಾದ ವೇಳೆ ಇಲ್ಲ. ಆಡಾಡುತ್ತ ಜ್ಞಾನ

ಸಂಪಾದನೆ ಮಾಡಬೇಕಾದರೆ ರೀಡರ್ಸ್ ಡೈಜೆಸ್ಟ್ ಓದಿರಿ." ಇದು ಆತ ಪ್ರಥಮ ಸಂಚಿಕೆಯಲ್ಲಿ ಮುದ್ರಿಸಿದ ಜಾಹಿರಾತು. "ನಿಮಗೆ ಕಾಲೇಜಿಗೆ ಹೋಗಲು ಸಾಧ್ಯವಿಲ್ಲವೆ ? ಹಾಗಾದರೆ ಕಾಲೇಜೇ ನಿಮ್ಮ ಬಾಗಿಲಿಗೆ ಬರುವಂತೆ ಮಾಡುವಾ."

ತನ್ನ ಡೈಜೆಸ್ಟಿನ ಯೋಗ್ಯತೆಯು ಬಗ್ಗೆ ವಾಲೇಸನಿಗೆ ಸಂಶಯವೇ ಇರಲಿಲ್ಲ. ಆದರೆ ಈ ಕಲ್ಪನೆಯನ್ನನುಸರಿಸಿದ ಹೊಸ ತರಹದ ಪತ್ರಿಕೆ ಹೊರಡಿಸಲು ಸಿದ್ಧರಾದ ಪ್ರಕಾಶಕರು ಮಾತ್ರ ಅವನಿಗೆ ಸಿಗಲಿಲ್ಲ. ಯಾರೂ ಅವನ ಯೋಜನೆಯನ್ನು ಮೂಸಿ ನೋಡಲೂ ಸಿದ್ಧರಿರಲಿಲ್ಲ. ಬೇರೆ ಪತ್ರಿಕೆಗಳಲ್ಲಿ ಬಂದ ಹಳಸಿದ ಲೇಖನಗಳನ್ನು ಓದಲು ಯಾರು ಪತ್ರಿಕೆ ಕೊಂಡಾರು ? ಮೇಲಾಗಿ ಜನರಿಗೆ ಬೇಕಾದದ್ದು ಕಥೆ ಕಾದಂಬರಿ. ಇಡೀ ಸಂಚಿಕೆ ಲೇಖನಗಳಿಂದ ತುಂಬಿದ್ದರೆ ಯಾರೂ ಓದರು. ತುಂಬ ಕಲ್ಪಕ ಪ್ರಕಾಶಕನೆನಿಸಿದ ಅನೇಕ ಜನಪ್ರಿಯ ಪತ್ರಿಕೆಗಳ ಮಾಲಕ ರುಡಾಲ್ಫ್ ಹರ್ಸ್ಟ್ ಕೂಡ ಈ ಪತ್ರಿಕೆಗೆ ಬಹಳವಾದರೆ ಮೂರು ಲಕ್ಷ ಚಂದಾದಾ-ರರು ಸಿಕ್ಕಬಹುದೆಂದು ತೀರ್ಪಿತ್ತು, ಬದಿಗೆ ಸರಿಸಿಬಿಟ್ಟನು. ವಾಲೇಸ್ ಯೋಜನೆಯಿಂದ ಮನದಟ್ಟಾದ ಒಬ್ಬಳೇ ಒಬ್ಬಳೆಂದರೆ ಲೀಲಾ ಬೆಲ್ ಆಚೆಸನ್ ಎಂಬ ತರುಣ ಸಾಮಾಜಿಕ ಕಾರ್ಯಕರ್ತೆ ಮಾತ್ರ.

ಈ ನಿರಾಶೆ ಸಾಲದ್ದಕ್ಕೆ ೧೯೨೧ರಲ್ಲಿ ಉಂಟಾದ ಯುದ್ಧೋತ್ತರ ಮಂದಿಯ ಗಡಿಬಿಡಿಯಲ್ಲಿ ವೆಸ್ಟಿಂ-ಗ್‌ಹೌಸ ಇಲೆಕ್ಟ್ರಿಕ್ ಕಂಪನಿಯ ಪ್ರಚಾರ ಶಾಖೆಯಲ್ಲಿ ವಾಲೇಸನಿಗಿದ್ದ ನೌಕರಿ ಹೋಗಿಬಿಟ್ಟಿತು. ಈ ದುರ್ದೈವವು ಅವನನ್ನು ನಿರ್ಧಾರಕ್ಕೆ ಬರುವಂತೆ ಮಾಡಿತು: ಸ್ವಂತವಾಗಿಯೆ ತಾನು ತನ್ನ ರೀಡರ್ಸ್ ಡೈಜೆಸ್ಟನ್ನು ಪ್ರಕಾಶಿಸುತ್ತೇನೆ ಎಂದು. ಇದಕ್ಕೆ ಬೇಕಾದ ಪರಿಪತ್ರವೊಂದನ್ನು ಸಿದ್ಧಪಡಿಸಿ ಪ್ರೊಫೆಸರ್, ಶಿಕ್ಷಕರು, ದಾಯಿಯರು ಮೊದಲಾದ ಸುಶಿಕ್ಷಿತ ಜನರ ವಿಳಾಸ ಪಡೆದು, ಸಾವಿರಗಟ್ಟಳೆಯಲ್ಲಿ ಟಪಾಲಿನಲ್ಲಿ ಕಳಿಸಿದ. ಆಗಲೇ ಲೀಲಾ ಆಚೆಸನ್ನಳೊಡನೆ ಅವನ ಮೈತ್ರಿ ದೃಢವಾಗಿತ್ತು. ಅವಳನ್ನಾತ ಮದುವೆಯಾದ. ಪ್ರಣಯವಿಹಾರದಿಂದ ಮರಳಿದೊಡನೆ ತನ್ನಲ್ಲಿದ್ದ ಕೆಲ ಸಾವಿರ ಡಾಲರುಗಳ ಸಂಗಡ ಸಾಲ ಮಾಡಿದ ೧,೩೦೦ ಡಾಲರಗಳನ್ನು ಸೇರಿಸಿ ಆತ ತನ್ನ ಪತ್ರಿಕೆಯನ್ನು ಮುದ್ರಣಕ್ಕೆ ಕೊಟ್ಟ.

ನ್ಯೂಯಾರ್ಕಿನ ಗ್ರೀನ್‌ವಿಚ್ ಗ್ರಾಮದ ಒಂದು ಚಾಳಿನಿಂದ ೧೯೨೨ರ ಫೆಬ್ರುವರಿಯಲ್ಲಿ ಪಳಗಿದ ಪ್ರಕಾಶಕರೆಲ್ಲರೂ ಏಕಕಂಠದಿಂದ ಇದು ಖಂಡಿತ ದಿವಾಳಿ ಏಳುತ್ತದೆಂದು ಭವಿಷ್ಯ ನುಡಿಯುತ್ತಿದ್ದಂತೆ "ರೀಡಸ್ ಡೈಜೆಸ್ಟ"ನ ಪ್ರಥಮ ಸಂಚಿಕೆ ಪ್ರಕಟವಾಯಿತು. ಸಂಪಾದಕ ಪ್ರಕಾಶಕರೆಂದು ಡಿ ವಿಟ್ ವಾಲೇಸ್ ಮತ್ತು ಅವನ ನವೋಢಾ ಪತ್ನಿ ಲೀಲಾ ಆಚೆಸನ್ ವಾಲೇಸರ ಹೆಸರುಗಳು ಮುದ್ರಿತವಾಗಿದ್ದವು (ಇಂದಿಗೂ ಅವು ಹಾಗೆಯೆ ಇವೆ). ೫,೦೦೦ ಪ್ರತಿಗಳನ್ನು ಮಾತ್ರ ಮುದ್ರಿಸಲಾಗಿತ್ತು. ೫,೦೦೦ ಡಾಲರ್ ಬೆಲೆಯ ವರ್ಗಣಿಗಳು ದೊರೆತವು.

"ರೀಡರ್ಸ್ ಡೈಜೆಸ್ಟ್" ಮೊದಲು ಸಾವಕಾಶವಾಗಿ, ಆಮೇಲೆ ಯಾರೂ ಕಂಡು ಕೇಳರದ ವೇಗದಿಂದ ಪ್ರಗತಿ ಹೊಂದಿತು. ೧೯೨೩ರಷ್ಟುಹೊತ್ತಿಗೆ ೭,೦೦೦ ಪ್ರತಿಗಳು ಖರ್ಚಾಗುತ್ತಿದ್ದವು. ೧೯೨೯ರಲ್ಲಿ ಅದರ ೪೦ ಪಟ್ಟಿಗಿಂತಲೂ ಹೆಚ್ಚು ೨,೯೦,೦೦೦ ಪ್ರತಿಗಳು ಪ್ರತಿ ತಿಂಗಳೂ ಮುದ್ರಿಸಲ್ಪಡುತ್ತಿದ್ದವು. ೧೯೪೦ರಲ್ಲಿ ಪ್ರಸಾರ ೨೪,೬೯,೦೦೦ಕ್ಕೆ ಏರಿತು. ೧೯೩೮ರಲ್ಲಿ ಬ್ರಿಟಿಶ್ ಆವೃತ್ತಿಯೊಂದನ್ನು ತೆಗೆದು "ರೀಡರ್ಸ್ ಡೈಜೆಸ್ಟ್" ವಿದೇಶಿ ಪತ್ರಿಕಾ ರಂಗದಲ್ಲಿ ಕಾಲಿಟ್ಟಿತು. ಒಡನೆ

ಮತ್ತಾವ ಬ್ರಿಟಿಶ್ ಮಾಸಿಕಕ್ಕೆ ಮೀರಿದ ಪ್ರಸಾರ ಅದಕ್ಕೆ ಲಭ್ಯವಾಯಿತು. ಅನಂತರ ದಕ್ಷಿಣ ಅಮೇರಿಕದ ರಾಜ್ಯಗಳಿಗಾಗಿ ಸ್ಪಾನಿಶ್ ಮತ್ತು ಅದರ ಬೆನ್ನಿಗೆ ಪೊರ್ತುಗೀಜ್ ಆವೃತ್ತಿಗಳು ಹೊರಟವು. ಇಂದು ಡಚ್, ಅರಬ್ಬಿ, ಡೇನಿಶ್, ಫಿನ್ನಿಶ್, ಇಟಾಲಿಯನ್, ನಾರ್ವೇಜಿಯನ್, ಫ್ರೆಂಚ್, ಬ್ರೇಜಿಲಿಯನ್, ಸ್ವೀಡಿಶ್, ಜರ್ಮನ್, ಜಪಾನಿ ಭಾಷೆಗಳಲ್ಲಿಯೂ ಅದರ ಆವೃತ್ತಿಗಳು ಹೊರಡುತ್ತಿವೆ. ಕುರುಡರಿಗಾಗಿ ಬ್ರೇಲ್ ಲಿಪಿಯಲ್ಲಿ ಬೇರೆ ಮೂರು ಆವೃತ್ತಿಗಳು ಪ್ರಕಟವಾಗುತ್ತಿವೆ.

"ರೀಡರ್ಸ್ ಡೈಜೆಸ್ಟ್"ನ ಪ್ರಭಾವ ಪ್ರತಿ ತಿಂಗಳು ಮಾರುವ ಅದರ ೨ ಕೋಟಿ ೧೦ ಲಕ್ಷ ಪ್ರತಿಗಳಿಗಷ್ಟೇ ಮಿತವಾಗಿಲ್ಲ, ಅದು ಅಮೇರಿಕದ ಮತ್ತು ಕೆಲ ಮಟ್ಟಿಗೆ ವಿದೇಶಗಳ- ಪತ್ರಿಕೋದ್ಯಮದ ರೂಪವನ್ನೇ ಬದಲಿಸಿದೆ. ಕಥೆಗಳನ್ನಷ್ಟೇ ಓದುಗರು ಮೆಚ್ಚುತ್ತಾರೆಂದು ನಂಬಿದ್ದ ಅಮೇರಿಕನ್ ಪತ್ರಿಕೆಗಳು "ರೀಡರ್ಸ್ ಡೈಜೆಸ್ಟ್"ನ ಯಶಸ್ಸನ್ನು ನೋಡಿ ಕಥೇತರ ಲೇಖನಗಳನ್ನು ಹೆಚ್ಚಾಗಿ ಪ್ರಕಟಿಸಲು ಈಗ ಧೈರ್ಯ ಮಾಡಿವೆ. ಗಂಭೀರ ಲೇಖನಗಳಿಗೆ ಪತ್ರಿಕೆಗಳಲ್ಲಿ ಹೆಚ್ಚು ಸ್ಥಳ ದೊರೆಯುತ್ತಿದೆ.

ಯಶಸ್ಸಿನೊಡನೆ "ರೀಡರ್ಸ್ ಡೈಜೆಸ್ಟ್" ಕೊಡುಗೈಯಿಂದಲೇ ಲೇಖಕರಿಗೆ ಹಣ ಕೊಡಲಾರಂಭಿಸಿತು. ಮೂಲ ಪತ್ರಿಕೆಯವರು ಕೊಡುವುದಕ್ಕಿಂತ ಹೆಚ್ಚು ಗೌರವ ಧನವನ್ನು ಅದು ಪುನರ್ಮುದ್ರಣಕ್ಕಾಗಿ ಲೇಖಕರಿಗೆ ಕೊಡುತ್ತಿದೆಯೆಂದು ಹೇಳಲಾಗಿದೆ. ಹೀಗಾಗಿ ಅಮೇರಿಕದ ಲೇಖಕರು "ರೀಡರ್ಸ್ ಡೈಜೆಸ್ಟ್"ಗೆ ಸ್ವೀಕಾರಾರ್ಹವಾಗಬಹುದಾದಂತೆ ಲೇಖನಗಳನ್ನು ಬರೆಯಲು ಯತ್ನಿಸುತ್ತಾರೆ. ಮೊದಲು ಕೇವಲ ಇತರ ಪತ್ರಿಕೆಗಳಿಂದ ಲೇಖನಗಳನ್ನೆತ್ತುತ್ತಿದ್ದ ಅದು ಅನಂತರ ಸ್ವತಂತ್ರ ಲೇಖನಗಳನ್ನೂ ಪ್ರಕಟಿಸಲಾರ[illegible]ಸಿತು. ಕೆಲ ವೇಳೆ ತಾನೇ ಹೇಳಿ ಹಣ ಕೊಟ್[illegible] ಯಾವುದಾದರೂ ಲೇಖ ಬರೆಸಿ ಮೊದಲು ಅದ[illegible] ದೀರ್ಘ ರೂಪವನ್ನು ಬೇರಾವುದಾದರೂ ಪತ್ರಿ[illegible]ಯಲ್ಲಿ ಪ್ರಕಟಿಸಿ, ಬಳಿಕ ಅದರ ಸಂಕ್ಷಿಪ್ತ ರೂಪವನ[illegible] ತನ್ನಲ್ಲಿ ಅದು ಪ್ರಕಟಿಸುವುದೂ ಉಂಟು.

ಇಂದು "ರೀಡರ್ಸ್ ಡೈಜೆಸ್ಟ್"ನವರು ಕೇವ[illegible] ಮಾಸಪತ್ರಿಕೆಯನ್ನು ಪ್ರಕಟಿಸುತ್ತಿಲ್ಲ. ಪ್ರತಿಸಂಬ[illegible]ಯಲ್ಲಿ ಪ್ರಕಟವಾಗುವ ಪುಸ್ತಕ ಸಂಗ್ರಹವಲ್ಲ[illegible] ವರ್ಷಕ್ಕೆ ನಾಲ್ಕು ಮಹತ್ವದ ಇತರ ಗ್ರಂಥಗಳನ[illegible] ಸಂಗ್ರಹರೂಪದಲ್ಲಿ ಅವರು ಪ್ರಕಟಿಸುತ್ತಾ[illegible] ಅವುಗಳ ಒಂದು ಕೋಟಿ ಪ್ರತಿಗಳು ಮಾರುತ್ತವೆ[illegible]

೧೯೫೦ರಲ್ಲಾಗಲೇ "ರೀಡರ್ಸ್ ಡೈಜೆಸ್ಟ್"[illegible] ಒಂದು ಕೋಟಿ ಪ್ರತಿಗಳು ಹೊರಡುತ್ತಿದ್ದ[illegible] ಆದರೂ ಅಗಾಧ ವೆಚ್ಚವನ್ನು ತೂಗಿಸುವುದ[illegible] ಕಷ್ಟವಾದುದರಿಂದ ಆ ವರ್ಷ ಜಾಹಿರಾತ[illegible]ಗಳನ್ನು ಸ್ವೀಕರಿಸಲು ಆರಂಭವಾಯಿತು. ಜಾಹಿ[illegible]ರಾತಿನ ದರ, ಆಗಿನ ಅಮೇರಿಕನ್ ಆವೃತ್ತಿ[illegible] ಮಾತ್ರ ಪ್ರತಿ ಪುಟಕ್ಕೆ ಒಂದು ಸಲಕ್ಕೆ ೨೬,೦೦[illegible] ಡಾಲರ್ (ಸುಮಾರು ರೂ. ೧,೨೫೦೦೦). ಈ ದ[illegible]ದಲ್ಲಿಯೂ ಅದು ಔಷಧ, ಸಿಗರೇಟು ಮದ್ಯ ಮೊ[illegible]ಲಾದವುಗಳ ಜಾಹಿರಾತನ್ನು ಸ್ವೀಕರಿಸಲಿಲ್[illegible]

"ರೀಡರ್ಸ್ ಡೈಜೆಸ್ಟ್"ನ ಯಶಸ್ಸಿ[illegible] ಗುಟ್ಟೇನು? ವಾಲೇಸನಿಂದ ತರಬೇತು ಹೊಂದಿ[illegible] ಅದರ ಸಂಪಾದಕ ಮಂಡಲಿಯವರು ಜನರ[illegible] ಏನನ್ನು ಓದಬಯಸುತ್ತಾರೆ ಎಂಬುದನ್ನು ತಪ್ಪ[illegible] ಗುರುತಿಸಲು ಸಮರ್ಥರಾಗಿದ್ದಾರೆ. ಆದರೆ ಜನರಿ[illegible] ಬೇಕಾಗಿದೆಯೆಂದು ಅದೆಂದೂ ಅಶ್ಲೀಲ ಅಥವ[illegible] ಉದ್ವೇಗಪೂರ್ಣ ವಿಷಯಗಳನ್ನು ಕೊಡುವುದಿಲ್[illegible] ಶಾಶ್ವತ ಮಹತ್ವದ ಉಪಯುಕ್ತ ವಿಷಯಗ[illegible]

ನ್ನಷ್ಟೇ ಆರಿಸಲಾಗುತ್ತದೆ. ಅದರ ಸಂಕ್ಷೇಪ ಕಾರ್ಯ ಅತ್ಯಂತ ಕೌಶಲದಿಂದ ಪೂರೈಸಲ್ಪಡುತ್ತದೆ. ಒಬ್ಬಾನೊಬ್ಬ ಪ್ರಸಿದ್ಧ ಲೇಖಕ ತನ್ನ ಪುಸ್ತಕವನ್ನು ಇಷ್ಟು ಚೆನ್ನಾಗಿ ಸಂಕ್ಷೇಪಿಸಲು ಸಾಧ್ಯವಿದೆಯೆಂದು ತಾನು ಕಲ್ಪಿಸಿರಲೇ ಇಲ್ಲವೆಂದು ಹೇಳಿದ್ದಾನೆ.

ಡಿ ವಿಟ್ ವಾಲೇಸನಿಗೆ ಧರ್ಮಗುರುಗಳ ಸಂಗಡ ಘನಿಷ್ಠ ಸಂಬಂಧವಿರುವುದು ಅವನ ಯಶಸ್ಸಿಗೆ ಒಂದು ಕಾರಣವೆಂದು ಭಾವಿಸಲಾಗಿದೆ. ಅವನು ಪ್ರಬಲ ಧರ್ಮಗುರುಗಳ ಕುಟುಂಬದವನು ಮತ್ತು ಅವನ ಪತ್ನಿ ಒಬ್ಬ ಧರ್ಮಗುರುವಿನ ಮಗಳು. ಧಾರ್ಮಿಕ ಭಾವನೆಗಳಿಗೆ ವಿರುದ್ಧವಾದ ವಿಚಾರಗಳನ್ನು ಅವರು ಪ್ರಕಟಿಸುವುದಿಲ್ಲ; ದೇವರಲ್ಲಿ ಶ್ರದ್ಧಾಭಕ್ತಿಗಳನ್ನು ಪ್ರೋತ್ಸಾಹಿಸುವ ಲೇಖನಗಳು ಅದರಲ್ಲಿ ತಪ್ಪದೆ ಬರುತ್ತವೆ. ಪ್ರತಿಯಾಗಿ ಧರ್ಮಗುರುಗಳು ತಮ್ಮ ಉಪದೇಶಗಳಲ್ಲಿ ಈ ಪತ್ರಿಕೆಯನ್ನುಲ್ಲೇಖಿಸುವುದರಿಂದ ಅದರ ಪ್ರಚಾರ ಹೆಚ್ಚಾಗುತ್ತಿದೆಯೆಂದು ಆರೋಪಿಸುವವರುಂಟು.

"ರೀಡರ್ಸ್ ಡೈಜೆಸ್ಟ್"ನ ವಿರೋಧಿಗಳ ಮುಖ್ಯ ಆಕ್ಷೇಪವೆಂದರೆ ಅದು ಜಟಿಲವಾದ ಸಮಸ್ಯೆಗಳನ್ನು ಓದುಗರ ಮುಂದಿಡುವುದಿಲ್ಲ. ಜೀವನ ಬಲು ಸರಳ. ಕೀಲಿಕೈ ಇದ್ದರೆ ಬೀಗ ತೆರೆಯಬಹುದಾದಂತೆ ಯಶಸ್ಸಿನ ಉಪಾಯವೊಂದು ಗೊತ್ತಿದ್ದರೆ ಬೇಕಾದ ಸಮಸ್ಯೆಯನ್ನೂ ಬಿಡಿಸಬಹುದೆಂಬ ಭ್ರಾಮಕ ಕಲ್ಪನೆಯನ್ನದು ಹುಟ್ಟಿಸುತ್ತದೆ.

ಈ ಆರೋಪದಲ್ಲಿ ನಿಜಾಂಶವಿರಬಹುದಾದರೂ "ರೀಡರ್ಸ್ ಡೈಜೆಸ್ಟ್"ನ ಪ್ರಚಂಡ ಪ್ರಭಾವವನ್ನು ಯಾರೂ ಅಲ್ಲಗಳೆಯಲಾರರು. ಓದುಗರ ಮನಸ್ಸಿನ ಮೇಲೆ ಅದರ ಹಿಡಿತ ಅಂಥದು. ಇದಕ್ಕೆ ಕೆಲವೇ ಉದಾಹರಣೆಗಳು ಸಾಕು. ೧೯೪೮ರಲ್ಲಿ ಇಟಲಿಯ ಚುನಾವಣೆಗಳಲ್ಲಿ ಕಮ್ಯುನಿಸ್ಟರು ಸೋತು "ರೀಡರ್ಸ್ ಡೈಜೆಸ್ಟ್"ನ ಇಟಾಲಿಯನ್ ಆವೃತ್ತಿಯಲ್ಲಿ ಪ್ರಕಟವಾದ ಲೇಖನಗಳೇ ಕಾರಣವೆಂದು ಅಮೇರಿಕದ ವಿದೇಶ ಖಾತೆ ಒಪ್ಪಿದೆ. ಸೋಯಾ ಬೀಜ ಕೃಷಿಯ ಬಗ್ಗೆ ಅದರ ಸ್ಪ್ಯಾನಿಶ್ ಆವೃತ್ತಿಯಲ್ಲಿ ಬಂದ ಒಂದು ಲೇಖನ ದಕ್ಷಿಣ ಅಮೇರಿಕದಲ್ಲಿ ಆ ಬೀಜದ ವಿಸ್ತಾರ ಕೃಷಿಗೆ ಪ್ರಚೋದನೆಯಿತ್ತಿತು. ರಸ್ತೆ ಅಪಘಾತಗಳನ್ನು ಕುರಿತು ಅದು ಪ್ರಕಟಿಸಿದ ಚಿತ್ರಪತ್ರದ ಒಂದು ಲೇಖನ ವಾಹನ ನಿಯಂತ್ರಣದ ಕ್ರಮಗಳ ಮೇಲೆ ಬಲವಾದ ಪರಿಣಾಮ ಮಾಡಿತು. ಜೀವನದಲ್ಲಿ ಹೀನವಾದುದಕ್ಕಿಂತ ಉದಾತ್ತವಾದುದನ್ನೇ ಒತ್ತಿ ಹೇಳುವ ಅದರ ನೀತಿ ಜನೋಪಕಾರಿಯಾಗಿಲ್ಲವೆಂದು ಯಾರು ಹೇಳುತ್ತಾರೆ? ✿



"ರೀಡರ್ಸ್ ಡೈಜೆಸ್ಟ್" ಇಂಗ್ಲೀಷಿನಲ್ಲಿ ಇದುವರೆಗೆ ಭಾರತೀಯ ಆವೃತ್ತಿಯನ್ನು ಪ್ರಕಟಿಸುತ್ತಿದ್ದು ಇತ್ತೀಚೆ "ಸರ್ವೋತ್ತಮ" ಎಂಬ ಹಿಂದಿ ಆವೃತ್ತಿಯನ್ನೂ ಆರಂಭಿಸಿದೆ. ಈ ಡೈಜೆಸ್ಟಿನ ಸದ್ಯದ ಒಟ್ಟು ಪ್ರಸಾರ ಮೂರು ಕೋಟಿ ಪ್ರತಿಗಳನ್ನೂ ಮೀರಿದೆ.

ದಾಖಲೆಗಳು

● ಜಗತ್ತಿನ ಅತಿ ದೊಡ್ಡ ಕಾಗದ ಕಾರಖಾನೆ ಅಮೇರಿಕದ ಜಾರ್ಜಿಯಾ ಪ್ರಾಂತ್ಯದ ಸವಾನಾದಲ್ಲಿದೆ. ಯೂನಿಯನ್ ಕ್ಯಾಂಪ್ ಕಾರ್ಪೊರೇಶನ್ನಿನವರು ೧೯೩೬ರಲ್ಲಿ ಸ್ಥಾಪಿಸಿದ ಈ ಕಾರಖಾನೆಯ ಉತ್ಪಾದನೆ ೧೯೭೪ರಲ್ಲಿ ೧,೦೦೨,೯೬೭ ಟನ್ನುಗಳಷ್ಟು.

● ಲಂಡನ್ನಿನ ಆಕ್ಸ್‌ಫರ್ಡ್ ಸ್ಟ್ರೀಟಿನ ಲಿಲಿ ಆ್ಯಂಡ್ ಸ್ಕಿನರ್ ಲಿ. ಜಗತ್ತಿನ ಅತಿ ದೊಡ್ಡ ಶೂ ಮಾರಾಟ ಮಳಿಗೆ. ನಾಲ್ಕು ಅಂತಸ್ತುಗಳ ಕಟ್ಟಡ ಇರುವ ಇದರ ಒಟ್ಟು ಕ್ಷೇತ್ರಫಲ ೭೬ ಸಾವಿರ ಚದರ ಅಡಿಗಳು.

● ೧೯೭೫ರಲ್ಲಿ ೮೩,೯೦೦,೦೦೦ ಮೆಟ್ರಿಕ್‌ಟನ್ ಉಕ್ಕನ್ನು ಉತ್ಪಾದಿಸಿದ ಟೋಕಿಯೋದ ನಿಪ್ಪೊನ್ ಸ್ಟೀಲ್ ಜಗತ್ತಿನ ಅತಿ ದೊಡ್ಡ ಉಕ್ಕಿನ ಕಾರಖಾನೆ.

● ಬ್ರಿಟಿಶ್-ಅಮೇರಿಕನ್ ಟೊಬೆಕೊ ಕಂಪನಿ ಲಿ. (೧೯೦೨) ಲಂಡನ್ ಎಂಬುದು ಜಗತ್ತಿನ ಅತಿ ದೊಡ್ಡ ತಂಬಾಕು ಸಂಸ್ಥೆ. ೫೧ ದೇಶಗಳಲ್ಲಿ ಒಟ್ಟು ೧೨೮ ತಂಬಾಕು ಕಾರಖಾನೆಗಳು ಇದಕ್ಕೆ ಹೊಂದಿಕೊಂಡಿವೆ. ೧೯೭೬ರಲ್ಲಿ ಈ ಕಂಪನಿಯಿಂದ ಮಾರಾಟವಾದ ಸಿಗರೇಟುಗಳು ೫೦೦,೦೦೦,೦೦೦,೦೦೦.

● ಆಟಿಗೆ ಸಾಮಾನುಗಳ ತಯಾರಿಕೆಯಲ್ಲಿ ಜಾಗತಿಕ ದಾಖಲೆ ಸ್ಥಾಪಿಸಿದ್ದು ೧೯೪೫ರಲ್ಲಿ ಸ್ಥಾಪನೆಗೊಂಡ ಕ್ಯಾಲಿಫೋರ್ನಿಯಾದ ಮ್ಯಾಟೆಲ್ ಇನ್-ಕಾರ್ಪೊರೇಟೆಡ್ ಆಫ್ ಹಾಥೋರ್ನ್.

● ಜಗತ್ತಿನಲ್ಲೇ ಅತಿ ಹೆಚ್ಚು ಗಳಿಸುವ ಪ್ರಕಾಶನ ಸಂಸ್ಥೆಯೆಂದರೆ ನ್ಯೂಯಾರ್ಕಿನ ಟೈಮ್-ಲೈಫ್ ಸಂಸ್ಥೆ. ಅದರ ವಾರ್ಷಿಕ ಸರಾಸರಿ ಉತ್ಪನ್ನ ೧೦೩ ಕೋಟಿ ಡಾಲರುಗಳಷ್ಟು.

ಇಟಲಿಯು ಈ ಧೀರೋದಾತ್ತನನ್ನು ಮೀರಿಸುವವರು ಈ ಪ್ರಪಂಚದಲ್ಲಿ ಕಡಿಮೆ


ೞ—೧

ಮಹಾ ದೇಶಭಕ್ತ ಗಾರಿಬಾಲ್ಡಿ

ಪಾವೆಂ.

ಯಾವನೇ ಇಟಾಲಿಯನ್ನನ ಮುಂದೆ ಗಾರಿಬಾಲ್ಡಿಯ ಹೆಸರು ಹೇಳಿರಿ, ಆತನ ದೇಶಾಭಿಮಾನ ಉಕ್ಕೇರಿ ಹರಿಯುತ್ತದೆ. ಸಾಮಾನ್ಯ ಕುಲದಲ್ಲಿ ಹುಟ್ಟಿ, ನಾವಿಕನಾಗಿ ಕೆಲಸಮಾಡಿ, ಸ್ವಾತಂತ್ರ್ಯಯೋಧರ ಸೇನಾನಿಯಾಗಿ ಪರಿವರ್ತನೆ ಹೊಂದಿ, ಹರಿಹಂಚಾಗಿ ಪರಾಧೀನವಾಗಿದ್ದ ತನ್ನ ನಾಡನ್ನು ಏಕೀಕೃತ ಮತ್ತು ಸ್ವತಂತ್ರಗೊಳಿಸಿದ ಈ ಇಟಾಲಿಯನ್ ದೇಶಭಕ್ತನಷ್ಟು ನಿಃಸ್ವಾರ್ಥ ನಾಯಕರು ಯಾವ ದೇಶದಲ್ಲಾದರೂ ಅಪರೂಪವಾಗಿಯೇ ಸಿಗಬಹುದು.

ಜೂಲಿಯಸ್ ಸೀಜರ್‌ನಂಥ ಜಗದೇಕವೀರನನ್ನು ಪಡೆದ ಇಟಲಿ ೧೯ನೇ ಶತಮಾನದ ಆರಂಭದಷ್ಟು ಹೊತ್ತಿಗೆ, ಒಂದು "ಭೌಗೋಲಿಕ ಶಬ್ದ"ವಾಗಿ ಮಾತ್ರ ಉಳಿದಿತ್ತು. ನೆಪೋಲಿಯನ್ನನ ವಿಜಯಯಾತ್ರೆಯ ನಂತರ ಇಟಲಿಗೆ ಒಂದು ಸರಕಾರವಿರಲಿಲ್ಲ. ಆಸ್ಟ್ರಿಯನ್ ಸಾಮ್ರಾಜ್ಯ ಇಟಲಿಯ ಅರ್ಧ ಭಾಗವನ್ನು ಕಬಳಿಸಿತು. ಫ್ರೆಂಚರು ಒಂದು ಭಾಗವನ್ನು ತೆಗೆದುಕೊಂಡಿದ್ದರು. ಉಳಿದ ಭಾಗಗಳು ಅವರಿಬ್ಬರ ಕೈಗೊಂಬೆಗಳಲ್ಲಿ ಹಂಚಿಹೋಗಿದ್ದವು. ಸಂವಿಧಾನಾತ್ಮಕ ಆಳಿಕೆಗಳಾವವೂ ಉಳಿದಿರಲಿಲ್ಲ. ಎಲ್ಲೆಲ್ಲಿಯೂ ದಬ್ಬಾಳಿಕೆ ನಡೆದಿತ್ತು. ಸ್ವಾತಂತ್ರ್ಯ ಮತ್ತು ಐಕ್ಯಪ್ರೇಮಿಗಳು ಅಲ್ಲೊಂದು ಇಲ್ಲೊಂದು ಬಂಡಾಯವೆಬ್ಬಿಸುತ್ತಿದ್ದುದು ದಬ್ಬಾಳಿಕೆಗಾರರಿಗೆ ರಾಷ್ಟ್ರೀಯ ಭಾವನೆಯನ್ನು ಮಗ್ಗಲು ಮುರಿಯುವಂತೆ ಹತ್ತಿಕ್ಕಲು ಒಳ್ಳೇ ನೆವವಾಗುವುದಕ್ಕಿಂತ ಹೆಚ್ಚೇನೂ ಸಾಧಿಸುತ್ತಿರಲಿಲ್ಲ. ಕೆಲಕಾಲ ಫ್ರೆಂಚರ ಸೆರೆಯಾಳಾಗಿದ್ದ ಪೋಪನು ಈಗ ಇಟಲಿಯ ಮಧ್ಯಭಾಗದಲ್ಲಿ ಕ್ರಾಂತಿಕಾರರ ಭಯದಿಂದ ಗುಪ್ತ ಪೋಲೀಸರ ರಾಜ್ಯಭಾರವನ್ನು ನಡೆಸಿದ್ದನು. ದಕ್ಷಿಣ ಇಟಲಿ ಮತ್ತು ಸಿಸಲಿ ದ್ವೀಪಗಳನ್ನಾಳುತ್ತಿದ್ದ ಬೋರ್ಬನ್ ರಾಜ ಎರಡನೇ ಫ್ರಾನ್ಸಿಸ್ ಪ್ರಜೆಗಳ ಚಳವಳಿಯನ್ನು ಹತ್ತಿಕ್ಕಲು ಒಂದೇ ದಿನ ಮೆಸೀನಾ ನಗರದಲ್ಲಿ ಬಾಂಬುಗಳನ್ನೆಸೆದು ಸಾವಿರಾರು ಹೆಣಗಳು ಬೀದಿಯಲ್ಲಿ ಬೀಳುವಂತೆ ಮಾಡಿ



"ರಾಜಾಬೊಂಬ" ಎಂದು ಹೆಸರು ಗಳಿಸಿದ್ದ. ಇಟಾಲಿಯನ್ ಎಂದು ಹೇಳಬಹುದಾದ ಒಂದೇ ಆಳಿಕೆಯು ಪೀಡ್‌ಮಾಂಟ್ ಮತ್ತು ಸಾರ್ಡಿನಿಯಾದಲ್ಲಿತ್ತು. ಅದು ದುರ್ಬಲವಾಗಿತ್ತು. ಅದರ ವಿಸ್ತಾರವೂ ಕಡಿಮೆಯಿತ್ತು.

ಈ ಪಾಡಿನಲ್ಲಿದ್ದ ಇಟಲಿಯಲ್ಲಿ ಜೋಸೆಫ್ ಗಾರಿಬಾಲ್ಡಿ ಬಾಲ್ಯವನ್ನು ಕಳೆದಿದ್ದ. ೧೮೦೭ ಜುಲೈ ೪ ರಂದು ನೈಸ್ ಪಟ್ಟಣದಲ್ಲಿ ಜನ್ಮ ತಾಳಿದ ಆತನ ಮೇಲೆ ಇಟಲಿಯ ಏಕೀಕರಣ ಮತ್ತು ಯುರೋಪಿನ ಪುನರುಜ್ಜೀವನವನ್ನು ಕ್ರಾಂತಿ ಮತ್ತು ಗಣರಾಜ್ಯ ಸ್ಥಾಪನೆಯಿಂದ ಮಾಡಬೇಕೆಂದು ಸಾರುತ್ತ ಸೆರೆಮನೆಯನ್ನೂ ದೇಶಾಂತರವಾಸವನ್ನೂ ಅನುಭವಿಸುತ್ತಿದ್ದ ತರುಣ ದೇಶಭಕ್ತ ಜೋಸೆಫ್ ಮ್ಯಾಜಿನಿಯ ಪ್ರಭಾವ ಬಿತ್ತು. ಗಾರಿಬಾಲ್ಡಿಯಂತೆ ಸಾರ್ಡಿನಿಯದವನೇ ಆಗಿದ್ದ ಮ್ಯಾಜಿನಿ ತನ್ನ ಅರಸನಿಗೆ ಇಟಲಿಯ ಏಕೀಕರಣಕ್ಕಾಗಿ ಯುದ್ಧಸನ್ನಾಹ ಮಾಡೆಂದು ಉಪದೇಶಿಸಿ ವಿಫಲನಾಗಿ ಈಗ ರಾಜಸತ್ತೆಯನ್ನುರುಳಿಸುವ ಹಂಚಿಕೆಯಲ್ಲಿ ತೊಡಗಿದ್ದ. ಮ್ಯಾಜಿನಿಯ "ತರುಣ ಇಟಲಿ"ಯ ಚಳವಳಿಯಲ್ಲಿ ಸೇರಿ ಗಾರಿಬಾಲ್ಡಿ ಮ್ಯಾಜಿನಿಯನ್ನು ಕಂಡು ಅವನ ಪ್ರಚೋದನೆಯಂತೆ ಸಾರ್ಡಿನಿಯದ ನೌಕಾಪಡೆಯನ್ನು ಸೇರಿದ.

ಅವರ ಹಂಚಿಕೆ ಮ್ಯಾಜಿನಿ ತನ್ನ ತರುಣ ಯೋಧರೊಡನೆ ಪೀಡ್‌ಮಾಂಟನ್ನು ಪ್ರವೇಶಿಸುತ್ತಿರುವಾಗ ಗಾರಿಬಾಲ್ಡಿ ನೌಕಾದಳದಲ್ಲಿ ಬಂಡಾಯವೆಬ್ಬಿಸಬೇಕೆಂಬುದಾಗಿತ್ತು. ಆದರೆ ಈ ಫಿತೂರಿ ಅಕಾಲದಲ್ಲೇ ಸರಕಾರಕ್ಕೆ ತಿಳಿದು ಬಂದು ಗಾರಿಬಾಲ್ಡಿ ಫ್ರಾನ್ಸಿಗೆ ಪಲಾಯನ ಮಾಡಬೇಕಾಯಿತು. ಮಿಲಿಟರಿ ನ್ಯಾಯಾಲಯವೊಂದು ಅವನಿಗೆ ೧೮೩೪ ರಲ್ಲಿ ಗೈರಹಾಜರಿಯಲ್ಲಿ ಮರಣದಂಡನೆ ವಿಧಿಸಿತು. ಆತ ಮಾತೃಭೂಮಿಗೆ ಮರಳುವ ಆಸೆ ತೊರೆದು ೧೮೩೬ ರಲ್ಲಿ ದಕ್ಷಿಣ ಅಮೇರಿಕಕ್ಕೆ ಪಲಾಯನ ಮಾಡಿದ.

೨೯ ರ ತರುಣ ಗಾರಿಬಾಲ್ಡಿಗೆ ಇದು ಕ್ರಾಂತಿ ಚಳವಳಿಯ ಪ್ರಥಮ ಅನುಭವವಾಗಿತ್ತು. ಅಂದಿನಿಂದ ಆತ ಇಟಲಿ ಪೂರ್ತಿ ಏಕೀಕೃತವಾಗಿ ಸ್ವತಂತ್ರವಾಗುವ ವರೆಗೆ ತನ್ನ ಹೋರಾಟದಲ್ಲಿ ಗಳಿಸಿದ ಅಪಜಯಗಳೆಷ್ಟು ವಿಪುಲವಾಗಿದ್ದವೋ ವಿಜಯಗಳೂ ಅಷ್ಟೇ ರೋಮಾಂಚಕವಾಗಿದ್ದವು.

ತನ್ನ ತಾಯ್ನಾಡಿನ ಸ್ವಾತಂತ್ರ್ಯಕ್ಕೆಷ್ಟು ಉತ್ಸಾಹದಿಂದ ಹೋರಾಡಲು ಆತ ಸಿದ್ಧನಾಗಿದ್ದನೋ ಅಷ್ಟೇ ಅನ್ಯದೇಶಗಳ ಸ್ವಾತಂತ್ರ್ಯಕ್ಕಾಗಿ ರಕ್ತ ಸುರಿಸಲು ಗಾರಿಬಾಲ್ಡಿ ಸಿದ್ಧನಾಗಿದ್ದ. ಬ್ರಾಜಿಲಿನಲ್ಲಾತ ಕೆಲ ಚಿಕ್ಕ ನಾವೆಗಳನ್ನು ಸಿದ್ಧಗೊಳಿಸಿ ಸಾರಿಗೆ ವ್ಯವಹಾರದಲ್ಲಿ ತೊಡಗಿದ್ದಾಗ ಪೋರ್ತುಗೀಸ್ ಸಮ್ರಾಟನ ವಿರುದ್ಧ ದಂಗೆಯೆದ್ದು ಸ್ವಾತಂತ್ರ್ಯ ಸಾರಿದ ರಿಯೋಗ್ರಾಂಡ್ ಡೊಸೂಲ್ ಮತ್ತು ಸಾಂತಾ ಕಟರಿನಾ ಪ್ರಾಂತಗಳಿಗೆ ತನ್ನ "ನೌಕಾಪಡೆ"ಯ ನೆರವು ನೀಡಿ ಹಲವು ಕದನಗಳಲ್ಲಿ ಸರಕಾರಿ ಪಡೆಗಳನ್ನು ಸೋಲಿಸಿ ರಿಯೋಗ್ರಾಂಡ್ ಪ್ರಾಂತದಿಂದ ಪದವಿಗಳನ್ನು ಸಂಪಾದಿಸಿದ. ಕೊನೆಗೆ ಕ್ರಾಂತಿಯನ್ನು ನಿರ್ನಾಮ ಮಾಡಿದ ಬ್ರಾಜಿಲ್‌ನ ನೌಕಾಪಡೆ ಗಾರಿಬಾಲ್ಡಿಯನ್ನು ಬೆನ್ನಟ್ಟುತ್ತಿದ್ದಾಗ ಸೆನರ್ ರಿಬೆರೋ ಎಂಬೊಬ್ಬ ಹಗ್ಗದ ವ್ಯಾಪಾರಿಯ ಸುಂದರಿ ಮಗಳು ಅನಿತಾಳನ್ನು ಅವಳ ತಂದೆಯ ಸರ್ಪಕಾವಲಿರುವಾಗಲೂ ಅಪಹರಿಸಿಕೊಂಡೊಯ್ದು ಆತ ಮದುವೆಯಾಗಿ ಸ್ವಾತಂತ್ರ್ಯ ವೀರನಷ್ಟೇ ಅಲ್ಲ, ಪ್ರೇಮವೀರನೂ ಆದ.

ಈ ಹದಿನೆಂಟು ವರ್ಷದ ತರುಣಿ ಜೀವವಿರುವ ವರೆಗೂ ಗಾರಿಬಾಲ್ಡಿಯ ಸ್ವಾತಂತ್ರ್ಯಸಮರಗಳಲ್ಲಿ ಸಹಭಾಗಿಯಾಗಿ ಕೊನೆಗೆ ಇಟಲಿಗಾಗಿ ಪ್ರಾಣಾರ್ಪಣ ಮಾಡಲಿದ್ದಳು. ಅವನ ಹಡಗುಗಳ ಮೇಲೆ ತೋಫಿನ ಮಳೆಗರೆವಾಗ ಗಾಯಗೊಂಡ ನಾವಿಕರನ್ನು ಅವಳು ಆರೈಕೆ ಮಾಡಿದಳು ಮತ್ತು ಅವರ ಬದಲು ತೋಪುಖಾನೆಯನ್ನು ತಾನೇ ನಡೆಸಿದಳು. ಬ್ರಾಜಿಲ್ಲಿನ ಪಡೆಗಳಿಂದ ಬೆಂಬತ್ತಲ್ಪಟ್ಟವನಾಗಿ ಗಾರಿಬಾಲ್ಡಿ

ಕಾಡು ಗುಡ್ಡಗಳಲ್ಲಿ ಪಲಾಯನ ಮಾಡುವಾಗ ಬಸಿರಿಯಾಗಿದ್ದ ಅನಿತಾ ನಿರ್ಭಯವಾಗಿ ಅವನೊಡನೆ ಕೈಹಿಡಿದು ನಡೆದಳು.

ಬ್ರಾಜಿಲಿನಿಂದ ಪಾರಾಗಿ ಉರುಗುವೆಯಲ್ಲಿ ನೆಲಸಿದ ಮೇಲೆ ಗಾರಿಬಾಲ್ಡಿಯನ್ನು ಜಗತ್ಪ್ರಸಿದ್ಧನಾಗಿ ಮಾಡಿದ ಘಟನೆಗಳು ಜರುಗಿದವು. ಅರ್ಜೆಂಟಿನಾವು ೧೮೪೩ ರಲ್ಲಿ ಉರುಗುವೆಯ ಮೇಲೆ ದಾಳಿ ಮಾಡಿದಾಗ ತಾನು ನೆಲಸಿದ ದೇಶದ ಸ್ವಾತಂತ್ರ್ಯವನ್ನು ಕಾಪಾಡಿದವನು ಗಾರಿಬಾಲ್ಡಿಯೆ. ಆತ ಉರುಗುವೆಯಲ್ಲಿದ್ದ ಕೆಲ ನೂರು ಇಟಾಲಿಯನ್ನರನ್ನು "ವಿದೇಶಿ ದಲ" ವಾಗಿ ಸಂಘಟಿಸಿದ. ಹೆಂಡಂದಿರು ಬೇರಾವ ಬಟ್ಟೆ ಸಿಗದ್ದಕ್ಕೆ ಕೆಟ್ಟುಹೋದ ಕೆಂಪು ಬಟ್ಟೆಯ ತುಂಡುಗಳನ್ನು ಜೋಡಿಸಿ ಅವರಿಗಾಗಿ ಸಮವಸ್ತ್ರಗಳನ್ನು ಹೊಲಿದರು. ಅವನ್ನು ಧರಿಸಿ ರಣಾಂಗಣಕ್ಕೆ ಇಳಿದ ಗಾರಿಬಾಲ್ಡಿಯ ತರುಣರು ೧೮೪೬ ರಲ್ಲಿ ಅರ್ಜೆಂಟಿನಾದ ಪಡೆಗಳನ್ನೆದುರಿಸಿ ದೈತ್ಯರಂತೆ ಹೋರಾಡಿದರು. ರಾಜಧಾನಿಯ ಬಾಗಿಲ ವರೆಗೆ ಬಂದಿದ್ದ ಆಕ್ರಮಣಕಾರರು ಈ ದೇಶಾಭಿಮಾನಿಗಳಿಂದ ಸೆರೋ ಮತ್ತು ಸಾನ್ ಅಂತೋನಿಯೋಗಳಲ್ಲಿ ಪೂರ್ಣವಾಗಿ ಸೋಲಿಸಲ್ಪಟ್ಟರು.

ಗಾರಿಬಾಲ್ಡಿಯ ವಿಜಯದುಂದುಭಿ ಇಟಲಿಯಲ್ಲಿ ಮಾರ್ಮೊಳಗಿತು. ಕ್ರಾಂತಿಕಾರಿಗಳ ಹತಾಶಾಭಾವ ಮಾಯವಾಗಿ ಅವರು ಹುರಿದುಂಬಿದರು. ಆತ ಇಟಲಿಗೆ ಮರಳಿ ೧೮೪೮ ಜೂನ್‌ನಲ್ಲಿ—ಮರಣದಂಡನೆ ಸಾರಲ್ಪಟ್ಟು ೧೬ ವರ್ಷಗಳ ನಂತರ— ನೈಸ್ ನಗರದಲ್ಲಿಳಿದಾಗ ಜನಜಂಗುಳಿ ಹುಚ್ಚೆದ್ದು ಅವನನ್ನು ಸ್ವಾಗತಿಸಿತು. "ತರುಣ ಇಟಲಿ" ಯ ಸದಸ್ಯರು ಅವನಿಗಾಗಿ ಸಾಯಲೂ ಸಿದ್ಧರಾಗಿದ್ದರು. ಸಾರ್ಡಿನಿಯದ ರಾಜ ಚಾರ್ಲಸ್ ಆಲ್ಬರ್ಟ್‌ನ ಮೌಢ್ಯದ ಫಲವಾಗಿ ಇಟಲಿಯ ಏಕಮಾತ್ರ ಸ್ವತಂತ್ರ ರಾಜ್ಯಕ್ಕೆ ವಿಪತ್ತು ಬಂದಿತ್ತು. ಪಟ್ಟಕ್ಕೆ ಬಂದೊಡನೆ ವ್ಯಾಜನಿತನಗಿತ್ತ ಸ್ವಾತಂತ್ರ್ಯದ ಕರೆಯನ್ನು ಕಿವುಡುಗೇಳಿದ್ದ ಈ ರಾಜನಿಗೆ ಈಗ ಮುಪ್ಪಿನಲ್ಲಿ ಒಮ್ಮೆಲೆ ಇಟಲಿಯ ಜನರಲ್ಲಿ ತಾನು ಜನಪ್ರಿಯನಾಗಬೇಕೆಂಬ ಹುಮ್ಮಸವೆದ್ದು ಆತ ಆಸ್ಟ್ರಿಯನ್ ಸಾಮ್ರಾಜ್ಯದೊಡನೆ ಕಾಲು ಕೆರೆದು ಜಗಳ ತೆಗೆದಿದ್ದ. ಕೌಂಟ್ ರಾಡೆಟ್ಸ್ಕಿಯ ವಿಜಯಿ ಆಸ್ಟ್ರಿಯನ್ ಪಡೆಗಳು ಸಾರ್ಡಿನಿಯದ ಮೇಲೇರಿ ಬರುತ್ತಿದ್ದವು. ಈ ಇಕ್ಕಟ್ಟಿನಲ್ಲಿ ಸಿಕ್ಕಿದ ರಾಜ ಗಾರಿಬಾಲ್ಡಿಯ ಮರಣದಂಡನೆಯನ್ನು ಜಾರಿಗೆ ತರಲು ಧೈರ್ಯ ಮಾಡದಿದ್ದರೂ ಗಾರಿಬಾಲ್ಡಿ ಈ ದೇಶಾಭಿಮಾನಿ ಯುದ್ಧದಲ್ಲಿ ತನ್ನ ಸೇವೆಯನ್ನು ಸ್ವೀಕರಿಸಬೇಕೆಂದು ಬಿನ್ನೈಸಿದರೆ ಅದಕ್ಕೊಪ್ಪಲಿಲ್ಲ. ಗಾರಿಬಾಲ್ಡಿ ಹಿಂಜರಿಯಲಿಲ್ಲ. ೩೦೦೦ ತರುಣರನ್ನು ಕಲೆಹಾಕಿ ಅವರನ್ನು ಕೆಂಪಂಗಿಗಳಿಂದ ಅಲಂಕರಿಸಿ ಅವರನ್ನು ಕೂಡಿಕೊಂಡು ಸ್ವತಂತ್ರವಾಗಿ ಆಸ್ಟ್ರಿಯನ್ನರನ್ನೆದುರಿಸಿದ. ಆದರೆ ರಾಜನ ಪಡೆಗಳು ಕುಸ್ಟೋಜಾದಲ್ಲಿ ಭೀಕರ ಸೋಲುತಿಂದು ಆಸ್ಟ್ರಿಯನ್ನರೊಡನೆ ಶಾಂತಿ ಒಪ್ಪಂದ ಮಾಡಿಕೊಂಡ ಮೇಲೆ ಆತ ಸ್ವಿಜರ್ಲಂಡಿಗೆ ಪಲಾಯನ ಮಾಡಬೇಕಾಯಿತು.

ಆದರೆ ಗಾರಿಬಾಲ್ಡಿ ಬೇಗನೆ ಇಟಲಿಗೆ ಮರಳಿದ, ಈ ಸಲ ರೋಂ ನಗರಕ್ಕೆ. ಪೋಪ್ ಒಂಭತ್ತನೇ ಪಾಯಸ್ ಮೇಲೆ ಜನ ರೇಗಿ ದಂಗೆಯೆದ್ದು ಪ್ರಜಾತಂತ್ರವಾದಿ ತ್ರಿಮೂರ್ತಿ ಸಮಿತಿಯೊಂದನ್ನು ಸ್ಥಾಪಿಸಿಕೊಂಡು ಪೋಪನ ಅಪಾರ ಭೂಮಿಗಳನ್ನು ಬಡವರಿಗೆ ಹಂಚುವ ಎತ್ತುಗಡೆಯಲ್ಲಿ ತೊಡಗಿದ್ದರು. ಅವರಿಗೆ ಹೆದರಿ ಸಿಸಿಲಿಯ ಅರಸನ ಆಶ್ರಯಕ್ಕಾಗಿ ಗೇಟಾಕ್ಕೆ ಪೋಪ್ ಓಡಿಹೋಗಿದ್ದ. ರೋಂನಲ್ಲಿ ಪೋಪನ ಸಾರ್ವಭೌಮತ್ವವನ್ನು ಪುನಃ ಪ್ರಸ್ಥಾಪಿಸುವ ಸಲುವಾಗಿ ಪ್ರಬಲ ಯುರೋಪಿಯನ್ ಸಮ್ರಾಟರು ಧಾವಿಸಿ ಬಂದರು. ಆಸ್ಟ್ರಿಯನ್ ಪಡೆಗಳು ಉತ್ತರ ಮತ್ತು ಪೂರ್ವದಿಂದ ಅಂಕೋನಾ, ಬೊಲೊನಾಗಳನ್ನು ಆಕ್ರಮಿಸಿ ಮುನ್ನುಗ್ಗಿದವು. ದಕ್ಷಿಣದಿಂದ ನಿಯಾಪಾಲಿಟನ್ನರು, ಸಿಸಿಲಿಯ ರಾಜನ ಕಡೆಯವರು ರೋಮನ್ ಪ್ರದೇಶದಲ್ಲಿ



ನುಗ್ಗಿದರು. ಫ್ರಾನ್ಸಿನ ಜನರಲ್ ಔದಿನೋ ಹತ್ತುಸಾವಿರ ಸೈನಿಕರೊಡನೆ ಸಿವಿತಾವಾಥಿಯಾದಲ್ಲಿ ಇಳಿದು ರೋಂವನ್ನು ಸುತ್ತುವರಿದನು.

ಇದು ಗಾರಿಬಾಲ್ಡಿಯ ಮಹಾ ಮುಹೂರ್ತಗಳಲ್ಲೊಂದಾಗಿತ್ತು. ಆತ ತನ್ನ ಕೆಂಪಂಗಿಗಳನ್ನು ಮತ್ತೆ ಕಲೆಹಾಕಿದ. ಇವರ ಹಿಂದೆ ನಾಗರಿಕರೂ ರೈತರೂ ಹುಡುಗರೂ ಸಾಗಿದ್ದರು. ಎಲ್ಲ ಸೇರಿ ೨,೦೦೦ ಜನರ ಈ ಹುಂಬಗುಂಪು ಸಾನ್ ಪಂಕ್ರಾಜಿಯೋದ ರಕ್ಷಣೆಗೆ ನಿಂತದ್ದನ್ನು ನೋಡಿ ಫ್ರೆಂಚ್‌ಸೇನಾಪತಿ ಕೌತುಕದಿಂದ ನಕ್ಕ. ಆದರೆ ಈ "ಹುಂಬ" ರಿಗಿಂತ ಮೂರೂವರೆ ಪಟ್ಟು ಹೆಚ್ಚಾಗಿದ್ದ ತನ್ನ ಸೈನಿಕರು ಹಗಲೆಲ್ಲ ಹೋರಾಡಿದರೂ ಒಂದು ಹೆಜ್ಜೆ ಮುಂದಿಡಲಾಗದೆ ತೀವ್ರ ಸೋಲನನ್ನನುಭವಿಸಿದಾಗ ೧೮೪೯ ಮಾರ್ಚ್ ೩೦ ರಂದು ಜನರಲ್ ಔದಿನೋ ಯುದ್ಧವಿರಾಮವನ್ನು ಅಪೇಕ್ಷಿಸಬೇಕಾಯಿತು.

ಈ ಒಂದು ವಾರದ ವಿರಾಮವನ್ನುಪಯೋಗಿಸಿಕೊಂಡು ಗಾರಿಬಾಲ್ಡಿ ನಿಯಾಪಾಲಿಟನ್ನರ ಮೇಲೆ ತನ್ನ ಸ್ವಯಂ ಸೇವಕರನ್ನು ತಿರುಗಿಸಿದ. "ರಾಜಾಬೊಂಬಾ" ನ ಸೈನಿಕರು ಎಷ್ಟು ವೇಗದಿಂದ ಓಡಿದರೆಂದರೆ ಗಾರಿಬಾಲ್ಡಿ ಅವರ ರಾಜ್ಯದ ಗಡಿಯ ವರೆಗೂ ಬೆನ್ನಟ್ಟಿದ. ಈ ಕಡೆ ಪುನಃ ಫ್ರೆಂಚರು ಹೊಸದಾಗಿ ದಾಳಿಯನ್ನಾರಂಭಿಸಿದರು. ಹೋರಾಟ ರಾಕ್ಷಸೀ ಸ್ವರೂಪದ್ದಾಗಿತ್ತು. ಗಾರಿಬಾಲ್ಡಿಯ " ಹುಂಬರು " ಪಂಕ್ರಾಜಿಯೋ ಮಹಾದ್ವಾರದ ಬಳಿ ಫ್ರೆಂಚ್ ತೋಪುಗಳನ್ನು ಅಪ್ರತಿಮವಾಗಿ ಎದುರಿಸಿದರು. ಗಾರಿಬಾಲ್ಡಿಯ ಕೆಂಪಂಗಿಗಳು ಒಬ್ಬೊಬ್ಬರಾಗಿ ಬಲಿಯಾದರು. ಆದರೆ ಫ್ರೆಂಚರು ಕೊನೆಯದಾಗಿ ಅವರ ಪ್ರತಿಭಟನೆಯನ್ನು ಮುರಿಯಬೇಕಾದರೆ ಏಳು ವಾರಗಳು ಸಂದಿದವು.

ಈ ಚರಿತ್ರಾರ್ಹ ಕದನದಂತೆಯೆ ಕ್ರಾಂತಿಕಾರಿ ರೋಂನ ಶರಣಾಗತಿಯ ನಂತರ ಗಾರಿಬಾಲ್ಡಿ ಮತ್ತು ಅವನ ಅನುಯಾಯಿಗಳು ಶತ್ರುಗಳು ಇಕ್ಕಿದ ಬಲೆಯಿಂದ ನುಸುಳಿ ಪಾರಾದ ಬಗೆಯೂ ಒಂದು ಚರಿತ್ರಾರ್ಹ ಸಾಧನೆಯಾಗಿಯೆ ಇಟಾಲಿಯನ್ ಇತಿಹಾಸದಲ್ಲಿ ಉಳಿದುಕೊಂಡಿದೆ. ತನ್ನ ಸಾವಿರ ಮಿಕ್ಕಿದ ಬೆಂಬಲಿಗರೊಡನೆ ಆತ ಅಪೆನೈನ್ ಪರ್ವತಗಳನ್ನು ಅತಿ ಮಾನುಷ ಸಾಹಸದಿಂದ ಏರಿ ಆಸ್ಟ್ರಿಯ, ಫ್ರಾನ್ಸ್, ಸ್ಪೇನ್, ನೇಪಲ್ಸ್‌ಸೈನ್ಯಗಳು ಅವನನ್ನು ನಾಲ್ಕು ಸುತ್ತಲಿಂದ ಆವರಿಸುತ್ತಿದ್ದಂತೆ, ಸಾವಿರ ಗಂಡಾಂತರಗಳಿಗೆ ಸಿಲುಕಿ ಒಂದು ಚಿಕ್ಕ ನಾವೆಯಲ್ಲಿ ಜಿನೋವಾಕ್ಕೆ ಪಾರಾಗಿ ಹೋದ.

ಬಲಿದಾನ ಅಸಾಮಾನ್ಯವಾಗಿತ್ತು. ಅವನ ವೀರ ರಮಣಿ ಅನಿತಾ ಬಸಿರು ಹೊತ್ತುಕೊಂಡು ಅವನೊಡನೆ ಕಾಳಗದ ಕಣದಲ್ಲಿ ಹೆಗಲಿಗೆ ಹೆಗಲು ಹಚ್ಚಿ ದುಡಿದು, ಪಲಾಯನದಲ್ಲಿ ಅವನ ಪಕ್ಕದಲ್ಲೇ ಸಾಗುತ್ತ, ಕೊನೆಗೆ ಆ ಬಿರುಬೇಸಗೆಯಲ್ಲಿ ಶ್ರಮವನ್ನು ತಾಳಲಾರದೆ ಮಡಿದಳು. ಅವನ ಅನುಯಾಯಿಗಳಲ್ಲಿ ಬಹುಜನರು ಆಸ್ಟ್ರಿಯನ್ನರ ಕೈಗೆ ಸಿಕ್ಕಿ ಗುಂಡಿನ ಬಾಯಿಗೆ ಆಹುತಿಯಾದರು. ಇಪ್ಪತ್ತು ವರ್ಷಗಳ ಜೀವನ ಸಂಗಿನಿಯನ್ನೂ ಹತ್ತಿರದ ಗೆಳೆಯರನ್ನೂ ಕಳೆದುಕೊಂಡು ಏಕಾಂಗಿಯಾದ ಗಾರಿಬಾಲ್ಡಿ ಅಮೇರಿಕಕ್ಕೆ ಸಾಗಿದ.

ಐದು ವರ್ಷ ಕಾಲ ಈ ದೇಶಭಕ್ತ ಅಮೇರಿಕದ ಸಂಯುಕ್ತ ಸಂಸ್ಥಾನಗಳಲ್ಲಿ ರಾಜಕೀಯ ನಿರಾಶ್ರಿತನಾಗಿದ್ದು ಮತ್ತೆ ತನ್ನ ನಾವಿಕ ಜೀವನವನ್ನಾರಂಭಿಸಿ ಸಪ್ತ ಸಾಗರಗಳನ್ನು ಸುತ್ತಿದ. ಈ ನಡುವೆ ಇಟಲಿಯಲ್ಲಿ ಪುನಃ ಆಶೋದಯದ ಘಟನೆಗಳು ಪ್ರಾರಂಭವಾಗಿದ್ದವು. ಮೂಢ ರಾಜ ಚಾರ್ಲಸ್ ಆಲ್ಬರ್ಟ್ ಸಿಂಹಾಸನ ತ್ಯಾಗ ಮಾಡಿ ಮಗ ಎರಡನೇ ವಿಕ್ಟರ್ ಇಮ್ಯಾನುಯೆಲ್ ಪಟ್ಟಕ್ಕೆ ಬಂದಿದ್ದ. ಸ್ವತಃ ಪ್ರಜಾತಂತ್ರವಾದಿಯಾಗಿದ್ದ ಆತನಿಗೆ ಯುರೋಪಿನ ಇತಿಹಾಸದಲ್ಲಿ ಕಾರ್ಡಿನಲ್ ರಿಚ್ಲ್ಯು ನಂತರ ಅತಿ ಮಹಾ ಮುತ್ಸದ್ದಿಯೆನಿಸಿದ ಕೌಂಟ್ ಕಾವರ್ ಪ್ರಧಾನ ಮಂತ್ರಿಯಾಗಿ ದೊರೆತಿದ್ದ. ಆತ ಜನತೆಯನ್ನು ಆಡಳಿತದಲ್ಲಿ ಹೆಚ್ಚುಹೆಚ್ಚು ವಿಶ್ವಾಸಕ್ಕೆ ತೆಗೆದು

ಕೊಂಡಿದ್ದ. ಸಾರ್ಡಿನಿಯದ ಅರಸರ ನೇತೃತ್ವದಲ್ಲಿ ಇಟಲಿಯನ್ನು ಪುನರಪಿ ಏಕೀಕರಿಸುವ ಹೊಸ ಚಳವಳಿಯೊಂದು ಪ್ರಾರಂಭವಾಗಿತ್ತು.

ಈ ಆಶಾದಾಯಕ ವಾತಾವರಣದಲ್ಲಿ ಗಾರಿಬಾಲ್ಡಿ ಅಮೇರಿಕದಿಂದ ಮರಳಿ ೧೮೫೪ ರಲ್ಲಿ ಕಪ್ರೇರಾ ಎಂಬ ಚಿಕ್ಕ ದ್ವಿಪವನ್ನು ಕೊಂಡು ಅಲ್ಲಿ ಕೃಷಿ ಮಾಡುತ್ತ ಏಕಾಂಗಿ ಜೀವನವನ್ನು ಪ್ರಾರಂಭಿಸಿ ಅವಕಾಶವನ್ನು ಕಾಯತೊಡಗಿದ.

ಆತ ನಾಲ್ಕೇ ವರ್ಷ ಕಾಯಬೇಕಾಯಿತು. ಕೌಂಟ್ ಕಾವರನ ಮುತ್ಸದ್ದಿತನ ಫಲಿಸಿತ್ತು. ಅವನು ಫ್ರಾನ್ಸಿಗೂ ಆಸ್ಟ್ರಿಯಕ್ಕೂ ನಡುವೆ ಉಂಟಾದ ಮನಸ್ತಾಪದ ಪ್ರಯೋಜನ ಪಡೆದು ಫ್ರಾನ್ಸಿನ ಲುಯಿ ನೆಪೋಲಿಯನ್ನನನ್ನು ಸಾರ್ಡಿನಿಯದ ಪಕ್ಷಕ್ಕೆ ಒಲಿಸಿಕೊಂಡಿದ್ದ. ಆತ ಗಾರಿಬಾಲ್ಡಿಯನ್ನು ಕರೆಸಿ ಆಸ್ಟ್ರಿಯದೊಡನೆ ಪ್ರಾರಂಭವಾಗಲಿರುವ ಹೊಸ ಯುದ್ಧಕ್ಕೆ ಬೆಂಬಲ ಕೋರಿದ.

೧೮೫೯ ರಲ್ಲಿ ಯುದ್ಧ ಬಂತು. ಆಲ್ಪೈನ್ ಪರ್ವತದ ಕಣಿವೆಗಳನ್ನು ರಕ್ಷಿಸುವ ಹೊಣೆ ಗಾರಿಬಾಲ್ಡಿಗೊಪ್ಪಿಸಲ್ಪಟ್ಟಿತು. ಗಾರಿಬಾಲ್ಡಿಯ ಹೆಸರೇ ತರುಣರನ್ನು ರೋಮಾಂಚಿತಗೊಳಿಸಿತು. ಅವನ ಸ್ವಯಂಸೇವಕ ಪಡೆಗೆ ಸಾವಿರಗಟ್ಟಳೆಯಲ್ಲಿ ಜನ ಸೇರಿದರು. ಉತ್ತರದ ಗಿರಿದುರ್ಗಗಳಲ್ಲಿ ಗಾರಿಬಾಲ್ಡಿಯ ಆಲ್ಪೈನ್ ಬೇಟೆಗಾರರು ಆಸ್ಟ್ರಿಯದ ಸೈನ್ಯಗಳನ್ನು ತತ್ತರಗೊಳಿಸಿದರು ಮೇ ೮ ರಂದು ಆತ ಆಸ್ಟ್ರಿಯನ್ನರನ್ನು ಕಾಸೇಲಿನಲ್ಲಿ ಸೋಲಿಸಿ ಬೆನ್ನಟ್ಟಿದ. ಮೇ ಅಂತ್ಯದೊಳಗೆ ಆತ ಅವರನ್ನು ಟೈರೋಲ್ ತನಕ ಓಡಿಸಿ ಆಲ್ಪೈನ್ ಪರ್ವತ ಪ್ರದೇಶವನ್ನೆಲ್ಲ ಬಂಧವಿಮುಕ್ತಗೊಳಿಸಿದ.

ಉತ್ತರ ಇಟಲಿ ಬಂಧಮುಕ್ತವಾಗಿತ್ತು. ದಕ್ಷಿಣ ಇನ್ನೂ ಪರಾಧೀನವಾಗಿತ್ತು. ಆದರೆ ಅಲ್ಲಿಯ ಜನರಲ್ಲಿ ದೇಶಾಭಿಮಾನ ಉಕ್ಕಿ ಹರಿಯುತ್ತಿತ್ತು. "ರಾಜಾ ಬೊಂಬ"ನ ಮಗ ಫ್ರಾನ್ಸಿಸ್ ಈಗ ಸಿಸಿಲಿಯ ದೊರೆಯಾಗಿದ್ದ. ಸಾರ್ಡಿನಿಯಾದೊಡನೆ ಸೇರಿ ಇಟಲಿಯ ಐಕ್ಯ ಸಾಧಿಸಬೇಕೆಂಬ ತನ್ನ ಜನತೆಯ ಅಪೇಕ್ಷೆಯನ್ನು ಧಿಕ್ಕರಿಸಿ ಆತ ಸೆರೆಮನೆಗಳನ್ನು ತುಂಬಿದ್ದ.

ತನ್ನ ದ್ವೀಪನೆಲೆಯಲ್ಲಿ ಕುಳಿತು ಗಾರಿಬಾಲ್ಡಿ ಸಿಸಿಲಿ ಮತ್ತು ನಿಯಾಪಾಲಿಟಾನಿಯದ ವಿಮೋಚನೆಯ ಹಂಚಿಕೆ ಸಿದ್ಧಗೊಳಿಸಿದ. ರಾಜಾ ವಿಕ್ಟರ್ ಇಮ್ಯಾನ್ಯುವೆಲ್ ಮತ್ತು ಅವನ ಪ್ರಧಾನಿ ಈ ಯೋಜನೆಗೆ ಒಳಗಿಂದೊಳಗೆ ಆಶೀರ್ವಾದವಿತ್ತರೂ ತಮ್ಮ ಹೆಸರಿನಲ್ಲಿ ಈ ಕಾರ್ಯ ಬೇಡವೆಂದೂ ತಮ್ಮ ಸಹಾಯ ಸಿಗದೆಂದೂ ಹೇಳಿದರು.

ಗಾರಿಬಾಲ್ಡಿ ಹಿಂಜರಿಯಲಿಲ್ಲ. ಮೇ ೧೧,೧೮೬೦ ರಂದು ಆತ ತನ್ನ ೧,೦೬೨ ಕೆಂಪಂಗಿ ಸ್ವಯಂಸೇವಕರೊಂದಿಗೆ ಹಡಗಿನಲ್ಲಿ ಸಿಸಿಲಿ ದ್ವೀಪದ ಪಶ್ಚಿಮ ದಂಡೆಯಲ್ಲಿರುವ ಮಾರ್ಸಲಾದಲ್ಲಿಳಿದ. ಈ ಸೈನ್ಯವನ್ನು "ಗಾರಿಬಾಲ್ಡಿಯ ಸಾವಿರ" ಎಂದು ಇಂದಿಗೂ ಅಭಿಮಾನದಿಂದ ನೆನೆಯುತ್ತಾರೆ.

ಗಾರಿಬಾಲ್ಡಿಯ ಆಗಮನದ ಸುದ್ದಿಯಿಂದ ಸಿಸಿಲಿಯಲ್ಲಿ ವಿದ್ಯುತ್ಸಂಚಾರ ಮೂಡಿತು. ಮೂರೇ ದಿನಗಳಲ್ಲಿ ಮೂರುಸಾವಿರ ದೇಶಭಕ್ತರು ಅವನನ್ನು ಕೂಡಿಕೊಂಡರು. ಗಾರಿಬಾಲ್ಡಿ ಸಾಲೆಮಿ ನಗರವನ್ನು ಪ್ರವೇಶಿಸಿ ವಿಕ್ಟರ್ ಇಮ್ಯಾನ್ಯುಯೆಲ್ಲನ ಹೆಸರಲ್ಲಿ ತನ್ನ "ಸರ್ವಾಧಿಕಾರ" ವನ್ನು ಘೋಷಿಸಿದ ತನ್ನ ಪಡೆಗಳನ್ನು ಗುಡ್ಡಗಾಡುಗಳಲ್ಲಿ ಚದರಿಸಿ ಆತ ಸರಕಾರಿ ಸಂಪರ್ಕಗಳನ್ನು ಕತ್ತರಿಸಿದ. ಒಂದು ಕಡಿದಾದ ಪರ್ವತದ ತಪ್ಪಲಲ್ಲಿ ಸಾವಿರಾರು ಸರಕಾರಿ ಸೈನಿಕರು ಅವನ ತಂಡದ ಮೇಲೆ ಅನಿರೀಕ್ಷಿತವಾಗಿ ಗುಂಡಿನ ಮಳೆ ಪ್ರಾರಂಭಿಸಿದರು. ಗಾರಿಬಾಲ್ಡಿಯ ಮಗನಾದಿಯಾಗಿ ಅಸಂಖ್ಯ ಸ್ವಯಂಸೇವಕರು ಉರುಳಿದರು. ಆದರೆ ಗಾರಿಬಾಲ್ಡಿ ಬಿಚ್ಚುಕತ್ತಿ ಹಿರಿದು "ಅಖಂಡ ಇಟಲಿ, ಇಲ್ಲವೆ ಸಾವು!" ಎಂದು ಘೋಷಿಸಿ ಮುನ್ನುಗ್ಗಿದ. ಸರಕಾರಿ ಪಡೆಗಳು ಹೇಳಹೆಸರಿಲ್ಲದಂತೆ ನಿರ್ನಾಮವಾಗಿ ಹೋದವು.

ಸರಿಯಾಗಿ ಎರಡು ವಾರಗಳಲ್ಲಿ ಆತ ರಾಜಧಾನಿ ಪಾಲೆರ್ಮೊದ ಮಹಾದ್ವಾರದಲ್ಲಿ ನಿಂತಿದ್ದ. ರಾಜಧಾನಿಯ ಜನ ಅವನ ಪಕ್ಷದಲ್ಲಿ ದಂಗೆಯೆದ್ದರು. ಮೂರುದಿನಗಳ ಹೋರಾಟದಲ್ಲಿ ರಾಜಾ ಫ್ರಾನ್ಸಿಸನ ೨೦,೦೦೦ ಪಡೆಗಳು ನಗರವನ್ನು ರಕ್ಷಿಸಲಾರದೆ ತೋಪುಗಳಿಂದ ಅರ್ಧ ನಗರವನ್ನು ನಾಶಗೊಳಿಸಿ ಆ ಮೇಲೆ ಶರಣುಬಂದವು.

ಅಲ್ಲಿಂದ ಆತ ಸಮುದ್ರದಾಟಿ ನಿಯಾಪಾಲಿಟನ್ ಪ್ರದೇಶದ ಮೇಲೆ ದಾಳಿಯಿಟ್ಟ. ಸಿಸಿಲಿಯ ಆಕ್ರಮಣವನ್ನು ದಂಗಾಗಿ ನೋಡುತ್ತಲಿದ್ದ ಯುರೋಪು ಭೂಖಂಡದ ಭಾಗದಲ್ಲಿ ಗಾರಿಬಾಲ್ಡಿಯ ಸಾಹಸವನ್ನು ಕಂಡು ಇನ್ನಷ್ಟು ವಿಸ್ಮಯಗೊಂಡಿತು. ಮೂರು ದಿನಗಳಲ್ಲಿ ಆತ ಮಿಲಾಜೋ ಕೋಟೆಯನ್ನು ಗೆದ್ದ. ಅನಂತರ ಮೆಸಿನಾ ಶರಣಾಗತವಾಯಿತು. ಫ್ರಾನ್ಸಿಸನ ೧,೫೦,೦೦೦ ಸುಸಜ್ಜಿತ ಸೈನ್ಯದಲ್ಲೀಗ ೧,೦೦,೦೦೦ ಮಾತ್ರ ಉಳಿದಿತ್ತು. ಅದನ್ನಟ್ಟುತ್ತ ಗಾರಿಬಾಲ್ಡಿ ಮುನ್ನುಗ್ಗಿದ. ಅವನನ್ನು ತಡೆಯುವ ಶಕ್ತಿ ಯಾರಲ್ಲಿಯೂ ಇದ್ದಲ್ಲ. ಸೆಪ್ಟೆಂಬರ ೭ ರಂದು ಆತ ನೇಪಲ್ಸ್ ಪ್ರವೇಶಿಸಿ ತಾತ್ಕಾಲಿಕ ಸರಕಾರ ಸ್ಥಾಪಿಸಿದ. ಫ್ರಾನ್ಸಿಸ್ ತನ್ನ ಅಳಿದುಳಿದ ಸೈನ್ಯದೊಡನೆ ನೇಪಲ್ಸ್ ಬಿಟ್ಟೋಡಿದ.

ಕೆಲ ದಿನಗಳ ವರೆಗೆ ಈ ಅದ್ಭುತ ವಿಜಯ ಇಮ್ಯಾನ್ಯುವೆಲ್ ಮತ್ತು ಅವನ ಮಂತ್ರಿಗಳ ಹೃದಯದಲ್ಲಿ ಅಂಜಿಕೆಯನ್ನೇ ಹುಟ್ಟಿಸಿತ್ತು. ಗಾರಿಬಾಲ್ಡಿ ಏನು ಹೇಳುವನೋ ಅದೇ ಆದೀತೆಂಬಂತೆ ಅಂದಿನ ಪರಿಸ್ಥಿತಿಯಿತ್ತು. ಆತ ರಾಜಸತ್ತೆಯನ್ನು ಮೆಚ್ಚುವುದಿಲ್ಲೆಂಬ ಭಾವನೆಯಿತ್ತು. ಗಾರಿಬಾಲ್ಡಿ ಪ್ರಜಾರಾಜ್ಯವನ್ನು ಘೋಷಿಸುವನೇ? ಸೀಜರನಂತೆ ತಾನೇ ಸರ್ವಾಧಿಕಾರಯಾಗುವನೇ?

ಆದರೆ ಹಾಗಾಗಲಿಲ್ಲ. ೧೮೬೦ ನವೆಂಬರ್ ೭ ರಂದು ಆತ ವಿಕ್ಟರ್ ಇಮ್ಯಾನುವೆಲ್ ಸಹಿತ ನೇಪಲ್ಸ್ ನಗರವನ್ನು ಔಪಚಾರಿಕವಾಗಿ ಪ್ರವೇಶಿಸಿದ. ತನ್ನ ಖಡ್ಗವನ್ನು ಆತನ ಪಾದದಲ್ಲಿಟ್ಟು "ನಿನಗೆ ವಿಧೇಯನಾಗಿರುವೆ" ಎಂದು ಸಾರಿದ.

ಅನಂತರ ತನಗೆ ಅರಸನು ಕೊಡಮಾಡಿದ ಬಿರುದು-ಬಾವಲಿಗಳನ್ನೂ ಕಾಣಿಕೆ-ಉಡುಗೊರೆಗಳನ್ನೂ ನಿರಾಕರಿಸಿ, ತನ್ನ ಸೈನಿಕರನ್ನು ರಾಜನಿಗೊಪ್ಪಿಸಿ ಗಾರಿಬಾಲ್ಡಿ ತನ್ನ ದ್ವೀಪನಿವಾಸಕ್ಕೆ ಮರಳಿದ. ಇದು ಅವನ ಜೀವನದ ಅನುಪಮ ಕ್ಷಣವಾಗಿತ್ತು. ಆತ ಇಟಲಿಯನ್ನು ವಿಮೋಚನೆಗೊಳಿಸಿ ಏಕೀಕರಿಸಿದ್ದ. ಮತ್ತು ಯಾವ ಅಧಿಕಾರಲಾಲಸೆಯನ್ನೂ ಇಟ್ಟುಕೊಳ್ಳದೆ ಸರ್ವವನ್ನೂ ರಾಜನಿಗೊಪ್ಪಿಸಿ ಹೊರಟಿದ್ದ. ಆತನೀಗ ರಾಜ್ಯವನ್ನಷ್ಟೇ ಗೆದ್ದಿರಲಿಲ್ಲ, ತನ್ನನ್ನೂ ಗೆದ್ದುಕೊಂಡಿದ್ದ.

ಗಾರಿಬಾಲ್ಡಿ ಮತ್ತೂ ೨೦ ವರ್ಷ ಬದುಕಿದ. ರೋಂ ನಗರವೊಂದು ಇನ್ನೂ ಸಾಮ್ರಾಜ್ಯದೊಳಗೆ ಸೇರಿಲ್ಲವೆಂಬ ದುಃಖ ಅವನನ್ನು ತನ್ನ ಏಕಾಂತ ಜೀವನದಲ್ಲಿ ಕೊರೆಯುತ್ತಿತ್ತು. (ಅನಿತಾಳ ಮರಣದ ಹತ್ತು ವರ್ಷದ ನಂತರ ಆಲ್ಪೈನ್ ಯುದ್ಧದಲ್ಲಿ ತನಗೆ ನೆರವಾದ ಕೌಂಟೆಸ್ ರೈಮಂಡಿಯನ್ನು ಆತ ಮದುವೆಯಾಗಿದ್ದರೂ ಆ ಮದುವೆ ತಾಳಿರಲಿಲ್ಲ.) ಆದರೆ ೧೮೮೨ ಜೂನ್ ೨ ರಂದು ಆತ ಸಾಯುವ ಸ್ವಲ್ಪ ಮೊದಲು ರೋಂ ಸಾಮ್ರಾಜ್ಯದೊಳಗೆ ಸೇರಿ ಅವನ ಆ ಇಚ್ಛೆಯನ್ನೂ ಪೂರ್ಣ ಮಾಡಿತು. *

ನೀವು ಬಲ್ಲಿರಾ?

ನಕ್ಷತ್ರಗಳ ಖರತ್ವವು ಅವುಗಳ ವರ್ಣಗಳಿಂದ ಸೂಚಿತವಾಗುತ್ತದೆ. ಉದಾಹರಣೆಗೆ- ನೀಲ ಮತ್ತು ಶ್ವೇತವರ್ಣದ ನಕ್ಷತ್ರಗಳು ಕೆಂಬಣ್ಣದ ನಕ್ಷತ್ರಗಳಿಗಿಂತಲೂ ಅಧಿಕ ಶಾಖವುಳ್ಳದ್ದಾಗಿರುತ್ತವೆ. —ಎಂ. ಬಿ. ಆರ್. ಪ್ರಸಾದ್



ಆತ ಪತ್ರಿಕಾಪ್ರಪಂಚದಲ್ಲಿ
ಹೊಸ ಜಾಡನ್ನೇ ನಿರ್ಮಿಸಿದ

ಅಮೇರಿಕದ ಪತ್ರಿಕಾ ಚಕ್ರವರ್ತಿ

೮೦—೧

ರಾಧಾಕೃಷ್ಣರಾವ್

ಜಯಲಕ್ಷ್ಮಿ ಪಂಡಿತರು ತಮ್ಮ ಸೆರೆಮನೆಯ ನೆನಪುಗಳಲ್ಲಿ "ಲೈಫ್" ಪತ್ರಿಕೆಯನ್ನು ಪ್ರಾಸ್ತಾಪಿಸಿ ಅದರ ಹಳೇ ಪ್ರತಿಗಳು ತಮಗೆ ಸೆರೆಮನೆಯ ...ರನ್ನು ಕಳೆಯುವುದಕ್ಕೆ ತುಂಬಾ ಸಹಾಯ ...ವೆಂದು ಬರೆಯುತ್ತಾರೆ. ಆಶ್ಚರ್ಯವಿಲ್ಲ. "ಲೈಫ್" ಪತ್ರಿಕೆ ಜಗತ್ತಿನ ವೃತ್ತಪತ್ರಿಕಾ ರಂಗದಲ್ಲಿ ಅಪ್ರತಿಮವಾಗಿದೆ. ಸುದ್ದಿಗಳನ್ನು ಫೋಟೋಗಳಲ್ಲಿ ಪ್ರತಿಪಾದಿಸುವುದರಲ್ಲಿ ಅದು ಪತ್ರಿಕಾ ರಂಗದಲ್ಲಿ ಹೊಸ ಫ್ಯಾಶನ್ನನ್ನೇ ಕಲ್ಪಿಸಿತು. ಯುದ್ಧವಿರಲಿ, ವಿಜ್ಞಾನವಿರಲಿ, ವ್ಯಕ್ತಿ ಇರಲಿ. ವಿಚಾರವಿರಲಿ, "ಲೈಫ್" ಅದನ್ನು ಒದುಗರ ಮುಂದಿಡುವ ಕ್ರಮ ವಿಶಿಷ್ಟವಾದದ್ದು. ಜಗತ್ತಿನ ಯಾವ ಮೂಲೆಯೂ "ಲೈಫ್" ಫೋಟೋಗ್ರಾಫರನಿಗೆ ದೂರ ಅಥವಾ ದುರ್ಗಮವಲ್ಲ.

ಭಾರತದಲ್ಲಿ "ಲೈಫ್" ಕಾಣದ ಸುಶಿಕ್ಷಿತನಿಲ್ಲವೆಂದರೂ ಸಲ್ಲುವುದು. ಅಷ್ಟು ಜನ ಕಾಣದ "ಟೈಮ್" ವಾರಪತ್ರಿಕೆ ಸುದ್ದಿಗಳನ್ನು ವರದಿ ಮಾಡುವ ವಿಧಾನದಲ್ಲೇ ಹೊಸ ರೀತಿಯನ್ನು ಪ್ರಾರಂಭಿಸಿತು. ನೀವು ನಾವು ನೆರೆಹೊರೆಯ ಸುದ್ದಿಗಳನ್ನು ಯಾವ ರೀತಿ ರುಚಿರುಚಿಯಾಗಿ ಹರಟೆ ಬೆರೆಸಿ ಚರ್ಚಿಸುತ್ತೇವೋ ಅದೇ ಶೈಲಿಯಲ್ಲಿ ಸುದ್ದಿಗಳನ್ನು "ಟೈಮ್" ಕೊಡುತ್ತದೆ. ಗಂಭೀರ ಮುಖದ, ನೀರಸ, ವಸ್ತುನಿಷ್ಠ ವರದಿ ಅದಲ್ಲ.

"ಲೈಫ್" ಪ್ರಸಾರ(೧೯೬೬)ಜಗತ್ತಿನ ತುಂಬೆಲ್ಲಾ ೭೪ ಲಕ್ಷ ಇದೆ; "ಟೈಮ್" ೩೪ ಲಕ್ಷ ಪ್ರತಿಗಳನ್ನು ವಾರವಾರವೂ ಪ್ರಪಂಚದ ಮೂಲೆಮೂಲೆಗಳಿಗೆ ತಲಪಿಸುತ್ತದೆ. ಇವುಗಳ ಸ್ಥಾಪಕ ಮತ್ತು ಜೀವಸ್ವರೂಪನಾಗಿದ್ದ ಹೆನ್ರಿ ಲೂಸ್ ೧೯೬೭ ರಲ್ಲಿ ಸತ್ತಾಗ ಅವನ ಪ್ರಕಾಶನ ಸಾಮ್ರಾಜ್ಯದ ಮೌಲ್ಯ ೬೯ ಕೋಟಿ ಡಾಲರ್ ಅಂದರೆ ೫೦೦ ಕೋಟಿ ರೂಪಾಯಿಗಳಷ್ಟಿತ್ತೆಂದರೆ ಅವನ ಸಾಹಸದ ಗಾತ್ರವನ್ನು ಊಹಿಸಬಹುದು.

ಹೆನ್ರಿ ರಾಬಿನ್‌ಸನ್ ಲೂಸ್ ಹುಟ್ಟಿದ್ದು ಚೀನ



ದಲ್ಲಿ— ೧೮೯೮ ರಲ್ಲಿ. ಅವನ ತಂದೆ ತಾಯಿಗಳು ಶಾಂಟುಂಗ್ ಪ್ರಾಂತದಲ್ಲಿ ಅಮೇರಿಕನ್ ಮಿಶನರಿ ಪಾದ್ರಿಗಳಾಗಿದ್ದರು. ಹದಿನೈದನೇ ವಯಸ್ಸಿನ ವರೆಗೂ ಆತ ಚೀನದಲ್ಲಿಯೇ ಇದ್ದ. ಅನಂತರ ಅಮೇರಿಕಕ್ಕೆ ಮರಳಿ ಶಿಷ್ಯವೃತ್ತಿಗಳ ಮತ್ತು ಒಬ್ಬ ಉದಾರಿ ಮಹಿಳೆಯ ಸಹಾಯದಿಂದ ಶಾಲೆ ಮತ್ತು ವಿಶ್ವವಿದ್ಯಾಲಯವನ್ನು ದಾಟಿದ. ಖರ್ಚಿಗೆ ಸಾಲದ್ದಕ್ಕೆ ಹೋಟೆಲುಗಳಲ್ಲಿ ಅರೆ ಹೊತ್ತಿನ ಮಾಣಿಯಾಗಿಯೂ ಆತ ದುಡಿಯಬೇಕಾಗುತ್ತಿತ್ತು. ಆದರೂ ಅಮೇರಿಕದ ವಿದ್ಯಾರ್ಥಿಗಳಿಗೆ ಅತ್ಯಂತ ಆಕರ್ಷಕವೆನಿಸುವ ಫೀ ಬೀಟಾ ಕಪ್ಪಾ ಪ್ರಶಸ್ತಿಯನ್ನು ಪಡೆದು ತನ್ನ ವರ್ಗದ ಅತಿ ಬುದ್ಧಿಶಾಲಿ ವಿದ್ಯಾರ್ಥಿಯೆಂಬ ಕೀರ್ತಿಯೊಡನೆ ಆತ ಹೊರಬಂದ.

ಪಾದ್ರಿಯ ಮಗನಿಗೆ ಪತ್ರಿಕಾ ವ್ಯವಸಾಯದ ಹುಚ್ಚು ಶಾಲೆಯಲ್ಲಿರುವಾಗಲೇ ಹಿಡಿಯಿತು. ಅವನ ಬುದ್ಧಿಶಾಲಿ ಸಹಪಾಠಿ ಬ್ರಿಟನ್ ಹ್ಯಾಡನ್ನನೊಡನೆ ಆತ "ಯೇಲ್ ಡೇಲಿ ನ್ಯೂಸ್" ಎಂಬ ಪತ್ರಿಕೆಯನ್ನು ನಡೆಸುತ್ತಿದ್ದ. ಈ ಇಬ್ಬರ ಸ್ನೇಹ ಕೊನೆಯವರೆಗೂ ತಾಳಿತು. ಸೈನ್ಯದಲ್ಲಿ ತರಬೇತಿ ಹೊಂದುತ್ತಿದ್ದಾಗಲೇ ಅವರ ತಲೆಗಳಲ್ಲಿ ಹೊಸ ತರದ ವಾರಪತ್ರಿಕೆ ಪ್ರಾರಂಭಿಸುವ ವಿಚಾರ ಹೊಳೆದು ಬೆಳೆದದ್ದು. ಕಾಲೇಜು ಬಿಟ್ಟ ಮೇಲೆ ವಾರಕ್ಕೈವತ್ತು ರೂಪಾಯಿ ಸಂಬಳದಲ್ಲಿ ಒಂದೆರಡು ಪತ್ರಿಕೆಗಳಲ್ಲಿ ದುಡಿದು ೧೯೨೨ ರಲ್ಲಿ ಇಬ್ಬರೂ ಕೆಲಸ ಬಿಟ್ಟು ನ್ಯೂಯಾರ್ಕಿನಲ್ಲಿ ತಮ್ಮ ಹೊಚ್ಚಹೊಸ ಸಾಹಸಕ್ಕೆ ಇಳಿದರು— ಅಥವಾ ಏರಿದರು.

ಕಥೆ ಎಲ್ಲ ಸಾಮಾನ್ಯ ಅಮೇರಿಕನ್ ಯಶೋಗಾಥೆಗಳಂತೆಯೆ ಇದೆ. ಬರಿಗೈಯಿಂದ ಹೊರಟ ಅವರು ೮೬,೦೦೦ ಡಾಲರುಗಳನ್ನು ಸ್ನೇಹಿತರಿಂದ ಹೇಗೋ ಕಲೆಹಾಕಿ ಒಂದು ಚಿಕ್ಕ ಬಾಡಿಗೆ ಕೋಣೆಯಲ್ಲಿ ತಮ್ಮ Time, the News Magazine ಪ್ರಾರಂಭಿಸಿದರು. ಪ್ರಾರಂಭದಲ್ಲಿ ಅದಕ್ಕಿದ್ದ ವಾಚಕ ಸಂಪತ್ತು ೯,೦೦೦.

ಲೂಸ್‌ಗೆ ಆಗ ಸರಿಯಾಗಿ ೨೫ ವರ್ಷ. ಬಹುಶಃ ಆ ಕಾರಣದಿಂದಲೇ ಅದೇ ಆಗ ಮೊದಲನೇ ಮಹಾಯುದ್ಧದಿಂದ ಜಗತ್ತಿನ ಪ್ರಬಲ ರಾಷ್ಟ್ರವಾಗಿ ಹೊರಬಂದಿದ್ದ ಅಮೇರಿಕದ ನವೋತ್ಸಾಹಿ ತರುಣ ಜನಾಂಗಕ್ಕೆ ಯಾವ ತರಹದ ಓದು ಬೇಕಾಗಿದೆಯೆಂಬ ಅರಿವು ಅವನಿಗಿದ್ದಿರಬೇಕು. 'ಟೈಮ್" ಗಂಭೀರದ ಬದಲು ರಭಸದ ಶೈಲಿಯನ್ನು ಪಯೋಗಿಸುತ್ತಿತ್ತು. ಹಿಂದಿನ ವಾರದ ಸುದ್ದಿಯನ್ನು ಸುದ್ದಿಸಾರವಾಗಿ ಕೊಡುವ ಬದಲು ಅದರ ಹಿಂದಿರುವ ವ್ಯಕ್ತಿಗಳ ಹಿಂದು ಮುಂದು, ಘಟನೆಗಳ ಏಕೆ— ಏನು, ಎಲ್ಲವನ್ನೂ ಕ್ಷಿಪ್ರವಾಗಿ, ಸೂಕ್ಷ್ಮವಾಗಿ, ಕೆಲವೇಳೆ ವಿನೋದದ ಉಪ್ಪಿನ ಕಾಯಿಯೊಡನೆ ಬಡಿಸುತ್ತಿದ್ದುದರಿಂದ ಅದು ಬೇಗನೆ ಓದುಗರ ಮನಸೆಳೆಯಿತು. ಆದರೆ ಐದು ವರ್ಷಗಳ ಕಾಲ ಇಬ್ಬರೂ ಬಹಳ ಕಷ್ಟ ಬೇಕಾಯಿತು. (ಅವರು ತೆಗೆದುಕೊಳ್ಳುತ್ತಿ ಸಂಬಳ ವಾರಕ್ಕೆ ಒರೇ ರೂ. ೧೪೦).

೧೯೨೮ ರಷ್ಟು ಹೊತ್ತಿಗೆ "ಟೈಮ್" ಪ್ರಸಾರ ೨,೨೫,೦೦೦ ದಾಟಿತ್ತು. ಅದೀಗ ಲಾಭ ಗಳಿಸ ತೊಡಗಿತ್ತು. ಅಂದಿನಿಂದ ಒಮ್ಮೆ ಹೊರತ್ತು "ಟೈಮ್" ಎಂದೂ ಹಣ ಕಳೆದುಕೊಳ್ಳಲಿ ಅದು ಲಾಭ ಮಾಡಿಕೊಳ್ಳಲಾರಂಭಿಸುವಷ್ಟರಲ್ಲಿ ಅದರ ಸಹಪಾಠಿ ಪಾಲುದಾರರಲ್ಲಿ ಮತಭೇದಗಳು ಹೆಚ್ಚುತ್ತ ಹೊರಟಿದ್ದವು. ಲೂಸ್ ಆಪ್ಪರಲ್ಲೇ ಇನ್ನೊಂದು ಪತ್ರಿಕೆಯನ್ನು— ಒಂದು ಮಾಸಿಕವನ್ನು— ಹೊರಡಿಸುವ ಯೋಜನೆ ಹಾಕಿದ್ದ. "ಫಾರ್ಚೂನ್" ಎಂಬ ಆ ಮಾಸಿಕ ಅಮೇರಿಕದ ವ್ಯಾಪಾರ-ವ್ಯವಹಾರ ವಿಷಯಗಳನ್ನು ಒಳಗೊಂಡು ಉತ್ತಮ ಅಲಂಕರಣದೊಂದಿಗೆ ಪ್ರತಿಗೆ ಒಂದು ಡಾಲರ ಬೆಲೆಯಲ್ಲಿ ಮಾರಬೇಕೆಂದು ಲೂಸ್‌ನ ವಿಚಾರವಾಗಿತ್ತು. ಇದು ಹ್ಯಾಡೆನ್ನನಿಗೆ ಇಷ್ಟವಿರಲಿಲ್ಲ. ಆದರೆ ಸಮಸ್ಯೆಯನ್ನು ಮೃತ್ಯು ಬಿಡಿಸಿತು. ಹ್ಯಾಡೆನ್ ಅಕಸ್ಮಾತ್ತಾಗಿ ತೀರಿಕೊಂಡ. ಈಗ ಲೂಸನೇ ಸರ್ವಾಧಿಕಾರಿ ಯಾದ. "ಫಾರ್ಚೂನ್" ಹೊರಬಂತು. ಮತ್ತು ಕೆಲಕಾಲ "ಟೈಮ್"ನಿಂದ ಬಂದ ಲಾಭದಿಂದ ಬದುಕಿದ ಮೇಲೆ ತಾನೇ ಸ್ವತಂತ್ರವಾಗಿ ಲಾಭದಾಯಕವಾಯಿತು.

ಲೂಸನ ಆರನೇ ಇಂದ್ರಿಯ ಯಾವುದು ಯಾವ ನಿಟ್ಟಿನಲ್ಲಿ ಸಕಾಲಿಕವೆಂಬುದನ್ನು ಗುರುತಿಸುವ

ಶಕ್ತಿಯನ್ನೊಡಗೊಡುತ್ತಿತ್ತು. ೧೯೩೦ ರಲ್ಲಿ "ಫಾರ್ಚೂನ್" ಸಾಹಸ ಪ್ರಾರಂಭವಾದ ಎರಡೇ ವರ್ಷಗಳಲ್ಲಿ "ಆರ್ಕಿಟೆಕ್ಚರಲ್ ಫೋರಂ" ಎಂಬ ಇನ್ನೊಂದು ಮಾಸಿಕ ಹೊರಟಿತು. ೧೯೩೬ ರಲ್ಲಿ ಅವನ ಯುಗಪ್ರವರ್ತಕ "ಲೈಫ್" ವಾರ ಪತ್ರಿಕೆ ಪ್ರಾರಂಭವಾಯಿತು. ಅದರ ಅನಿರೀಕ್ಷಿತ ಪ್ರಚಂಡ ಯಶಸ್ಸಿನಿಂದ ಲೂಸ್ ದಿವಾಳಿಯೇಳುವುದಕ್ಕೆ ಹತ್ತಿರವಾದ! ಏಕೆಂದರೆ ಅವನೆಣಿಸಿದ್ದಕ್ಕಿಂತ ಅದಕ್ಕೆ ಎಷ್ಟು ಹೆಚ್ಚಿಗೆ ಬೇಡಿಕೆ ಬಂದರೆ ಅವನು ಒಪ್ಪಿಕೊಂಡಿದ್ದ ಜಾಹಿರಾತಿನ ದರಗಳು ಜಾಹಿ-ರಾತಿನ ಕಾಗದ ಮುದ್ರಣವೆಚ್ಚಗಳಿಗೆ ಈಡಾಗದಿರಲಿಲ್ಲ! "ಟೈಮ್" ಬಂಗಾರದ ಗಣಿಯಾದ್ದರಿಂದ "ಲೈಫ್" ಮತ್ತು ಅದರ ಕರ್ತ ಬದುಕಿದರಷ್ಟೇ. ಆತ ಮೂರು ಲಕ್ಷ ಪ್ರಸಾರವನ್ನು ಆಶಿಸಿದ್ದರೆ ಒಂದು ವರ್ಷದೊಳಗೆ ೧೦ ಲಕ್ಷ ಪ್ರತಿಗಳು ಮಾರುತ್ತಿದ್ದವು.

೧೯೫೨ ರಲ್ಲಿ ಆತ "ಆರ್ಕಿಟೆಕ್ಚರಲ್ ಫೋರಮ್"ನ್ನು ಎರಡು ಮಾಸಿಕಗಳಾಗಿ ವಿಂಗಡಿಸಿ, ಒಂದಕ್ಕೆ ಅದೇ ಹೆಸರನ್ನುಳಿಸಿ, ಇನ್ನೊಂದಕ್ಕೆ "ಹೌಸ್ ಆ್ಯಂಡ್ ಹೋಂ" ಎಂದು ನಾಮಕರಣ ಮಾಡಿದ. ಅಷ್ಟರಲ್ಲಿ ಅವನ ಪತ್ರಿಕಾ ಸಾಮ್ರಾಜ್ಯದ ವಾರ್ಷಿಕ ಆಯ ವರ್ಷಕ್ಕೆ ೧೫ ಕೋಟಿ ಡಾಲರುಗಳಿಗೇರಿತ್ತು. ಆತ ತನ್ನ ಸಾಮ್ರಾಜ್ಯವನ್ನು ಜಗತ್ತಿನ ಬೇರೆ ಬೇರೆ ದಿಕ್ಕುಗಳಲ್ಲಿ ಚಾಚತೊಡಗಿದ. ೧೯೫೩ ರಲ್ಲಿ ಆತ ದಕ್ಷಿಣ ಅಮೇರಿಕದಲ್ಲಿ "ಲೈಫ್"ನ ಸ್ಪಾನಿಶ್ ಭಾಷಾ ಆವೃತ್ತಿಯನ್ನು ಆರಂಭಿಸಿದ. ಇಂಗ್ಲೀಷಿನಲ್ಲಿ ಅದರ ಅಂತಾರಾಷ್ಟ್ರೀಯ ಆವೃತ್ತಿ ಆಗಲೆ ಆರಂಭವಾಗಿತ್ತು. ಈಗದು ಇಂಗ್ಲೀಷಿನಲ್ಲಿ ಅಟ್ಲಾಂಟಿಕ್ ಆವೃತ್ತಿ, ಏಶಿಯ ಆವೃತ್ತಿ ಎಂದು ಎರಡು ಆವೃತ್ತಿಗಳಲ್ಲಿ ಹೊರಡುತ್ತಿದೆ. ಏಶಿಯ ಆವೃತ್ತಿ ಜಪಾನ್‌ನಲ್ಲೇ ಮುದ್ರಣ ಹೊಂದುತ್ತಿದೆ. ಅಲ್ಲದೆ ಹಲವು ಭಾಷೆಗಳಲ್ಲಿ ಅದು ಪ್ರಕಟವಾಗುತ್ತಿದೆ.

ಹೆನ್ರಿ ಲೂಸ್ ಅನೇಕ ರೀತಿಯಿಂದ ಅಸಾಧಾರಣ ವ್ಯಕ್ತಿಯಾಗಿದ್ದ. ಒಬ್ಬ ಲೇಖಕ ಅವನನ್ನು "ಲೆಕ್ಕ ಪತ್ರಗಳಲ್ಲಿ ಚೂಟಿಯಾದ ಕನಸು-ಗಾರ" ಎಂದಿದ್ದಾನೆ. ಅಮೇರಿಕದಲ್ಲಿ ವ್ಯಾಪಾರ ಮುಗ್ಗಟ್ಟು ಆರಂಭವಾದ ಕಾಲದಲ್ಲೇ ಆತನ ಯಶಸ್ಸು ಆರಂಭವಾದ್ದು ಅವನ ವ್ಯವಹಾರ ಕುಶಲತೆಯನ್ನು ಸೂಚಿಸುತ್ತದೆ. ಆದರೆ ಹಣವೊಂದೇ ಅವನ ಧ್ಯೇಯವಾಗಿರಲಿಲ್ಲ. ಅವನ ವಿರೋಧಿಗಳು, ಲೂಸ್ ಅಮೇರಿಕದಲ್ಲಿ ದೇವರ ಪ್ರತಿನಿಧಿ ತಾನೇ ಎಂದೆಣಿಸಿದ್ದ. ಎಂದು ಟೀಕಿಸುತ್ತಾರೆ. ಅಮೇರಿಕ ಜಗತ್ತಿನ ಉದ್ಧಾರಕರ್ತನಾಗಬೇಕೆಂದು ದೈವೇಚ್ಛೆ ಎಂಬುದು ಅವನ ವಿಶ್ವಾಸವಾಗಿತ್ತು. ಮತ್ತು ಅಮೇರಿಕವನ್ನು ಬಂಡವಳಗಾರರು ಆಳಬೇಕೆಂಬುದೂ ಅದನ್ನು ಮತ್ತು ವಿಶ್ವವನ್ನು ಸಮಾಜವಾದಿಗಳು, ಪ್ರಗತಿವಾದಿಗಳು. ಕಮ್ಯುನಿಸ್ಟರೇ ಮೊದಲಾದ ಘಾತುಕ ಶಕ್ತಿಗಳಿಂದ ಪಾರುಮಾಡುವುದು ತನ್ನ ಮತ್ತು ತನ್ನ ಪತ್ರಿಕೆಗಳ ಅವತಾರಕಾರ್ಯ ಎಂದೂ ಅವನ ಎಣಿಕೆಯಾಗಿತ್ತು.

ಅಂತಾರಾಷ್ಟ್ರೀಯ ರಂಗದಲ್ಲಿ ಅಮೇರಿಕದ ಹಿರಿಮೆಗೆ ಯಾರು ಯಾರು ಸಾಧಕವೆಂದು ಆತ ಭಾವಿಸಿದ್ದನೋ ಅವರಿಗೆಲ್ಲ ಅವನ ಪತ್ರಿಕೆಗಳ ಬೆಂಬಲವಿರುತ್ತಿತ್ತು. ಚಿಯಾಂಗ್ ಕೈಶೇಕರನ್ನು ಆತ ಅಂದಿನಿಂದ ಕೊನೆವರೆಗೆ ಬೆಂಬಲಿಸುತ್ತ ಬಂದ. ಅಮೇರಿಕದ ಯುದ್ಧಕಾಲದ ಮಿತ್ರರಾದ ರಶಿಯನ್ನರನ್ನು ಯುದ್ಧಕಾಲದಲ್ಲೇ ಆತ ಟೀಕಿಸುತ್ತಿದ್ದ. ಭಾರತ ಪ್ರಗತಿವಾದದ ದುರ್ಮಾರ್ಗವನ್ನು ಹಿಡಿದಿದೆಯಾದ್ದರಿಂದ ಅದನ್ನೂ ಅದರ ಪ್ರಧಾನ ಮಂತ್ರಿಗಳನ್ನೂ ಆತನ ಪತ್ರಿಕೆಗಳು ಕಡೆಗಣ್ಣಿಂದಲೇ ನೋಡುತ್ತ ಬಂದವು. ಇಂಡೋ-ಚೀನವನ್ನು ಕಮ್ಯುನಿಸ್ಟ ಮತ್ತು ಇತರ ದುಃಶಕ್ತಿಗಳಿಂದ ಉಳಿಸುವುದನ್ನು ತನ್ನ ವಿಶೇಷ ಕರ್ತವ್ಯವಾಗಿ ಭಾವಿಸಿದ್ದ ಲೂಸ್ ಅಲ್ಲಿದ್ದ ಸುದ್ದಿಗಾರ ಕಳಿಸಿದ ಸೋಲಿನ ಸುದ್ದಿಗಳನ್ನೆಲ್ಲ ಕಡತಗಳಿಗೆ ಸೇರಿಸಿ ಉಜ್ವಲ ಗೆಲವುಗಳ ಚಿತ್ರಗಳನ್ನು ಪ್ರಕಟಿಸುತ್ತಿದ್ದುದರಿಂದ ತಾನು ನಿರ್ವಾಹವಿಲ್ಲದೆ ರಾಜೀನಾಮೆ ಕೊಟ್ಟದ್ದಾಗಿ ಆ ಸುದ್ದಿಗಾರ ಬರೆದಿದ್ದಾನೆ. ಆತನ ಪತ್ರಿಕೆಗಳು ಯಾವಾಗಲೂ ಸುದ್ದಿಗಳನ್ನು ಆತನ ಮೂಗಿನ ನೇರಕ್ಕೆ ಪ್ರಕಟಿಸುತ್ತಿದ್ದರೂ ಆತ ಯಾವುದು ತನಗೆ ಒಳ್ಳೆಯದೆಂದು ಕಂಡಿತೋ ಅದನ್ನೇ ಎತ್ತಿಹಿಡಿದ ಎನ್ನಲೇಬೇಕು.


ಲೂಸನ ಜೀವನಕಥೆಯನ್ನು ಟಿ. ಎಸ್.

ಮ್ಯಾಥ್ಯೂಸ್ "ಪ್ರಚಂಡ ಯಶಸ್ಸಿನ ವಿಷಾದ ಕಥೆ" ಎಂದು ವರ್ಣಿಸುತ್ತಾನೆ. ಆತ ತನ್ನ ಎಪ್ಪತ್ತು ವರ್ಷದ ಬದುಕಿನಲ್ಲಿ ಜಗತ್ತಿನ ಅತಿ ದೊಡ್ಡ ಪತ್ರಿಕಾ ಸಮ್ರಾಟನಾದದ್ದು ನಿಜ. ಆದರೆ ಅಂತರಿಕ ವಿಷಯಗಳಲ್ಲಿ ಆತನ ಪ್ರಚಂಡ ಪ್ರಸಾರದ ಪತ್ರಿಕೆಗಳ ಪ್ರಭಾವ ತೀರ ಅಲ್ಪವಾಗಿತ್ತು. ಐಸೆನ್‌ಹಾವರ್ ಒಬ್ಬರನ್ನು ಹೊರತು ಅವನ ಬೆಂಬಲ ಪಡೆದ ಯಾವ ಉಮೇದ್ವಾರನೂ ಅಧ್ಯಕ್ಷನಾಗಲಿಲ್ಲ. ತನ್ನ ಹಟವಾದಿ ನೀತಿಯಿಂದ ಆತ ಅಮೇರಿಕದ ಅನೇಕ ರಾಜಕಾರಣಿಗಳ ದ್ವೇಷ ಸಂಪಾದನೆ ಮಾಡಿದ್ದ. ಅಧ್ಯಕ್ಷ ಫ್ರಾಂಕ್ಲಿನ್ ರೂಜ್‌ವೆಲ್ಟರು ಇಂಥವರಲ್ಲೊಬ್ಬರು. ರೂಜ್‌ವೆಲ್ಟರು ಯುದ್ಧಕಾಲದಲ್ಲಿ ಲೂಸನಿಗೆ ಸಿಗಬಹುದಾಗಿದ್ದ ರಾಯಭಾರಿ ಪದವನ್ನು ಅವನಿಂದ ತಪ್ಪಿಸಿದರಷ್ಟೇ ಅಲ್ಲ, ಸಾಮಾನ್ಯ ಪತ್ರಿಕಾ ಕರ್ತನಿಗೆ ಸಿಗುತ್ತಿದ್ದ ಯುದ್ಧರಂಗಕ್ಕೆ ಭೇಟಿ ಕೊಡುವ ಅನುಮತಿಯನ್ನು ಕೂಡ ಅವನಿಗೆ ನಿರಾಕರಿಸಿದ್ದರಂತೆ. ಲೂಸ್ ತನ್ನ ಟೀಕೆಗೆ ಪಾತ್ರರಾದವರನ್ನು ವೈಯಕ್ತಿಕವಾಗಿ ದ್ವೇಷಿಸುತ್ತಿದ್ದದ್ದು ಅಪರೂಪ. ಆದರೆ ರೂಜವೆಲ್ಟರ ಮೇಲೆ ಆತನ ದ್ವೇಷ ಗುಪ್ತವಾಗಿರಲಿಲ್ಲ. ರೂಜ್‌ವೆಲ್ಟರು ಸತ್ತದ್ದನ್ನು ಕೇಳಿ ಆತ, "ಆ ಸೂಳೇಮಗನ್ನ ನಾನು ಕ್ಷಮಿಸಿದ ಹಾಗೇ ದೇವರು ನನ್ನನ್ನು ಕ್ಷಮಿಸಲಿ!" ಎಂದನಂತೆ!

ಲೂಸ್ ಅಮೇರಿಕದ ಸಿನೇಟ್ ಸದಸ್ಯನಾಗಿ ದೇಶದ ಆಗುಹೋಗುಗಳ ಮೇಲೆ ಪ್ರಭಾವ ಬೀರುವುದಕ್ಕೆ ಇಷ್ಟಪಡುತ್ತಿದ್ದ. ಆದರೆ ಅದರಿಂದ ತನ್ನ ಪತ್ರಿಕಾವೃತ್ತಿಗೆ ಧಕ್ಕೆ ಬಂದೀತೆಂದು ಯತ್ನಿಸಲಿಲ್ಲ. ರಾಯಭಾರಿಯಾಗಬಹುದಿತ್ತು, ಅದೂ ಸಾಧ್ಯವಾಗಲಿಲ್ಲ. ಆದರೆ ಅವನ ಎರಡನೇ ಹೆಂಡತಿ ಕ್ಲಾರ್ ಬೂತ್ (ಮೊದಲನೇ ಹೆಂಡತಿ ಎರಡು ಮಕ್ಕಳಾದ ಮೇಲೆ ಆತನಿಂದ ವಿಚ್ಛೇದ ಪಡೆದಿದ್ದಳು) ಮೊದಲು ಅಮೇರಿಕದ ಪ್ರತಿನಿಧಿ ಸಭೆಯ ಸದಸ್ಯಳಾದಳಲ್ಲದೆ ಇಟಲಿಗೆ ರಾಯಭಾರಿಯೂ ಆದಳು.

ಹೆನ್ರಿ ಲೂಸನ ಪತ್ರಿಕಾನೀತಿಯಲ್ಲಿ ಅನೇಕ ದೋಷಗಳನ್ನು ಹುಡುಕುವವರಿದ್ದಾರೆ. ಅವನು ತಥ್ಯಗಳಿಗೆ ಬಣ್ಣ ಹಚ್ಚುತ್ತಿದ್ದ, ಅಮುಖ್ಯಕ್ಕೆ ಮುಖ್ಯತೆ ಕೊಡುತ್ತಿದ್ದ, ಆತನ ಪತ್ರಿಕೆಗಳು ಒಂದು ಏಕರೂಪವಾದ, ಕೆಲವೊಮ್ಮೆ ಹಾಸ್ಯಾಸ್ಪದವಾದ, ಮಾತಿನ ರೀತಿಗಳನ್ನು ರೂಢಿಸಿಕೊಂಡಿದ್ದವು, ಆತ ಜನರ ಖಾಸಗಿ ಜೀವನದಲ್ಲಿ ಅತಿಕ್ರಮ ಪ್ರವೇಶಮಾಡಿ ಶಿಷ್ಟಾಚಾರದ ಕೊಲೆ ಮಾಡುತ್ತಿದ್ದ—ಇತ್ಯಾದಿ. ಆದರೆ ಪತ್ರಿಕಾ ವೃತ್ತಿಯನ್ನು ಒಳಗಿಂದ ಬಲ್ಲವರಿಗೆ ಈ ದುರ್ಗುಣಗಳು ಈ ವೃತ್ತಿಯಲ್ಲಿ ಅಪರೂಪವಲ್ಲ ಎಂದು ಗೊತ್ತು. ಲೂಸ್ ಇತರರಿಗಿಂತ ಹೆಚ್ಚು ಯಶಸ್ವಿಯಾದ ಎಂಬುದು ಅವನ ದೋಷಗಳನ್ನೂ ಬೆಳಸಿ ತೋರಿಸುತ್ತವಷ್ಟೇ.

ಪತ್ರಿಕಾ ವೃತ್ತಿಯಲ್ಲಿ ಯಶಸ್ವಿಗಳಾಗಬೇಕೆಂಬವರು ಲೂಸ್ ಹೊರಡಿಸಿದ ಪತ್ರಿಕೆಗಳನ್ನು ಅವಶ್ಯವಾಗಿ ಅಭ್ಯಸಿಸಬೇಕು. ಜನ ಓದುವಂತೆ ಮಾಡಬೇಕಾದರೆ ಸುದ್ದಿಗಳಿಗೆ ಹೇಗೆ ಜೀವಕಳೆ ಕೊಡಬೇಕು ಎಂಬುದನ್ನು ಅವನಿಂದ ಖಂಡಿತವಾಗಿ ಕಲಿಯಬಹುದು. *



"ಅಪ್ಪಾ!"

"ಏನು ಮರಿ?"

"ನಿರಾಶಾವಾದಿ ಅಂದರೇನಪ್ಪಾ?"

"ನಿರಾಶಾವಾದಿ ಅಂದರೆ ಹಾಲು ಹುಳಿಯಾಗಬಹುದು ಎಂಬ ಭಯದಿಂದ ಆಕಳನ್ನು ಕರೆಯುವುದೇ ಬೇಡ ಎಂದುಕೊಳ್ಳುವವನು ಮಗೂ!"

ಲೇಖ — 1



ಮೂರುಸಾವಿರಮಠದ
ಜಗದ್ಗುರುಗಳು

ಪಾವೆಂ

ಇಪ್ಪತ್ತನೆಯ ಶತಮಾನದ ಉತ್ತರಾರ್ಧ-ಕಾಲದಲ್ಲಿ ಜಗತ್ತಿನಲ್ಲೆಲ್ಲ ಧರ್ಮಪೀಠಗಳ ಪ್ರತಿಷ್ಠೆ ಕುಗ್ಗುತ್ತಿರುವಾಗ ಭಾರತದಲ್ಲಿ ಅದು ಹೆಚ್ಚುತ್ತಿರುವುದು ಒಂದು ವಿಶೇಷ. ಜನರು ಹೆಚ್ಚು ಧಾರ್ಮಿಕರಾಗಿದ್ದಾರೆಂದಲ್ಲ. ಆದರೆ ಅವರು ಧರ್ಮಪೀಠಗಳ ಕಡೆ ಹೆಚ್ಚು ಆಶಾದೃಷ್ಟಿಯಿಂದ ನೋಡುತ್ತಿದ್ದಾರೆ. ಶತಮಾನದ ಪೂರ್ವಾರ್ಧದಲ್ಲಿ ರಾಜಕೀಯ ಪುರುಷರ ಮೇಲೆ ಸುಖಸಮೃದ್ಧಿಪೂರ್ಣ ದೇಶವನ್ನು ಕಟ್ಟುವುದರಲ್ಲಿ ಇಟ್ಟಿದ್ದ ಭರವಸೆಯ ಸೌಧ ಕುಸಿದುಬಿದ್ದದ್ದು ಇದಕ್ಕೆ ಒಂದು ಕಾರಣವಾಗಿರಬಹುದು. ಹಾಗೆಯೇ ಕಳೆದ ಅನೇಕ ದಶಕಗಳಿಂದ ತಮ್ಮ ಚಿಪ್ಪಿನೊಳಗೆ ಸೇರಿಕೊಂಡ ಆಮೆಗಳ ಹಾಗೆ ಬೇರೆಯೇ ಪ್ರಪಂಚದಲ್ಲಿ ಜೀವಿಸುತ್ತಿದ್ದ ಮಠಾಧಿಪತಿಗಳ ಬದಲು ಈಗ ಸಾಮಾಜಿಕ ಪ್ರಜ್ಞೆಯುಳ್ಳ ಮಠಾಧಿಪತಿಗಳ ಪೀಳಿಗೆಯೊಂದು ಕಾಣಿಸಿಕೊಂಡಿರುವುದು ಇನ್ನೊಂದು ಕಾರಣವೆನ್ನಬಹುದು.

ಈ ಹೊಸ ಪೀಳಿಗೆಯ ಮಠಾಧಿಪತಿಗಳಲ್ಲಿ ಹುಬ್ಬಳ್ಳಿಯ ಮೂರುಸಾವಿರ ಮಠದ ಶ್ರೀ ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳವರು ಹೆಸರಿಸತಕ್ಕವರು. ಇದೇ ಈಗ ನಲುವತ್ತೈದರಲ್ಲಿ ಕಾಲಿಡುತ್ತಿರುವ ಸ್ವಾಮೀಜಿಯವರು ಪರಂಪರಾಗತ ಪೀಠಸ್ಥರಾಗಿದ್ದೂ ವಿದೇಶಯಾತ್ರೆ ಮಾಡಿದ ಪ್ರಥಮ ಲಿಂಗವಂತ ಸಂನ್ಯಾಸಿಗಳಾಗಿದ್ದಾರೆ. ಭಾರತದಲ್ಲೇ ವಿದೇಶ ಯಾತ್ರೆ ಮಾಡಿದ ಪೀಠಾಧಿಪತಿಗಳು ಇವರನ್ನು ಬಿಟ್ಟರೆ ಒಬ್ಬಿಬ್ಬರಾದರೂ ಎಣಿಕೆಗೆ ಸಿಗುವರೋ ಇಲ್ಲವೋ. ಕಳೆದ ವರ್ಷ ಜಪಾನಿನಲ್ಲಿ ನಡೆದ ವಿಶ್ವ ಧರ್ಮ ಶಾಂತಿ ಸಮ್ಮೇಳನಕ್ಕೆ ಭಾರತದ ಪ್ರತಿನಿಧಿಯಾಗಿ ಹೋಗಿ ಮರಳುವಾಗ ಅವರು ಆಗ್ನೇಯ ಏಶಿಯದ ಹಲವು ದೇಶಗಳನ್ನು ನೋಡಿ ಬಂದರು. ವಿದೇಶ ಯಾತ್ರೆಯಲ್ಲೇ ಅಂಥ ವಿಶೇಷವೇನೂ ಇಲ್ಲ. ಆದರೆ ಬಹುಕಾಲದಿಂದ ನಮ್ಮೊಂದಿಗರನ್ನು ಬಿಟ್ಟು ಬೇರೆಯವರೊಡನೆ ಬೆರೆಯದೆ ಉಳಿದಿದ್ದ ಭಾರತೀಯರಿಗೆ ಈ ಹೊರಗಿನ ಗಾಳಿ ಬೆಳಕು ವಾಸ್ತವಿಕತೆಯ ನೈಜ ದರ್ಶನಕ್ಕೆ ನೆರವಾಗಿ ನಮ್ಮ ಕ್ಷಿತಿಜಗಳನ್ನು ವಿಸ್ತರಿಸುತ್ತದೆ, ಎಂದು ಸ್ವಾಮೀಜಿ ಹೇಳುತ್ತಾರೆ.

ಹೊರಗಿನ ಗಾಳಿ ಬೆಳಕುಗಳಿಂದ ಪ್ರಯೋಜನ ಹೊಂದುವ ಅವಕಾಶ ಸ್ವಾಮೀಜಿಗೆ ಇದು ಮೊದಲನೇ ಸಲವಲ್ಲ. ಕಾಶಿಯಲ್ಲಿ ಬನಾರಸ್ ಹಿಂದೂ ವಿಶ್ವವಿದ್ಯಾಲಯದಲ್ಲಿ ಎಂಟು ವರ್ಷಗಳ ಕಾಲ ಹಿಂದೂ ಧರ್ಮ ದರ್ಶನಗಳ ಅಭ್ಯಾಸ ಮಾಡುವಾಗ ಭಾರತದ ಅನೇಕ ವೇದಾಂತ ಮಹಾರಥಿಗಳ ಹಾಗು ವಿದ್ಯಾರ್ಥಿಗಳ ಸಂಪರ್ಕ ಅವರಿಗೆ ಬಂತು. “ನಾವು ಅಲ್ಲಿ ಓದಿದೆಂ ಶಾಂಕರ ಸಿದ್ಧಾಂತ, ಸುಬ್ರಹ್ಮಣ್ಯ

ಶಾಸ್ತ್ರಿಗಳು, ರಾಮಚಂದ್ರ ದೀಕ್ಷಿತರು ಮೊದಲಾದ ಅದ್ವೈತ ದಿಗ್ದಂತಿಗಳ ಸಾಹಚರ್ಯದ ಲಾಭ ನಮಗಾಯಿತು. ಇತರ ದರ್ಶನಗಳ ಜತೆ ಬಂದ ಈ ಸಂಸರ್ಗದಿಂದ ನಮ್ಮ ಶಿವಾದ್ವೈತದ ಮೇಲಿನ ನಿಷ್ಠೆ ವಿಶ್ವಾಸಗಳು ನಮಗೇನೂ ಕಡಿಮೆಯಾಗಲಿಲ್ಲ. ಆದರೆ ಇತರ ಅಭಿಪ್ರಾಯಗಳ ಸಂಗಡ ಸ್ನೇಹಪರವಾಗಿರುವ ಕಲೆ ನಮಗೆ ಅವಗತವಾಯಿತು" ಎಂದು ಸ್ವಾಮೀಜಿ ಹೇಳುತ್ತಾರೆ. ಅದೇ ಪ್ರಕಾರ ಹಿಂದೂ ಧರ್ಮ ಸಂಸ್ಕೃತಿಗಳಿಗೆ ಬಂದಿರುವ ಗಂಡಾಂತರದ ಪ್ರಜ್ಞೆಯೂ ಅವರಿಗೆ ಬಂತು. ಈ ಅಪಾಯದಿಂದ ಸಮಾಜವನ್ನು ಹಿಂದೆಳೆದುಕೊಳ್ಳುವುದಕ್ಕೆ ಮಠಾಧಿಪತಿಗಳಾದ ತಮ್ಮ ಕರ್ತವ್ಯವೇನೆಂಬುದರ ಬಗ್ಗೆ ಕೆಲ ಅಭಿಪ್ರಾಯಗಳನ್ನು ಮೂಡಿಸಿಕೊಂಡೇ ಅವರು ಕಾಶಿಯಿಂದ ತಿರುಗಿ ಬಂದರು.

ಹುಬ್ಬಳ್ಳಿಯ ಮೂರುಸಾವಿರ ಮಠದ ಪೀಠವನ್ನು ಏರಿದ ಹದಿನಾಲ್ಕೇ ವರ್ಷಗಳಲ್ಲಿ ಸ್ವಾಮೀಜಿಯವರ ವಿಚಾರಗಳು ದೊಡ್ಡ ಪ್ರಮಾಣದಲ್ಲಿ ಕೃತಿಗಿಳಿದಿವೆ. ಹದಿನಾಲ್ಕು ವರ್ಷಗಳ ಹಿಂದೆ ಕರ್ನಾಟಕದ ಒಂದು ಮುಖ್ಯ ಧಾರ್ಮಿಕ ಪಂಗಡದ ಪೀಠವಾಗಿದ್ದ ಈ ಮಠ ಈಗ ಇಡೀ ಹಿಂದೂ ಸಮಾಜದ ಒಂದು ದೃಷ್ಟಿ ಕೇಂದ್ರವಾಗಿ ರೂಪುಗೊಂಡಿದೆ. ಮಠದ ಸುತ್ತ ಎದ್ದುನಿಂತು ಹಳೆಯ ಹೆಗ್ಗುರುತುಗಳನ್ನೆಲ್ಲ ಮರೆಸಿದ ಹೊಸ ಭವ್ಯ ಕಟ್ಟಡಗಳು ಕೇವಲ ವೈಭವ ಸಂಕೇತವಾಗಿರದೆ ಸ್ವಾಮೀಜಿಯವರ ಅನೇಕ ಆಶೋತ್ತರಗಳಿಗೆ ಆಶ್ರಯವಾದ ಸರಸ್ವತೀ ಮಂದಿರಗಳಾಗಿವೆ. ಮಹಿಳಾ ಕಾಲೇಜು, ಸಂಸ್ಕೃತ ವಿದ್ಯಾಲಯ, ಪುಸ್ತಕ ಭಂಡಾರ, ಧಾರ್ಮಿಕ ಸಾಹಿತ್ಯದ ಮುದ್ರಣ ಪ್ರಕಟನಾಲಯ ಮೊದಲಾದವುಗಳು ಈ ಕಟ್ಟಡಗಳಲ್ಲಿ ಅಡಕಗೊಂಡಿವೆ. ಇದೀಗ ಆಚರಿಸಲ್ಪಟ್ಟ ಅವರ ಪಟ್ಟಾಭಿಷೇಕದ ೧೪ ನೇ ವಾರ್ಷಿಕೋತ್ಸವದ ಒಂಭತ್ತು ದಿನಗಳ ಕಾರ್ಯಕ್ರಮಗಳು— ಸ್ವಮತೀಯ ಮತ್ತು ಸ್ವಮತೀಯ ಸಮಾರಂಭಗಳಲ್ಲದೆ ಸರ್ವಧರ್ಮ ಸಮ್ಮೇಳನ, ಅಖಿಲಕರ್ನಾಟಕ ಪತ್ರಿಕೋದ್ಯೋಗಿ ಸಮ್ಮೇಳನ, ಕವಿ ಸಮ್ಮೇಳನ ಇತ್ಯಾದಿಗಳೂ ಅವುಗಳಿಗೆ ಬಂದ ವಿದ್ವಜ್ಜನ ಮತ್ತು ಜನಸಾಮಾನ್ಯರ ಸಂದಣಿಯೂ ಸ್ವಾಮೀಜಿಯವ ಪ್ರಭಾವವನ್ನೂ ಅವರು ಹಮ್ಮಿಕೊಂಡ ಕಾರ್ಯ ಗಳ ವ್ಯಾಪ್ತಿ ವೈವಿಧ್ಯಗಳನ್ನೂ ಸೂಚಿಸುತ್ತವ ಕೊನೆಯ ದಿನ ನಡೆದ ಲಕ್ಷಾಧಿಕ ಅನ್ನಸಂತರ್ಪ ಅವರಿಗಿರುವ ಬೆಂಬಲಕ್ಕೆ ಹೇಗೋ ಹಾಗೆಯೆ ಸಂಘಟನಾಸಾಮರ್ಥ್ಯಕ್ಕೂ ಸಾಕ್ಷಿಯಾಗಿ " ಭೂತೋ" ಆಗಿ ಹೋಯಿತು— "ನ ಭವಿಷ್ಯತಿ" ಎಂದು ಮಾತ್ರ ಹೇಳಲಾರೆ.

ಸ್ವಾಮೀಜಿ ಹುಟ್ಟಿದ್ದು ಹಳೇ ಮೈಸೂರಿ ಸಸಿವಾಳದ ಒಂದು ಜಂಗಮ ಕುಲದಲ್ಲಿ. ತಮ್ಮ ಜನ್ಮವೇ ಧರ್ಮಸೇವೆಗಾಗಿ ಎಂಬ ಭಾವನ ಸ್ವಾಮೀಜಿಗಿದೆ. ಏಕೆಂದರೆ ಜ್ಞಾನವೈರಾಗ ಸಂಪನ್ನತೆಗೆ ಹೆಸರಾಗಿದ್ದ ಹಾನಗಲ್ಲ ಕುಮಾರ ಸ್ವಾಮಿಗಳು ಸಂಚಾರಾರ್ಥವಾಗಿ ಸಸಿವಾಳಕ್ಕೆ ಆಗಮಿಸಿದ್ದಾಗ ಸ್ವಾಮೀಜಿಯ ತಂದೆ ಮರುಳಸಿದ್ಧಯ್ಯನವರಿಂದ ತಮ್ಮ ಪೀಠಕ್ಕೆ ಉತ್ತರಾಧಿಕಾರಿಯಾಗಿ ಮುಂದೆ ಹುಟ್ಟಲಿರುವ ಅವರ ಪುತ್ರನನ್ನು ಬೇಡಿದ್ದರು. ಕುಮಾರ ಸ್ವಾಮಿಗಳ ಅನುಗ್ರಹದಿಂದಲೇ ಹುಟ್ಟಿದ ವಿಜಯ ಮಹಾಂತೇಶ (ಸ್ವಾಮೀಜಿಯ ಪೂರ್ವಾಶ್ರಮದ ಹೆಸರು)ನನ್ನು ಪುತ್ರವ್ಯಾಮೋಹದಿಂದ ಮಠಕ್ಕೆ ಒಪ್ಪಿಸಲು ಹಿಂದೇಟು ಹೊಡೆಯುತ್ತಿದ್ದ ತಂದೆ ತಾಯಿಗಳಿಗೆ ಮಗನು ಅಕಸ್ಮಾತ್ತಾಗಿ ಕಣ್ಣು ನೋವಿಗೀಡಾದಾಗ ಇದು ದೈವೀ ಸಂಕೇತವೆನಿಸಿತು. ಕೂಡಲೆ ಐದು ವರ್ಷದ ಮಗನನ್ನು ಶಿವಯೋಗಮಂದಿರಕ್ಕೆ ಕರೆತಂದು ಕುಮಾರ ಸ್ವಾಮಿಗಳ ಗದ್ದುಗೆಯ ಮುಂದೆ (ಆಗಲೇ ಕುಮಾರ ಸ್ವಾಮಿಗಳು ಕಾಲವಾಗಿದ್ದರು) ಅರ್ಪಿಸಿದರು. ಕೆಲವೇ ಕಾಲದಲ್ಲಿ ತಂದೆ ತಾಯಿಗಳಿಬ್ಬರೂ ತೀರಿಕೊಂಡರು. ಯತಿದೀಕ್ಷೆಗೆ ತರಬೇತಿ ಹೊಂದಲು ಬಂದ ಶಿಶುವಿಗೆ ಇದ್ದ ಬಿದ್ದ ಸಂಸಾರ ಬಂಧನವೂ ಕಳಚಿಹೋಯಿತು.

ಸ್ವಾಮಿಗಳವರು ದತ್ತರಾದದ್ದು ಪ್ರಾರಂಭದಲ್ಲಿ ಇಲಕಲ್ಲಿನ ಮಠಕ್ಕೆ. ಹಾಗೆಂದೇ ಶಿವಯೋಗ ಮಂದಿರದಲ್ಲಿ ಅವರ ದೀಕ್ಷಾಜೀವನಕ್ಕೆ ತರಬೇತಿ ಪ್ರಾರಂಭವಾದದ್ದು. ಹದಿನಾರು ವರ್ಷಗಳ ವರೆಗೆ ಅವರು ಆ ಅಧ್ಯಾತ್ಮಸಂಸ್ಥೆಯಲ್ಲಿದ್ದರು. ಅಲ್ಲೇ ಅವರ ಭಾವಿಜೀವನದ ಗೊತ್ತು ಗುರಿಗಳು

ರೂಪುಗೊಂಡಿತು. ಅವರು ಮೊದಲು ಚಿತ್ರಗಳನ್ನು ಬರೆಯುವುದರಲ್ಲಿ ಆಸಕ್ತಿ ತೋರಿಸಿದರು. ಆದರೆ ಕ್ಷಿಪ್ರದಲ್ಲೇ ಸಾಹಿತ್ಯ ಮತ್ತು ದರ್ಶನ ಶಾಸ್ತ್ರಗಳತ್ತ ಅವರ ಒಲವು ಹರಿಯಿತು. ಅಲ್ಲಿ ಅವರು "ಸುಕುಮಾರ" ಎಂಬ ಕೈಬರಹದ ಪತ್ರಿಕೆಯನ್ನು ನಡೆಸುತ್ತಿದ್ದರು. ದಿನದ ಬಹಳ ವೇಳೆ ಶಿವಯೋಗಮಂದಿರದ ಗ್ರಂಥಾಲಯದಲ್ಲಿ ಕಳೆಯುತ್ತಿತ್ತು. ಕಾವ್ಯ ಅವರನ್ನು ವಿಶೇಷವಾಗಿ ಆಕರ್ಷಿಸಿತ್ತು. ಕುವೆಂಪು, ಬೇಂದ್ರೆ, ನಿಡುಮಾಮಿಡಿ ಮಠದ ಜ.ಚ.ನಿ. ಇವರ ಕಾವ್ಯ ಮತ್ತು ಲೇಖನಗಳ ಪ್ರಭಾವ ತಮ್ಮ ಮೇಲೆ ಬಹಳ ಆಯಿತೆಂದು ಸ್ವಾಮೀಜಿ ಹೇಳುತ್ತಾರೆ. ತಮ್ಮ ಮಠೀಯ ವ್ಯಾಸಂಗದೊಡನೆ ಲೌಕಿಕ ಸಾಹಿತ್ಯವನ್ನೂ ಅಧ್ಯಯನ ಮಾಡಿದ್ದರಿಂದ ತಮ್ಮ ಮನಸ್ಸು ಒಟ್ಟಾರೆ ಸಮಾಜದ ಸ್ಥಿತಿಗತಿಗಳ ಚಿಂತನೆಗೆ ೧೮-೧೯ ನೇ ವಯಸ್ಸಿನಲ್ಲಿಯೇ ತೊಡಗುವಂತಾಯಿತು ಎಂದು ಸ್ವಾಮಿಗಳು ಹೇಳುತ್ತಾರೆ.

ಶಿವಯೋಗ ಮಂದಿರದಲ್ಲಿ ಕನ್ನಡ, ಹಿಂದೀ, ಸಂಸ್ಕೃತಗಳಲ್ಲಿ ಪ್ರಾವೀಣ್ಯ ಗಳಿಸಿದ ಮೇಲೆ ಸ್ವಾಮೀಜಿಗೆ ತಮ್ಮ ಅಧ್ಯಯನವನ್ನು ಕಾಶಿಯಲ್ಲಿ ಮುಂದುವರಿಸಬೇಕೆಂದು ತೋರಿತು. ಆಗಿನ ಸಂಪ್ರದಾಯಬದ್ಧ ವಾತಾವರಣದಲ್ಲಿ ಇದಕ್ಕೆ ಅಷ್ಟೇನೂ ಸ್ವಾಗತ ಸಿಕ್ಕಲಿಲ್ಲ. ಪರಸಂಪ್ರದಾಯಗಳ ಸಂಪರ್ಕ ಒಳ್ಳೆಯದಲ್ಲ ಎಂದು ಸಂಪ್ರದಾಯಸ್ಥರು ಬಗೆಯುತ್ತಿದ್ದ ಕಾಲವದು. ಆದ್ದರಿಂದ ಕಾಶಿಗೆ ಹೊರಟ ಈ ತರುಣ ಬ್ರಹ್ಮಚಾರಿಗೆ ಆರ್ಥಿಕ ಬೆಂಬಲದ ಆಶ್ವಾಸನೆಯೂ ಖಚಿತವಿರಲಿಲ್ಲ. ಅವರು ಕಾಶಿಯಲ್ಲಿ ಕಳೆದ ಎಂಟು ವರ್ಷಗಳುದ್ದಕ್ಕೂ ಹಣದ ತೊಂದರೆ ಬೆಂಬಿಡಲಿಲ್ಲ. ಅಲ್ಲಿನ ಜಂಗಮವಾಡಿ ಮಠ ಲಿಂಗವಂತ ಮಠವಾದರೂ ಮಹಾಂತೇಶ ದೇವರು ಸ್ವತಂತ್ರವಾಗಿಯೇ ಅಡಿಗೆ ಮಾಡಿಕೊಂಡು ಜೀವಿಸಿದರು. ಇಲಕಲ್ಲಿನ ಭಕ್ತರಿಂದ ಅಷ್ಟಿಷ್ಟು ಸಹಾಯ ಬರುತ್ತಿತ್ತು. ಮೇಲೆ ಒಳ್ಳೆಯ ಛಾತ್ರನೆಂಬುದಕ್ಕಾಗಿ ಸರಕಾರದಿಂದ ಶಿಷ್ಯವೇತನವೂ ಲಭಿಸುತ್ತಿತ್ತು. ಇದರಲ್ಲಿ ಹೆಚ್ಚು ಭಾಗ ಪುಸ್ತಕಗಳಿಗೆ, ತಮಗಿಂತಲೂ ಕಷ್ಟ ಸ್ಥಿತಿಯಲ್ಲಿರುವ ಸಹಪಾಠಿಗಳ ನೆರವಿಗೆ ಹೋಗಿಬಿಡುತ್ತಿತ್ತು.

ವ್ಯಾಸಂಗದ ಸಂಗಡ ಪತ್ರಿಕಾವೃತ್ತಿಯಲ್ಲಿಯೂ ಲೇಖನವ್ಯವಸಾಯದಲ್ಲಿಯೂ ಕವಿತಾರಚನೆಯಲ್ಲಿಯೂ ಅವರು ನಿರತರಾಗಿರುತ್ತಿದ್ದರು. ಶಿವಯೋಗ ಮಂದಿರದಲ್ಲಿದ್ದಾಗಲೇ ಅವರು "ಪಥಿಕ" ಎಂಬ ಕವನ ಸಂಗ್ರಹ ಪ್ರಕಟಿಸಿದ್ದರು. "ಶರಣ ಸಾಹಿತ್ಯ," "ಕರ್ಮವೀರ," "ಜೀವನ," "ಜಯ ಕರ್ನಾಟಕ" ಮೊದಲಾದ ಪ್ರಮುಖ ಪತ್ರಿಕೆಗಳಲ್ಲಿ ಅವರ ಕವನ, ಲೇಖನಗಳು ಪ್ರಕಟವಾಗುತ್ತಲೇ ಇದ್ದು ಕಾಶಿಯಲ್ಲಿಯೂ ಅದು ಮುಂದುವರಿಯಿತು. ಕಾಶಿಯಲ್ಲಿದ್ದಾಗ ಅಲ್ಲಿನ ಹಿಂದೀ ದೈನಿಕ "ಆಜ್"ನಲ್ಲಿ ಅವರ ಹಿಂದೀ ಲೇಖನಗಳು ಬಂದವು

ಕಾಶಿವಾಸ ಕಾಲದಲ್ಲಿ ಹಿಂದೂ ವಿಶ್ವವಿದ್ಯಾಲಯದ "ವೇದಾಂತಾಚಾರ್ಯ"ವನ್ನಲ್ಲದೆ ಕಲಕತ್ತೆಯ "ಕಾವ್ಯತೀರ್ಥ", ಢಾಕಾದ "ಸಾಹಿತ್ಯರತ್ನ" ಪದವಿಗಳನ್ನೂ ಪಡೆದು ಇಂಗ್ಲೀಷಿನ ಪರಿಚಯಕ್ಕಾಗಿ ಹಿಂದೂ ವಿಶ್ವವಿದ್ಯಾಲಯ ಹಾಗು ಅಲಹಾಬಾದ ವಿಶ್ವವಿದ್ಯಾಲಯದಲ್ಲಿ ಅಧ್ಯಯನ ಮಾಡಿದರು. ಸಂಗಡಲೇ ಅವರ "ಪೂದೋಟ" "ಪೂಮಾಲೆ" ಕವನಸಂಗ್ರಹಗಳೂ ಹೊರಬಂದವು.

೧೯೫೫ ರಲ್ಲೇ ಇಲಕಲ್ಲ ಮಠದ ಅಧಿಕೃತ ಉತ್ತರಾಧಿಕಾರಿಗಳಾಗಿದ್ದರೂ ಸ್ವಾಮೀಜಿ ಇನ್ನೂ ಕಾಶಿಯಲ್ಲಿ ವ್ಯಾಸಂಗ ಮುಂದುವರಿಸಿದ್ದರು. ೧೯೫೭ ರಲ್ಲಿ ಅವರು ಕನಸಿನಲ್ಲಿಯೂ ನೆನೆಸಿರದ ರೀತಿಯಲ್ಲಿ ಅವರಿಗೆ ಹುಬ್ಬಳ್ಳಿಯ ಮೂರುಸಾವಿರಮಠದ ಜಗದ್ಗುರು ಶ್ರೀ ಗುರುಸಿದ್ಧ ರಾಜಯೋಗೀಂದ್ರ ಸ್ವಾಮಿಗಳಿಂದ ತಮ್ಮ ಮಠದ ಪಟ್ಟವನ್ನು ಸ್ವೀಕರಿಸಬೇಕೆಂದು ಕರೆ ಬಂತು. ಉತ್ತರ ಕರ್ನಾಟಕದ ಮುಖ್ಯ ಪೀಠಗಳಲ್ಲೊಂದೆನಿಸಿದ ಮೂರುಸಾವಿರ ಮಠದ ವೃದ್ಧ ಸ್ವಾಮಿಗಳು ಸಾಕಷ್ಟು ಖಾಸಗಿ ಚೌಕಶಿಗಳನ್ನು, ಮಾಡಿ ಮೊದಲೇ ಇನ್ನೊಂದು ಮಠಕ್ಕೆ ದತ್ತರಾಗಿದ್ದರೂ ಇವರೇ ತಮ್ಮ ಉತ್ತರಾಧಿಕಾರಕ್ಕೆ ತಕ್ಕವರೆಂದು ನಿರ್ಣಯಿಸಿದ್ದರು. ಇಲಕಲ್ಲ ಮಠದ ಶಿಷ್ಯವರ್ಗಕ್ಕೆ ವಿಜಯ ಮಹಾಂತ ದೇವರನ್ನು ಕಳೆದುಕೊಳ್ಳಲು ನೋವಾದರೂ ಮೂರುಸಾವಿರ ಮಠದಲ್ಲಿ ತಮ್ಮ ಸೇವಾಕಾಂಕ್ಷೆಯನ್ನು

ಹೆಚ್ಚು ವಿಸ್ತಾರವಾಗಿ ಆಚರಣೆಗೆ ತರಲು ಅವಕಾಶವಿರುವುದನ್ನು ಗಮನಿಸಿ ಈ ಸೂಚನೆಯನ್ನು ಸ್ವಾಮೀಜಿ ಸ್ವೀಕರಿಸಿದರು. ಹೀಗೆ ೧೯೫೮ ಮೇ ೧ ರಂದು ಶ್ರೀ ನಿರಂಜನ ಜಗದ್ಗುರು ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳೆಂಬ ಅಭಿಧಾನದಿಂದ ಅವರು ಪಟ್ಟವೇರಿದರು.

ಈ ಮಾತಿಗೆ ಇನ್ನೂ ಹದಿನೈದು ವರ್ಷಗಳಾಗಿಲ್ಲ. ಪಟ್ಟಸ್ವೀಕಾರ ಮಾಡಿದಾಗ ಇನ್ನೂ ಮೂವತ್ತರ ತರಳ ಎನ್ನಬೇಕಾದ ವಯಸ್ಸಿನಲ್ಲಿದ್ದವರು ಅವರು. ಒಂದು ದೊಡ್ಡ ಧರ್ಮಪೀಠದ ಆಡಳಿತ ಸೂತ್ರಗಳನ್ನೂ ಸೂಕ್ಷ್ಮಗಳನ್ನೂ ಅವಗತಮಾಡಿಕೊಂಡು ಇಷ್ಟು ಅಲ್ಪಾವಧಿಯಲ್ಲಿ ಅವರು ಅದನ್ನು ಬೆಳಸಿದ ರೀತಿ ಅಸಾಧಾರಣ ಕೌಶಲವನ್ನೇ ತೋರಿಸುತ್ತದೆ. ಮಠದ ಸುತ್ತ ಎದ್ದು ನಿಂತ ಕಟ್ಟಡಗಳ ಮೂಲ್ಯ ಹತ್ತು ಹದಿನೈದು ಲಕ್ಷ ಮೀರಬಹುದು. ಇಲ್ಲಿ ಹುಡುಗರ ಪ್ರಾಥಮಿಕಶಾಲೆಗಳು, ಪ್ರಾಥಮಿಕದಿಂದ ಕಾಲೇಜ್ ವರೆಗಿನ ಶಿಕ್ಷಣ ಕೊಡುವ ಮಹಿಳಾ ವಿದ್ಯಾಲಯಗಳು, ಸಂಸ್ಕೃತ ಶಾಲೆ, ಜ್ಯೋತಿಷ ಶಾಲೆ, ವಿದ್ಯಾರ್ಥಿ ನಿಲಯ, ತಾಳವಾಲೆಯ ಗ್ರಂಥ ಭಾಂಡಾರ, ಸಂಶೋಧನ ಸಂಸ್ಥೆ, ಸ್ವಾಮೀಜಿಯೇ ಪ್ರಾರಂಭಿಸಿದ "ಪರಂಜ್ಯೋತಿ" ಧಾರ್ಮಿಕ ಪತ್ರಿಕಾ ಕಾರ್ಯಾಲಯ, ಅಲ್ಲದೆ ಕಲ್ಯಾಣ ಮಂಟಪ, ಗೋಶಾಲೆ, ಅತಿಥಿಶಾಲೆ ಮತ್ತು ಇನ್ನೂ ಬಗೆಬಗೆಯ ಸಂಸ್ಥೆಗಳನ್ನು ಸ್ವಾಮೀಜಿ ನಡೆಸುತ್ತಿದ್ದಾರೆ. ಅವರ ಗುರುಸಿದ್ಧೇಶ್ವರ ಗ್ರಂಥಮಾಲೆಯಿಂದ ಅನೇಕ ಸಂಸ್ಕೃತ, ಕನ್ನಡ, ವೈದಿಕ, ಲೌಕಿಕ ಗ್ರಂಥಗಳು ಹೊರಬಿದ್ದಿವೆ. ಈಚೆಗೆ ನಡೆದ ದ್ವಾದಶ ವಾರ್ಷಿಕದ ಸಮಾರಂಭ ಕಾಲದಲ್ಲಿ ಹೆಬ್ಬೊತ್ತಿಗೆಗಳ ಒಂದು ರಾಶಿಯೇ ಪ್ರಕಟವಾಯಿತು. ಇದಲ್ಲದೆ ಘಟಪ್ರಭೆಯ ಆರೋಗ್ಯಧಾಮ, ಶಿವಯೋಗಮಂದಿರಗಳಂಥ ಹೊರಗಿನ ಸಂಸ್ಥೆಗಳ ಸಂಗಡವೂ ಅವರ ಸಂಪರ್ಕವಿದೆ. ಲಿಂಗವಂತ ಸಂಪ್ರದಾಯದವುಗಳಂತೂ ಆಯಿತು, ಇತರ ಸಂಪ್ರದಾಯಗಳ ಮಠಾಧಿಪತಿಗಳ ಸಂಗಡವೂ ಸ್ವಾಮೀಜಿಯವರ ಸೌಹಾರ್ದದ ಸಂಬಂಧ ಇಟ್ಟುಕೊಂಡು ಬಂದಿದ್ದಾರೆ.

ಸ್ವಾಮೀಜಿಯವರ ವ್ಯಕ್ತಿತ್ವವನ್ನು ನಾನು ಸೂಕ್ಷ್ಮವಾಗಿ ಗಮನಿಸಿದ್ದೇನೆ. ಅವರ ಭಸ್ಮಭೂಷಿತ ಮುಖದ ಮೇಲೆ ಸದಾ ಮುಗುಳ್ನಗು ನಲಿಯುತ್ತಿರುತ್ತದೆ. ಜೀವನದ ಅರ್ಧಾಂಶವನ್ನು ವ್ಯಾಸಂಗದಲ್ಲೇ ಕಳೆದವರಾದರೂ ತಮ್ಮ ಪಾಂಡಿತ್ಯವನ್ನು ಇತರರ ಮೇಲೆ ಹೇರಿ ಅವರನ್ನು ಅಪ್ರತಿಭರಾಗಿ ಮಾಡುವ ಚಪಲ ಅವರಿಗಿಲ್ಲ. ಖಾಸಗಿ ಸಂಭಾಷಣೆಗಳಲ್ಲಿ ಅವರು ಹೇಳುವುದಕ್ಕಿಂತ ಕೇಳುವುದೇ ಹೆಚ್ಚು. ನಿಮ್ಮ ಮುಂದೆ ವಿಚಾರಗಳ ಚಟಚಟಿಸುವ ಕಿಡಿಗಳನ್ನು ಹಾರಿಸಿ ತೃಪ್ತಿಪಡುವವರು ಅವರಲ್ಲ. ಅವರ ವಿಚಾರಗಳು ಕೃತಿಗಳಲ್ಲೆ ಪ್ರಕಟವಾಗುತ್ತವೆ. ಆದರೂ ಅವರು ಹೊರಗೆ ಕಾಣಿಸುವುದಕ್ಕಿಂತ ಹೆಚ್ಚು ಜಾಗರೂಕರಾಗಿದ್ದಾರೆ. ಅವರು ಪಟ್ಟ ಸ್ವೀಕರಿಸಿದ ಕೆಲವೇ ದಿನಗಳಲ್ಲಿ ಕರೆದ ಒಂದು ಪತ್ರಿಕಾ ಪರಿಷತ್ತಿನ ನೆನಪು ನನಗಿದೆ. ಪತ್ರಿಕಾಕರ್ತನ ಸ್ವಾಭಾವಿಕ ಧಾರ್ಷ್ಟ್ಯದಿಂದ ನಾನು ಅವರನ್ನು ಹಿಂದೀ ಭಾಷೆಯ ಸ್ಥಾನ (ಅವರು ಉತ್ತರ ಭಾರತದಲ್ಲಿ ಬಹುಕಾಲ ಇದ್ದವರೆಂಬ ಕಾರಣದಿಂದ) ಮೊದಲಾದ ವಿವಾದಾಸ್ಪದ ವಿಷಯಗಳಲ್ಲಿ ಪ್ರಶ್ನೆಗಳಿಂದ ಪೀಡಿಸಿದೆ. ಆದರೆ ರಾಜಕೀಯ ಛಾಯೆಯುಳ್ಳ ವಿಷಯಗಳಲ್ಲಿ ಅವರನ್ನು ತೊಡಕಿಸಿಹಾಕಲು ನನ್ನಿಂದಾಗಲಿಲ್ಲ. ಆದರ್ಶವಾದಿಗಳ ಒಂದು ಚಪಲ ಕಂಡ ಕಂಡ ವಿಷಯಗಳಲ್ಲಿ ತಮ್ಮ ಅಭಿಪ್ರಾಯ ಹೇಳುವುದು. ಸ್ವಾಮೀಜಿ ಆ ಚಪಲದಿಂದ ದೂರವಾಗಿದ್ದಾರೆ.

ಸ್ವಾಮೀಜಿ ಬಾಹ್ಯ ಜಗತ್ತಿನ ವಿಷಯದಲ್ಲಿ ತುಂಬಾ ಪ್ರಜ್ಞಾವಂತರಾಗಿದ್ದಾರೆ. ನಮ್ಮ ಸಮಾಜಕ್ಕೆ ಇಂದು ಬೇಕಾದದ್ದೇನು ಎಂದು ಅವರು ಬಲ್ಲರು. ಪಂಥ-ಒಳಪಂಥಗಳಲ್ಲಿ ಭಾರತೀಯ ಧಾರ್ಮಿಕ ಸಮಾಜ ಹರಿಹಂಚಾಗಿದೆ. ಆಯಾ ಸಂಪ್ರದಾಯಗಳ ನೀತಿ ನಡಾವಳಿಗಳ ನಿರ್ದುಷ್ಟ ಆಚರಣೆಗಿಂತಲೂ ತಮ್ಮ ತಮ್ಮ ಶ್ರೇಷ್ಠತ್ವವನ್ನು ಪ್ರತಿಷ್ಠಿಸುವುದರಲ್ಲೇ ಮಠಗಳು ಹೆಚ್ಚು ಆಸಕ್ತಿ ತಾಳಿರುವುದು ಒಂದೇ ತತ್ವ ಪ್ರಣಾಲಿಯಲ್ಲಿ ಕೂಡ ಅನವಶ್ಯಕ ಭಿನ್ನತೆಯನ್ನು ಹುಟ್ಟಿಸುತ್ತಿದೆಯೆಂದು ಅವರು ಪರಿತಪಿಸುತ್ತಾರೆ. ಇದು ಹೀಗೇ ಸಾಗಿದರೆ ಜನರು ಧರ್ಮಪೀಠಗಳನ್ನು ಇದ್ದಲ್ಲೇ ಬಿಟ್ಟು ಮುಂದೆ ಸಾಗುತ್ತಾರೆ. ಮಠಗಳು ಯಾವಾ

ಗಲೂ ಪರಿಗ್ರಹವ ಸ್ಥಾನದಲ್ಲೇ ಇರುವುದು ಸಾಧ್ಯವಿಲ್ಲ. ಕೇವಲ ಆಧ್ಯಾತ್ಮಿಕ ಶಾಂತಿಯನ್ನು ಜನರಿಗೆ ಒದಗಿಸುವುದರಿಂದ ಇಂದು ಮಠಗಳು ತೃಪ್ತವಾಗಕೂಡದು. ಅವು ಜನರ ಬದುಕಿನ ನಿತ್ಯದ ಕಷ್ಟಕಾರ್ಪಣ್ಯಗಳ ಉಪಶಮನದಲ್ಲಿಯೂ ಸಕ್ರಿಯವಾಗಿ ಆಸಕ್ತವಾಗಬೇಕು. ಬದುಕನ್ನು ಕೇವಲ ಲೌಕಿಕ, ಕೇವಲ ಆಧ್ಯಾತ್ಮಿಕನೆಂದು ವಿಭಜಿಸಲು ಬಾರದು.

ಸ್ವಾಮೀಜಿ ವಿಶ್ವಶಾಂತಿ ವಿಶ್ವಸೌಹಾರ್ದಗಳ ಪ್ರತಿಪಾದಕರು. ದಿಲ್ಲಿಯಲ್ಲಿ ನಡೆದ ವಿಶ್ವಶಾಂತಿ ಸಮ್ಮೇಳನಕ್ಕೂ ಜಪಾನಿನಲ್ಲಿ ಸೇರಿದ ವಿಶ್ವಧರ್ಮ ಶಾಂತಿ ಸಮ್ಮೇಳನಕ್ಕೂ ಆಮಂತ್ರಿಸಲ್ಪಟ್ಟು ಯುದ್ಧಭಯದ ನೈಜತೆಯನ್ನೂ ಅದನ್ನು ತಡೆಯುವ ಉಪಾಯಗಳನ್ನೂ ಅವರು ಪ್ರತಿಪಾದಿಸಿದರು. ಧರ್ಮಗಳು ಶಾಂತಿಕಾರ್ಯದಲ್ಲಿ ಹೆಚ್ಚಿನ ಪಾತ್ರವಹಿಸಬೇಕು, ಇದಕ್ಕಾಗಿ ಜಾಗತಿಕ ಧರ್ಮಪಾರ್ಲಿಮೆಂಟನ್ನು ಸ್ಥಾಪಿಸಬೇಕೆಂದು ಅವರು ಮಾಡಿದ ಸೂಚನೆಗೆ ಹೃತ್ಪೂರ್ವಕ ಸ್ವಾಗತ ಸಿಕ್ಕಿತು.

ಸ್ವಾಮೀಜಿ ಧರ್ಮಗಳ ಪರಸ್ಪರ ಸೌಹಾರ್ದವನ್ನು ಪ್ರತಿಪಾದಿಸುತ್ತಾರೆ. ಹಿಂದೂ ಧರ್ಮವನ್ನು ಉಳಿಸುವುದರಲ್ಲಿ ಅವರಿಗೆ ತುಂಬಾ ಆಸಕ್ತಿ ಇದೆ. ವಿಶ್ವ ಹಿಂದೂ ಪರಿಷತ್ತಿನ ಕಾರ್ಯ ಕಲಾಪಗಳಲ್ಲಿ ಅವರು ಸಹಕರಿಸುತ್ತಿದ್ದಾರೆ. ಒಂದು ರೀತಿಯಿಂದ ಹಿಂದೂ ಧರ್ಮ ಧಾರ್ಮಿಕ ಸಹನೆಯಲ್ಲಿ ಒಂದು ಮೇಲ್ಪಂಕ್ತಿ ಹಾಕಿದೆ. ಅದು ಬಹುವಿಧ ಸಂಪ್ರದಾಯಗಳಿಗೆ ಅವಕಾಶ ಕೊಟ್ಟಿದೆ. ನಮ್ಮ ನಮ್ಮ ಮತ ಸಂಪ್ರದಾಯಗಳು ಏನೇ ಇದ್ದರೂ ಅವುಗಳನ್ನು ನಿಖರವಾಗಿ ಅನುಸರಿಸಬೇಕು. ತಮ್ಮ ತಮ್ಮ ಧರ್ಮವನ್ನು ತಪ್ಪದೆ ಆಚರಿಸುವವರ ಮೇಲೆ ಇತರರ ಗೌರವ ಹೆಚ್ಚುತ್ತದೆಯೇ ಹೊರತು ಕುಗ್ಗುವುದಿಲ್ಲ. ಆದರೆ ಅದು ನಮ್ಮ ವೈಯಕ್ತಿಕ ಪೂಜಾಗ್ರಹಕ್ಕೆ ಸೀಮಿತವಾಗಿರಬೇಕು. ಧರ್ಮ ಜಾಗೃತಿಯಲ್ಲಿಯೂ ಮಾನವೀಯ ಹಿತಸಾಧನೆಯಲ್ಲಿಯೂ ಎಲ್ಲ ಮತಧರ್ಮಗಳು ಒಂದಾಗಬೇಕು—ಇದು ಅವರ ಮನೀಷೆ.

"ಸ್ವಾಮೀಜಿ, ನಿಮ್ಮ ಈ ವ್ಯಾಪಕ ಕಾರ್ಯಗಳಿಗೆ ಧನಸಹಾಯ ಎಲ್ಲಿಂದ ಒದಗುತ್ತದೆ ?" ಎಂದು ಕೇಳಿದರೆ ಅವರು, "ನಿಮ್ಮಲ್ಲಿ ಮಾಡತಕ್ಕ ಕಾರ್ಯದ ಸರಿಯಾದ ಪೂರ್ವಕಲ್ಪನೆ ಇದ್ದರೆ ಮತ್ತು ಅದರಲ್ಲಿ ನೀವು ಪ್ರಾಮಾಣಿಕವಾಗಿ ಪ್ರವೃತ್ತರಾಗಿದ್ದೀರಿ ಎಂದು ಮನವರಿಕೆಯಾದರೆ ಜನರಿಂದ ಧನಸಹಾಯವನ್ನು ಪಡೆಯುವುದು ಅಷ್ಟು ಕಷ್ಟವಲ್ಲವೆಂದು ನನ್ನ ಅನುಭವ," ಎಂದು ಹೇಳುತ್ತಾರೆ.

ಜಗದ್ಗುರುಗಳ ಮನಸ್ಸಿನಲ್ಲಿ ಇನ್ನೂ ವಿಸ್ತಾರವಾದ ಯೋಜನೆಗಳಿವೆ. ತಮ್ಮ ಕಾರ್ಯಕ್ಷೇತ್ರದ ವಿಸ್ತರಣೆಗಾಗಿ ಕಾಶಿ, ಕಲಕತ್ತೆ ಮೊದಲಾದ ಉತ್ತರ ಭಾರತದ ಕೇಂದ್ರಗಳಲ್ಲಿ ಮಠದ ಶಾಖೆಗಳನ್ನು ತೆರೆಯಬೇಕು, ವಿದೇಶಗಳಲ್ಲಿಯೂ ಪ್ರಚಾರವಾಗಬೇಕು ಎಂಬ ಹಂಬಲ ಅವರದು.

"ಆದರೆ ನಮ್ಮ ಒಳ ಆಸಕ್ತಿಯ ದೃಷ್ಟಿಯಿಂದ ಈ ಕಟ್ಟಡಗಳು, ಈ ಆಡಳಿತ ಕಾರ್ಯ ಇವೆಲ್ಲ 'ಲೌಕಿಕ.' ಇದರಿಂದ ಆದಷ್ಟು ಬೇಗ ಪಾರಾಗಿ ಕೇವಲ ಸಾಹಿತ್ಯ ಮತ್ತು ಧರ್ಮ ಗ್ರಂಥಗಳ ಅಧ್ಯಯನದಲ್ಲೇ ಮಗ್ನನಾಗಬೇಕೆಂಬ ಹಂಬಲ ಒಮ್ಮೊಮ್ಮೆ ತೀವ್ರವಾಗುತ್ತದೆ," ಎಂದು ಸ್ವಾಮೀಜಿ ಹೇಳುತ್ತಾರೆ. ಆದರೆ ನಾನು ಕಾಣುವ ಮಟ್ಟಿಗೆ ಅವರು ಪ್ರಾಚೇತಸನಾಗಿ ವಲ್ಮೀಕದೊಳಗೆ ಉಮುಗಿಕೊಳ್ಳಬೇಕೆಂದು ಎಷ್ಟು ಹಂಬಲಿಸಿದರೂ ಜನ ಅವರನ್ನು ಬಹುಕಾಲ ಹುತ್ತದೊಳಗೆ ಉಳಿಯಗೊಡುವಂತಿಲ್ಲ. ವಿಷಯ ಇಷ್ಟು: ಸ್ವಾಮೀಜಿ ಜನಗಳನ್ನು ಹಚ್ಚಿಕೊಳ್ಳುವವರು; ಹಚ್ಚಿಕೊಳ್ಳುವವರಿಗೆ ಅಂಟಿಕೊಳ್ಳುವುದು ಮಕ್ಕಳ ಮತ್ತು ದೊಡ್ಡ ಮಕ್ಕಳಾದ ಜನಸಾಮಾನ್ಯರ ಸ್ವಭಾವ. ▲




ಯಾರು ಎಷ್ಟೋ ದಡ್ಡನಾಗಿರಲಿ, ಒಂದಲ್ಲ. ಒಂದು ಕೆಲಸವನ್ನು ಬಹಳ ಚೆನ್ನಾಗಿ ಮಾಡಲು ಸಮರ್ಥನಾಗಿರುತ್ತಾನೆ.

— ಸ್ಯಾಮ್ಯುಯೆಲ್ ವಾರೆನ್

೧೦೮-೧

ಆ ಮಹಾಯೋಗಿಯ
ಜನ್ಮಶತಾಬ್ದಿ ವರ್ಷವಿದು



ಶ್ರೀ ಅರವಿಂದರು

ಮುರಲೀಧರ

ಶ್ರೀ ಅರವಿಂದ ಯೋಗಿಗಳ ನೂರನೆಯ ಜನ್ಮೋತ್ಸವ ಈ ವರ್ಷ ಆಚರಿಸಲ್ಪಡುತ್ತಿದೆ. ಅವರ 'ದರ್ಶನ'ವನ್ನು ಮಾನವ ಕುಲಕ್ಕೆ ವಿವರಿಸುವುದಕ್ಕೆ ಈ ಸಂದರ್ಭವನ್ನು ಅವರ ಶಿಷ್ಯರು ಉಪಯೋಗಿಸಬೇಕೆಂದಿದ್ದಾರೆ.

ಅರವಿಂದರ ದರ್ಶನ ನಿಜವಾಗಿಯೂ ಈ ಶತಮಾನದಲ್ಲಿ ಅಸಾಧಾರಣವಾದದ್ದು. ಮಾನವನ ಅಂತಿಮ ಭವಿತವ್ಯ ದಿವ್ಯವಾದದ್ದೆಂದು ಅವರು ಹೇಳುತ್ತಾರೆ. ಆದರೆ ಈ ಭವಿತವ್ಯವನ್ನು ಗುರುತಿಸಲಾರದೆ ಮನುಷ್ಯ ಇನ್ನೂ ತನ್ನ ಶರೀರದಿಂದ, ಬುದ್ಧಿಯಿಂದ ಪ್ರೇರಿಸಲ್ಪಟ್ಟವನಾಗಿ ಅಡವಿ ಬಿದ್ದಂತಾಗಿದ್ದಾನೆ. ಆದ್ದರಿಂದಲೇ ಈ ಎಲ್ಲ ಅನವಶ್ಯಕ ಜಂಜಟ, ಹಿಂಸೆ, ದ್ವೇಷಗಳು. ದಿವ್ಯ ಜೀವನ ಸಿದ್ಧಿಯಿಂದ ಮನುಷ್ಯಕುಲವೆಲ್ಲ ಒಂದಾಗಿ ಮೇಲೇರುವ ಭರವಸೆಯನ್ನು ಶ್ರೀ ಅರವಿಂದರು ಕೊಡುತ್ತಾರೆ. ಇದು ಮನುಷ್ಯಕುಲದ ಅಂತಿಮ ಭವಿತವ್ಯ. ಇದು ದೈವೇಚ್ಛೆ.

ಅರವಿಂದರ ಜೀವನವನ್ನು ನೋಡಿದರೆ ಅದೇ ಒಂದು ದೈವೇಚ್ಛೆಯಾಗಿ ಗೋಚರಿಸುತ್ತದೆ. ಅಧ್ಯಾತ್ಮಜೀವಿಯಾಗುವುದಕ್ಕೆ, ತಪ್ತಜೀವನಕ್ಕೆ ಅವರನ್ನು ತರಬೇತಿಗೊಳಿಸಿರಲಿಲ್ಲ ೧೮೭೨ ಅಗಸ್ಟ್ ೧೫ ರಂದು ಅವರ ಜನ್ಮ ಬಂಗಾಲದಲ್ಲಿ ಆಯಿತು. ಅವರ ತಂದೆ ಡಾ. ಕೃಷ್ಣಧನ ಘೋಷರು ಭಾರತದ ಬಗ್ಗೆ ಅಭಿಮಾನದಲ್ಲಿ ಕೊರತೆಯುಳ್ಳವರಲ್ಲದಿದ್ದರೂ ಈ ದೇಶದ ದುರ್ಗತಿಗೆ ಇಲ್ಲಿನ ಕಂದಾಚಾರದ ಸಂಸ್ಕೃತಿಯೇ ಕಾರಣವೆಂದು ನೆರೆ ನಂಬಿದವರು. ತಮ್ಮ ಮೂವರು ಮಕ್ಕಳು ಭಾರತೀಯ ಭಾಷೆ, ಸಂಸ್ಕೃತಿಗಳ ಸಂಪರ್ಕದಲ್ಲೇ ಬಾರದಂತೆ ಬೆಳೆಯಬೇಕೆಂದು ಹಟ ತೊಟ್ಟು ಅವರು ಮಕ್ಕಳನ್ನು ಪಕ್ಕಾ ಬಿಳೀ



ಸಾಹೇಬರೇ ಕಲಿಯುವ ಶಾಲೆಗಳಿಗೆ ಹಾಕಿದರು. ಮುಂದೆ ಅವರನ್ನು ಇಂಗ್ಲಂಡಿಗೇ ಸಾಗಿಸಿ ಅಲ್ಲಿಯೂ ಭಾರತೀಯರು ಕಣ್ಣಿಗೂ ಬೀಳದಂತೆ ವ್ಯವಸ್ಥೆ ಮಾಡಿ ಆಂಗ್ಲ ದಂಪತಿಗಳ ಸಾಕಣೆಯಲ್ಲಿಟ್ಟರು. ಐ. ಸಿ. ಎಸ್. ಆಗಿ ತಮ್ಮ ಮಗ ಅರವಿಂದ ಪಕ್ಕಾ ಸಾಹೇಬನಾಗಿ ಈ ದೇಶದ ನಿಸ್ಕಾರಕ್ಕೆ ಒಂದು ಮಾದರಿಯಾಗಬೇಕೆಂದು ತಂದೆ ಘೋಷರ ಮನೀಷೆಯಾಗಿತ್ತು.

ತಾಯಿಯಾದರೋ ಸಾಹಿತ್ಯ ಕಲೆಗಳಲ್ಲಿ ಪ್ರತಿಭಾಶಾಲಿನಿಯಾದರೂ ವಂಶ ಪಾರಂಪರ್ಯವಾಗಿ ಬಂದ ಹಿಸ್ಟೀರಿಯಾ ರೋಗಕ್ಕೆ ತುತ್ತಾದವರು. ಒಮ್ಮೊಮ್ಮೆಯಂತೂ ರೋಗ ಉಲ್ಬಣಿಸಿ ಅವರು ಅತ್ಯಂತ ಹಿಂಸ್ರರಾಗಿಬಿಡುತ್ತಿದ್ದರು.

ಇಂಥಾ ದಂಪತಿಗಳ ಎರಡನೇ ಮಗನಾಗಿ ಜಗದ್ವಿಭೂತಿಯೊಂದು ಜನಿಸಿದ್ದು ಸೋಜಿಗವಲ್ಲದೆ ಮತ್ತೇನು! ಇಂಗ್ಲಂಡಿನಲ್ಲಿ ಅರವಿಂದರು ಪ್ರಚಂಡ ಬುದ್ಧಿಶಾಲಿ ವಿದ್ಯಾರ್ಥಿಯಾಗಿದ್ದರು. ಇಂಗ್ಲೀಷ್, ಫ್ರೆಂಚ್ ಅಲ್ಲದೆ ಅಭಿಜಾತ ಭಾಷೆಗಳಾದ ಗ್ರೀಕ್, ಲ್ಯಾಟಿನ್‌ಗಳಲ್ಲಿಯೂ ಬರೆಯುವಷ್ಟು ಪ್ರಭುತ್ವವನ್ನು ಅವರು ಅಲ್ಪಾವಧಿಯಲ್ಲಿ ಸಂಪಾದಿಸಿದರು. ಕೇಂಬ್ರಿಜ್ಜಿನಲ್ಲಿ ಟ್ರೈಪಾಸ್ ಆದರು.

ಆದರೆ ಅವರು ಐ. ಸಿ. ಎಸ್. ಆಗುವಲ್ಲಿ ಏನೂ ಆಸಕ್ತಿ ತೋರಿಸಲಿಲ್ಲ. ಕುದುರೆ ಸವಾರಿಯಲ್ಲಿ ಅನುತ್ತೀರ್ಣರಾಗಿ ಬೇಕೆಂದೇ ಐ. ಸಿ. ಎಸ್. ಸಾಹೇಬಿಕೆಯಿಂದ ತಪ್ಪಿಸಿಕೊಂಡಂತೆ ಇತ್ತು. ಏಕೆಂದರೆ ಆಗಲೇ ಅವರ ಮನಸ್ಸು ತಮ್ಮ ದೇಶದ ದುರ್ದೈವ ಮತ್ತು ಅದರ ನಿವೃತ್ತಿಯ ಕಡೆಗೆ ತಿರುಗತೊಡಗಿತ್ತು. ಐಹಿಕ ಸುಖ ಸೌಕರ್ಯಗಳ ಕಡೆಗೆ ಅವರ ಗಮನವೇ ಇದ್ದಿಲ್ಲ. ಕೃಷ್ಣಧನ ಘೋಷರು ಹಣ ಕಳಿಸುವುದು ತಡವಾಗಿ ಅವರು ಎಷ್ಟೋ ವೇಳೆ ಕಷ್ಟಪಡಬೇಕಾಗುತ್ತಿತ್ತು; ಆದರೆ ಅವರು ವಿಚಲಿತರಾಗಿದ್ದೇ ಇಲ್ಲ.

೧೮೯೩ರಲ್ಲಿ ಶ್ರೀ ಅರವಿಂದರು ಭಾರತಕ್ಕೆ ಮರಳಿದರು. ಅವರ ತಂದೆ ಆಗಲೇ ಮೃತರಾಗಿದ್ದರು. ತಾಯಿಯ ಉನ್ಮಾದವೆಷ್ಟು ಉಲ್ಬಣಿಸಿತ್ತೆಂದರೆ ಮಗನನ್ನು ಅವರು ಗುರುತು ಹಿಡಿಯಲಿಲ್ಲ. ಆದರೆ ಆಗಲೇ ಭಾರತಮಾತೆ ಅರವಿಂದರ ಮಾತೆಯಾಗಿಬಿಟ್ಟಿದ್ದಳು. ಇಂಗ್ಲಂಡಿನಿಂದ ಈ ದೇಶದಲ್ಲಿಳಿದಾಗಲೇ ಅವರಿಗೊಂದು ಅಪೂರ್ವವಾದ ಅನುಭೂತಿಯಾಗಿತ್ತು. ಬಡೋದೆಯಲ್ಲಿ ನೌಕರಿ ಹಿಡಿದು ಅಲ್ಲಿ ಇಂಗ್ಲೀಷ ಸಾಹಿತ್ಯದ ಪ್ರಾಧ್ಯಾಪಕರಾಗಿ ಕೊನೆಗೆ ಸಹಾಯಕ ಪ್ರಿನ್ಸಿಪಾಲರಾದರು. ಆದರೆ ಅವರ ಗಮನ ಸಂಬಳ, ಬಡತಿ ಇವುಗಳ ಕಡೆ ಇರಲೇ ಇಲ್ಲ. ಅವರು ಅಗಾಧವಾಗಿ ಓದಿದರು. ಈ ದೇಶದ ಯಾವ ಭಾಷೆಯೂ—ಮಾತೃಭಾಷೆ ಬಂಗಾಲಿ ಕೂಡ—ಬಾರದಂತೆ ಅವರ ತಂದೆ ನೋಡಿಕೊಂಡಿದ್ದರಲ್ಲ. ಆದರೆ ಅವರು ಅತ್ಯಂತ ಪ್ರಯತ್ನಪೂರ್ವಕವಾಗಿ ಬಂಗಾಲಿಯನ್ನೂ ಅನಂತರ ಸಂಸ್ಕೃತವನ್ನೂ ಕರತಲಾಮಲಕ ಮಾಡಿಕೊಂಡರು. ಬಂಗಾಲಿಯಲ್ಲಿ ಉತ್ತಮವಾಗಿ ಬರೆಯಬಲ್ಲಷ್ಟು ಶಕ್ತಿ ಪಡೆದರು. ಆದರೂ ಇಂಗ್ಲೀಷನ್ನೇ ಅವರು ತಮ್ಮ ವಿಚಾರದ ಪ್ರಮುಖ ವಾಹನವಾಗಿ ಮಾಡಿಕೊಂಡಿದ್ದು ಕಾಣುತ್ತದೆ.

ಶ್ರೀ ಅರವಿಂದರು ಬಡೋದೆಯಲ್ಲಿರುವಾಗಲೇ ಉಜ್ವಲ ದೇಶಾಭಿಮಾನಿಗಳಾಗಿದ್ದರು. ಆಗಿನ ಹಿರಿಯ ನಾಯಕರಾದ ಲಿಬರಲ್ ಮತವಾದಿ ರಾನಡೆ, ಗೋಖಲೆ ಮೊದಲಾದ ಸೌಮ್ಯ ರಾಜಕೀಯ ಮುಖಂಡರ ಹಾದಿ ಅರವಿಂದರಿಗೆ ಸರಿದೋರಲಿಲ್ಲ. ವಿದೇಶಗಳಲ್ಲಿದ್ದಾಗ ಅವರು ಐರ್ಲಂಡ್ ಮತ್ತು ಇಟೆಲಿಯ ಸ್ವಾತಂತ್ರ್ಯ ಸಂಗ್ರಾಮಗಳ ಉಗ್ರಮಾರ್ಗವನ್ನು ಮೆಚ್ಚಿಕೊಂಡವರಾಗಿದ್ದರು. ಅವರಿಗೆ ಹಿಂಸೆ ಮೆಚ್ಚಿಕೆಯಲ್ಲದಿದ್ದರೂ ಉನ್ನತ ಧ್ಯೇಯ ಸಾಧನೆಗಾಗಿ ಹಿಂಸೆಯನ್ನುಪಯೋಗಿಸುವುದರಲ್ಲಿ ತಪ್ಪೇನೂ ಇಲ್ಲವೆಂದು ಅವರ ಭಾವನೆಯಾಗಿತ್ತು. ಹೀಗೆ ರಾಜಕೀಯದಲ್ಲಿ ಅವರ ಆಸಕ್ತಿ ಬೆಳೆದ ಹಾಗೆ ಬಡೋದೆಯಲ್ಲಿದ್ದ ಸರಕಾರಿ ನೌಕರಿ ತಮಗೆ ಕಾಲ್ತೊಡಕಾಗುವುದನ್ನು ಕಂಡ ಅವರು

ಅದನ್ನು ತೊರೆದು ಬಂಗಾಲಕ್ಕೆ ಮರಳಿದರು. ಕಾಂಗ್ರೆಸ್ಸಿನಲ್ಲಿ ಸೌಮ್ಯ ಉಗ್ರ ಪಂಥಗಳ ನಡುವೆ ನಡೆದಿದ್ದ ಘರ್ಷಣೆಯಲ್ಲಿ ಉಗ್ರ ಪಂಥದ ಪಕ್ಷದಲ್ಲಿ ಹೋರಾಡಿದರು. ಹಿಂಸಾತ್ಮಕ ಕ್ರಾಂತಿಕಾರಿಗಳಿಗೆ ಒಳಗಿಂದೊಳಗೆ ಮಾರ್ಗದರ್ಶನ ಮಾಡಿದ್ದಲ್ಲದೆ ತಮ್ಮ ಪತ್ರಿಕೆಯಲ್ಲಿ ಬಹಿರಂಗವಾಗಿ ಸರಕಾರವನ್ನು ಕಠೋರ ಟೀಕೆಗೊಳಪಡಿಸಿದರು.

ಹಿಂಸಾತ್ಮಕ ಚಟುವಟಿಕೆಗಳಿಗೆ ಅವರ ಸಂಬಂಧ ಜೋಡಿಸಿ ಸರಕಾರ ಅವರನ್ನು ಬಂಧಿಸಿತು. ಆದರೆ ಕೋರ್ಟಿನಲ್ಲಿ ಕೇಸು ನಿಲ್ಲದೆ ಅವರ ಬಿಡುಗಡೆಯಾಯಿತು. ಆದರೆ ಆಗಲೆ ಅವರು ಹನ್ನೆರಡು ತಿಂಗಳು ಸೆರೆಮನೆಯನ್ನು ಅನುಭವಿಸಿಯಾಗಿತ್ತು. ೧೯೦೯ ರಲ್ಲಿ ಬಿಡುಗಡೆ ಹೊಂದಿದ ಮೇಲೆ ಶ್ರೀ ಅರವಿಂದರು ಕೆಲಕಾಲ 'ಕರ್ಮಯೋಗಿ' ಎಂಬ ಪತ್ರಿಕೆ ನಡೆಸಿದರು.

ಆದರೆ ಅಲೀಪುರದಲ್ಲಿ ಸೆರೆಯಲ್ಲಿದ್ದಾಗ ಅವರ ಅಂತರಂಗದಲ್ಲಿ ಮಹತ್ವದ ಬದಲಾವಣೆಯಾಗಿತ್ತು. ಅವರಲ್ಲಿ ಯಾವುದೋ ದೈವೀ ವಿಭೂತಿ ಇಳಿದು ಬಂದಂತಿತ್ತು. ಭಾರತದ ಆಧ್ಯಾತ್ಮಿಕ ಮತ್ತು ಕಾವ್ಯ ಸಾಹಿತ್ಯವನ್ನು ಅವರು ಗಾಢವಾಗಿ ಅಭ್ಯಾಸ ಮಾಡಿದ್ದರ ಫಲ ಈಗ ಕಾಣಿಸಿಕೊಂಡಿತ್ತು. ಪ್ರಪಂಚವೆಲ್ಲ—ತಮ್ಮನ್ನು ಸೆರೆಯಲ್ಲಿರಿಸಿದವರನ್ನೊಳಗೊಂಡು ವಾಸುದೇವ ಮಯವಾಗಿ ಅವರಿಗೆ ಕಾಣಿಸಿಕೊಂಡಂತಾಯಿತು. ಭಾರತದ ಸಮಸ್ಯೆ ಅವರಿಗೆ ಈಗ ಬೇರೆಯೆ ಸ್ವರೂಪದಲ್ಲಿ ಗೋಚರವಾಗುತ್ತಿತ್ತು. ಬಿಡುಗಡೆ ಹೊಂದಿದ ಮೇಲೆ ಅವರು ಉತ್ತರಪಾಡಾದಲ್ಲಿ ಮಾಡಿದ ಪ್ರಖ್ಯಾತ ಭಾಷಣದಲ್ಲಿ ಈ ಹೊಸ ದರ್ಶನದ ಮಿಂಚು ಕಾಣಿಸುತ್ತಿದೆ. "ಭಾರತ ರಾಷ್ಟ್ರ ವರ್ಧಮಾನವಾಗುವುದು ಕೇವಲ ಭಾರತದ ದೃಷ್ಟಿಯಿಂದ ಮಾತ್ರವಲ್ಲ, ವಿಶ್ವಕಲ್ಯಾಣ ದೃಷ್ಟಿಯಿಂದ. ಭಾರತದಲ್ಲಿ ನಡೆದಿರುವ ಚಳವಳಿ ಬರಿ ರಾಜಕೀಯ ಹೋರಾಟವಲ್ಲ, ಅದು ಧರ್ಮ, ನಿಷ್ಠೆ, ಶ್ರದ್ಧೆ..."

ಹಾಗೆ ಕೇಳಿದರೆ ಶ್ರೀ ಅರವಿಂದರು ಎಂದೂ ರಾಜಕಾರಣಿಯ ಹಾಗಲ್ಲ, ದೇಶಬಂಧು ಚಿತ್ತರಂಜನ ದಾಸರು ಅವರನ್ನು ಕೋರ್ಟಿನಲ್ಲಿ ಸಮರ್ಥಿಸುತ್ತ ಹೇಳಿದ ಹಾಗೆ, ಪ್ರವಾದಿಯ ಹಾಗೆಯೆ ಮಾತಾಡುತ್ತಿದ್ದರು. ರಾಜಕಾರಣಿಗಳ ಎರಡರ್ಥದ ಮಾತುಗಳು ಎಂದೂ ಅವರ ಲೇಖನಿಯಿಂದ ಬಂದಿರಲಿಲ್ಲ. ಅವು ನೇರ, ಮತ್ತು ಆದರ್ಶನಿಷ್ಠ, ಸತ್ವನಿಷ್ಠವಾಗಿರುತ್ತಿದ್ದವು. ಭಾರತದ ಸ್ವಾತಂತ್ರ್ಯವನ್ನು ಅವರೊಂದು ಆಧ್ಯಾತ್ಮಿಕ ಅವಶ್ಯಕತೆಯೆಂದು ಬಗೆಯುತ್ತಿದ್ದರೇ ವಿನಾ ಐಹಿಕ ಸುಖ, ರಾಷ್ಟ್ರೀಯ ದರ್ಪದ ಸಾಧನವೆಂದು ಕಾಣುತ್ತಿದ್ದಿಲ್ಲ. ೧೯೦೯ರ ನಂತರ ಈ ಮಾತು ಇನ್ನೂ ಸ್ಪಷ್ಟವಾಗಿ ವ್ಯಕ್ತವಾಗುತ್ತಹೋದುದಲ್ಲದೆ ರಾಜಕೀಯ ಹೋರಾಟದ ಸ್ವರೂಪದಲ್ಲಿ ತಮ್ಮ ಪಾತ್ರದ ಬಗ್ಗೆಯೆ ಅವರಲ್ಲಿ ಹೊಸದೊಂದು ಭಾವನೆ ಉದಯವಾಯಿತು. ನೇರ ರಾಜಕಾರಣದಿಂದ ಅವರು ದೂರ ಸರಿಯಹತ್ತಿದರು. ದೈವೀ ಭಾವನೆ ಅವರಲ್ಲಿ ತೀವ್ರತರವಾಗಿ ಜಾಗೃತವಾಗುತ್ತಿತ್ತು. ತನ್ನನ್ನು ಪರಮಾತ್ಮನ ಉಪಕರಣವಾಗಿ ಮಾಡಿಕೊಂಡ ಹೊರತು ಮನುಷ್ಯ ಪ್ರಯತ್ನಗಳು ವ್ಯರ್ಥ ಮಾತ್ರವಲ್ಲ, ಅರ್ಥಹೀನವಾಗುತ್ತವೆ. ಆ ದೈವೀ ಅವತರಣವನ್ನು ತಂದುಕೊಳ್ಳುವುದಕ್ಕೆ ಸಾಧನೆ ಬೇಕು, ನಿತಾಂತ ಸಾಧನೆ ಬೇಕು.

ಕೊನೆಗೆ ೧೯೧೦ ರಲ್ಲಿ ಅವರು ಕಲಕತ್ತೆಯನ್ನು ತೊರೆದು ಪಾಂಡಿಚೇರಿಗೆ ಹೋದರು. ಈ ನಿಷ್ಕ್ರಮಣ ದೈವೀ ಪ್ರೇರಣೆಯೇ ಆಗಿತ್ತು. ಅಲ್ಲಿ ಅವರು ಮುಂದಿನ ೪೦ ವರ್ಷಗಳನ್ನು ಕಳೆದರು. ಕೊನೆಯ ೨೫ ವರ್ಷಗಳನ್ನಂತೂ ಸಂಪೂರ್ಣವಾಗಿ ಒಂದೇ ಕೋಣೆಯಲ್ಲಿ ಕಳೆದರು. ಅವರು ಯೋಗ ಸಾಧನೆ ಮಾಡಿದರು. ಗಾಢ ಚಿಂತನೆಯಿಂದ ವಿಶ್ವರಹಸ್ಯವನ್ನು ಭೇದಿಸುವ ಪ್ರಯತ್ನ ಮಾಡಿದರು. ಈ ಚಿಂತನ, ಮನನ, ಯೋಗದೃಷ್ಟಿಗಳಿಂದ ಅವರು ನಿಷ್ಪನ್ನಗೊಳಿಸಿದ ವಿಷಯಗಳು ಮೊದಲು 'ಆರ್ಯ' ಎಂಬ ಪತ್ರಿಕೆಯಲ್ಲಿ ಬರುತ್ತಿದ್ದವು. ಮುಂದೆ ಇವು ಗ್ರಂಥರೂಪದಲ್ಲಿ ಪ್ರಕಟ

ವಾದವು.

ಅನೇಕ ಸಹಸ್ರ ಪುಟಗಳನ್ನು ತುಂಬುವಷ್ಟು ಬರಹಗಳನ್ನು ಶ್ರೀ ಅರವಿಂದರು ಬರೆದರು. ಅವರ ನಿರ್ಮಿತಿಯು ಅಕ್ಷಯ ಭಂಡಾರವೇ ಇದ್ದಂತಿದೆ. ಈಗಲೂ ಅವು ಅಷ್ಟಷ್ಟೆ ಪ್ರಕಟವಾಗುತ್ತ ಇವೆ. ಅವರು ಯೋಚಿಸದ ವಿಷಯಗಳೇ ಇಲ್ಲ ಎಂಬಷ್ಟು ವಿಸ್ತಾರವೂ ಆಳವೂ ಆಗಿದೆ ಈ ಗ್ರಂಥಸಾಗರ. ಅವು ನಮ್ಮ ದೇಶದ ಅನೇಕ ಕವಿಗಳನ್ನೂ ಚಿಂತಕರನ್ನೂ ಬಹುವಾಗಿ ಪ್ರಭಾವಿತಗೊಳಿಸಿವೆ. ವಿಶೇಷವಾಗಿ ಅವರ 'ಸಾವಿತ್ರಿ' ಕಾವ್ಯಪ್ರಪಂಚದಲ್ಲೇ ಅದ್ವಿತೀಯವೆಂದು ಭಾವಿಸಲಾಗುತ್ತದೆ. ಮಹಾಭಾರತದ ಒಂದು ಸಾಮಾನ್ಯ ಉಪಾಖ್ಯಾನವನ್ನು ಒಂದು ಪರಿಪೂರ್ಣ ದರ್ಶನದ ವಾಹನವಾಗಿ ಮಾಡಿಕೊಂಡ ಈ ಕಾವ್ಯ ಆದಿಶಕ್ತಿ ಮಾನವಲೋಕಕ್ಕಿಳಿದು ಬಂದು ಬದ್ಧ ಮಾನವ ಕುಲವನ್ನು ದೈವತ್ವಕ್ಕೇರಿಸುವ ಕಣಸು ಕಾಣುತ್ತದೆ.

ಶ್ರೀ ಅರವಿಂದರ ಚಿಂತನೆ ಅಮೋಘವಾದ ಇಂಗ್ಲೀಷ್ ಭಾಷಾಶೈಲಿಯಲ್ಲಿ ಹೊರಹೊಮ್ಮಿದೆ. ಅದು ಸುಲಭ ಗ್ರಾಹ್ಯವೆಂದು ಹೇಳುವಹಾಗಿಲ್ಲ. ಅವರು ಬಳಸುವ ಶಬ್ದಗಳಲ್ಲಿ ಹೆಚ್ಚಿನವು ಇಂಗ್ಲೀಷ್ ಭಾಷೆಯಲ್ಲಿ ಉಪಯೋಗದಲ್ಲಿದ್ದವೇ ಆದರೂ ಅವುಗಳಿಗೆ ವಿಶೇಷಾರ್ಥಗಳಿರುತ್ತವೆ. ಅವುಗಳನ್ನು ಚೆನ್ನಾಗಿ ಗ್ರಹಿಸಿಕೊಂಡಲ್ಲದೆ ಓದುಗ ದಿಕ್ಕು ತಪ್ಪಿ ಅಲೆಯುವ ಸಂಭವ ಹೆಚ್ಚು.

ಅರವಿಂದರದು ಪಾಶ್ಚಾತ್ಯರು ತತ್ತ್ವಜ್ಞಾನ ಅಥವಾ Phliosophy ಎನ್ನುವ ವರ್ಗದ್ದೆಂದು ಹೇಳಲಾಗದು. ತತ್ತ್ವಜ್ಞಾನ ತರ್ಕದ ಆಟ. ಇಂದ್ರಿಯ ಪ್ರಪಂಚಕ್ಕಿಂತ ಅದು ಆಚೆಗೆ ಹೋಗಲಾರದು. ಪ್ರಪಂಚವನ್ನು ನಡೆಸತಕ್ಕ ಶಕ್ತಿ ಅದರಾಚೆಗಿನದು. ಅದು ದರ್ಶನದಿಂದ ಮಾತ್ರ ಗ್ರಾಹ್ಯವಾದದ್ದು. ಕಂಡದ್ದು, ಹೊಳೆದದ್ದೆಲ್ಲ ದರ್ಶನವಾಗಲಾರದು. ಅದಕ್ಕೆ ಮಾನವ ಅಹಂಕಾರವನ್ನು ಪೂರ್ತಿಯಾಗಿ ವರ್ಜಿಸಿ ಪರಮಾತ್ಮ ಸಂಕಲ್ಪಕ್ಕೆ ಪೂರ್ತಿಯಾಗಿ ತನ್ನನ್ನೊಪ್ಪಿಸಿಕೊಂಡು ಬಿಡಬೇಕು. ಇಂಥ ಯೋಗ ಸ್ಥಿತಿಯಲ್ಲಿ ಪರಮಾತ್ಮನ ಸಂಕಲ್ಪ ಮಾನವನಿಗೆ ವೇದ್ಯವಾಗುತ್ತದೆ. ಆ ಅನಾದಿ ಶಕ್ತಿಗೆ ತನ್ನನ್ನು ಸಂಪೂರ್ಣವಾ[...] ಅರ್ಪಿಸಿಕೊಳ್ಳುವುದೇ ನಿಜವಾದ ಜ್ಞಾನದ ಮಾರ್ಗ[...]ವೆಂಬ ಮನವರಿಕೆಯಿಂದ ಶ್ರೀ ಅರವಿಂದರು ಕಾ[...] ಪ್ರವೃತ್ತರಾಗಿದ್ದರು.

ಇದೇನು ಹೊಸದಲ್ಲ. ಸಮರ್ಪಣ ಭಾವವನ[...] ನಮ್ಮ ಪುರಾತನ ಸಂತರು ಹೇಳಿಲ್ಲವೆ? ಸತ್ಯವನ[...] ಬುದ್ಧಿಯಿಂದ, ತರ್ಕದಿಂದ ಸಾಧಿಸಲಾಗದ[...] ಎಂದು ಉಪನಿಷತ್ತು ಹೇಳಿಲ್ಲವೆ? ಅರವಿಂದ[...] ಹೆಚ್ಚಳವೇನು? ಅರವಿಂದರು ಹೆಚ್ಚಳವನ[...] ಸ್ಥಾಪಿಸುವ ಸ್ಪರ್ಧೆಯಿಂದ ಹೊರಟೇ ಇಲ್ಲ[...] ಹಿಂದಿನವರು ಹೇಳಿದ್ದನ್ನು ನಿರಾಕರಿಸಲು ಅವರ[...]ಯತ್ನಿಸಿಯೇ ಇಲ್ಲ. ಮನುಷ್ಯ ಇಂದಿನ ಸ್ಥಿ[...]ಯಲ್ಲಿ ಏನು ಮಾಡಬಲ್ಲ? ಅವನು ಉತ್ಕ್ರಾಂ[...] ಪಥದಲ್ಲಿ ಬಹಳ ದೂರ ನಡೆದು ಬಂದಿದ್ದಾ[...]ನೆಂಬುದು ನಿಜ. ಆದರೆ ಈಗ ಅವನು ತಡೆದ[...] ನಿಂತಿದ್ದಾನೆ. ಇದುವರೆಗೆ ಅವನು ನಡೆದು ಬಂ[...] ನಿರರ್ಥಕ ಚಕ್ರಪಥದಿಂದ ಬಿಡುಗಡೆ ಹೊಂ[...] ಹೊಸ ಎತ್ತರಕ್ಕೆ ಅವನು ಏರಬೇಕು. ಅದಕ[...] ಆಧ್ಯಾತ್ಮ ಶಕ್ತಿ ಸಂಚಯವಾಗಬೇಕು. ಆ ಶಕ[...] ಸಂಚಯವನ್ನು ಮಾಡಿಕೊಳ್ಳುವುದು ಮತ್[...] ತಮ್ಮ ಈ ತಪಸ್ಸಿನ ಫಲಿತಾಂಶಗಳನ್ನು ಮಾನ[...] ಕುಲಕ್ಕೆ ಕೊಡುವುದು ಅರವಿಂದರ ಧ್ಯೇಯ[...] ವಾಯಿತು.

ಭಾರತೀಯ ಮಾರ್ಗದಲ್ಲಿ ಈಗಿನ ಕಾಲ[...] ಅವರಿಗೆ ಕೆಲ ಕೊರತೆಗಳು ಕಂಡವು. ಲೌಕ[...] ಮತ್ತು ಆಧ್ಯಾತ್ಮಿಕ ಇವು ಬೇರೆ ಬೇರೆಯಾ[...]ದ್ದವು. ಈ ಮಾರ್ಗದಲ್ಲಿ ಕೆಲ ವ್ಯಕ್ತಿಗಳು ಮೋಕ್ಷ[...]ವನ್ನೈದಿದರು. ಆದರೆ ಉಳಿದವರು ಪ್ರಪಂ[...]ದಲ್ಲೆ ಉಳಿದು ಇದರ ದುಃಖಗಳನ್ನನುಭವಿ[...] ಬೇಕಾಗಿದೆ. ಇವೆರಡರಲ್ಲಿ ಸಮನ್ವಯ ಸಾಧಿ[...]ವುದು ಈಗ ಬೇಕಾಗಿದೆ. ಇಂದಿನ ಆತ್ಮಪ್ರತಿಷ್[...] ಪ್ರಧಾನವಾದ ಸಮಾಜ ಬದಲಾಗಬೇಕು. ಮಾ[...]ವರು ಬಲಿಷ್ಠರಾಗಬೇಕು. ಎರಡರಲ್ಲಿ ಏಕವಾ[...]

ಬೇಕು. ಆದ್ದರಿಂದ ಮೊದಲು ಮಾನವರ ಪರಿಶುದ್ಧಿಯಾಗಬೇಕು. ಇದು ಅಧ್ಯಾತ್ಮದಿಂದಲೇ ಸಾಧ್ಯ.

ಪ್ರಕೃತಿಯ ಬಂಧನದಿಂದ ಮುಕ್ತನಾಗಿ ಮನುಷ್ಯ ದೈವೀಸ್ತರಕ್ಕೆ ಏರಬಹುದಾದ ರೀತಿಯನ್ನು ಅರವಿಂದರ ಅನನ್ಯ ಗ್ರಂಥವಾದ 'ದಿವ್ಯ ಜೀವನ'(Life Divine)ದಲ್ಲಿ ಕಾಣುತ್ತೇವೆ. ಅವರ ಇನ್ನೊಂದು ಮುಖ್ಯ ಗ್ರಂಥವಾದ 'ಮಾನವ ಕುಲದ ಐಕ್ಯದ ಆದರ್ಶ' (Ideal of Human Unity). ಈ ವರೆಗೆ ಕುಲ, ಜನಾಂಗ, ರಾಷ್ಟ್ರ ಇತ್ಯಾದಿ ಆಧಾರದಿಂದ ಮಾನವರಲ್ಲಿ ಐಕ್ಯ ಸಾಧಿಸುವ ಯತ್ನ ವ್ಯರ್ಥವಾಗಿದೆ. ಅದೇ ಪ್ರಕಾರ ಮಾನವ ಕುಲವನ್ನು ರಾಷ್ಟ್ರ ಸಂಘದಂಥ ಸಂಸ್ಥೆಗಳ ಮೂಲಕ ಸಾಧಿಸುವ ಯತ್ನಗಳೂ ವಿಫಲವೇ ಆಗಿವೆ. ಇವರಿಂದ ಕೆಲವರ ಪ್ರತಿಷ್ಠೆ ಕೆಲವರ ಅಡಿಯಾಳ್ತನ ತಪ್ಪಿಲ್ಲ. ಇದಕ್ಕೆ ಕಾರಣವೆಂದರೆ ಮನುಷ್ಯಕುಲ ತನ್ನ ಮೂಲ ಪ್ರಕೃತಿಯನ್ನು ಬದಲಿಸಿಕೊಂಡಿಲ್ಲ. ಮಾನವೀಯ ಐಕ್ಯದ ಕಲ್ಪನೆ ಬಾಹ್ಯವಾಗಿದೆ. ಅದು ಆಂತರಿಕವೂ ಆತ್ಮಿಕವೂ ಆಗಿದ್ದರೆ ಮಾತ್ರ ಇಡೀ ಮಾನವತೆ ಐಕ್ಯ ಭಾವವನ್ನು ಸಾಧಿಸಬಲ್ಲದು—ಇದು ಅವರ ಪ್ರತಿಪಾದನೆಯಾಗಿದೆ.

ಇದೂ ಅಲ್ಲದೆ ಕಲೆ, ಸಾಮಾಜಿಕ ರಚನೆ, ರಾಜಕೀಯ, ಅರ್ಥಶಾಸ್ತ್ರ, ಕಾವ್ಯ ಇಂಥ ಅಸಂಖ್ಯ ವಿಚಾರಗಳ ಮೇಲೆ ಶ್ರೀ ಅರವಿಂದರು ಬರೆದಿದ್ದಾರೆ. ಎಲ್ಲವೂ ಈ ಭೌತ ಪ್ರಕೃತಿ ಬದ್ಧ ಪ್ರಪಂಚದಿಂದ ಮನುಷ್ಯನನ್ನು ಮೇಲೆತ್ತಿ ಆನಂದದಲ್ಲಿ ನಿಲ್ಲಿಸುವ ದೃಷ್ಟಿಯನ್ನೊಳಗೊಂಡವುಗಳೇ.

ಅರವಿಂದ ಯೋಗಿಗಳ ಚಿಂತನದಲ್ಲಿ ಸಮನ್ವಯ ಮತ್ತು ಮಾನವರ ಸಾಮೂಹಿಕ ಆರೋಹಣ ಮಹತ್ವದ ಅಂಶಗಳಾಗಿವೆ. ಈ ವರೆಗೆ ವಿಕಾಸವಾದವು ಹೇಳುವ ಜಡ, ಪ್ರಾಣ, ಮನಗಳ ವಿಕಾಸದತ್ತ ಜೀವಲೋಕ ಮುನ್ನಡೆದಿದೆ. ಮನುಷ್ಯ ಈಗ ಅದರ ಸೀಮೆಯಲ್ಲಿದ್ದಾನೆ. ಮನಸ್ಸು ಬದ್ಧವಾಗಿರುವುದರಿಂದ ಅದು ಸ್ವಾರ್ಥ ದ್ವೇಷಾದಿಗಳಿಂದ ಪೀಡಿತವಾಗಿದ್ದಾನೆ. ಈ ಮನಸ್ಸಿನ ಸ್ತರದಿಂದ ಆತ ಮೇಲೇರಿ ಮುಂದಿನ ಹಂತವಾದ ಅತಿಮಾನಸ ಸ್ತರಕ್ಕೇರುವ ಯತ್ನ ಮಾಡಬೇಕು. ಆಗ ದೈವೀ ಕೃಪೆ ಇಳಿದು ಬಂದು ಅವನನ್ನು ಮೇಲಕ್ಕೆತ್ತುತ್ತದೆ. ಅಲ್ಲಿಂದ ಆತ ಇಲ್ಲಿದ್ದೂ ಆನಂದದಲ್ಲಿ ತಲ್ಲೀನನಾಗಿರುತ್ತಾನೆ. ಅದರಲ್ಲಿ ಕಲ್ಮಷಗಳ ಸ್ಪರ್ಶವಿಲ್ಲ.

ಶ್ರೀ ಅರವಿಂದರು ಮಾನವಕುಲಕ್ಕೆ ಕೊಡುವ ಸಂದೇಶವೂ ಆಶಾಜ್ಯೋತಿಯೂ ಇದು; ಪೂರ್ಣ ಯೋಗದಿಂದ ತಪಸ್ವಿಗಳು ಮುಕ್ತಸ್ಥಿತಿಗೇರುತ್ತಾರೆ. ಹಿಂದಿನ ಭಾರತೀಯ ಅಧ್ಯಾತ್ಮದಲ್ಲಿ ಇದು ಗುರಿ. ಇಲ್ಲಿಗೆ ಮುಗಿಯಿತು. ಆದರೆ ಮುಕ್ತರು, ದಿವ್ಯ ಜೀವನ ಸ್ತರಕ್ಕೇರಿದವರು ಅಲ್ಲಿಯೇ ನಿಲ್ಲದೆ ಕೆಳಗಿಳಿದು ಬಂದು ಭೂಮಿಯಲ್ಲಿ ಕಾರ್ಯ ಕೈಕೊಂಡು ಮಾನವಕುಲವನ್ನು ಮೇಲೆತ್ತಬೇಕು. ಆಗ ಭುವಿಯ ಬಾಳು ಅಮಿತ ಶಕ್ತಿ ಜ್ಞಾನ ಪ್ರೇಮ ಆನಂದಗಳಿಂದ ಓತಪ್ರೋತವಾಗುತ್ತದೆ.

ಶ್ರೀ ಅರವಿಂದರು ಮಾನವರಲ್ಲಿ ಮುಂದುವರಿದವರಿಗೆ ಈ ಹೊಸ ಆದರ್ಶವನ್ನು ಹಾಕಿ ಕೊಟ್ಟಿದ್ದಾರೆ. ಮಾನವನ ವೈಯಕ್ತಿಕ ಮಾತ್ರವಲ್ಲ, ಸಾಮೂಹಿಕ ಉನ್ನಯನದ ಆಶ್ವಾಸನ ನೀಡಿದ್ದು ಅವರ ವಿಶೇಷ. ▲



ಸಾಧನಪಥದಿಂದ ದೂರವುಳಿಸುವ ತಪ್ಪಿಗಿಂತ ಸಾಧನಪಥದಲ್ಲಿರುವಾಗ ಗೈದ ತಪ್ಪುಗಳು ಹೆಚ್ಚು ಬೋಧಕವಾಗಿರುತ್ತವೆ.

—ಶ್ರೀ ಅರವಿಂದರು

ಪ್ರಸಿದ್ಧ ಕುಲದ ಕೊನೆಯ
ಮಗನ ಇತಿವೃತ್ತ

ಎಡ್ವರ್ಡ್ ಕೆನ್ನೆಡಿ ಅಮೇರಿಕದ ಅಧ್ಯಕ್ಷರಾಗಬಹುದೆ?

ಪಾವೆಂ

ಕಳೆದ ವರ್ಷ ಈ ಸಮಯದಲ್ಲಿ ಅಮೇರಿಕದ ಮುಂದಿನ ಅಧ್ಯಕ್ಷ ಯಾರಾಗಬಹುದು ? ಎಂಬ ಪ್ರಶ್ನೆಗೆ ಜಗತ್ತಿನ ರಾಜಕೀಯ ಭವಿಷ್ಯವಾದಿಗಳಲ್ಲಿ ಸಾಕಷ್ಟು ಜನರು ಟೆಡ್ಡಿ ಕೆನ್ನೆಡಿ ಎಂದು ಬೊಟ್ಟು ತೋರಿಸುತ್ತಿದ್ದರು. ಆ ಮುಂದಿನ ಅಧ್ಯಕ್ಷ ಯಾರಾಗಬಹುದು ? ಎಂದು ಕೇಳಿದರಂತೂ ಬಹುಸಂಖ್ಯಾಕರು ಟೆಡ್ಡಿ ಕೆನ್ನಡಿಯನ್ನೇ ಸೂಚಿಸಬಹುದಾಗಿತ್ತು. ಆದರೆ ಇಂದು ಹಾಗೆ ಭವಿಷ್ಯ ಹೇಳಲು ಧೈರ್ಯ ಮಾಡಬಹುದಾದವರು ಕೈ ಬೆರಳುಗಳಲ್ಲಿ ಎಣಿಸಬಹುದಾದಷ್ಟು ಕೂಡ ಇರಲಾರರು.



ಎಡ್ವರ್ಡ್ (ಟೆಡ್ಡಿ) ಮೂರ್ ಕೆನ್ನೆಡಿಗೆ ಭಾಗ್ಯ ಏನೇನನ್ನು ಒದಗಿಸಬಲ್ಲುದಾಗಿತ್ತೋ ಅದನ್ನೆಲ್ಲ ಒದಗಿಸಿದೆ. ಜಗತ್ತಿನ ಅತಿ ಪ್ರಸಿದ್ಧ ಮತ್ತು ಅತ್ಯಾಕರ್ಷಕ ಮತ್ತು ಅತ್ಯಂತ ರಾಜಕೀಯ ಕುಟುಂಬದಲ್ಲಿ ಅವರು ಜನಿಸಿದ್ದಾರೆ. ಭವ್ಯವಾದ ಕುಲಬಿರುದು ಅವರಿಗಿದೆ. ಅಪಾರ ಸಂಪತ್ತು, ಆದಮ್ಯ ಉತ್ಸಾಹವನ್ನು ಕೆನ್ನೆಡಿಗಳು ಪಡೆದು ಬಂದಿದ್ದಾರೆ. ಆದರೆ ಈ ಸೌಭಾಗ್ಯದೊಡನೆ ಒಂದು ಅಭಿಶಾಪವೂ ಈ ತಲೆಮಾರಿನ ಕೆನ್ನೆಡಿಗಳ ಬೆಂಬತ್ತಿದೆಯೋ ಎಂಬ ಸಂಶಯ ಬರುತ್ತದೆ.

ಕೆನ್ನಡಿ ಕುಲದ ಕಥೆ ಕೇಳಿ. ಅವರ ಪೂರ್ವ



ಜರು ಅಯರ್ಲೆಂಡಿನಿಂದ ವಲಸೆ ಬಂದು ಅಮೇರಿಕದಲ್ಲಿ ಯಶಸ್ವಿ ಧನಕುಬೇರರಾದವರು. ಸಾವುಕಾರಿಕೆಯ ವ್ಯವಸಾಯದಿಂದ ಹಣಗಳಿಸಿದ ಜಾಸೆಫ್ ಕೆನ್ನೆಡಿಯ ಸಂಪತ್ತು ೪೦ ಕೋಟಿ ಡಾಲರುಗಳು (ಸುಮಾರು ೩೦೦ ಕೋಟಿ ರೂಪಾಯಿ) ಎಂದು ಅಂದಾಜು ಮಾಡಲಾಗಿದೆ. ಕೇವಲ ಹಣ ಮಾಡುವುದರಲ್ಲಿ ಮಗ್ನನಾಗಿರದ ಹಿರಿಯ ಕೆನ್ನೆಡಿ ಇಂಗ್ಲಂಡಿನಲ್ಲಿ ಅಮೇರಿಕದ ರಾಯಭಾರಿಯೂ ಆಗಿದ್ದರು. ತನ್ನ ಮಕ್ಕಳು ಹಣದ ಚಿಂತೆಗೆ ಬೀಳದೆ ರಾಜಕಾರಣದ ಮೂಲಕ ದೇಶ ಸೇವೆ ಮಾಡಬೇಕೆಂಬ ಆಸೆಯಿಂದ ಜಾಸೆಫ್ ಕೆನ್ನೆಡಿ ಪ್ರತಿ ಮಗನ ಹೆಸರಿನಲ್ಲಿ ಒಂದು ಕೋಟಿ ಡಾಲರು ವಿಶ್ವಸ್ತ ನಿಧಿ ನಿರ್ಮಿಸಿದ್ದಾರೆ. ಅದರಲ್ಲಿ ಹತ್ತು ಲಕ್ಷ ಪ್ರತಿ ಮಗನಿಗೂ ಪ್ರಾಯಬರುತ್ತಲೇ ಕೈಗೆ ಬರುವಂತೆ ವ್ಯವಸ್ಥೆ ಇತ್ತು.

ಐದು ಹೆಣ್ಣು, ನಾಲ್ಕು ಗಂಡು ಮಕ್ಕಳನ್ನು ಪಡೆದ ಜಾಸೆಫ್ ಕೆನ್ನೆಡಿ ಪ್ರತಿಯೊಬ್ಬರಿಗೂ ಹಣ ಮತ್ತು ಪ್ರಭಾವದಿಂದ ಸಿಗಬಹುದಾದ ಅತ್ಯುತ್ತಮ ವಿದ್ಯೆಯನ್ನು ಕೊಡಿಸಿದ್ದ. ಅಮೇರಿಕನ್ ಆದರ್ಶಗಳು ಎಂದೆಣಿಸಲ್ಪಟ್ಟವುಗಳೆಲ್ಲದರಲ್ಲಿಯೂ ಅವರಿಗೆ ತರಬೇತಿ ಸಿಕ್ಕಿತ್ತು. ಅಪ್ಪ ಶ್ರೀಮಂತನೆಂದು ಹಣ ಪೋಲು ಮಾಡುವುದಕ್ಕೆ ಅವಕಾಶ ಇರಲಿಲ್ಲ. ಮಕ್ಕಳಿದ್ದಾಗ ಅವರಿಗೆ ಖರ್ಚಿಗೆ ಸಿಗುತ್ತಿದ್ದದ್ದು ಪುಡಿಕಾಸು ಮಾತ್ರ. ಹೈಸ್ಕೂಲಿನಲ್ಲಿದ್ದಾಗ ಕುಟುಂಬದ ಕೊನೆಯ ಗಂಡುಮಗ ಟೆಡ್ಡಿಗೆ ಸಿಗುತ್ತಿದ್ದದ್ದು ವಾರಕ್ಕೆ ಹತ್ತು ರೂಪಾಯಿ ಮಾತ್ರ. "ಹೆಚ್ಚು ಹಣಕ್ಕಾಗಿ ನಾನು ನೆರೆಮನೆಯವರ ತೋಟದಲ್ಲಿ ಹುಲ್ಲು ಕತ್ತರಿಸಬೇಕಾಗುತ್ತಿತ್ತು", ಎಂದು ಎಡ್ವರ್ಡ್ ಕೆನ್ನೆಡಿ ಹೇಳಿದ್ದಾರೆ.

ಇದು ಮಿತವ್ಯಯ. ಸ್ವಾವಲಂಬನೆಗಳಲ್ಲಿ ತರಬೇತಿಯಾದರೆ, ೨೧ನೇ ವಯಸ್ಸಿನವರೆಗೆ ಕುಡಿಯುವುದನ್ನೂ ಸೇದುವುದನ್ನೂ ವರ್ಜಿಸಿದರೆ ಪ್ರತಿ ಮಗನಿಗೆ ಒಂದೊಂದು ಸಾವಿರ ಡಾಲರ್ ಇನಾಮನ್ನು ಜಾಸೆಫ್ ಕೆನ್ನೆಡಿ ಸಾರಿದ್ದರು. ಭಾವಿ ಜೀವನದ ಯಶಸ್ಸಿಗಾಗಿ ಉಗ್ರ ಸ್ಪರ್ಧಾಭಾವವನ್ನೂ ಆತ ಮಕ್ಕಳಲ್ಲಿ ಬೆಳೆಸಿದ್ದರು. ಯಾವುದೋ ದೋಣಿ ಶರ್ಯತ್ತಿನಲ್ಲಿ ಗೆಲ್ಲಲಿಲ್ಲವೆಂದು ಇಬ್ಬರು ಮಕ್ಕಳನ್ನು ತಂದೆ ಭೋಜನಾಲಯದಿಂದ ಹೊರಗೆ ಹಾಕಿ ಅವಮಾನಿಸಿದ್ದರಂತೆ!

ಈ ತರಹದಲ್ಲಿ ತರಬೇತಿ ಹೊಂದಿದ ಮಕ್ಕಳು ಮುಂದಾಳ್ತನದ ಗುಣಗಳೊಡನೆ ಬೆಳೆದದ್ದು ಆಶ್ಚರ್ಯವಲ್ಲ. ರಾಜಕಾರಣ ಅವರ ರಕ್ತದಲ್ಲೇ ಬೆರೆತಂತಿತ್ತು. ಎರಡನೇ ಮಹಾ ಯುದ್ಧದಲ್ಲಿ ಇಬ್ಬರು ಕೆನ್ನೆಡಿ ಹುಡುಗರು ಅಪ್ರತಿಮ ಶೌರ್ಯವನ್ನು ಪ್ರದರ್ಶಿಸಿದರು. ಎರಡನೆಯ ಜಾನ್ ಕೆನ್ನೆಡಿ ನೌಕಾದಳದಲ್ಲಿ ತೋರಿಸಿದ ಸಾಹಸವಂತೂ ಯುದ್ಧದ ವೀರಗೀತಗಳಲ್ಲೊಂದೆನಿಸಿತು. ಆತ ಕೊನೆಗೆ ಅಮೇರಿಕದ ಅಧ್ಯಕ್ಷಪದಕ್ಕೇರಿದ ಪ್ರಥಮ ಕೆಥೋಲಿಕನಾದರು.

ಆದರೆ ಅಪಮೃತ್ಯು ಕೆನ್ನೆಡಿ ಕುಟುಂಬವನ್ನು ಕೈ ತೊಳೆದುಕೊಂಡು ಬೆನ್ನುಹತ್ತಿದಂತಿತ್ತು. ಮೊದಲನೇ ಮಗ ಜೋ—ಆತ ನಾಲ್ವರಲ್ಲಿ ಅತ್ಯುತ್ತಮ ರಾಜಕೀಯ ಪಟು ಎಂದು ಭಾವಿಸಲ್ಪಟ್ಟಿದ್ದ — ಎರಡನೇ ಮಹಾಯುದ್ಧದಲ್ಲಿ ವೀರಮರಣವನ್ನು ಅಪ್ಪಿದ. ಎರಡನೇ ಮಗ ಜಾನ್ ಕೆನ್ನೆಡಿ, ಅಮೇರಿಕದ ಅಧ್ಯಕ್ಷ ಪದವನ್ನು ಮೂರು ವರ್ಷ ಅನುಭವಿಸುವುದರೊಳಗೆ ಕೊಲೆಗಡಕನ ಗುಂಡಿಗೆ ಆಹುತಿಯಾದರು. ಮೂರನೇ ಮಗ ರೋಬರ್ಟ್—ಬಹುಶಃ ಎಲ್ಲರಲ್ಲಿ ಅತಿಶಯ ಆದರ್ಶಜೀವಿ—ಅಧ್ಯಕ್ಷತನದ ಸ್ಪರ್ಧೆಯಲ್ಲಿದ್ದಾಗಲೇ ಗುಂಡಿನೇಟಿನಿಂದ ಸತ್ತರು. ಒಬ್ಬ ಹೆಣ್ಣುಮಗಳು ವಿಮಾನ ಅಪಘಾತದಲ್ಲಿ ಸತ್ತಳು.

ನಾಲ್ಕನೆಯವನಾದ ಎಡ್ವರ್ಡನಿಗಾಗಿ ದೈವ ಬೇರೆಯೇ ವಿಧಿಯನ್ನು ಅನುಗೊಳಿಸಿದಂತಿದೆ. ಆತನೂ ಒಂದು ವಿಮಾನ ಅಪಘಾತದಲ್ಲಿ ಸಿಕ್ಕಿ ಬೆನ್ನು ಮುರಿದುಕೊಂಡಿದ್ದರೂ ಸಾವು ಅವರನ್ನು ಬಗೆದು ಹೋಗಿತ್ತು. ಎರಡನೇ ಮಹಾಯುದ್ಧದಲ್ಲಿ ಅವರು ಕಾಲೇಜನ್ನು ಅರ್ಧಕ್ಕೆ ನಿಲ್ಲಿಸಿ ಫ್ರಾನ್ಸಿ

ನಲ್ಲಿ ಯುದ್ಧಕ್ಕೆ ಹೋದರೂ ಅಪಾಯಕ್ಕೊಳಗಾಗಲಿಲ್ಲ. ಅಮೇರಿಕದ ಅತ್ಯುತ್ತಮ ವಿದ್ಯಾ ಸಂಸ್ಥೆಗಳಾದ ಮಿಲ್ಟನ್ ಅಕಾದಮಿ, ಹಾರ್ವರ್ಡ್ ಕಾಲೇಜ್ ಮತ್ತು ವರ್ಜೀನಿಯಾ ಲಾ ಸ್ಕೂಲ್ ಇವುಗಳ ಮೂಲಕ ಹಾಯ್ದು ಬಂದ ಈತ ವರ್ಷಕ್ಕೊಂದು ಡಾಲರ್ ಸಂಬಳದ ಮೇಲೆ ಬಾಸ್ಟನ್ನಿನಲ್ಲಿ ಸಹಾಯಕ ಜಿಲ್ಲಾ ಅಟಾರ್ನಿಯಾಗಿ ಸಾರ್ವಜನಿಕ ಜೀವನವನ್ನಾರಂಭಿಸಿದರು. ಅಣ್ಣ ಜಾನ್ ಕೆನ್ನೆಡಿ ಅಧ್ಯಕ್ಷರಾಗಿ ಆರಿಸಲ್ಪಟ್ಟದ್ದರಿಂದ ಖಾಲಿಯಾದ ಸ್ಥಾನಕ್ಕೆ ೧೯೬೨ರಲ್ಲಿ ಟೆಡ್ಡಿ ಕೆನ್ನೆಡಿ ಸ್ಪರ್ಧಿಸಿ ಆರಿಸಿಬಂದರು. ಟೆಡ್ಡಿಗೆ ಆಗ ಬರೇ ೩೦ ವರ್ಷ. ಅದೇ ವರ್ಷ ಅವರಿಗೆ ಸಿನೇಟರ್ ಆಗುವ ವಯಸ್ಸಿನ ಅರ್ಹತೆ ಬಂದಿತ್ತಷ್ಟೆ. ೧೯೬೪ರಲ್ಲಿ ಅವರು ಪುನಃ ಆರಿಸಲ್ಪಟ್ಟರು. ಅವರ ಜನಪ್ರಿಯತೆ ಎಷ್ಟು ಹೆಚ್ಚಾಯಿತೆಂದರೆ ೧೯೬೮ರಲ್ಲಿ ಡೆಮಾಕ್ರಟಿಕ್ ಪಕ್ಷದ ಪರವಾಗಿ ಅಧ್ಯಕ್ಷತೆಗೆ ನಿಲ್ಲಬೇಕೆಂಬ ಸೂಚನೆಯೂ ಚಿಕ್ಯಾಗೋ ಅಧಿವೇಶನದಲ್ಲಿ ಬಂತು. ಆದರೆ ಟೆಡ್ಡಿ ಅದನ್ನು ನಿರಾಕರಿಸಿದರು. ಆಮೇಲೆ ಹೂಬರ್ಟ್ ಹಂಫ್ರಿ ಜೊತೆಗಾರನಾಗಿ ಉಪಾಧ್ಯಕ್ಷ ಪದಕ್ಕೆ ಸ್ಪರ್ಧಿಸಬೇಕೆಂದು ಅವರ ಪಕ್ಷ ಕೇಳಿಕೊಂಡಾಗಲೂ ಅವರು ಒಪ್ಪಲಿಲ್ಲ. ಬಹುಶಃ ೧೯೭೨ರ ಅಧ್ಯಕ್ಷ ಚುನಾವಣೆಯ ಮೇಲೆ ಅವರ ಕಣ್ಣಿತ್ತು. ವಾಸ್ತವಿಕವಾಗಿ ಅಮೇರಿಕದ ಅತಿ ಶ್ರೇಷ್ಠ ಚುನಾವಣಾ ತಂತ್ರಿ ಜೇಮ್ಸ್ ಫಾರ್ಲೆ "ಟೆಡ್ಡಿ ಕೆನ್ನಡಿ ಕೊನೆಗೆ ಅಧ್ಯಕ್ಷ-ಪದವನ್ನೇರುತ್ತಾನೆ" ಎಂದು ಕಣಿ ನುಡಿದಿದ್ದ. ಸ್ವತಃ ಜಾನ್ ಕೆನ್ನಡಿಯೇ ಎಡ್ವರ್ಡ್ ಕೆನ್ನಡಿ-ಯನ್ನು "ನಮ್ಮ ಕುಲದಲ್ಲೇ ಉತ್ತಮ ರಾಜಕಾರಣಿ" ಎಂದು ವಿಶೇಷಿಸಿ, "ನನಗೇನಾದರೂ ಆದರೆ ಬಾಬಿ (ರಾಬರ್ಟ್) ಆ ಸ್ಥಾನಕ್ಕೆ ಬರುತ್ತಾನೆ; ಆತ ಹೋದರೆ ಟೆಡ್ಡಿ ಬರುತ್ತಾನೆ", ಎಂದು ಹೇಳಿದ್ದರು.

ಟೆಡ್ಡಿಗೆ ಕುಲನಾಮ, ಧನ ಸಂಪತ್ತಿ, ಸುಂದರ ಪತ್ನಿ, ಬೆನ್ನು ನೋವು ನಿತ್ಯ ದುಃಖವಾದರೂ ಬಲಿಷ್ಠವಾದ ಆಜಾನುಬಾಹು ಶರೀರ (ಎತ್ತರ ೬ ಅಡಿ ೨ ಅಂಗುಲ ತೂಕ ೨೨೦ ಪೌಂಡ್) ಎಲ್ಲ ಅನುಕೂಲಗಳೂ ಇದ್ದವು. ಆದರೆ ಸಿನೇಟ್ ಸದಸ್ಯನಾಗಿ ಆತ ಬಲು ಚೆನ್ನಾಗಿ ದುಡಿದಿದ್ದಾರೆ. ಅವರ ದೃಷ್ಟಿ-ಕೋನ ಯಾವಾಗಲೂ ನೀತಿಪರವಾದದ್ದು. ಬಡವರ ವಿಷಯದಲ್ಲಿ ಅನುಕಂಪ ಮತ್ತು ಅವರಿಗಾಗಿ ಪರಿಶ್ರಮಿಸುವುದು, ಭಾರಿ ಮಿಲಿಟರಿ-ಔದ್ಯೋಗಿಕ ಗುತ್ತೇದಾರಿಕೆಗಳ ವಿರುದ್ಧ ಹೋರಾಡುವುದು— ಇವುಗಳಿಂದ ಟೆಡ್ಡಿ ಕೆನ್ನೆಡಿ ಜನಪ್ರಿಯರಾಗಿದ್ದಾರೆ. ವಿದೇಶೀಯರು ಅಮೇರಿಕಕ್ಕೆ ವಲಸೆಬರುವ ನಿಯಮಗಳನ್ನು ಸಡಿಲಿಸುವುದಕ್ಕೆ, ಬಡವರಿಗಾಗಿ ಆರೋಗ್ಯ ಕೇಂದ್ರಗಳ ಸ್ಥಾಪನೆಗೆ, ವೃದ್ಧರಿಗೆ ಸಹಾಯ ನೀಡುವುದಕ್ಕೆ ಅವರ ಪ್ರಯತ್ನಗಳು ಕಾರಣವಾಗಿದ್ದವು. ಎಲ್ಲಕ್ಕೂ ಹೆಚ್ಚಾಗಿ ವಿಯಟ್ನಾಂನಲ್ಲಿ ಅಮೇರಿಕದ ವರ್ತನೆಯನ್ನೂ ದಕ್ಷಿಣ ವಿಯತ್ನಾಂ ಸರಕಾರದ ಲಂಚಗುಳಿತನವನ್ನೂ ಬಯಲಿಗೆಳೆದ ಅವರು ತಮ್ಮ ಪಕ್ಷದವರೇ ಆದ ಅಧ್ಯಕ್ಷ ಜಾನ್ಸನ್ನರನ್ನು ಟೀಕಿಸಿ ತಮ್ಮ ನ್ಯಾಯ ಪಕ್ಷಪಾತವನ್ನು ಪ್ರದರ್ಶಿಸಿದರು.

ಸಿನೇಟಿಗೆ ಆರಿಸಲ್ಪಡುತ್ತಲೇ ಅವರು ಬಹುಮತ ಪಕ್ಷದ ಮುಖ್ಯ ಪ್ರತೋದರೂ ಆ ಪಕ್ಷದ ಉಪನಾಯಕರೂ ಆದರು. ಮುಂದೆ ಅಧ್ಯಕ್ಷರಲ್ಲದಿದ್ದರೂ ಸಿನೇಟಿನ ಬಹು ಮತ ಪಕ್ಷದ ಮುಖ್ಯ ನಾಯಕರಾಗುವ ಸಂದರ್ಭ ಅವರಿಗೆ ಖಂಡಿತವಾಗಿ ಇತ್ತು. ಜನಹಿತಕಾರಕವಾದ ಅನೇಕ ಕಾಯದೆಗಳನ್ನು ಮಂಡಿಸುವ ಯೋಜನೆಯನ್ನೂ ಅವರು ಮಾಡಿಕೊಂಡಿದ್ದರು.

ಆದರೆ ಇವೆಲ್ಲವೂ ಪೂರೈಸುವ ಮೊದಲು ದೈವ ತನ್ನ ಲತ್ತೆಯನ್ನು ಕೊಟ್ಟಿತು. ಕಳೆದ ಜುಲೈ ೧೮ ಅರ್ಧ ರಾತ್ರಿಗಿಂತ ಸ್ವಲ್ಪ ಮುಂಚೆ ಟೆಡ್ಡಿ ಕೆನ್ನೆಡಿ ಮಾರ್ಥಾಸ್ ವೈನ್‌ಯಾರ್ಡ್ ಎಂಬ ದ್ವೀಪದ ಇಕ್ಕಟ್ಟಿನ ಜಲಸಂಧಿಯ ಬಳಿ ಕಾರನ್ನು ನಡೆಸಿಕೊಂಡು ಹೋಗುತ್ತಿದ್ದಾಗ ಅದು ಮುಗುಚಿಬಿದ್ದು ನೀರಲ್ಲಿ ಮುಳುಗಿತು. ಕಾರಿನಲ್ಲಿ ಅವರ ಪಕ್ಕದಲ್ಲಿ ಅವರ ಅಣ್ಣ ರಾಬರ್ಟ್ ಕೆನ್ನೆಡಿಯ ಕಾರ್ಯದರ್ಶಿಯಾಗಿದ್ದ ಮೇರಿ ಜೋ ಕೋಪೆಕ್ನೆ


ಎಂಬ ತರುಣಿ ಕುಳಿತಿದ್ದಳು. ಕಾರು ಮಗುಚಿ ಬಿದ್ದ ಮೇಲೆ ಕೆನ್ನೆಡಿ ಅದರಿಂದ ಹೇಗೋ ಹೊರ ಬಿದ್ದು ಬಂದರು. ಆದರೆ ತರುಣಿ ಅದರಲ್ಲೇ ಉಳಿದು ನೀರಲ್ಲಿ ಮುಳುಗಿ ಹೋದಳು. ಅನೇಕ ಗಂಟೆಗಳ ನಂತರ ಈ ಘಟನೆಯನ್ನು ಟೆಡ್ಡಿ ಕೆನ್ನೆಡಿ ಪೋಲೀಸರಿಗೆ ವರದಿ ಮಾಡಿದ್ದರಿಂದ ಅವಳನ್ನು ಜೀವಂತ ಪಾರು ಮಾಡಲಾಗಲಿಲ್ಲ.

ಅರ್ಧ ರಾತ್ರಿಯಲ್ಲಿ ಸುಂದರ ತರುಣಿಯೊಬ್ಬಳನ್ನು ಕಾರಿನಲ್ಲಿ ಕುಳ್ಳಿರಿಸಿಕೊಂಡು ಚಿರಪರಿಚಿತವಾದ ಈ ಹಾದಿಯಲ್ಲಿ ಬರುವಾಗ ಈ ದುರ್ಘಟನೆ ಹೇಗೆ ನಡೆಯಿತು ? ಕಾರು ಮಗುಚಿ ನೀರಿಗೆ ಬಿದ್ದ ಮೇಲೆ ಅವಳನ್ನು ಪಾರುಮಾಡಲು ಯತ್ನಿಸಿದೆನೆಂದು ಕೆನ್ನೆಡಿ ಹೇಳುವುದರಲ್ಲಿ ಎಷ್ಟು ತಥ್ಯವಿದೆ ? ಪೋಲೀಸರಿಗೆ ವರದಿ ಮಾಡುವುದಕ್ಕೆ ಅಷ್ಟೆಲ್ಲಾ ತಡ ಏಕಾಯಿತು? ಇದರಲ್ಲೆಲ್ಲಾ ಏನೂ ತಗಲು ಇಲ್ಲದಿದ್ದರೆ ಕೆನ್ನೆಡಿ ಮೊದಲು ವಕೀಲರ ಸಲಹೆ ತೆಗೆದುಕೊಂಡೇ ಪೋಲೀಸರಿಗೆ ಏಕೆ ಹೇಳಿಕೆಕೊಟ್ಟರು? ಇದುಬರೀ ಆಕಸ್ಮಿಕವೋ ಏನಾದರೂ ರಹಸ್ಯ ಅದರಲ್ಲಿತ್ತೋ? ಎಂದು ಮುಂತಾಗಿ ಇಡೀ ದೇಶದಲ್ಲಿ ಮಾತ್ರವಲ್ಲ, ವಿದೇಶಗಳಲ್ಲಿ ಕೂಡ ಕೋಲಾಹಲವೆದ್ದಿತು. ಟೆಡ್ಡಿ ಕೊಟ್ಟ ವಿವರಣೆಗಳು ಅವರ ಬಗ್ಗೆ ಜನರ ಶಂಕೆಯನ್ನು ಕಡಿಮೆ ಮಾಡಲಿಲ್ಲ. ಕಾರಿನಿಂದ ಹೊರಬಿದ್ದ ಬಳಿಕ ತಾನು ಪುನಃ ಪುನಃ ಮುಳುಗಿ ಕಾರಿನಲ್ಲಿದ್ದವಳು ಅಲ್ಲೇ ಇದ್ದಾಳೋ ಎಂದು ಕಂಡುಹಿಡಿಯಲು ಯತ್ನಿಸಿದೆ; ಅದು ಸಾಧ್ಯವಾಗದ ನಂತರ ಈಸಿ ಆಚೆ ದಡ ಸೇರಿದೆ; ಏನೋ ಮಂಕು ಕವಿದಂತಾಗಿ ಮಿತ್ರನ ಮನೆಗೆ ಹೋಗಿ ಹಾಗೇ ಮಲಗಿಬಿಟ್ಟೆ. ಎಷ್ಟೋ ಹೊತ್ತಿನ ಮೇಲೆ ಎಚ್ಚರವಾದಾಗಲೇ ತನಗೆ ಎಲ್ಲ ಘಟನೆಗಳು ಸರಿಯಾಗಿ ಅರ್ಥವಾದದ್ದು. ಆ ಮೇಲೆ ಪೋಲೀಸರಿಗೆ ವರದಿ ಮಾಡಿದೆ —ಎಂದು ಕೆನ್ನೆಡಿ ಹೇಳಿದರು. ಇದು ನಂಬುವುದಕ್ಕೆ ಜಡ, ನಂಬಿದರೂ ವಿಪತ್ ಪ್ರಸಂಗದಲ್ಲಿ ಈ ಮನುಷ್ಯ ಬುದ್ಧಿಯನ್ನು ಕಳೆದುಕೊಳ್ಳುತ್ತಾನೆಂದಹಾಗಾಯಿತು. ಇಂಥವನ ಕೈಯಲ್ಲಿ ದೇಶದ ಭವಿಷ್ಯವನ್ನು ಕೊಡಬಹುದೇ? ಎಂಬ ಪ್ರಶ್ನೆ ಬಹಿರಂಗವಾಗಿಯೆ ಚರ್ಚಿಸಲ್ಪಟ್ಟಿತು.

ಈ ನಡುವೆ ಮರಣ ಹೊಂದಿದ ತರುಣಿಯನ್ನು ಸಮಾಧಿ ಮಾಡಲಾಯಿತು. ಆದರೆ ದೇಶದಾದ್ಯಂತ ಎದ್ದ ಅಸಂಖ್ಯ ಪ್ರಶ್ನೆಗಳ ದೆಸೆಯಿಂದ ಅವಳ ತಂದೆ—ತಾಯಿಗಳು ಬೇಡವೆಂದರೂ ಅವಳನ್ನು ಗೋರಿಯಿಂದೆಬ್ಬಿಸಿ ಕೊರೋನರ್ ಪರೀಕ್ಷೆಗೊಳಪಡಿಸಬೇಕಾಯಿತು. ಘಟನೆಯ ಕಾಲದಲ್ಲಿ ಇಬ್ಬರೂ ಅತಿಯಾಗಿ ಕುಡಿದಿದ್ದರೆ? ಅದರಲ್ಲಿ ಏನಾದರೂ ಮೋಸವಿತ್ತೆ?

ಶವಪರೀಕ್ಷೆಯ ನಂತರ ಅಪಘಡದಲ್ಲಿ ಏನೂ ಮೋಸವಿಲ್ಲ ಎಂಬುದಾಗಿ ತೀರ್ಪು ಹೊರಟಿತು. ಆದರೂ ಕರ್ತವ್ಯಲೋಪಕ್ಕಾಗಿ ಸಿನೇಟ್ ಕೆನ್ನೆಡಿಗೆ ನ್ಯಾಯಾಲಯವು ಸೆರೆಮನೆ ಶಿಕ್ಷೆಯನ್ನು ವಿಧಿಸಿತೆಂಬುದನ್ನು ಮರೆಯಲಾದೀತೆ? ಆ ಶಿಕ್ಷೆಯನ್ನು ನ್ಯಾಯಾಲಯವು ಅಮಾನತು ಮಾಡಿದರೂ ಕೆನ್ನೆಡಿಯ ಹೆಸರಿಗೆ ಹತ್ತಿದ ಕಳಂಕ ಮಾಸಲಿಲ್ಲ. ನಾಳಿನ ಅಧ್ಯಕ್ಷತನವನ್ನು ವಹಿಸುವ ಯೋಗ್ಯತೆ ಈತನಿಗುಂಟೆ ಎಂಬ ಪ್ರಶ್ನೆ ಬೃಹದಾಕಾರವಾಗಿ ನಿಂತುಬಿಟ್ಟಿತು.

ಟೆಡ್ಡಿ ಕೆನ್ನೆಡಿ ಮುಂದಿನ ಅಧ್ಯಕ್ಷ ಚುನಾವಣೆಗೆ ನಿಲ್ಲುವುದಿಲ್ಲೆಂದು ಆಗಲೇ ಪ್ರಕಟಿಸಿದ್ದಾರೆ. ಅವರ ಪಕ್ಷ ಅವರನ್ನು ನಿಲ್ಲಿಸಬೇಕೆಂದು ಈಗ ಹೇಳತೊಡಗಿದ್ದರೂ ಈ ಸಲ ನಿಲ್ಲುವ ಧೈರ್ಯ ಅವರಿಗೆ ಬಂದೀತೆ? ಈಗ ಬಿಟ್ಟರೆ ಮುಂದೆ ಎಂದಾದರೂ ಆ ಅವಕಾಶ ಅವರಿಗೆ ಲಭ್ಯವಾದೀತೆ? ಎಂಬುದೂ ಸಂದಿಗ್ಧವಾಗಿದೆ. ಕೊನೆಯ ಕೆನ್ನೆಡಿಗೆ ಇದು ನಿಜವಾದ ವಜ್ರಾಘಾತ. ತನ್ನ ಮೂವರು ಅಣ್ಣಂದಿರು ಸತ್ತರೂ ಅಮರರಾದರು. ಈತ ಇದ್ದರೂ ವಿಫಲರಾಗುವರೆ? *





೨೨-2

ಇನ್ನೂ 35 ವಯಸ್ಸಿನವನಾಗಿದ್ದ ಈ ಸೈನ್ಯಾಧಿಕಾರಿ ನಿಷ್ಕಲ್ಮಷ ಮನಸ್ಸಿನವನಾಗಿದ್ದುದರಿಂದ ಅವನು ತನ್ನನ್ನು ಆಪಾದಿಸಿದ ಮತ್ತು ದಂಡಿಸಿದ ಅಧಿಕಾರಿಗಳು ಪ್ರಾಮಾಣಿಕ ತಪ್ಪು ತಿಳುವಳಿಕೆಯಿಂದ ತನಗೆ ಶಿಕ್ಷೆ ಕೊಟ್ಟರೆಂದೇ ನಂಬಿ ಒಂದಲ್ಲ ಒಂದು ದಿನ ಸತ್ಯಕ್ಕೆ ಜಯ ದೊರೆಯುವುದೆಂಬ ಆಸೆಯಿಂದ ಸೆರೆಮನೆಯಲ್ಲಿ ನವೆಯುತ್ತಿದ್ದ. ಆದರೆ ಇದು ಪ್ರಾಮಾಣಿಕ ತಪ್ಪಲ್ಲ; ಧಾರ್ಮಿಕ ಪೂರ್ವಾಗ್ರಹ, ಹೃದಯ ದೌರ್ಬಲ್ಯ ಮತ್ತು ಬುದ್ಧಿವಂತನೂ ಉರ್ಜಸ್ವಿಯೂ ಆದ ಅಧಿಕಾರಿಯೊಬ್ಬನ ಏಳಿಗೆಯನ್ನು ಸಹಿಸದ ಮತ್ಸರ ಬುದ್ಧಿ ಈ ಅನ್ಯಾಯಕ್ಕೆ ಕಾರಣವಾದವೆಂಬ ಸಂಶಯ ಕೆಲವರಿಗಿತ್ತು. ಡ್ರೇಫಸ್ ಎರಡು ವರ್ಷ ಕಾಲ ಶಿಕ್ಷೆ ಅನುಭವಿಸಿದ ನಂತರ ಒಬ್ಬ ಮಿಲಿಟರಿ ಶೋಧಕನಿಗೆ ಡ್ರೇಫಸ್ ನಿರಪರಾಧಿ ಎಂದೂ ನಿಜವಾಗಿ ಆ ಪತ್ರವನ್ನು ಬರೆದವನು ಮೇಜರ್ ಎಸ್ತರ್‌ಹೇಜಿಯೆಂಬ ಇನ್ನೊಬ್ಬ ಅಧಿಕಾರಿಯೆಂದೂ ಗೊತ್ತಾಯಿತು. ಎಸ್ತರ್ ಹೇಜಿಯನ್ನೇನೊ ಸೈನಿಕ ನ್ಯಾಯಾಲಯದ ಮುಂದೆ ನಿಲ್ಲಿಸಲಾಯಿತು. ಆದರೆ ಆಗಲೇ ಸಾರ್ವಜನಿಕರಲ್ಲಿ ಅಷ್ಟಿಷ್ಟು ವಿವಾದ ಎಬ್ಬಿಸಿದ್ದ ಈ ಪ್ರಕರಣದಲ್ಲಿ ತಾವು ಮೊದಲು ತಪ್ಪು ಮಾಡಿದ್ದೆವೆಂದು ಒಪ್ಪುವುದಕ್ಕೆ ವರಿಷ್ಠ ಸೈನಾಧಿಕಾರಿಗಳು ಸಿದ್ಧರಾಗಲಿಲ್ಲ. ಎಸ್ತರ್‌ಹೇಜಿಯನ್ನು ಸೈನಿಕ ನ್ಯಾಯಾಲಯ ಸರಿಯಾಗಿ ವಿಚಾರಿಸದೇ ಬಿಡುಗಡೆ ಮಾಡಿತು. ಮರುವರ್ಷ ಡ್ರೇಫಸ್ಸನ ತಮ್ಮ ತನ್ನಣ್ಣ ನಿರಪರಾಧಿ ಮತ್ತು ನಿಜವಾದ ತಪ್ಪುಗಾರ ಎಸ್ತರ್‌ಹೇಜಿಯೆಂಬುದಕ್ಕೆ ಹೊಸ ಪ್ರಮಾಣಗಳನ್ನು ಮುಂದೊಡ್ಡಿ ಪುನರ್ವಿಚಾರಣೆಗೆ ಅಗ್ರಹಪಡಿಸಿದ. ಆದರೆ ಸತ್ಯ ಮತ್ತು ನ್ಯಾಯಕ್ಕಿಂತ ಸೈನ್ಯದ "ಮರ್ಯಾದೆ" ಉಳಿಸಿಕೊಳ್ಳುವುದು ಮುಖ್ಯವೆಂದು ಬಗೆದ ಅಧಿಕಾರಿಗಳು ಅದಕ್ಕೆ ಕಿವಿಗೊಡಲಿಲ್ಲ.

ಪ್ರಾರಂಭದಿಂದಲೂ ಈ ಪ್ರಕರಣದಲ್ಲಿ ಆಸಕ್ತಿ ವಹಿಸಿದ್ದ ಎಮಿಲಿ ಜೋಲಾ (ಜನನ 1840) ಆಗಲೇ ಫ್ರೆಂಚ್ ಸಾಹಿತ್ಯ ರಂಗದಲ್ಲಿ ಪ್ರಸಿದ್ಧ ಕಾದಂಬರಿಕಾರನೆಂದು ಪ್ರಭಾವಶಾಲಿಯಾಗಿದ್ದ. ಬಡವರ ಬಗ್ಗರ ಬಗ್ಗೆ ಘನವಾದ ಕಳಕಳಿ ಇದ್ದ ಆತ ಸಮಾಜದ ದಲಿತ ವರ್ಗಗಳ ಜೀವನದ ನೈಜ ಚಿತ್ರಣಗಳನ್ನೊಳಗೊಂಡ ಕಾದಂಬರಿಗಳನ್ನು ಬರೆದು ಫ್ರಾನ್ಸಿನಲ್ಲಲ್ಲದೆ ವಿದೇಶಗಳಲ್ಲಿಯೂ ಖ್ಯಾತಿಯ ಶಿಖರದಲ್ಲಿದ್ದ.* ಡ್ರೇಫಸ್ಸನಿಗಾದ ಅನ್ಯಾಯ ಮನವರಿಕೆಯಾಗುತ್ತಲೇ ಬಂದದ್ದು ಬರಲಿ, ಇದರ ವಿರುದ್ಧ ದನಿಯೆತ್ತಲೇ ಬೇಕೆಂದು ಅವನ ಗಾಢವಾದ ಮಾನವೀಯ ಮನಸ್ಸು ಪ್ರೇರಿಸಿತು.

ಫ್ರಾನ್ಸಿನ ಆಗಿನ ಅಧ್ಯಕ್ಷ ಫೇಲಿಕ್ಸ್ ಫಾವ್ರ ಹೆಸರಿಗೆ ಒಂದು ಬಹಿರಂಗ ಪತ್ರವನ್ನು ಪ್ರಕಟಿಸುವುದರ ಮೂಲಕ ಎಮಿಲಿ ಜೋಲಾ ಫ್ರಾನ್ಸಿನ ಸೇನಾಪತಿ ಮಂಡಲಿ ಮತ್ತು ಉಚ್ಚಾಧಿಕಾರಿಗಳ ಮೇಲೆ ತನ್ನ ಮೊದಲ ಗುಂಡನ್ನು ಹಾರಿಸಿದ. ಅದು L'Aurore ("ಮುಂಬೆಳಗು") ಎಂಬ ಉದಾರ ವಿಚಾರದ ಪತ್ರಿಕೆಯಲ್ಲಿ 1898 ಜನವರಿ 13ರಂದು ಬೆಳಕು ಕಂಡಿತು. ಅದೇನು ಹೆಸರಾಂತ ಪತ್ರಿಕೆಯಾಗಿರಲಿಲ್ಲ. ಆದರೆ ಫ್ರಾನ್ಸಿನಲ್ಲಿ ಒಂದು ಬಿರುಗಾಳಿಯನ್ನೇ ಎಬ್ಬಿಸಲು ಜೋಲಾ ಪತ್ರ ಸಮರ್ಥವಾಯಿತು.

ಜೋಲಾನ ಈ ಪತ್ರ ಇಂದು ವಿಶ್ವ ಸಾಹಿತ್ಯದಲ್ಲಿ ಸ್ಥಾನ ಪಡೆದುಕೊಂಡಿದೆ. ಸಮರ್ಥ ಸಾಹಿತಿಯೊಬ್ಬನ ಲೇಖನಿ ಎಷ್ಟು ಸಾತ್ವಿಕ ಕ್ರೋಧ, ಎಂಥ ನಿರ್ವ್ಯಾಜ ನ್ಯಾಯಪರತೆ, ಯಾವೆಲ್ಲ ವಾಗ್ವೈಖರಿಯನ್ನು ಒಂದು ಪತ್ರದಲ್ಲಿ ತುಂಬಬಲ್ಲದೋ ಅಷ್ಟನ್ನೂ ಅದು ತುಂಬಿಕೊಂಡಿದೆ. ಅದು ಪ್ರಕಟವಾದ ಮೇಲೆ ಸಂಬಂಧಪಟ್ಟವರು ಸುಮ್ಮನೆ ಕುಳಿತಿರಲಾರದಂತೆ ಅದರ ಒಕ್ಕಣೆಯಿತ್ತು: ಈ ಪ್ರಕರಣದಿಂದಾಗಿ ಫ್ರಾನ್ಸಿನ ಅಧ್ಯಕ್ಷರ ಹೆಸರಿಗೆ "ಅಳಿಸಲಾರದ ಕಳಂಕ" ತಟ್ಟುವಂತಿದೆಯೆಂದು ಅದರಲ್ಲಿ ಜೋಲಾ ಹೇಳಿದ್ದ; ನೂರು ವರ್ಷದಿಂದ ಸತ್ಯಕ್ಕಾಗಿ ನ್ಯಾಯಕ್ಕಾಗಿ ಪರಿಶ್ರಮಿಸಿದ ಫ್ರಾನ್ಸಿನ ಕೀರ್ತಿ ಶಿಖರದಲ್ಲಿರುವಾಗಲೇ ಅದರ ಮೇಲೆ ಈ ಕಳಂಕ ಎರಚಲಾಗುತ್ತಿದೆಯೆಂದು ಕಳವಳ ವ್ಯಕ್ತಪಡಿಸಿದ್ದ; ಕೋರ್ಟ್ ಮಾರ್ಶಲ್‌ನಲ್ಲಿ ನಿಜವಾದ ಅಪರಾಧಿ ಎಸ್ತರ್ ಹೇಜಿಯೆಂದು ಗೊತ್ತಿದ್ದೂ ನಿರಪರಾಧಿಯೆಂದು ತೀರ್ಮಾನಿಸಿದ ಸೈನಿಕ ನ್ಯಾಯಾಧೀಶರು "ಅಸತ್ಯ ಮತ್ತು ಅನ್ಯಾಯ"ವನ್ನು ಸ್ಥಾಪಿಸಿದವರೆಂದು ಆರೋಪಿಸಿದ.

---

* ಕುಡುಕರ ಜೀವನವನ್ನು ಕುರಿತ ಜೋಲಾನ Assommoir (1878), ಸೂಳೆಯ ಬದುಕನ್ನು ಚಿತ್ರಿಸುವ Nana (1880), ಗಣಿ ಕೂಲಿಕಾರರ ಅವಸ್ಥೆಯನ್ನು ಕುರಿತ Yerminal (1885) ಇವೇ ಮೊದಲಾದವು ದಲಿತರ, ನೀತಿಗೇಡಿಗಳ ಬಗ್ಗೆ ಒಂದು ಹೊಸ ದೃಷ್ಟಿಯನ್ನೇ ತೆರೆದವು.

ಇತಿಹಾಸದ ಒಂದು ಜ್ವಲಂತ ಪುಟ

ಪರರಿಗಾದ ಅನ್ಯಾಯದ ವಿರುದ್ಧ

ಬುದ್ಧಿಜೀವಿಯೊಬ್ಬನ ಹೋರಾಟ

* ಪಾ. ವೆಂ. ಆಚಾರ್ಯ

ಅನ್ಯಾಯ ಯಾರಿಗೇ, ಯಾವ ಜಾತಿಯವನಿಗೇ ಆಗಲಿ, ಅದು ತಮಗೇ ಆದಂತೆ ಎಂದು ಅದರ ಪರಿಮಾರ್ಜನೆಗಾಗಿ ಹೋರಾಡಿದ, ಅದಕ್ಕೆ ತಮ್ಮೆಲ್ಲ ಕೀರ್ತಿಯನ್ನು ಪಣಕ್ಕಿಟ್ಟ ಬುದ್ಧಿಜೀವಿಗಳಲ್ಲಿ ಫ್ರೆಂಚ್ ಕಾದಂಬರಿಕಾರ ಎಮಿಲಿ ಜೋಲಾ ಅಗ್ರಪಂಕ್ತಿಯಲ್ಲಿ ಬರುತ್ತಾನೆ. ಅನ್ಯಾಯಕ್ಕೊಳಗಾದವನು ಕ್ಯಾಪ್ಟನ್ ಡ್ರೇಫಸ್ ಎಂಬ ಫ್ರೆಂಚ್ ಸೈನ್ಯಾಧಿಕಾರಿ. ಅವನ ಮೇಲೆ ದೇಶದ್ರೋಹದ ಆರೋಪ ಹೊರಿಸಿ ಶಿಕ್ಷಿಸಲಾಗಿತ್ತು. ಜೋಲಾಗೆ ಡ್ರೇಫಸ್ಸನ ಪರಿಚಯವೇ ಇದ್ದಿಲ್ಲ. ಆದರೆ ಈ ಪ್ರಕರಣದಲ್ಲಿ ಬುದ್ಧಿಪೂರ್ವಕ ಅನ್ಯಾಯವಾಗಿದೆಯೆಂದು ಗುಸುಗುಸು ಕೇಳಿಸುತ್ತಿತ್ತು. ಜೋಲಾ ಅದರಲ್ಲಿ ಆಸಕ್ತಿ ವಹಿಸಿ ಖಾಸಗಿಯಾಗಿ ವಿಚಾರಿಸಿ ವಸ್ತುಸ್ಥಿತಿಯನ್ನು ಕಂಡುಕೊಂಡ. ಮತ್ತು ನಿರಪರಾಧಿಯ ಪಕ್ಷ ವಹಿಸಿ ಕಣಕ್ಕಿಳಿಯುವಲ್ಲಿ ಅವನು ಫ್ರಾನ್ಸಿನ ಪ್ರಬಲ ರಾಜಕಾರಣಿಗಳನ್ನು ಮಾತ್ರವಲ್ಲ, ಇಡೀ ಸೇನಾಪತಿ ಮಂಡಳಿಯನ್ನು ಎದುರು ಹಾಕಿಕೊಳ್ಳಲು ಹಿಂಜರಿಯಲಿಲ್ಲ.

ಫ್ರಾನ್ಸಿಗೂ ಜರ್ಮನಿಗೂ ಹಗೆತನ ಕುದಿಯುತ್ತಿದ್ದ ಆ ಕಾಲದಲ್ಲಿ (1894) ಫ್ರೆಂಚ್ ಸೈನ್ಯದ ಕೆಲ ಅತಿ ಗುಪ್ತ ದಾಖಲೆಗಳ ಒಂದು ಯಾದಿ ಮತ್ತು ತಕ್ಕ ಪ್ರತಿಫಲ ಸಿಕ್ಕಿದರೆ ಆ ದಾಖಲೆಗಳನ್ನು ಜರ್ಮನ್ ಸರಕಾರಕ್ಕೆ ಒದಗಿಸುವ ಆಶಯವನ್ನು ವ್ಯಕ್ತಪಡಿಸುವ ಒಂದು ಪತ್ರ ಫ್ರೆಂಚ್ ಗೂಢಚಾರ ಶಾಖೆಯ ಕೈಗೆ ಬಿತ್ತು. ಸಹಜವಾಗಿಯೇ ಅದನ್ನು ಬರೆದವರ ಶೋಧಕ್ಕೆ ಮೊದಲಾಯಿತು. ಕೆಲ ಆಸಕ್ತ ಅಧಿಕಾರಿಗಳು ಕ್ಯಾಪ್ಟನ್ ಆಲ್‌ಫ್ರೆಡ್ ಡ್ರೇಫಸ್ ಎಂಬ ಉದೀಯಮಾನ ಅಧಿಕಾರಿಯತ್ತ ಸಂಶಯ ತಿರುಗುವಂತೆ ಮಾಡಿದರು. ಸಂಬಂಧಪಟ್ಟ ಪತ್ರದ ಕೈಬರಹ ಡ್ರೇಫಸ್ಸನ ಕೈಬರಹವನ್ನು ಹೋಲುತ್ತಿತ್ತೆಂಬುದಕ್ಕಿಂತ ಹೆಚ್ಚಿನ ಪುರಾವೆಯೇನೂ ಇರಲಿಲ್ಲ. ಆದರೆ ಡ್ರೇಫಸ್ ಯಹೂದ್ಯ ಜಾತಿಯವನಾಗಿದ್ದ ಮತ್ತು ಯಹೂದ್ಯರು ಯುರೋಪಿನ ಯಾವ ದೇಶದಲ್ಲಿಯೂ "ಜನಪ್ರಿಯ"ರಾಗಿರಲಿಲ್ಲ; ಅಲ್ಲದೆ ಅವನು ಜರ್ಮನ್ ಮೂಲದವನಾಗಿದ್ದ. ಸೈನ್ಯದಲ್ಲಿ ಮಹತ್ವದ ದಾಖಲೆಗಳನ್ನು ಬಲ್ಲವನಾದ ಯಾವನೊ ಅಧಿಕಾರಿ ಅವುಗಳನ್ನು ಶತ್ರುಗಳಿಗೆ ಮಾರುವುದಕ್ಕೆ ಯತ್ನಿಸಿದ್ದಾನೆಂಬ ಸುದ್ದಿ ಕೇಳಿ ಫ್ರೆಂಚ್ ಜನರಲ್ಲಿ ಎದ್ದ ಗಲಾಟೆಯನ್ನು ಉಪಶಮನ ಮಾಡುವುದಕ್ಕೆ ತುರ್ತಾಗಿ ಬಲಿಪಶುವೊಂದು ಬೇಕಾಗಿತ್ತು. ಡ್ರೇಫಸ್ಸನಷ್ಟು ಒಳ್ಳೇ ಬಲಿ ಬೇರೆ ಇರಲಿಲ್ಲ. ಡ್ರೇಫಸ್ ತನ್ನ ನಿರಪರಾಧಿತ್ವವನ್ನು ಎಷ್ಟೊಂದು ಸಕಾರಣವಾಗಿ ಹೇಳಿಕೊಂಡರೂ ಕೇಳದೆ ಮಿಲಿಟರಿ ನ್ಯಾಯಾಲಯ ವಿಚಾರಣೆಯ ನಾಟಕದ ನಂತರ ಆತನನ್ನು ಕೆಲಸದಿಂದ ಕಿತ್ತುಹಾಕಿ ಡೆವಿಲ್ಸ್ ಐಲಂಡ್ (ದೆವ್ವದ ದ್ವೀಪ) ಎಂಬ ದ್ವೀಪದ ಕೋಟೆಯಲ್ಲಿ ಅವನನ್ನು ಆಜೀವ ಸೆರೆಯಲ್ಲಿಡಬೇಕೆಂದು ತೀರ್ಪು ಕೊಟ್ಟಿತು.

ಅನ್ಯಾಯದ ವಿರುದ್ಧ ಸಾತ್ವಿಕ ಕ್ರೋಧದಿಂದ ಹೋರಾಡಿದ ಮಹಾನ್ ಸಾಹಿತಿ ಎಮಿಲಿ ಜೋಲಾ.


"L'accuse" – ನಾನು ಆಪಾದಿಸುತ್ತೇನೆ – ಎಂದು ಪ್ರಾರಂಭವಾಗುವ ಎಂಟು ಚಿಕ್ಕ ಪಾರಾಗಳಲ್ಲಿ ಈ ಪತ್ರ ಎಸ್ತರ್‌ಹೇಜಿಯನ್ನು ದೋಷಮುಕ್ತರಾಗಿ ಮಾಡಿದ ಮಿಲಿಟರಿ ನ್ಯಾಯಾಧೀಶರು, ತಪಾಸಣೆ ಮಾಡಿದ ಶೋಧಕರ್ತರು, ಸಾಕ್ಷಿ ಹೇಳಿದ ಕೈಬರಹತಜ್ಞರನ್ನೊಳಗೊಂಡು ಉಚ್ಚ ಸೈನ್ಯಾಧಿಕಾರಿಗಳನ್ನು ಒಬ್ಬೊಬ್ಬರಾಗಿ ಹೆಸರೆತ್ತಿ ಅವರ ಮೇಲೆ ಅಸತ್ಯ, ಅನ್ಯಾಯ, ದುರ್ಬುದ್ಧಿಗಳ ಆರೋಪವನ್ನು ಹೊರಿಸಿ ಇಡೀ ಸೇನಾಪತಿ ಮಂಡಳಿಗೇ ಆಹ್ವಾನವೊಡ್ಡಿತ್ತು.

ಈ ಪತ್ರವನ್ನು ಅಲಕ್ಷ್ಯ ಮಾಡಿಬಿಡಬಾರದೆಂಬ ಇರಾದೆಯಿಂದ ತನ್ನೀ ಪತ್ರದಲ್ಲಿ ಮಾಡಿದ ಅಧಿಕ್ಷೇಪಣೆಗಳು 1881ರ ಪತ್ರಿಕಾ ಕಾನೂನಿನ ಪ್ರಕಾರ ದಂಡನಾರ್ಹವಾಗಿವೆಯೆಂದು ತನಗೆ ಗೊತ್ತೇ ಇದೆ

ಜೋಲಾನ ಆಪಾದನಾ ಪತ್ರ

ನಾನು ಆಪಾದಿಸುತ್ತೇನೆ

(L'accuse)



ಶ್ರೀಯುತ ಅಧ್ಯಕ್ಷರೇ,

ಹಿಂದೊಮ್ಮೆ ತಾವು ನನಗೆ ತೋರಿಸಿದ ದಾಕ್ಷಿಣ್ಯಕ್ಕೆ ಪ್ರತಿಯಾಗಿ... ಇದುವರೆಗೆ ಜಾಜ್ವಲ್ಯಮಾನವಾಗಿರುವ ತಮ್ಮ ನಿಷ್ಕಲ್ಮಷ ಕೀರ್ತಿತಾರೆಗೆ ಇಂದು ಅತ್ಯಂತ ಹೇಯವಾದ, ಅಳಿಸಲಾರದ ಕಳಂಕವೊಂದು ತಗಲುವ ಭಯವುಂಟಾಗಿದೆಯೆಂಬ ನನ್ನ ಚಿಂತೆಯನ್ನು ತಮಗೆ ನಿವೇದಿಸಲು ಅನುಮತಿ ಕೋರುತ್ತೇನೆ.

...ಸತ್ಯ ಸ್ವಾತಂತ್ರ್ಯಗಳಿಗಾಗಿ ಈ ದೇಶ ಹೂಡಿದ ಶತಮಾನ ಪರ್ಯಂತ ಹೋರಾಟಕ್ಕೆ ಕಳಸವಿಡುವಂಥ ವಿಜಯಶ್ರೀಯ ನಡುವೆ ಸ್ಥಾನಾಪನ್ನರಾಗಲು ತಾವಿಂದು ಅಣಿಯಾಗುತ್ತಿರುವಾಗ, ಈ ಅಸಹ್ಯ ಡ್ರೇಫಸ್ ಪ್ರಕರಣ ತಮ್ಮ ಹೆಸರಿಗೆ – ಅಥವಾ ಆಳಿಕೆಗೇ ಎನ್ನಲೇ – ಎಂಥ ಕೆಸರು ಚೆಲ್ಲುತ್ತಿದೆ! ಮೇಲಿನವರ ಅಪ್ಪಣೆಗೆ ತಲೆವಾಗಿ ಎಸ್ತರ್‌ಹೇಜಿ ಎಂಬ ವ್ಯಕ್ತಿಯನ್ನು ಅಪರಾಧಮುಕ್ತ ಮಾಡುವ ಧಾರ್ಷ್ಟ್ಯವನ್ನು ತೋರಿಸಿ ಸೈನಿಕ ನ್ಯಾಯಾಲಯ ಅನೃತ ಮತ್ತು ಅನ್ಯಾಯದ ಪರಮಾವಧಿಗೆ ಎಳಸಿದೆ... ಈ ದುಷ್ಕೃತಿ ತಾವು ರಾಷ್ಟ್ರದ ಅಧ್ಯಕ್ಷರಾಗಿದ್ದ ಕಾಲದಲ್ಲಿ ಜರುಗಿತೆಂಬುದಾಗಿ ಇತಿಹಾಸದಲ್ಲಿ ಅಂಕಿತವಾಗಿಬಿಡುತ್ತದೆ.

ಅವರು ಧಾರ್ಷ್ಟ್ಯ ತೋರಿಸಿದ್ದರಿಂದ ನಾನೂ ಧೃಷ್ಟನಾಗುತ್ತೇನೆ. ನಾನು ಸತ್ಯವನ್ನು ಘೋಷಿಸುತ್ತೇನೆ; ಯಾಕೆಂದರೆ ನಾನು ಸತ್ಯ ಪ್ರತಿಜ್ಞಾತನಾಗಿದ್ದೇನೆ. ಸತ್ಯವನ್ನು ಸಾರಬೇಕಾಗಿದ್ದ ನ್ಯಾಯಸ್ಥಾನ ಸಮಗ್ರ, ಪೂರ್ಣ ಸತ್ಯವನ್ನು ಸಾರಲಿಲ್ಲವಾಗಿ ಅದನ್ನು ಸಾರುವುದು ನನ್ನ ಕರ್ತವ್ಯವಾಗಿದೆ. ಈ ಕರ್ತವ್ಯ ಮಾಡದಿದ್ದರೆ ನಿರಪರಾಧಿಯೊಬ್ಬ ತಾನು ಮಾಡದಿದ್ದ ಪಾತಕಕ್ಕಾಗಿ ಭೀಕರ ಚಿತ್ರಹಿಂಸೆ ಅನುಭವಿಸುವ ದೃಶ್ಯ ನನ್ನನ್ನು ರಾತ್ರಿಯಲ್ಲಿ ದುಃಸ್ವಪ್ನವಾಗಿ ಕಾಡದೆ ಬಿಡದು.

ಅಧ್ಯಕ್ಷ ಮಹಾಶಯರೇ, ಈ ಸತ್ಯವನ್ನು ಒಬ್ಬ ನ್ಯಾಯಸ್ಥನೆಂಬ ನಾತೆಯಿಂದ ನಾನು ನನ್ನ ಸಕಲ ವಿದ್ರೋಹ ಭಾವವನ್ನೂ ಒಂದುಗೂಡಿಸಿ ತಮ್ಮ ಮುಂದೆ ಘೋಷಿಸುತ್ತೇನೆ...ತಾವು ಈ ಘೋರ ಪಾತಕದ ತಥ್ಯಗಳನ್ನು ಅರಿತಿಲ್ಲವೆಂದು ನಾನು ನಂಬಿದ್ದೇನೆ. ಈ ದೇಶದ ಅತ್ಯುಚ್ಚ ನ್ಯಾಯಮೂರ್ತಿಯಾದ ತಮ್ಮ ಮುಂದಲ್ಲದೆ ಮತ್ತಾರ ಮುಂದೆ ಈ ದುರ್ಜನರ ಹಿಂದನ್ನು ಆಪಾದಿಸಲಿ?

ಈ ವಿಷಯದಲ್ಲಿ... ರಾಜ್ಯ ಸಂವಿಧಾನ ಮತ್ತು ಪರಿಸ್ಥಿತಿಯಿಂದ ತಮ್ಮ ಕೈಕಟ್ಟಿದೆಯೆಂದು ನನಗೆ ಸಂಶಯವಿದೆ. ಆದರೆ ಮನುಷ್ಯನೆಂಬ ಸ್ಥಾನದಿಂದ ತಾವು ಮಾಡಬೇಕಾದ ಕರ್ತವ್ಯ ಇದ್ದೇ ಇದೆಯಲ್ಲವೇ? ಅದನ್ನು ಬಗೆದು ತಾವು ಕರ್ತವ್ಯ ನಿರ್ವಹಿಸಬೇಕು. ಇದರಲ್ಲಿ ಕೊನೆಗಾದರೂ ನನಗೆ ಯಶಸ್ಸು ಸಿಗುತ್ತದೆಂಬ ವಿಷಯದಲ್ಲಿ ನಾನು ನಿರಾಶನಲ್ಲ... ಸತ್ಯದ ಜೈತ್ರವನ್ನು ತಡೆಯುವುದು ಯಾರಿಗೂ ಸಾಧ್ಯವಿಲ್ಲೆಂದು ನಾನು ಅಕ್ಷುಣ್ಣ ವಿಶ್ವಾಸದಿಂದ ಘೋಷಿಸುತ್ತೇನೆ... ಸತ್ಯವನ್ನು ನೆಲದಡಿ ಹುಗಿದರೆ ಅದು ವರ್ಧಿಸುತ್ತದೆ,

ಉಸ-4

ಯೆಂದು ಜೋಲಾ ಬರೆದಿದ್ದ. ಈ ಶಿಕ್ಷೆಗೆ ಅಣಿಯಾಗಿಯೇ ತಾನು ನ್ಯಾಯಕ್ಕಾಗಿ ಈ ಕೆಲಸ ಮಾಡಿದ್ದೇನೆಂದು ಹೇಳಿ ಪತ್ರ ಮುಗಿಸಿದ್ದ.

ಇದು ಪ್ರಕಟವಾದ ಮೇಲೆ ಸರಕಾರಕ್ಕಾಗಲಿ ವರಿಷ್ಠ ಸೈನ್ಯಾಧಿಕಾರಿಗಳಿಗಾಗಲಿ ಸುಮ್ಮನಿರುವುದು ಸಾಧ್ಯತೆ ಇರಲಿಲ್ಲ. ಸರಕಾರವೇನೋ ಸತ್ಯವನ್ನರಿತು ಡ್ರೇಫಸ್ ಪ್ರಕರಣವನ್ನು ಪುನರ್ವಿಚಾರಣೆಗೆ ತರಬೇಕೆಂದು ಬಯಸಿತ್ತು. ಆದರೆ ನ್ಯಾಯವೇನೇ ಇರಲಿ, ಪುನರ್ವಿಚಾರಣೆ ಮಾಡಿದ್ದೇ ಆದರೆ ಅದು ಸೈನ್ಯದ ಗೌರವಕ್ಕೆ ಚ್ಯುತಿ ತರುವುದೆಂದು ಹೇಳಿ ಇಡೀ ಸೇನಾಪತಿ ಮಂಡಳಿಯೇ ರಾಜೀನಾಮೆ ಕೊಡುವುದಾಗಿ ಸರಕಾರಕ್ಕೆ ಬೆದರಿಕೆ ಹಾಕಿತು.

ಆದ್ದರಿಂದ ಆಗಿನ ದುರ್ಬಲ ಚಿತ್ತದ ಮಂತ್ರಿ ಮಂಡಲ ಎಮಿಲಿ ಜೋಲಾನನ್ನೇ ಫೆಬ್ರುವರಿ 1898

ಪ್ರಚಂಡ ಸ್ಫೋಟಕ ಶಕ್ತಿಯನ್ನು ಶೇಖರಿಸುತ್ತದೆ; ಅದು ಸಿಡಿದೇಳುವ ದಿನ ತನ್ನೊಡನೆ ಎಲ್ಲವನ್ನೂ ಸ್ಫೋಟಿಸುತ್ತದೆ...

ಆದರೆ ಅಧ್ಯಕ್ಷ ಮಹಾಶಯರೇ ಇಷ್ಟು ಸಾಕು, ನಾನಿನ್ನು ಮುಗಿಸಬೇಕಾಗಿದೆ.

ನ್ಯಾಯದಾನದ ಈ ಪ್ರಮಾದ ಅರಿತೋ ಅರಿಯದೆಯೋ ಉಪಕರಣವಾಗಿ ಆಮೇಲೆ ಮೂರು ವರ್ಷಕಾಲ ಈ ದುಷ್ಟ ಕೃತ್ಯವನ್ನು ಅತ್ಯಂತ ಹೇಯ ಮತ್ತು ಮೂರ್ಖ ಕುತಂತ್ರಗಳಿಂದ ಸಮರ್ಥಿಸಿಕೊಳ್ಳುತ್ತಿದ್ದುವೆಂದು ಲೆಫ್ಟಿನೆಂಟ್ ಕರ್ನಲ್ ದು ಪಾತಿ ದ ಕ್ಲಾಮ್ ನನ್ನು ನಾನು ಆಪಾದಿಸುತ್ತೇನೆ.

ಜನರಲ್ ಮರ್ಶಿಯರನನ್ನು ಈ ಶತಮಾನದ ಪರಮ ಅನ್ಯಾಯವೊಂದರಲ್ಲಿ – ಮನೋ ದೌರ್ಬಲ್ಯದಿಂದಿರಬಹುದು – ಸಹಭಾಗಿಯಾಗಿದ್ದಾನೆಂದು ನಾನು ಆಪಾದಿಸುತ್ತೇನೆ.

ಡ್ರೆಫಸನ ನಿರಪರಾಧಿತ್ವದ ಖಚಿತ ಪ್ರಮಾಣಗಳು ಕೈಲಿದ್ದರೂ ಅವುಗಳನ್ನು ಹತ್ತಿಕ್ಕಿ... ಮನುಷ್ಯಕುಲಕ್ಕೂ ನ್ಯಾಯದೇವತೆಗೂ ದ್ರೋಹ ಬಗೆದು ದುಷ್ಕರ್ಮ ಮಾಡಿದ್ದಾನೆಂದು ಜನರಲ್ ಬಿಲೆಟ್ಟನನ್ನು ನಾನು ಆಪಾದಿಸುತ್ತೇನೆ.

....

ಸಾರ್ವಜನಿಕಾಭಿಪ್ರಾಯವನ್ನು ತಪ್ಪು ದಾರಿಗೆಳೆಯಲು ಪತ್ರಿಕೆಗಳಲ್ಲಿ... ಅತ್ಯಂತ ಹೇಸಿತನದ ಸತ್ರವನ್ನು ನಡೆಸಿದೆಯೆಂದು ಸಮರ ಇಲಾಖೆಯನ್ನು ನಾನು ಆಪಾದಿಸುತ್ತೇನೆ.

ಕೊನೆಯದಾಗಿ ಆಪಾದಿತನಿಂದ ಪುರಾವೆಗಳನ್ನು ಗುಟ್ಟಾಗಿಟ್ಟು ಕಾನೂನು ವಿರುದ್ಧವಾಗಿ ಅವನಿಗೆ ಶಿಕ್ಷೆ ವಿಧಿಸಿದ್ದಕ್ಕಾಗಿ ಮೊದಲನೇ ಸೈನಿಕ ನ್ಯಾಯಾಲಯವನ್ನೂ ಈ ಕಾನೂನು ಭಂಗವನ್ನು ಮೇಲಿನವರ ಅಪ್ಪಣೆಯಂತೆ ಮುಚ್ಚಿಹಾಕಿ ಬುದ್ಧಿಪೂರ್ವಕವಾಗಿ ಅಪರಾಧಿಯೊಬ್ಬನನ್ನು ದೋಷಮುಕ್ತನಾಗಿ ಸಾರಿ ನ್ಯಾಯ ದ್ರೋಹ ಮಾಡಿದ್ದಕ್ಕಾಗಿ ಎರಡನೇ ಸೈನಿಕ ನ್ಯಾಯಾಲಯವನ್ನೂ ನಾನು ಆಪಾದಿಸುತ್ತೇನೆ.

ಮಾನಹಾನಿಯನ್ನು ಶಿಕ್ಷಾರ್ಹವಾಗಿ ಮಾಡುವ ಪತ್ರಿಕಾ ಕಾನೂನಿನ 30 ಮತ್ತು 31ನೇ ಕಲಮುಗಳ ಪ್ರಕಾರ ನನ್ನನ್ನು ದಂಡನಾರ್ಹವಾಗಿ ಮಾಡಿಕೊಳ್ಳುತ್ತಿದ್ದೇನೆಂದು ನನಗೆ ಗೊತ್ತಿಲ್ಲದೆ ಇಲ್ಲ. ಅದಕ್ಕೆ ನಾನು ಬೇಕೆಂದೇ ನನ್ನನ್ನು ಒಡ್ಡಿಕೊಳ್ಳುತ್ತಿದ್ದೇನೆ.

ನಾನು ಯಾರನ್ನು ಆಪಾದಿಸುತ್ತಿದ್ದೇನೋ ಅವರು ನನಗೆ ಪರಿಚಿತರಲ್ಲ; ಅವರನ್ನು ನಾನು ನೋಡಿಯೂ ಇಲ್ಲ; ಅವರ ಮೇಲೆ ಕೋಪವಾಗಲಿ ದ್ವೇಷವಾಗಲಿ ನನಗಿಲ್ಲ. ನನ್ನ ಪಾಲಿಗೆ ಅವರು ಕೇವಲ ಸಾಮಾಜಿಕ ದುರ್ಬುದ್ಧಿಯ ಸಂಕೇತಗಳು ಮಾತ್ರ ಆಗಿದ್ದಾರೆ. ನನ್ನ ಪ್ರಸ್ತುತ ಕ್ರಮದ ಉದ್ದೇಶ ಸತ್ಯ ಮತ್ತು ನ್ಯಾಯದ ವಿಸ್ಫೋಟವನ್ನು ತ್ವರಿತಗೊಳಿಸುವುದೊಂದೇ ಆಗಿದೆ.

ನನಗಿರುವ ಏಕಮಾತ್ರ ಉತ್ಕಂಠೆ ಬೆಳಕಿಗಾಗಿ. ಚಿರಪೀಡಿತವಾದ, ಸುಖಕ್ಕೆ ಅರ್ಹವಾದ ಮಾನವತೆಯ ಸಲುವಾಗಿ, ನನ್ನೀ ಉತ್ಕಂಠಿತ ಶಾಪ ನನ್ನ ಆತ್ಮದ ಆಕ್ರಂದನ ಮಾತ್ರ......

ನಾನು ಕಾಯುತ್ತಿದ್ದೇನೆ.

ನನಗೆ ತಮ್ಮಲ್ಲಿ ಆಳವಾದ ಗೌರವವಿದೆಯೆಂದು ತಮಗೆ ಭರವಸೆ ಕೊಡುತ್ತೇನೆ.

–ಎಮಿಲಿ ಜೋಲಾ



ಕ್ಯಾಪ್ಟನ್ ಡ್ರೇಫಸ್

ರಲ್ಲಿ ಪ್ಯಾರೀಸಿನಲ್ಲಿ ವಿಚಾರಣೆಗೆ ಎಳೆಯಿತು. ಜೋಲಾಗೆ ಅದು ರೋಗಿ ಬಯಸಿದ ಪಾಲಾಗಿತ್ತು. ಆಗಲೇ ಜೋಲಾನ ಬಹಿರಂಗ ಪತ್ರದಿಂದ ಅಲ್ಲೋಲ ಕಲ್ಲೋಲವಾಗಿದ್ದ ಫ್ರಾನ್ಸಿನ ಮಾನವೀಯ ಆತ್ಮವನ್ನು ಕೆದಕುವಂತೆ ಜೋಲಾ ಉಗ್ರವಾಗಿ ಆತ್ಮ ಸಮರ್ಥನೆ ಮಾಡಿಕೊಂಡು, ಪ್ರಕರಣದ ಕರಾಳ ಸಂದಿಗೊಂದಿಗಳಲ್ಲೆಲ್ಲ ಬೆಳಕು ಹರಿಸುವಂತೆ ಹೊಸ ಹೊಸ ತಥ್ಯಗಳನ್ನು ನ್ಯಾಯಾಲಯದ ಮುಂದೆ ಮಂಡಿಸಿದ.

ಆದರೆ ಸೈನ್ಯ ಇಲಾಖೆಯವರ ಒತ್ತಾಯ ಬಲವತ್ತರವಾಗಿತ್ತು. ನ್ಯಾಯಸ್ಥಾನ ಮಾನಹಾನಿಯ ಅಪರಾಧಕ್ಕಾಗಿ ಜೋಲಾಗೆ ಒಂದು ವರ್ಷದ ಸೆರೆಮನೆಯನ್ನು ವಿಧಿಸಿತ್ತು. ಜೋಲಾ ಬಿಡಲಿಲ್ಲ. ಅವನು ಅಪೀಲು ಮಾಡಿದ, ಮೇಲಿನ ನ್ಯಾಯಾಲಯ ಇಡೀ ವಿಚಾರಣೆಯೇ ಅಕ್ರಮವೆಂದು ಸಾರಿತು (1898 ಏಪ್ರಿಲ್). ಜುಲೈ ತಿಂಗಳಲ್ಲಿ ಅವನು ಪುನರ್ವಿಚಾರಣೆಯನ್ನು ಎದುರಿಸಬೇಕಾಯಿತು. ಇಷ್ಟು ಹೊತ್ತಿಗೆ ಈ ಪ್ರಕರಣ ದೇಶದಲ್ಲಿ ಕೋಲಾಹಲವನ್ನೇ ಎಬ್ಬಿಸಿ ಅದಕ್ಕೆ ರಾಜಕೀಯ ಸ್ವರೂಪ ಬಂದು ಫ್ರೆಂಚ್ ಜನತೆ ಇಬ್ಭಾಗವಾಗಿ ಒಡೆದು ಭಯಂಕರ ವಿವಾದದಲ್ಲಿ ಬಿದ್ದಿತ್ತು. ಒಂದು ಕಡೆ ಧರ್ಮಾಂಧತೆ, ಸಂಪ್ರದಾಯವಾದ, ಸೈನ್ಯದ ಮರ್ಯಾದೆ ಮೊದಲಾದ ಹೇತುಗಳು; ಇನ್ನೊಂದೆಡೆ ಜಾಗ್ರತವಾದ ರಾಷ್ಟ್ರೀಯ ಆತ್ಮಸಾಕ್ಷಿ, ಉದಾರ ಮತ– ಹೀಗೆ ರಾಜಕೀಯ ಶಕ್ತಿಗಳು ಒಂದಿಕೊಂಡವು. ಆದರೆ ಪ್ರಬಲ ಸೈನ್ಯಾಧಿಕಾರಿಗಳ ಮುಂಗೈ ಕಸುವಿನಿಂದಾಗಿ ಹೊಸ ವಿಚಾರಣೆಯೂ ಹಳೇ ಫಲವನ್ನೇ ಕೊಡುವುದು ನಿಶ್ಚಯವೆಂದೆನಿಸಿ ತೀರ್ಪಿಗೆ ಕಾಯದೆ ಜೋಲಾ ಪಲಾಯನ ಮಾಡಿ ಇಂಗ್ಲಂಡಿನಲ್ಲಿ ತಲೆ ಮರೆಸಿಕೊಂಡ.

ಜೋಲಾ ವಿರುದ್ಧ ತೀರ್ಪು ಹೊರಬಿದ್ದಾಗ ಫ್ರಾನ್ಸಿನಲ್ಲಿ ಮಾತ್ರವಲ್ಲ, ವಿದೇಶಗಳಲ್ಲಿಯೂ ತೀವ್ರ ಪ್ರತಿಕ್ರಿಯೆ ಕಂಡಿತು. ಸಾರ್ವಜನಿಕಾಭಿಪ್ರಾಯದ ಉತ್ಕಟತೆಗೆ ತಲೆವಾಗಿ ಸರಕಾರ (ಈಗ ಹೆಚ್ಚು ಧೈರ್ಯಶಾಲಿಯಾದ ಮಂತ್ರಿ ಸಂಪುಟ ಬಂದಿತ್ತು.) 1899ರಲ್ಲಿ ಡ್ರೇಫಸ್ ಪ್ರಕರಣದ ಪುನರ್ವಿಚಾರಣೆಗೆ ಆಜ್ಞಾಪಿಸಿತು. ಅನಿರ್ಬಂಧ ವಿಚಾರಣೆಯಲ್ಲಿ ನಿಜವಾದ ತಪ್ಪುಗಾರರು ತಾವು ಬೇಕೆಂದೇ ಸುಳ್ಳು ದಾಖಲೆಗಳನ್ನು ಸೃಷ್ಟಿಸಿದ್ದಾಗಿ ಒಪ್ಪಿಕೊಂಡರು. ಶಿಕ್ಷೆ ತಾತ್ಪೂರ್ತಿಕವಾಗಿ ರದ್ದಾಗಿ ಕ್ಯಾಪ್ಟನ್ ಡ್ರೇಫಸ್ ದೆವ್ವದ ದ್ವೀಪದಿಂದ ಮರಳಿ ಬಂದ. ಜೋಲಾ ಕೂಡ ಹಿಂದಿರುಗಿದ. ಅವನೀಗ ಜಗದ್ವಿಖ್ಯಾತನಾಗಿದ್ದ – ಸಾಹಿತಿಯೆಂದಷ್ಟೇ ಅಲ್ಲ – ನಿರ್ಭಯ ನ್ಯಾಯಪಕ್ಷಪಾತಿಯೆಂದು ಕೂಡ.

ಎಮಿಲಿ ಜೋಲಾ ತನ್ನ ಲೇಖನಿಯಿಂದ ಹೊಡೆದೆಬ್ಬಿಸಿದ ಜನಾಭಿಪ್ರಾಯದ ರೋಷ 1906ರಲ್ಲಿ ಕ್ಯಾಪ್ಟನ್ ಡ್ರೇಫಸ್ಸಿಗೆ ಪೂರ್ತಿ "ಕ್ಷಮೆ" ದೊರಕಿಸಿ ಕೊಟ್ಟಿತು.

ಆರು ವರ್ಷಗಳ ಯಮಲೋಕ ವಾಸ ಅನುಭವಿಸಿದರೂ ಕ್ಯಾಪ್ಟನ್ ಡ್ರೇಫಸ್ ಯಾವ ಕಲ್ಮಷವನ್ನೂ ಮನಸ್ಸಿನಲ್ಲಿಟ್ಟುಕೊಳ್ಳಲಿಲ್ಲ. ಸೈನ್ಯದಲ್ಲಿ ಪುನಃ ದುಡಿದು ಮೇಲೇರಿ 1914–18ರ ಮಹಾಯುದ್ಧದಲ್ಲಿ ತೋರಿಸಿದ ಶೌರ್ಯಕ್ಕಾಗಿ Legion of Honourದಿಂದ ಅಲಂಕರಿಸಲ್ಪಟ್ಟ.

ಜೋಲಾ ಇಂಗ್ಲಂಡಿನಿಂದ ಮರಳಿದಾಗ ದೇಶ ಅವನನ್ನು ವೀರೋಚಿತವಾಗಿ ಸ್ವಾಗತಿಸಿತು. ಅವನು ಡ್ರೇಫಸ್ ಪ್ರಕರಣವನ್ನು ಆಧರಿಸಿ Ve'rite' ಎಂಬ ಕಾದಂಬರಿಯನ್ನು ಮುಗಿಸಿ ಅದರದೇ ಉತ್ತರಕಾಂಡವೊಂದಕ್ಕೆ ಯೋಜನೆ ಹಾಕಿಕೊಂಡಿದ್ದಾಗಲೇ, 1902ರಲ್ಲಿ ತಮ್ಮ ಮನೆಯಲ್ಲಿ ವಿಷಗಾಳಿಯ ಆಕಸ್ಮಿಕ ಸೇವನೆಯಿಂದ ಅಪಮೃತ್ಯುವಿಗೀಡಾದ. ಅವನ ಸ್ಮಶಾನ ಯಾತ್ರೆಯಲ್ಲಿ ಪ್ರಚಂಡ ಜನಸಮೂಹ ಭಾಗವಹಿಸಿತ್ತು. ಸ್ವತಃ ಕ್ಯಾಪ್ಟನ್ ಡ್ರೇಫಸ್ ಅದರಲ್ಲಿ ಹಾಜರಿದ್ದ. ಮುಂದೆ ನೋಬೆಲ್ ಪಾರಿತೋಷಕ ಪಡೆಯಲಿದ್ದ ಕಾದಂಬರಿಕಾರ ಅನತೋಲ್ ಫ್ರಾನ್ಸ್ ಚರಮ ಗೌರವ ಅರ್ಪಿಸಿ ಭಾಷಣ ಮಾಡಿದ. ನ್ಯಾಯಕ್ಕಾಗಿ ಸತ್ಯಕ್ಕಾಗಿ ಜೀವನದ ಸಮಸ್ತವನ್ನೂ ತ್ಯಾಗ ಮಾಡಿದ ಸಾಹಿತಿಯಾಗಿ ಜೋಲಾ ಜಗತ್ತಿಗೆ ಚಿರಸ್ಮರಣೀಯನಾಗಿದ್ದಾನೆ. ●

ಪಾ. ನಂ. ಆಚಾರ್ಯ

ಅಂಕಗಣಿತ ಜೀನಿಯಸ್‌ನೊಬ್ಬನ ನೆನಪು

ಗಣಿತಜ್ಞೆ ಶಕುಂತಲಾ ದೇವಿಯ ತಂದೆ ತಾನೆಂದು ಹೇಳಿದ ಆ ವ್ಯಕ್ತಿ ಅಂಕಗಣಿತದ ಸಂಖ್ಯೆಗಳೊಂದಿಗೆ ಆಟ ಆಡುತ್ತಿದ್ದ.

ಅದು [illegible] ನಮ್ಮನ್ನು [illegible] ಬಂದಿದ್ದರು.

[illegible] ಪತ್ರಿಕೆಗಳ ಪ್ರತಿನಿಧಿಗಳು [illegible] ಭವನದಲ್ಲಿ ಅವರನ್ನು ಕಂಡೆವು. ಅವರನ್ನು ನೋಡಿದರೆ ಯಾವ ರೀತಿಯಲ್ಲಿಯೂ 'ಪ್ರತಿಭಾವಂತ' ಎನಿಸುತ್ತಿರಲಿಲ್ಲ. ಹಳೆ ಕಾಲದ ಒಬ್ಬ ವೈದಿಕ ಬ್ರಾಹ್ಮಣರ ಕಳೆ ಅವರ ಮುಖದಲ್ಲಿ ಸುರಿಯುತ್ತಿತ್ತು. ಪಾಂಡಿತ್ಯದ ಯಾವ ಆಡಂಬರ(?) ಇರಲಿಲ್ಲ. ಕೃಷ್ಣಭವನದ ಭೋಜನ ಶಾಲೆಯಲ್ಲಿ ಒಂದು ದೊಡ್ಡ ಮೇಜಿನ ಸುತ್ತ ಅರೆಕರೆಯಾದ ಒಂದು ದೊಡ್ಡ [illegible] ಚೀಲದ [illegible] ಇಟ್ಟುಕೊಂಡಿದ್ದರು. ಅವರ ಹತ್ತಿರ ಒಂದು ಚಿಕ್ಕ ಶಾಲಾ ಕರಿಹಲಗೆ ಇಟ್ಟುಕೊಂಡು ವ್ಯಂಗ್ಯ ಚಿತ್ರಗಳಲ್ಲಿ ತೋರಿಸುವಂಥ ಪ್ರಾಥಮಿಕ ಶಾಲಾ ಮೇಷ್ಟ್ರ ಭಂಗಿಯಲ್ಲಿ [illegible] ಅವರು ತಾವು ಗಣಿತ ಪ್ರವೀಣೆ ಶಕುಂತಲೆಯ ತಂದೆಯೆಂದೂ ಅವಳಿಗೆ ಸಂಖ್ಯೆಗಳ ಗುಣಾಕಾರ, ಭಾಗಾಕಾರ, ವರ್ಗ, ವರ್ಗಮೂಲಾದಿಗಳನ್ನು ಕ್ಷಣಮಾತ್ರದಲ್ಲಿ ಮಾಡಲು ಕಲಿಸಿದ್ದು ತಾವೇ ಎಂದೂ ಹೇಳಿದರು. ತಮ್ಮ ಹೆಸರು ಸುಬ್ಬರಾವ್ ಎಂದು ಅವರು ಹೇಳಿಕೊಂಡಂತೆ ನೆನಪು.

ಆಗ 'ಗಣಿತಾಮೃತ'ಗಳೆಂದು ಭಾರತದಲ್ಲಿ ಪ್ರಸಿದ್ಧಿ ಗಳಿಸಿದ್ದವರಲ್ಲಿ ಶಕುಂತಲಾದೇವಿ ಒಬ್ಬರು. ಪುರಿಯ ಹಿಂದಿನ ಶಂಕರಾಚಾರ್ಯರೊಬ್ಬರು. ಈಗ ಈ ಮೂರನೆ ಮಹಾಶಯರು ತಾವೂ ಅದ್ಭುತವೆಂದು ಸಾಧಿಸುತ್ತಿದ್ದರು. ಅವರ ಇರುವಿಕೆ ನೋಡಿದರೆ ಹಾಸ್ಯಾಸ್ಪದವಾಗಿ ಕಾಣುತ್ತಿತ್ತು. ಆದರೆ ಅವರು ಎಷ್ಟೇ ಉದ್ದ ಸಂಖ್ಯೆಯನ್ನು ಎಷ್ಟೇ ಉದ್ದ ಸಂಖ್ಯೆಯಿಂದ ಗುಣಿಸಿ ಕಣ್ಣು ಮುಚ್ಚಿ ತೆರೆಯುವುದರೊಳಗೆ ಉತ್ತರ ಹೇಳಿ ತೋರಿಸುತ್ತಿದ್ದಾಗ ಕೌತುಕದಿಂದ ನಮ್ಮ ಸಂಗಡ [illegible].

ಸವಾಲು

ನಮ್ಮಲ್ಲೊಬ್ಬರು ಐದಾರು ಅಂಕಿಗಳ ಸಂಖ್ಯೆಗಳನ್ನು ಹೇಳಿ ಅವುಗಳ ಗುಣಲಬ್ಧ ಎಷ್ಟು ಎಂದು ಸವಾಲು ಹಾಕಿದರು. ಅವರ ಪ್ರಶ್ನೆ ಮುಗಿಯುವಷ್ಟರಲ್ಲೇ ಆ ಮಹಾಶಯರು ಸುದೀರ್ಘ ಸಂಖ್ಯೆಯೊಂದನ್ನು ಕರಿಹಲಗೆ ಮೇಲೆ ಸರಸರನೆ ಬರೆದು ಸರಿಯೋ ಅಲ್ಲವೋ ನೋಡಿ ಎಂದರು. ನಾವೆಲ್ಲರೂ ಕಾಗದದ ಮೇಲೆ ಉದ್ದ ಗುಣಾಕಾರ ಶುರುಮಾಡಿದೆವು. ಸ್ವಾಭಾವಿಕವಾಗಿ ನಮಗೆ ಬೆರಳೆಣಿಕೆಗೆ(?) ಒಂದೊಂದು ಉತ್ತರ ಬಂತು! ಸುಮಾರು ಹತ್ತು ನಿಮಿಷ ತೆಗೆದುಕೊಂಡಿತು.

ಸುಬ್ಬರಾಯರು (ಅವರ ಹೆಸರು ನನಗೆ ಸರಿಯಾಗಿ ನೆನಪಿದ್ದರೆ) "ಸುಮ್ಮನೆ ಕಷ್ಟಪಡಬೇಡಿ; ಇಲ್ಲಿ ಅದಕ್ಕೆ ಸಿದ್ಧ ಉತ್ತರ ಇದೆ. ನೋಡಿ" ಎಂದು ತಮ್ಮ ಮುಂದಿನ ಹಲವು(?) ಸಾವಿರಾರು ಕಾರ್ಡುಗಳ ನಡುವೆ ಒಂದು ಸಣ್ಣ ರಟ್ಟಿನ ಕಾರ್ಡನ್ನು ನಿಮಿಷಾರ್ಧದಲ್ಲಿ ಹುಡುಕಿ ತೆಗೆದು ನಮ್ಮ ಮುಂದೆ ಹಿಡಿದರು. ಅದರಲ್ಲಿ ಬರೆದಿದ್ದ ಅಂಕೆಗಳು ನಾವು ಪ್ರಶ್ನೆಯಲ್ಲಿ ಹೇಳಿದವುಗಳೇ ಇದ್ದವು; ಉತ್ತರ ಅವರು ಹೇಳಿದ್ದೇ ಇತ್ತು. ನಮ್ಮ ಯಾವ ಉತ್ತರದೊಂದಿಗೂ ಅದು ತಾಳೆಗೊಳ್ಳಲಿಲ್ಲ. ನಾವು ಪುನರಪಿ ಜಾಗ್ರತೆಯಿಂದ ಲೆಕ್ಕಮಾಡಿದೆವು. ಅವರದ್ದೇ ಸರಿಯೆಂದು ಒಪ್ಪದೇ ವಿಧಿ ಇರಲಿಲ್ಲ.

ಸುಮಾರು ಎರಡು ಗಂಟೆ ಕಾಲವನ್ನು ನಾವು ಅವರೊಡನೆ ಕಳೆದಿರಬೇಕು. ನಮ್ಮ ಪ್ರಶ್ನೆಗಳು ಸಾಕಷ್ಟು ದೊಡ್ಡ ಗುಣಾಕಾರ, ಭಾಗಾಕಾರ, ವರ್ಗ, ವರ್ಗಮೂಲಗಳನ್ನು ಕುರಿತಾಗಿದ್ದವು. ಎರಡಕ್ಕಿಂತ ಹೆಚ್ಚಿನ ಘಾತ (Power) ಗಳನ್ನೊಳಗೊಂಡ ಲೆಕ್ಕಗಳನ್ನೂ (ನಮ್ಮ ಶಕ್ತ್ಯನುಸಾರ) ಕೇಳಿದ್ದೆವೆಂದು ನೆನಪು. ವೃದ್ಧರು ಅನಾಯಾಸವಾಗಿ ಉತ್ತರಗಳನ್ನು ಬರೆದು ತಮ್ಮ ರೆಡಿಮೇಡ್ ಕಾರ್ಡಿನ ಕಣಜದಿಂದ ಸಿದ್ಧ ಉತ್ತರಗಳನ್ನು ಹುಡುಕಿ ತೆಗೆದು ತೋರಿಸುತ್ತಿದ್ದರು. ಕೆಲವೊಂದು ಉತ್ತರಗಳನ್ನು ನಾವು ಒರೆಗೆ ಹಚ್ಚಿ ನೋಡಿ ಖಾತ್ರಿಮಾಡಿಕೊಂಡೆವು. ಎಲ್ಲವನ್ನು ಪರೀಕ್ಷಿಸುವುದಕ್ಕೆ ನಮಗೆ ಕೆಲ ಗಂಟೆಗಳೇ ಬೇಕಾಗಬಹುದಿತ್ತು!

ನಮ್ಮ ಕುದುರೆ ಹಾರಲಾರದಿದ್ದ ಬರೆಗಳನ್ನು ಬಿಟ್ಟು [illegible] ನಮ್ಮ ಪತ್ರಿಕೋದ್ಯೋಗಿ ಬುದ್ಧಿ ಅವರನ್ನು ಬೇರೆ ವೈಯಕ್ತಿಕ ವಿಷಯಗಳಲ್ಲಿ ಪಾಟೀಸವಾಲಿಗೆ ಗುರಿಪಡಿಸಿತು. ತಾವು ಶಕುಂತಲಾ ದೇವಿಯ ತಂದೆಯೆಂದು ಸಿದ್ಧಪಡಿಸಲು ಅವರು ಹಳೆಯ ಬಣ್ಣಗೆಟ್ಟ ಕೆಲ ಕಾಗದಪತ್ರಗಳನ್ನು ತೋರಿಸಿದರು. ಅವು ಶಕುಂತಲಾ ದೇವಿ ಐದಾರು ವರ್ಷದವರಾಗಿದ್ದಾಗ ಅವರನ್ನೂ ಅವರಿಗಿಂತ ಒಂದೆರಡು ವರ್ಷ ದೊಡ್ಡವರಾದ ಅವರ ಅಣ್ಣನನ್ನೂ ಕರೆದುಕೊಂಡು ಮೈಸೂರು ರಾಜ್ಯದ ಕೆಲ ಶಾಲೆ ಕಾಲೇಜುಗಳಲ್ಲಿ ಅವರ 'ಬಾಲಾಮೃತ'ತ್ವದ ಪ್ರದರ್ಶನಗಳನ್ನು ಕೊಟ್ಟು ಪಡೆದ ಸರ್ಟಿಫಿಕೇಟುಗಳಾಗಿದ್ದವು. ಅವುಗಳಲ್ಲಿ ಬಹುಶಃ ಬೆಂಗಳೂರಿನ ಸೆಂಟ್ರಲ್ ಕಾಲೇಜಿನವರ ಒಂದು ಪ್ರಶಸ್ತಿಯೂ ಇತ್ತು. ಶಕುಂತಲಾದೇವಿಯವರಷ್ಟೇ ಅವರ ಅಣ್ಣನೂ ಅಂಕಗಣಿತದ ಉದ್ದುದ್ದ ಪ್ರಶ್ನೆಗಳನ್ನು ವಿದ್ಯುದ್ವೇಗದಿಂದ ಉತ್ತರಿಸಬಲ್ಲವರಾಗಿದ್ದರೆಂದು ಅರ್ಥವಾಯಿತು.

ನಾವು ಅವರನ್ನು ಅಮೂಲಾಗ್ರ ಪ್ರಶ್ನಿಸಿ ಕೆಲ ವಿಷಯಗಳನ್ನು ಹೊರಪಡಿಸಿದೆವು. ಮೊದಲನೇ ಹೆಂಡತಿಯ (ಶಕುಂತಲಾದೇವಿಯವರ ತಾಯಿ) ಮರಣಾನಂತರ ಅವರು ಎರಡನೇ ಮದುವೆ ಮಾಡಿಕೊಂಡು ಉತ್ತರ ವಯಸ್ಸಿನಲ್ಲಿ ಅನೇಕ ಮಕ್ಕಳನ್ನು ಪಡೆದಿದ್ದರು. ತನ್ನ ಮೊದಲ ಹೆಂಡತಿಯ ಮಕ್ಕಳನ್ನು ಅವರು ಒಂದು ಆದಾಯದ ಬಾಬಾಗಿ ಮಾಡಿಕೊಂಡು ಎರಡನೇ ಸಂಸಾ[illegible]

[illegible]

ಈ ಮನುಷ್ಯ ಅಂಕಗಣಿತದ – ಅಥವಾ ಅಂಕೆಗಳ – ವಿಷಯದಲ್ಲಿ ಜೀನಿಯಸ್ ಆಗಿದ್ದರೆಂಬುದರಲ್ಲಿ ಸಂದೇಹವಿರಲಿಲ್ಲ. ಆದರೆ ಅದರ ಹೊರತು ಅವರಲ್ಲಿ ಬೇರಾವ ಬುದ್ಧಿಶಕ್ತಿಯ ಲಕ್ಷಣವೂ ನನಗೆ ಕಾಣಲಿಲ್ಲ. ಇದೇ ಲೆಕ್ಕಗಳನ್ನು ಒಳಗೊಂಡ ಒಂದು ವ್ಯವಹಾರ ಗಣಿತದ ಪ್ರಶ್ನೆ ಕೇಳಿದರೆ ಅದನ್ನು ಸರಿಯಾಗಿ ಅರ್ಥ ಮಾಡಿಕೊಳ್ಳುವ ಚಾತುರ್ಯ ಕೂಡಾ ಅವರಿಗೆ ಇರಲಿಲ್ಲ. ಬೀಜಗಣಿತ ಮೊದಲಾದ ವಿಷಯಗಳಂತೂ ಅವರಿಗೆ ಗೊತ್ತೇ ಇರಲಿಲ್ಲ. ವ್ಯಾವಹಾರಿಕ ಸಂಗತಿಗಳಲ್ಲಿಯೂ ಅವರಿಗೆ ಅಪಾರವಾದ ಅಜ್ಞಾನವಿತ್ತು.

ದೈವದತ್ತ ಪ್ರತಿಭೆ

ಆ ಮೊದಲೇ ನಾನು ಜಗತ್ತಿನ ಬೇರೆ ಬೇರೆ ದೇಶಗಳಲ್ಲಿದ್ದ ಗಣಿತ ಪ್ರವೀಣರ ದೃಷ್ಟಾಂತಗಳನ್ನು ಅಭ್ಯಾಸ ಮಾಡಿಕೊಂಡಿದ್ದೆ. ಅವರಲ್ಲಿ ಹೆಚ್ಚು ಕಡಿಮೆ ಇಂಥವರೇ ಇದ್ದರು. ಅಂಕಗಣಿತವೊಂದೇ ಈ ಜನರಿಗೆ ದೈವದತ್ತವಾಗಿ ಬಂದ ಪ್ರತಿಭೆಯಾಗಿತ್ತು.

ನಾನು ಅವರಿಗೆ ಕೇಳಿದೆ: "ಈ ಉತ್ತರಗಳು ನಿಮಗೆ ಹೇಗೆ ಹೊಳೆಯುತ್ತವೆ? [illegible] ನೇರವಾಗಿಯೋ ಅಥವಾ ಅದಕ್ಕೇನಾದರೂ ಸುಲಭ ರೀತಿಗಳಿವೆಯೋ?"

"ರೀತಿ ಇದೆ. ಅದನ್ನು ಕಲಿಸಬಲ್ಲೆ" ಎಂದವರು ಹೇಳಿದರು. ಹಾಗಿದ್ದರೆ ಇದನ್ನು ಪೇಟೆಂಟ್ ಮಾಡಬಹುದು. ಅಥವಾ ಸರಕಾರದಿಂದ [illegible] ಪ್ರತಿಫಲ ಪಡೆದು ಅದನ್ನು ಬಹಿರಂಗಪಡಿಸಿದರೆ ಲೋಕಕ್ಕೆ ಒಂದು ಉಪಕಾರ ಆದೀತು ಎಂದು ಸೂಚಿಸಿದೆ. ಅವರಿಗೆ ನನ್ನ ಸೂಚನೆ ಅರ್ಥವೇ ಆಗಲಿಲ್ಲ. ತಮ್ಮೀ ದೈವದತ್ತ ಪ್ರತಿಭೆಯನ್ನು ಯಾರಾದರೂ ಕದ್ದು ಲಾಭವನ್ನು ಮಾಡಿಕೊಳ್ಳಬಹುದೆಂಬ ಒಂದು [illegible] ಅವರ [illegible] ಭಯ ಆವರಿಸಿತ್ತು.

ಅವರ ಸಾವಿರಾರು ಅಂಕೆಗಳ ಗುಣಾಕಾರ ಭಾಗಾಕಾರ ವರ್ಗಗಳ ಲೆಕ್ಕ ಮತ್ತು ಉತ್ತರಗಳನ್ನು ಬರೆದು ಅವುಗಳನ್ನು ಸಾವಿರಾರು ಕಾರ್ಡುಗಳಲ್ಲಿ ದಾಖಲಿಸಿ ಬೇಕಾದ ಕ್ಷಣದಲ್ಲಿ ಸಿಗುವಂತೆ ಅವುಗಳಲ್ಲಿ ಜೋಡಿಸಿಟ್ಟಿದ್ದ ಅವರ ವಿಧಾನ ಕೂಡಾ ಒಂದು ತರಹ ಕಾರ್ಡ್ ಇಂಡೆಕ್ಸ್ ಬ್ಯೂರೋ ಆಗಿತ್ತು ಎಂಬುದು ನಿಜ.

ಕೆಲ ಕಾಲಾನಂತರ 'ಸಂಯುಕ್ತ ಕರ್ನಾಟಕ' ಕಚೇರಿಗೆ ಶಕುಂತಲಾದೇವಿಯವರು ಬಂದಿದ್ದರು. ಆಗ ಅವರು ತಮ್ಮ ಜೀನಿಯಸ್ ಬಗ್ಗೆ ಕೆಲ ಪ್ರಶ್ನೆಗಳಿಗೆ ಹಾರಿಕೆ(?) ಉತ್ತರಗಳನ್ನು ಕೊಟ್ಟರು. ಆದರೆ ಅವರ ತಂದೆಯ ಬಗ್ಗೆ ಯಾವ ಪ್ರಶ್ನೆಗೂ ಉತ್ತರ ಕೊಡಲೊಪ್ಪಲಿಲ್ಲ. •

ಚೈತನ್ಯದ ಬಗ್ಗೆ

ಸಾಂಪ್ರದಾಯಿಕ ಧಾರ್ಮಿಕ ಪೀಠಗಳು ಅತಿವೇಗದಿಂದ ಬದಲಾಗುತ್ತಿರುವ ಒಂದು ನಾಡಿನ ಅಥವಾ ಸಮುದಾಯದ ಅಗತ್ಯಗಳಿಗೆ ಜಾಗೃತವಾಗಿ ನಾಯಕತ್ವ ನೀಡುವುದು ಇತಿಹಾಸದಲ್ಲಿ ಅಪರೂಪದ ಘಟನೆ. ಸಂಪ್ರದಾಯದಲ್ಲಿ ಅನೇಕ ಸದ್ಗುಣಗಳಿರಬಹುದು; ಆದರೆ ರೂಢಿ, ಆಚಾರಗಳ ಕಟ್ಟಿಬಿದ್ದ ತೊಡಕುಗಳಿಂದ ಬಿಡಿಸಿಕೊಂಡು ಹೊಸ ವಿಚಾರಗಳನ್ನು ಪ್ರೇರೇಪಿಸುವುದು ಆ ಗುಣಗಳಲ್ಲಿ ಸೇರಿಲ್ಲ. ಈ ದೃಷ್ಟಿಯಿಂದ ಪೇಜಾವರ ಮಠಾಧೀಶರಾದ ಶ್ರೀ ವಿಶ್ವೇಶತೀರ್ಥ ಶ್ರೀಪಾದರು ಸಮಕಾಲೀನ ಭಾರತದ ಒಂದು 'ಘಟನೆ'ಯೆಂದೇ ಹೇಳಬೇಕು. ಅವರು ನಮ್ಮ ಪರಂಪರಾಗತ ಧಾರ್ಮಿಕ ನಾಯಕತ್ವವನ್ನು ಸ್ಥಾಣುತ್ವದಿಂದ ಚಲತ್ವದತ್ತ ಮುನ್ನಡೆಸಿದ್ದಾರೆ. ಕೇವಲ ತಮ್ಮ ಅಸ್ತಿತ್ವದಿಂದಲೇ ಮಠಗಳು ತಮ್ಮ ಅಸ್ತಿತ್ವವನ್ನು ಸಮರ್ಥಿಸಲಾರವು. ಕೇವಲ ಕೂತಲ್ಲೇ ಪಾಠಪ್ರವಚನಗಳಿಂದಲೇ ಅವು ತಮ್ಮನ್ನು ಹೊಂದಿಕೊಂಡ ಸಮಾಜವನ್ನು ಉದ್ಧರಿಸಲಾರವು. ಇದನ್ನು ಮನಗಂಡು ಧರ್ಮವನ್ನು ಜನದ ಮನೆಬಾಗಿಲಿಗೆ ಒಯ್ಯಲು ಪ್ರಯತ್ನಶೀಲರಾದದ್ದು, ಒಮ್ಮುಖಿ ಮಾರ್ಗವಾಗಿದ್ದದ್ದನ್ನು ಇಮ್ಮುಖಿ ಹೆದ್ದಾರಿಯಾಗಿ ಮಾಡಿ, ಸಮಾಜ ಮತ್ತು ಪೀಠಗಳು ಪರಸ್ಪರ ಪ್ರಭಾವಿತವಾಗುವಂತೆ ಯತ್ನಿಸಿದ್ದು ಶ್ರೀಪಾದರ ಕೊಡುಗೆಯೆಂದು ನನ್ನ ಭಾವನೆ.

ಅನೇಕ ಮಹಾ ಪುರುಷರಂತೆ ಶ್ರೀಗಳವರೂ ತಮ್ಮ ಆದರ್ಶಗಳನ್ನು ಚಿಕ್ಕಂದಿನಲ್ಲೇ ರೂಪಿಸಿಕೊಂಡರು. ತೀರಾ ಬಾಲ್ಯದಲ್ಲಿ ಸನ್ಯಾಸಾಶ್ರಮ ಪಡೆದು ಉಡುಪಿ ಪುರಪ್ರವೇಶವನ್ನು ಪ್ರಥಮವಾಗಿ ಮಾಡಿದಾಗ ಅವರನ್ನು ಮೊದಲು ಕಂಡಿದ್ದ ನನಗೆ, ಆದಾಗ ಕೆಲವೇ ವರ್ಷಗಳ ನಂತರ, ಬಹುಶಃ ಅವರ ಹದಿನೈದನೇ ವಯಸ್ಸಿನಲ್ಲಿ, ಮುಚ್ಚಳ್ಳಿಯಲ್ಲಿ ಅವರನ್ನು ಸಂಧಿಸಿದಾಗ, ಇಲ್ಲೊಂದು ಹೊಸ ಚೈತನ್ಯ ಮೈದುಂಬಿ ಬೆಳೆಯುತ್ತಿದೆ ಎನಿಸಿತ್ತು. ಆಗಲೇ ಅವರೊಂದು ಧಾರ್ಮಿಕ ಪ್ರವಚನವನ್ನೂ ಪತ್ರಿಕೋದ್ಯೋಗಿಗಳ ಭೇಟಿಯನ್ನೂ ಮಾಡಿದಂತೆ ನೆನಪು. ತನ್ನ ಗುರಿಯನ್ನು ಗುರುತಿಸಿಕೊಂಡ ವ್ಯಕ್ತಿಯ ಆತ್ಮವಿಶ್ವಾಸದ ಚೋದನಶಕ್ತಿ ಅವರಲ್ಲಿ ಕಾಣುತ್ತಿತ್ತು.

ಮತ್ತೆ ಐದೋ ಆರೋ ವರ್ಷಗಳಲ್ಲಿ ಅವರು ಉಡುಪಿಯಲ್ಲಿ ಅಖಿಲ ಭಾರತ ಮಾಧ್ವ ಮಹಾಮಂಡಲವನ್ನು ಸ್ಥಾಪಿಸಿದರು. ಈ ಘಟನೆಯನ್ನು ಬೇರೆ ಬೇರೆ ಕಾರಣಗಳಿಗಾಗಿ ಆತಂಕದಿಂದ ನಿರೀಕ್ಷಿಸಿದವರಂತೆ ನಾನೂ ನನ್ನದೇ ಕಾರಣಗಳಿಗಾಗಿ ಸ್ವಲ್ಪ ಸಂದೇಹದಿಂದಲೇ ನೋಡಿದೆ. 'ಧಾರ್ಮಿಕ ಪುನರುಜ್ಜೀವನ' ರೂಢ ಸಂಪ್ರದಾಯದ ಪುನರುಜ್ಜೀವನವಾಗಿ ಎಲ್ಲಿ ಮತ್ತೆ ಇದು ಹಠ-ಶಠವಾದಕ್ಕೆ ಆಯುಷ್ಯದಾನ ಮಾಡುವುದೋ ಎಂಬುದು ನನ್ನ ಭಯವಾಗಿತ್ತು.

ಆದರೆ ಹಾಗಾಗಲಿಲ್ಲ. ಮಾಧ್ವ ಮಹಾಮಂಡಲವಾಗಲಿ, ಸ್ವಾಮೀಜಿಯವರ ಇತರ ಅನೇಕ ಚಟುವಟಿಕೆಗಳಾಗಲಿ ಪ್ರತಿಗಾಮಿತ್ವಕ್ಕೆ ಸಂಕೇತವಾಗದೆ ಹಳೆಯ ಮರಕ್ಕೆ ಹೊಸ ಕೊಂಬೆರೆಂಬೆಗಳು ಚಿಗುರುವುದಕ್ಕೆ ಮುಂಗುರುತಾಗಿ ಪರಿಣಮಿಸಿದವು. ತತ್ತ್ವಜ್ಞಾನವನ್ನು ಜನ್ಮಾಗತ ಜಾತಿಯಿಂದ ಬೇರ್ಪಡಿಸಿ, ಅವರು ಮಧ್ವಾಚಾರ್ಯರ ತತ್ತ್ವಗಳನ್ನು ಒಪ್ಪುವವರೆಲ್ಲ ಮಾಧ್ವರು ಎಂದು ಸಾರಿದ್ದು ಇದಕ್ಕೊಂದು ಸಾಕ್ಷಿಯಾಗಿತ್ತು. ಆಚಾರ್ಯ ಮಾಧ್ವರ ತತ್ತ್ವಗಳ ಪ್ರಸಾರಕ್ಕಾಗಿ ಅವರು ತಮ್ಮ ಜಾಗೃತ ಗಳಿಗೆಗಳ ಬಹುಭಾಗವನ್ನು ವೆಚ್ಚಮಾಡಿದ್ದರೂ ದೇಶದ ಎಲ್ಲ ಧರ್ಮಗಳ ನಾಯಕರೊಡನೆಯೂ ಸಮುದಾಯದೊಡನೆಯೂ ಅವರಿಗಿರುವ ಸೌಹಾರ್ದ, ವಿಶ್ವಾಸ. ಧಾರ್ಮಿಕ ಪಂಥಗಳು ಜನರನ್ನು ಒಡೆಯುವ 'ಪಂಥ' (ಹುರುಡು)ಗಳಾಗಬೇಕಿಲ್ಲ. ನಿಜವಾಗಿ ಅವು ಸತ್ಯಾನ್ವೇಷಣೆಯ ಪಂಥಗಳಾಗಬಲ್ಲವೆಂದು ತೋರಿಸಿವೆ.

ಬದುಕನ್ನು ಕಡೆಗಣಿಸಿ, ಧರ್ಮವೆಂಬುದು ಮನುಷ್ಯನ ಆತ್ಮವನ್ನಷ್ಟೇ ಪೋಷಿಸಲೆಂದಿರುವುದನ್ನು ಗ್ರಹಿಸಿದ ಮಠಾಧಿಪತಿಗಳಲ್ಲಿ ಅವರು ಪ್ರಮುಖರು. ಶಿಕ್ಷಣ, ವೈದ್ಯಕೀಯ ಸೇವೆ ಮೊದಲಾದ ಅವರ ಬಗೆಬಗೆಯ ಸಾಮಾಜಿಕ ಯೋಜನೆಗಳು ಪೀಠಾಧಿಪತ್ಯದ ಜವಾಬ್ದಾರಿಗಳು ಎಲ್ಲೆಲ್ಲಿವೆಯೆಂದು ತೋರಿಸಿವೆ. ಸರಕಾರದ ಭೂಸುಧಾರಣೆಗಳಿಗೆ ಬಹಿರಂಗವಾಗಿ ಬೆಂಬಲವನ್ನು ಸೂಚಿಸುವುದರಲ್ಲಿ ಕೂಡ ಅವರು ತಮ್ಮ ಕಾಲಪ್ರಜ್ಞೆಯನ್ನು ಪ್ರದರ್ಶಿಸಿದರು. ಹರಿಜನಕೇರಿಗೆ ಹೋಗಿ ಧರ್ಮೋಪದೇಶ ಮಾಡಿ ಅವರು ದೇವರು - ಧರ್ಮ ಸರ್ವರ ಹಕ್ಕು ಎಂದು ಸ್ಥಾಪಿಸಿದರು.

ನಿಜವಾದ ಅರ್ಥದಲ್ಲಿ ಅವರು ಪರಿವ್ರಾಜಕರು. ಅವರ ಅದಮ್ಯ ಚೈತನ್ಯ, ಕಾರ್ಯತತ್ಪರತೆ ಇಂದೂ ಸಮಾಜಕ್ಕೆ ಶತ್ರು ಅರ್ಧ ಶತಮಾನ ಅವಿಚ್ಛಿನ್ನವಾಗಿ ಲಭಿಸಲಿ ಎಂಬ ಹಾರೈಕೆ ನಮ್ಮದು.

— ಪಾವೆಂ ಆಚಾರ್ಯ

ಲ್ಸ್, ರಡ್ ಜಿಪ್ಸ ಇತ್ಯಾದಿ ಕಲಿಯು ಡಗಿದ್ದಾರೆ. ಇವೆಲ್ಲ ಕಲೆಗಳು ಕಳರಿ ಪಯಟ್ಟಿನ ಸ್ಫೂರ್ತಿಪಡೆದವೆಂಬುದು ಅನೇಕರಿಗೆ ಗೊತ್ತಿಲ್ಲದಿರುವದೊಂದು ಚೋದ್ಯ.

ಕಳರಿಯೆಂದರೆ ವ್ಯಾಯಾಮಶಾಲೆ-ಗರಡಿಮನೆ. ಅಲ್ಲಿ ವೈರಿಗಳಿಂದ ಹಾಗೂ ಅವರ ಶಸ್ತ್ರಾಸ್ತ್ರಗಳಿಂದ ರಕ್ಷಣೆ ಹೊಂದಲು

ರಥಿರಿಲ್ಲಿ ಅವರು ಕಳರಿ ಪಯಟ್ಟಿನ ಬಗೆಗಿನ ಸಂಶೋಧನೆಯ ಮೊದಲ ಹಂತವನ್ನು ಮುಗಿಸಿದ್ದಾರೆ. ಅದಲ್ಲದೆ ಅವರು ಪಯಟ್ಟಿನಲ್ಲಿಯ ಚಲನೆಯ ಗತಿಯನ್ನು ಅಮೇರಿಕೆಯ ನೃತ್ಯಗಳಲ್ಲಿ ಅಳವಡಿಸಬಯಸಿದ್ದಾರೆ.

ಕೇರಳವನ್ನು ಸಂದರ್ಶಿಸಿದ ಕೆಲ ಫ್ರೆಂಚ್ ಪತ್ರಿಕೋದ್ಯಮಿಗಳು ಫ್ರೆಂಚ್

ಪಟ್ಟಿಗೆ ಕಳರಿ ... . ಅತ್ರ ... ರೂಪ. ವೆಲ್ಲೆಸ್ಲಿ ಭಾರತದಲ್ಲಿರುವಾಗ ಉತ್ತರ ಕೇರಳದ ಪಾಲಘಾಟರಾಜಾ ಹಾಗೂ ಅವರ ಜನರ ಸಂಪರ್ಕವನ್ನು ಪಡೆದಿದ್ದ. ಇವರೆಲ್ಲ ಕಳರಿಯಲ್ಲಿ ಪರಿಣಿತರು. ಹತ್ತೊಂಬತ್ತನೆಯ ಶತಮಾನ ಹಾಗೂ ಅದಕ್ಕೂ ಮೊದಲು ಕಳರಿಯನ್ನು ಸೇರುವದು ಪ್ರತಿಷ್ಠೆಯ ವಿಷಯವಾಗಿತ್ತು. ಆಗ ಪ್ರತಿಯೊಬ್ಬ

ಸ್ನಾಯು...ಗಳ ... ದೇಹವು ಚಟುವಟಿಕೆಯುಕ್ತವಾಗುತ್ತದೆ. ಅಲ್ಲದೆ ತೀಕ್ಷ್ಣ... ಶೀಘ್ರ ಪ್ರತಿಕ್ರಿಯೆಯೂ ಇವುಗಳಿಂದ ಸಾಧ್ಯ. ದಿನಕ್ಕೆ ಮೂರುತಾಸು ಇಂತಹ ವ್ಯಾಯಾಮ. ಪ್ರಯಟ್ ವ್ಯಾಯಾಮದ ನಂತರ ಉಝಿಚಿಲ್-ಮಾಲೀಶ್ ಮುಕ್ಕಟ್ಟು ಎಂದು ಕರೆಯಲ್ಪಡುವ ಔಷಧಿಯುಕ್ತ ತೈಲದಿಂದ ಮಾಲೀಶ್ ಮಾಡುವರು.

ಉತ್ಸಾಹದ ಚಿಲುಮೆ

ಪಾವೆಂ ಬರೆದ

ಜಿ.ಟಿ.ನಾರಾಯಣರಾ

ಪ್ರೊ. ವಿ. ಸ. ಮಾಳವಾಡ ಅವರು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಪ್ರತಿಷ್ಠಿಸಿದ ವಿಚಾರ ಸಾಹಿತ್ಯ ಪ್ರಶಸ್ತಿ ಈ ಸಲ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ವಿಶ್ವಕೋಶದ ವಿಜ್ಞಾನ ಸಂಪಾದಕರಾದ ಶ್ರೀ ಜಿ. ಟಿ. ನಾರಾಯಣ ರಾಯರಿಗೆ ದೊರೆತಿದೆ. ಹಿಂದಿನ ವರ್ಷ (೧೯೭೦) ಪ್ರಕಟವಾದ ಅವರ ಐನ್‌ಸ್ಟೈನ್ ಜೀವನ ಚರಿತ್ರೆಗೆ ಈ ಪುರಸ್ಕಾರ ಲಭಿಸಿದೆ. ಕನ್ನಡದಲ್ಲಿ ವೈಜ್ಞಾನಿಕ ಸಾಹಿತ್ಯವನ್ನು ಸ್ವತಂತ್ರವಾಗಿ (ಅನುವಾದ ಮಾತ್ರವಲ್ಲ) ಕಳೆದ ಮೂರು ದಶಕಗಳಿಗಿಂತಲೂ ಹೆಚ್ಚು ಕಾಲದಿಂದ ಜಿ. ಟಿ. ಯವರು ಬರೆಯುತ್ತಿದ್ದಾರೆ. ಇಂದು ಕನ್ನಡದಲ್ಲಿ ವಿಜ್ಞಾನ-ವಿಜ್ಞಾನಿಗಳನ್ನು ಕುರಿತು ಬರೆಯುತ್ತಿರುವವರಲ್ಲಿ ಅವರು ಅಗ್ರಪಂಕ್ತಿಯಲ್ಲಿದ್ದಾರೆ.


ಸ್ನೇಹಿತರಲ್ಲಿ ಜೀಟಿಯೆಂದೇ ಪರಿಚಿತರಾದ ಜಿ. ಟಿ. ನಾರಾಯಣರಾಯರು ಬರೆದ ಮತ್ತು ಇತರ ಚಿಕ್ಕ ದೊಡ್ಡ ಪುಸ್ತಕಗಳ ಸಂಖ್ಯೆ ಮೂವತ್ತಕ್ಕೆ ಹತ್ತಿರವಾಗಿದೆ. ಪತ್ರಿಕೆಗಳಲ್ಲಿ, ಆಕಾಶವಾಣಿಗಾಗಿ ಬರೆದ ಲೇಖನಗಳ ಸಂಖ್ಯೆ ನೂರಾರು. ವಿಜ್ಞಾನಿಗಳ ಜೀವನ ಚರಿತ್ರೆಗಳನ್ನು ಅವರು ಬರೆದಿದ್ದು ಆಲ್ಬರ್ಟ್ ಐನ್‌ಸ್ಟೈನ ಜೀವನ ಚರಿತ್ರೆ, ಆ ವಿಜ್ಞಾನಿಯ ವೈಜ್ಞಾನಿಕವಲ್ಲದೆ ಮಾನವೀಯ ಮತ್ತು ಮಾನವತಾವಾದಿ ಮುಖಗಳನ್ನೆಲ್ಲ ದ್ಯೋತಿಸುವ ಬೃಹದ್ಗ್ರಂಥ. ಎಗ್ಗರನ್ನು ಸಹಿಸಲೊಲ್ಲದ ದಿವಂಗತ ಸರ್ ಸಿ. ವಿ. ರಾಮನ್ನರನ್ನು ಒಲಿಸಿಕೊಂಡು ಅವರೊಡನೆ ಸುದೀರ್ಘ ಸಂಭಾಷಣೆ ಪಡೆದು ಜಿ. ಟಿ. ಯವರು ಒಂದು ಪುಸ್ತಕ ಬರೆದಿದ್ದಾರೆ. ಐನ್‌ಸ್ಟೈನರ ಮಾನವೀಯ ಮುಖಗಳನ್ನು ಕುರಿತ ಅವರ ದೊಡ್ಡ ಲೇಖನವಾದ ಗ್ರಂಥವೊಂದು ೧೯೮೧ ರಲ್ಲಿ ಪ್ರಕಟವಾಯಿತು. ಸಿಂಗನ (Singe) "ಬಲ ವಿಜ್ಞಾನ ತತ್ವಗಳು" (Principles of Mechanics) ಎಂಬುದನ್ನು ಅನುವಾದ ಮಾಡಿದ್ದಕ್ಕಾಗಿ ಅವರಿಗೆ ಸಾಹಿತ್ಯ ಅಕಾಡಮಿ ಪುರಸ್ಕಾರ ಆಗಲೇ ಬಂದಿದೆ.

ಬಹುಮುಖ

ಅತಿ ಪ್ರಾಚೀನ ಶಾಸ್ತ್ರಗಳಾದ ಗಣಿತ ಖಗೋಲ ವಿಜ್ಞಾನಗಳಿಂದಾರಂಭಿಸಿ ಅತ್ಯಾಧುನಿಕವಾದ ಭವಿಷ್ಯವಿಜ್ಞಾನದವರೆಗೆ ಅವರ ವೈಜ್ಞಾನಿಕ ಬರವಣಿಗೆಯು ಹರಹು ವಿಸ್ತಾರವಾಗಿದೆ. ಅದು ವಿಜ್ಞಾನಕ್ಕೆಯೇ ಸೀಮಿತವೂ ಆಗಿಲ್ಲ. ತಮ್ಮ ಪ್ರಥಮ ಯೌವನದಲ್ಲಿ ಅವರು ಬರೆದ ಕಥೆಗಳ ಎರಡು ಸಂಗ್ರಹಗಳು ಪ್ರಕಟವಾಗಿವೆ. ಬಹಳ ಚಿತ್ರವತ್ತಾದ ಸ್ಮರಣಶಕ್ತಿಯುಳ್ಳ ನಾರಾಯಣರಾಯರು ಬರೆದ ಎನ್.ಸಿ.ಸಿ. ದಿನಗಳು ಎಂಬ ೫೬೦ ಪುಟಗಳ ಗ್ರಂಥ ತನ್ನ ಮಾದರಿಯ ಅಪೂರ್ವ ಕೃತಿಯೆನ್ನಬಹುದು.

ಜಿ. ತಿಮ್ಮಪ್ಪಯ್ಯ (ತಂದೆ) ನಾರಾಯಣರಾಯರು ಹುಟ್ಟಿದ್ದು ಉಭಯ ಕುಲಗಳಲ್ಲಿಯೂ ಕಡು ವೈದಿಕರಾದ ಕೊಡಗಿನ ಬ್ರಾಹ್ಮಣ ಮನೆತನದಲ್ಲಿ (೧೯೨೬). ತನ್ನ ಮಗ ಪುರೋಹಿತನಾಗಬೇಕೆಂಬುದು ಅವರ ತಾಯಿಯ ಬಯಕೆಯಾಗಿತ್ತೆಂಬುದರಿಂದ ಅವರ ಹಿನ್ನೆಲೆಯ ಸಾಂಪ್ರದಾಯಿಕತ್ವವನ್ನು ಅಳೆಯಬಹುದು. ಶಾಸ್ತ್ರವಿಧಿಯಂತೆ ಉಪನಯನವಾಗಿ ಅಷ್ಟಿಷ್ಟು ವೇದ ಮಂತ್ರಾದಿಗಳ ಪಾಠವಾಗಿದ್ದರೂ ಅಪ್ರತಿಹತವಾದ ಬದಲಾವಣೆಯ ಗಾಳಿ ಅವರನ್ನು ಇಂಗ್ಲೀಷ್ ವಿದ್ಯಾಂಶತ್ತ ತಳ್ಳದೆ ಬಿಡಲಿಲ್ಲ. ಇನ್ನೂ ಅಷ್ಟಿಷ್ಟು ಮಂತ್ರಗಳು ಅವರಿಗೆ ಬಾಯಿಪಾಠವಾಗಿದ್ದರೂ ವೈದಿಕ ನಿಷ್ಠೆಯಲ್ಲಿ ಅವರು ವೈದಿಕವನ್ನು ಬಹಳ ಹಿಂದೆ ಬಿಟ್ಟಿದ್ದು (ಕಾರ್‍ಯ) ನಿಷ್ಠೆಯನ್ನು ಮಾತ್ರ ಉಪಯುಕ್ತವಾಗಿ ಉಳಿಸಿಕೊಂಡಿದ್ದಾರೆ.

ಮಡಿಕೇರಿ, ಮಂಗಳೂರುಗಳಲ್ಲಿ ಶಾಲಾ



ವಿದ್ಯಾಭ್ಯಾಸ ಮುಗಿಸಿ ಮಂಗಳೂರಲ್ಲಿ ಕಾಲೇಜು ಸೇರಿದ ಜಿ.ಟಿ. ಯವರ ಮುನ್ನಡೆ ಅವರ ಮನೋದಾರ್ಢ್ಯದ ಕಥೆಯೇ ಆಗಿದೆ. ಮಗುವಾಗಿ, ಹುಡುಗನಾಗಿ ಅವರು ದೇಹ ದೌರ್ಬಲ್ಯದಿಂದ, ನಿರಂತರ ಅಸ್ವಾಸ್ಥ್ಯದಿಂದ ಪೀಡಿತರಾದವರು. ಈ ತೊಡಕುಗಳನ್ನು ಅವರು ಶಿಸ್ತಿನ ನಿತ್ಯ ವ್ಯಾಯಾಮ ಮತ್ತು ದೀರ್ಘ ಓಟ (ದಿನಕ್ಕೆ ೧೩-೧೪ ಮೈಲಿನಷ್ಟು) ಗಳಿಂದ ಗೆದ್ದು ಎಷ್ಟು ಶರೀರ ಪಟುತ್ವ ಪಡೆದರೆಂದರೆ ವಿಮಾನ ಪಡೆಗೆ ಪ್ರವೇಶ ಪಡೆಯುವುದು ಅವರಿಗೆ ಲೇಶ ಮಾತ್ರದಿಂದ ತಪ್ಪಿತಷ್ಟೇ. ಮಂಗಳೂರಲ್ಲಿ ಕಾಲೇಜು ಸೇರಿದಾಗ ಬರೇ ಸಾಧಾರಣ ಸಾಮರ್ಥ್ಯದ ವಿದ್ಯಾರ್ಥಿಯಾಗಿದ್ದ ಮಲೆನಾಡ ಹುಡುಗ ಪಟ್ಟುಬಿಡದ ಅಧ್ಯಯನಬಲದಿಂದ ಬಿ. ಏ. ಪರೀಕ್ಷೆಯಲ್ಲಿ ಒಳ್ಳೇ ದ್ವಿತೀಯ ವರ್ಗ ಸಂಪಾದಿಸಿದರು. ಮದ್ರಾಸ್ ಕ್ರಿಶ್ಚಿಯನ್ ಲೊಯೊಲಾ ಕಾಲೇಜುಗಳಲ್ಲಿ ಅವರ ಎಂ. ಏ. ಅಧ್ಯಯನ ಬಹಳ ಆತಂಕಗಳನ್ನು ಅಭ್ಯಸಿಸುವುದರಿಂದ ಸಾಧಿಸಿದ್ದು.


ಸಾಹಿತ್ಯ ಪ್ರೀತಿ

ಗಣಿತದಲ್ಲಿ ಎಂ. ಎ. (೧೯೪೭) ಮುಗಿಸಿದ ಮೇಲೆ ಜಿ. ಟಿ. ಯವರು ಗಣಿತ ಉಪನ್ಯಾಸಕರಾಗಿ ವೃತ್ತಿ ಜೀವನ ಆರಂಭಿಸಿ ಇಪ್ಪತ್ತೆರಡು ವರ್ಷ ಕಾಲ ಮದ್ರಾಸ ಮಂಗಳೂರು, ಮಡಿಕೇರಿ, ಬೆಂಗಳೂರುಗಳ ಸರಕಾರಿ ಕಾಲೇಜುಗಳಲ್ಲಿ ಪಾಠ ಹೇಳಿದರು. ಸಂಗಡವೇ ಕನ್ನಡದಲ್ಲಿ ವಿಜ್ಞಾನ ಮತ್ತು ವಿಚಾರ ಸಾಹಿತ್ಯದ ಕೃಷಿ ನಡೆಯಿತು. ಪ್ರಾರಂಭದಿಂದಲೇ 'ಕರ್ಮವೀರ'ದಲ್ಲಿ ಅವರ ವಿಜ್ಞಾನ ಲೇಖನಗಳು ಪ್ರಕಟನೆಗೆ ಬರುತ್ತಿದ್ದುದರಿಂದ ಅವರ ಪರಿಚಯ ನನಗಾದದ್ದು. ವಿಜ್ಞಾನದ ಬರವಣಿಗೆಯಲ್ಲಿ ಸಾಹಿತ್ಯದ ಎಳೆಗಳು ಪೌರಾಣಿಕ ಪ್ರತಿಮೆಗಳು ನೇಯ್ಗೆಯಾಗಿದ್ದುದು ಅವರ ಶೈಲಿಯಲ್ಲಿ ನಾನು ಆಗಲೇ ಗಮನಿಸಿದ ವಿಶೇಷವಾಗಿತ್ತು. ಓದಿದ್ದು ಗಣಿತವಾದರೂ ಅದನ್ನು ದಕ್ಕಿಸಿಕೊಳ್ಳಲಿಕ್ಕೇ ಗಜ ಸಾಧನೆ ಅಗತ್ಯವಾಗಿದ್ದರೂ ಅವರಿಗೆ ಸಾಹಿತ್ಯ ಪ್ರೀತಿ ಆಶ್ಚರ್ಯಕರವಾಗುವಷ್ಟು ಇತ್ತು. ಇಂದಿಗೂ

ಗಣಿತದ ಪ್ರಾಧ್ಯಾಪಕ ಜಿ. ಟಿ. ಸಾಹಿತ್ಯದಲ್ಲಿ ವಿಶೇಷ ಆಸ್ಥೆಯುಳ್ಳ ತ್ಯಕ್ಕೆ ವೈಜ್ಞಾನಿಕ-ಗ್ರಂಥಗಳನ್ನು ಕನ್ನಡ ವಿಶ್ವಕೋಶದ ವಿಜ್ಞಾನ ; ಬರೆದ ಐನ್‌ಸ್ಟೈನ ಜೀವನ ಚ ಮಾಳವಾಡ ಅವರು ಪ್ರತಿಷ್ಠಾಪಿ ಪ್ರಶಸ್ತಿಯ ಗೌರವ ದೊರೆತಿ ಪಡೆವ ಸಂದರ್ಭದಲ್ಲಿ ಅವರನ್ನು ಪಾವೆಂ ಆಚಾರ್ಯರು ಇಲ್ಲಿ

ಅವ ವರ ಅಡಿ ವಿಯ ನೆನ (ನಾರ

ಭಾ ಟ್ಸ ಹಾ- ಗಳ ಕಾರ ತಮ ಅತ್ಯ ಹಣ ಮೇ ಶಿಸ್ತ



ಆಗ–ಈಗ

ವೃದ್ಧನೊಬ್ಬ ಬಹಳ ವರ್ಷಗಳ ನಂತರ ಮಗನ ಒತ್ತಾಯಕ್ಕೆ ಮಣಿದು ಅವನೊಡನೆ ಚಲನಚಿತ್ರಕ್ಕೆ ಹೋದ.

ಹೊರಬರುತ್ತಿದ್ದಾಗ ಮಗ ಕೇಳಿದ– "ನಿಮಗೆ ಈ ಚಿತ್ರ ಹೇಗನ್ನಿಸಿತು?"

"ವಿಚಿತ್ರ, ನಮ್ಮ ಕಾಲದಲ್ಲಿ ಯಶಸ್ವಿ ನಟಿಯಾಗಬೇಕಿದ್ದರೆ ಅಭಿನಯ ಪ್ರದರ್ಶಿಸಬೇಕಿತ್ತು, ಈಗ ದೇಹ ಪ್ರದರ್ಶಿಸಿದರೆ ಸಾಕೆನಿಸುತ್ತಿದೆ..."

ಧೂರ್ತ ಗಂಡಸರು

ಗೆಳತಿಯರಿಬ್ಬರು ಮಾತನಾಡಿಕೊಳ್ಳುತ್ತಿದ್ದರು. "ಕೆಲವು ಗಂಡಸರು ಎಷ್ಟು ಧೂರ್ತರಿರ್ತಾರೆ, ನೋಡೆ"

"ಏನಾಯಿತೀಗ?"

"ನಮ್ಮ ನೆರೆಮನೆಯ ರಜನೀ ಗಂಡ ತನ್ನ ಸಂಬಳವನ್ನೆಲ್ಲ ಅವಳ ಕೈಯಲ್ಲಿ ಹಾಕಿ ಹೋನೆ ಮನೆ ನಡೆಸು ಅಂತಾನಂತೆ. ಈ ತುಟ್ಟಿಯ ದಿನಗಳಲ್ಲಿ ತಲೆಬಿಸಿ ಆಗೋದು ಅವಳದು. ನೋಡು ಆತ ಹಾಯಾಗಿ ಇದ್ದಾನೆ!"

ವಿಚಾರವಾದಿಗಳು

ಆತ ವಿಶ್ವಕೋಶದ ಪುಟಗಳನ್ನು ಮಗುಚುತ್ತ ಏನನ್ನೋ ಹುಡುಕುತ್ತಿದ್ದ.

ಅವನ ಗೆಳೆಯ ಕೇಳಿದ "ಏನಯ್ಯಾ ನೀ ಹುಡುಕ್ತಿರೋದು?"

"ಇಂದು ಸಂಜೆ ವರ್ಗ ಸಂಘರ್ಷ ಕುರಿತು ವಿಚಾರಗೋಷ್ಠಿ ಇದೆ ಕಣೋ. ಅಲ್ಲಿ ಕೆಲ ವಿಚಾರವಾದಿಗಳನ್ನು ಉಲ್ಲೇಖಿಸಬೇಕಿದೆ. ಮಾರ್ಕ್ಸ್, ಸಾರ್ತ್ರ, ಕಾಮು ಮಾದರಿಯಲ್ಲಿ ಕೆಲ ಹೆಸರುಗಳನ್ನು ಹುಡುಕ್ತಾ ಇದೀನಿ..."

ಮುಗ್ಧೆಯ ಮನ

ನವವಿವಾಹಿತೆಯೊಬ್ಬಳು ನೌಕರಿಯ ಅರ್ಜಿ ಫಾರ್ಮ ತುಂಬುತ್ತಿದ್ದಳು. 'ಸೆಕ್ಸ್' ಎಂಬ ಕಾಲಂ ಬಂದಾಗ ಅವಳು ಅರೆಗಳಿಗೆ ನಿಂತಳು. ಏನೆಂಥ ವೈಯಕ್ತಿಕ ವಿಷಯಗಳ ಬಗ್ಗೆ ಕೇಳುತ್ತಾರಪ್ಪ ಅಂತ ಅವಳಿಗೆ ತುಂಬ ಮುಜುಗರ ಅನಿಸಿತು.

ಅವಳು ಸಣ್ಣ ಅಕ್ಷರದಲ್ಲಿ 'ವಾರಕ್ಕೆ ಮೂರು ಬಾರಿ' ಎಂದು ಬರೆದಳು.

ವಿ. ಎ ಜೋಶಿ

ಕ್ಕೆ ಡಿಕ್ಕಿ ಹೊಡೆದಾಗ

ಸರ್ವೇಸಾಧಾರಣವಾಗಿ ಹಕ್ಕಿಗಳು ಎದುರಾಳಿಯ ಮೇಲೆ ದಾಳಿ ಮಾಡುವಾಗ ತಮ್ಮ ರೆಕ್ಕೆಗಳನ್ನು ಮಡಚಿಕೊಳ್ಳುತ್ತವೆ. ವಿಮಾನಕ್ಕೆ ಡಿಕ್ಕಿ ಹೊಡೆಯುವಾಗಲೂ ಸಹ ಇದೇ ರೀತಿ ಮಾಡುತ್ತವೆ. ಇಂಥ ಹಕ್ಕಿಗಳನ್ನು ಪ್ರತಿಬಂಧಿಸಲು ವಿಮಾನಗಳ ಮುಂಭಾಗದಲ್ಲಿ ವ್ಯವಸ್ಥೆ ಇರುವುದಾದರೂ ಇನ್ನುಳಿದ ಭಾಗದ ಮೂಲಕ ಹೊಡೆದರೆ ಏನೂ ಮಾಡಲಾಗುವುದಿಲ್ಲ.

೧೯೬೦ ರ ಅಕ್ಟೋಬರ ತಿಂಗಳಿನಲ್ಲಿ ಬೋಸ್ಟನ್ ನಿಲ್ದಾಣದಲ್ಲಿ ಒಂದು ಅಪಘಾತ ಸಂಭವಿಸಿ ೬೨ ಜನರು ಅಸುನೀಗಿದರು. ಈ ವಿಮಾನ ನಿಲ್ದಾಣದಲ್ಲಿ ಇಳಿಯುವ ಕಾಲಕ್ಕೆ ಹಕ್ಕಿಗಳ ಹಿಂಡಿಗೆ ಹಿಂಡೇ ಅನುದ್ದೇಶವಾಗಿ ದಾಳಿ ಮಾಡಿದವು. ಎಲ್ಲ ಇಂಜನ್ನುಗಳೂ ಕೆಟ್ಟಾಗ ವಿಮಾನ ಧೊಪ್ಪೆಂದು ನೆಲಕ್ಕೆ ಬಿತ್ತು.

ಇಂಥ ಹಕ್ಕಿಗಳು ದಾಳಿ ಮಾಡಿದಾಗ ಪೈಲಟ್‌ರು ಚಾಣಾಕ್ಷತನದಿಂದ ತಪ್ಪಿಸಿಕೊಂಡ ಉದಾಹರಣೆಗಳೂ ಉಂಟು. ವಿಮಾನವನ್ನು ಹೊರಳಿಸಿಯೋ ಇಲ್ಲವೆ ಹಕ್ಕಿಗಳನ್ನು ದೂರ ಸರಿಸುವಂತೆ ಮಾಡಿಯೋ ಅನೇಕ ವಿಮಾನಗಳು ಪಾರಾಗಿವೆ.

ಹಕ್ಕಿಗಳ ಕಾಟದಿಂದ ತಲೆ ಕೆಡಿಸಿಕೊಂಡ ಎಲ್ಲ ದೇಶಗಳೂ ಈ ಬಗೆಗೆ ಗಹನವಾಗಿ ಚಿಂತಿಸಿವೆ. ಇದರ ಪರಿಹಾರಕ್ಕಾಗಿ ಹಲವಾರು ದೇಶಗಳು ಹಲವಾರು ಸಲಹೆಗಳನ್ನು ಮಾಡಿವೆ. ಹಕ್ಕಿಗಳಿರಗದಂತೆ ವಿಮಾನವನ್ನೇ ಮಾರ್ಪಡಿಸಲು ಕೆಲ ತಜ್ಞರು ಸಲಹೆ ನೀಡಿದರೆ ಇನ್ನೂ ಹಲವರು ಹಕ್ಕಿಗಳನ್ನೇ ನಾಶಪಡಿಸಲು ಯೋಚಿಸಿದ್ದಾರೆ. ವಿಮಾನವನ್ನು ಹಕ್ಕಿಗಳ ಹಾರಾಟಕ್ಕಿಂತಲೂ ಎತ್ತರದಲ್ಲಿ ಹಾರಿಸಬೇಕೆಂದು ಮತ್ತೂ ಹಲವು ರಾಷ್ಟ್ರಗಳು ಸೂಚಿಸಿದರೆ ಇನ್ನೂ ಕೆಲ ರಾಷ್ಟ್ರಗಳು ವಿಮಾನ ನಿಲ್ದಾಣದ ಮೇಲೆ ಹಕ್ಕಿಗಳು ಹಾರಾಡದಂತೆ ಮಾಡಬೇಕೆಂದು ಚಿಂತಿಸಿವೆ.

ವಿಮಾನ ನಿಲ್ದಾಣದಲ್ಲಿ ದೊಡ್ಡ ಶಬ್ದಗಳನ್ನು ಮಾಡಿ ಹಕ್ಕಿಗಳನ್ನು ಓಡಿಸುವ ಸಲಹೆಯನ್ನು ಕೆಲ ದೇಶಗಳು ಜಾರಿಗೆ ತಂದವು. ಆದರೆ ವಿಮಾನದ ಭಯಂಕರ ಶಬ್ದಕ್ಕೇ ಹೆದರದ ಹಕ್ಕಿಗಳು ಇಂಥ ಶಬ್ದಕ್ಕೆ ಹೆದರಲಿಲ್ಲ. ಬಂದೂಕುಗಳನ್ನು ಗಗನದತ್ತ ಹಾರಿಸಿ ಹಕ್ಕಿಗಳನ್ನು ಕೊಲ್ಲಬೇಕೆಂದು ಕೆಲ ದೇಶಗಳು ಯೋಚಿಸಿದವು. ಆದರೆ ಒಂದೋ ಹತ್ತೋ ಹಕ್ಕಿಗಳನ್ನು ಕೊಲ್ಲಬಹುದು. ಎಲ್ಲ ಹಕ್ಕಿಗಳನ್ನು ಕೊಲ್ಲಲು ಹೇಗೆ ಸಾಧ್ಯ. ವಿಮಾನದಲ್ಲೇ ಹಕ್ಕಿಗಳನ್ನು ಕೊಲ್ಲಲು ವ್ಯವಸ್ಥೆ ಇದ್ದರೂ ವಿಮಾನ ಅಪಘಾತವಾಗುವುದು ತಪ್ಪಿಲ್ಲ.

ಪಿ. ಎಸ್

ಜಿ. ಟಿ. ನಾರಾಯಣರಾವ

(1 ನೇ ಪುಟದಿಂದ ಬಂದದ್ದು)

ಧೈರ್ಯ ಈ ಆಧುನಿಕ ಗುಣಗಳು ಜಿ.ಟಿ. ಯವರ ಎಲ್ಲ ಚಟುವಟಿಕೆಗಳ ಹಂದರವಾಗಿವೆ. ಯಾವ ಕೆಲಸವನ್ನ 'ಕಡಲೆ ತಿಂದು ಕೈತೊಳೆದಂತೆ' ಚೊಕ್ಕವಾಗಿ ಮಾಡುವವರು ಅವರು. ಪೌರೋಹಿತ್ಯಕ್ಕೆ ಬರುವ ಪುರೋಹಿತರ ಮೇಲೂ ಅವರು ಶಿಸ್ತು ಸಮಯ ನಿಷ್ಠೆಗಳನ್ನು ಹೇರುವವರೇ' ಅಂದಹಾಗೆ ಕರ್ನಾಟಕದಲ್ಲಿ ನಡೆದ ಕಾಲೇಜು ಸಹಕಾರ ಸಂಘಗಳಲ್ಲೆಲ್ಲ ಅತ್ಯಂತ ಯಶಸ್ವಿಯಾದ ಸಂಘವನ್ನು ಅವರು ಮಡಿಕೇರಿ ಕಾಲೇಜಿನಲ್ಲಿದ್ದಾಗ ಸಂಘಟಿಸಿದ್ದರು. (ಮತ್ತು ಅದನ್ನು ಚೊಕ್ಕವಾಗಿ ಅನಿಂಗ್ಯವಾಗಿ ನಡೆಸುವ ತತ್ಪರತೆಯಲ್ಲಿ ಅವರ ಏಕಮಾತ್ರ ಪುತ್ರಿ ಅಸ್ವಸ್ಥದಲ್ಲಿ ತಕ್ಕ ಉಪಚಾರವಾಗದೆ ಅವಳನ್ನು ಕಳೆದುಕೊಂಡರು.)

ನಮ್ಮ ಮಿಲಿಟರಿ ವ್ಯವಸ್ಥೆಯ ಮತಿಹೀನ ದರ್ಪ, ನಮ್ಮ ಬೌದ್ಧಿಕರ ಸ್ವಾರ್ಥ ಮತ್ಸರಗಳು, ನಮ್ಮ ವ್ಯಾಪಾರಿಗಳ ಶೋಷಣ ವೃತ್ತಿ, ವಿಶ್ವವಿದ್ಯಾಲಯಗಳಲ್ಲಿ ಕೂಡ ದುಡಿಯುವುದಕ್ಕೊಬ್ಬರು ಪಡೆಯುವುದಕ್ಕೊಬ್ಬರು ಎಂಬಂತಿರುವ ಪಕ್ಷಪಾತ ಅವರ 'ಎನ್. ಸಿ. ಸಿ. ದಿನಗಳು' ಪುಸ್ತಕದಲ್ಲಿ ಇವೆಲ್ಲವುಗಳ ಒಳನೋಟಗಳು ಸವಿನೋದ ವಿಷಾದದಿಂದ ಚಿತ್ರಿತವಾಗಿವೆ.

ಉತ್ಸಾಹ

ಇಂಥ ಕಟು ಅನುಭವಗಳ ನಂತರವೂ ಜಿ.ಟಿ.ಯವರು ಯಾವೊಂದು ಕೆಲಸದಲ್ಲಿ, ಕಲ್ಪನೆಯಲ್ಲಿ ತೋರಿಸುವ ಗಾಳುಗಾಳಿಸುವ ಉತ್ಸಾಹ ಆಶ್ಚರ್ಯ ತರುತ್ತದೆ. ಅವರು ನಮ್ಮ ಸಾಹಿತ್ಯ ಪ್ರಪಂಚದಲ್ಲಿ ಅತ್ಯಂತ ಸಮರ್ಥ ಸಂಘಟಿಕರೂ ಹೌದು. ಡಾ. ಕಾರಂತರಿಗೆ ಜ್ಞಾನಪೀಠ ಪ್ರಶಸ್ತಿ ಬಂದಾಗ ಹತ್ತು ದಿನಗಳಲ್ಲಿ ಅವರಿಗೊಂದು ವೈಭವಪೂರ್ಣ ಸನ್ಮಾನ ಸಂಘಟಿಸಿದ್ದರು. ಸತ್ಯಕ್ಕೆ ಜಿ. ಟಿ. ಎಷ್ಟು ಬದ್ಧರೆಂದರೆ. ಲೆಕ್ಚರರಾಗಿರುವ ತಮ್ಮನ್ನು ಪ್ರೊಫೆಸರರೆಂದು ಸಂಬೋಧಿಸಿ ಪತ್ರ ಬರೆದಿದ್ದಕ್ಕೆ ನನ್ನನ್ನೊಮ್ಮೆ ದಬಾಯಿಸಿದ್ದರು. ಲೋಕದ ಅನುಭವ ಜಿ. ಟಿ. ಯವರಿಗೆ ಬುದ್ಧಿ ಕಲಿಸಿದೆ; ಆದರೆ ಜಾಣರನ್ನಾಗಿ ಮಾಡಿಲ್ಲ. ೫೭ ರಲ್ಲಿರುವ ಅವರು ಇನ್ನು ಜಾಣರಾಗುವ ಭಯವಿಲ್ಲ!

ಅನುಕೂಲೆಯಾದ ಪತ್ನಿ, ಸಾಹಸಿಗಳಾದ ಮೂವರು ಗಂಡು ಮಕ್ಕಳು, ತಲೆತುಂಬ ಯೋಜನೆಗಳು, ಕೈತುಂಬ ಕೆಲಸ ಜಿ. ಟಿ. ಯವರಿಗೆ ಅಸುಖಿಯಾಗುವುದಕ್ಕೆ ಪುರುಸೊತ್ತೇ ಇಲ್ಲ. ●

ನೆರವಾಗಲಾರೆ

ಉದಯೋನ್ಮುಖ ಸಾಹಿತಿ ಮಿತ್ರನನ್ನು ವೈದ್ಯರ ಎದುರು ನಿಲ್ಲಿಸುತ್ತ ಹೇಳಿದ "ತನ್ನ ಲೇಖನಗಳು ಪತ್ರಿಕೆಗಳಿಂದ ಹಿಂತಿರುಗಿ ಬಂದ ಸಲಕ್ಕೊಮ್ಮೆ ಇವ[ನಿಗೆ] ಹೃದಯಾಘಾತವಾದಂತೆ ಆಗ್ತದೆ ಸರ್. ದಯವಿಟ್ಟು ಏನಾದರೂ [ಉಪಾಯ] ಸೂಚಿಸ್ತೀರಾ?"

ಡಾಕ್ಟರ್ ನಗುತ್ತಾ ನುಡಿದರು "ಹ್ಞಾ ಸಾರಿ, ಹೇಗೆ ನೆರವಾಗಲಿ? ನಾ[ನು] ಯಾವುದೇ ಪತ್ರಿಕೆ ನಡಸ್ತಾ ಇಲ್ಲವಲ್ಲ."

ನಾ ಮೆಚ್ಚಿದ ಕೃತಿ

೧೯೮೧ ನೇ ವರ್ಷದಲ್ಲಿ ಪ್ರಕಟವಾದ ಕನ್ನಡ ಪುಸ್ತಕಗಳಲ್ಲಿ ನೀ[ವು] ಯಾವುದನ್ನು ಮೆಚ್ಚಿದ್ದೀರಿ? ನೀವು ಮೆಚ್ಚಿದ ಕೃತಿ ಕವನವಾ[ಗಿರ]ಬಹುದು. ಕಾದಂಬರಿ, ಸಣ್ಣ ಕಥೆ ಅಥವಾ ಇನ್ನಾವುದೇ ಸೃಜನಶೀ[ಲ] ಕೃತಿಯಾಗಿರಬಹುದು. ಅಂಥ ಒಂದು ಪುಸ್ತಕದ ಬಗೆಗೆ ೧೫೦ ಶಬ್ದಗಳ[ನ್ನು] ಮೀರದಂತೆ ಒಂದು ಚಿಕ್ಕ ವಿಮರ್ಶೆ ಬರೆದು ಕಳಿಸಿರಿ. ನಿಮ್ಮ ವಿಮರ್ಶೆಯ ಕೊನೆಯಲ್ಲಿ ಗ್ರಂಥದ ಲೇಖಕ, ಪ್ರಕಾಶಕ ಮತ್ತು ಪ್ರಕಾಶನ ವರ್ಷ ತಿಳಿಸಬೇಕು. ನಿಮ್ಮ ವಿಮರ್ಶೆ ನಮಗೆ ೨೦-೩-೮೨ ರೊಳಗಾಗಿ ತಲುಪಬೇಕು.

ಕಳುಹಿಸಬೇಕಾದ ವಿಳಾ[ಸ]
"ನಾ ಮೆಚ್ಚಿದ ಕೃತಿ" ವಿಭಾಗ
ಸ್ಥಾನಿಕ ಸಂಪಾದಕರು
ಸಂಯುಕ್ತ ಕರ್ನಾಟಕ ಹುಬ್ಬಳ್ಳಿ - ೫೮೦೦೨೦.